ಪ್ರಾಥಮಿಕ ಶಿಕ್ಷಣ

ಸಂಪಾದಕರು :

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೭ | ಜುಲೈ ೧೯೩೫ | ವರ್ಷ ೧೦. ಸಂ. ೪

ಪ್ರಾಥಮಿಕ ಶಿಕ್ಷಣವನ್ನು ಹಳ್ಳಿಗಳಲ್ಲಿ ಅದಷ್ಟು ಪ್ರಸಾರ ಮಾಡಬೇಕೆಂಬ ಉದ್ದೇಶದಿಂದ ಸರಕಾರದವರು ಪ್ರಕಟಿಸಿದ

ಪ್ರಾಥಮಿಕ ಶಿಕ್ಷಣದ ಪ್ರಸಾರ

ಲೇಖಕ:— ಶ್ರೀ. ಕೆ. ಟಿ. ತೇರಗಾಂವಕರ ಬಿ. ಎಸ್‌ಸಿ.

ನುಂಬಯಿ ಇಲಾಖೆಯಲ್ಲಿ ಪಟ್ಟಣಗಳೂ ಹಳ್ಳಿಗಳೂ ಕೂಡಿ ೨೧೬೬೮ ಪ. ಅವುಗಳಲ್ಲಿ ಸುಮಾರು ೧೬೬೯೩ ಹಳ್ಳಿಗಳಿಗೆ ಪ್ರಾಥಮಿಕ ಶಾಲೆಗಳೇ ನ್ನೂ ಇಲ್ಲ. ಈ ಹಳ್ಳಿಗಳಿಗೆ ಪ್ರಾಥಮಿಕ ಶಿಕ್ಷಣವನ್ನು ಒದಗಿಸಿಕೊಡುವ ದಂ ಬಹುಕಠಿಣ ಸಮಸ್ಯೆಯಾಗಿದೆ. ಸುಮಾರು ೩೦೦ ಹಳ್ಳಿಗಳಲ್ಲಿ ತೀ ೫೦೦ರ ಜನಸಂಖ್ಯೆ ಸರಾಸರಿ ೯೫೦ ಇದ್ದರೂ ಇವುಗಳಲ್ಲಿ ಕೆಲಹಳ್ಳಿಗಳಲ್ಲಿ ಪಾತ್ರ ಜನರು ಒಂದೇ ಎಡೆಯಲ್ಲಿ ಇರುವರು. ಆದರೆ ಸಾಧಾರಣವಾಗಿ ಬಹಳ ಳ್ಳಿಗಳು ಅಲ್ಲಿ ಇಲ್ಲಿ ಹರಿದು ಹಂಚಿದ ಸಣ್ಣ ಗುಡಿಸಲುಗಳ ಗುಂಪುಗಳಾಗಿವೆ. ೋಗಿ ಒರುವ ಮಾರ್ಗಗಳಿಲ್ಲದ್ದರಿಂದ ಮಳೆಗಾಲದಲ್ಲಿ ಆ ಹಳ್ಳಿಗಳಿಗೆ ಹೋಗಿ ಸಹ ಅಸಾಧ್ಯವಾಗಿರುವದು. ಈ ೧೬೬೯೩ ಹಳ್ಳಿಗಳಲ್ಲಿ ಸುಮಾರು ೬೩೭೧ ಳ್ಳಿಗಳಲ್ಲಿ ಸರಾಸರಿ ಜನಸಂಖ್ಯೆ ೪೦೦ಕ್ಕಿಂತ ಕಡಿಮೆ ಇರುವದು. ಇಂಥ ಳ್ಳಿಗಳಿಗೆ ಡಿಸ್ಟ್ರಿಕ್ಟ ಲೋಕಲ್‌ಬೋರ್ಡಿನವರು ಶಾಲೆಗಳನ್ನು ಪ್ರಾರಂಭಿಸುವದು ಕಷ್ಟಸಾಧ್ಯವಾಗಿದೆ. ಯಾಕಂದರೆ ಆ ಶಾಲೆಗಳಿಗೆ ಅವರು ಮಾಡುವ ಖರ್ಚಿಗನುಸಾರವಾಗಿ ಸಾಕಷ್ಟು ವಿದ್ಯಾರ್ಥಿಗಳು ಸಿಕ್ಕಲಾರರು. ಒಬ್ಬ ಶಿಕ್ಷಕನಿಂದ ನಡೆಯಿ

ಸಲ್ಪಟ್ಟ ಶಾಲೆಗಳು ಈಗಲೇ ಬೇಕಾದಷ್ಟು ಇವೆ. ಮತ್ತೆ ಇಂಥ ಹೊ
ಶಾಲೆಗಳನ್ನು ತೆಗೆದರೆ ಈ ತರದ ಶಾಲೆಗಳ ಸಂಖ್ಯೆಯು ಇನ್ನೂ ಹೆಚ್ಚಾಗಿ ಬ
ಆವಶ್ಯಯವು ಇನ್ನೂ ಹೆಚ್ಚುತ್ತ ಬರುವದು ಖಂಡಿತ. ಲೋಕಲ್‌ಬೋರ್ಡುಗಳ
ಇಂಥ ಒಬ್ಬ ಶಿಕ್ಷಕನಿರುವ ಶಾಲೆಗಳನ್ನು ಆದಷ್ಟು ಕಡಿಮೆಮಾಡುವ ಹಾದಿಯನ್ನೆ
ಹಿಡಿಯಬೇಕೆಂದೂ ಸರಕಾರದವರ ಮತ.

ಸದ್ಯದ ಪರಿಸ್ಥಿತಿಯಲ್ಲಿ ಸ್ವತಂತ್ರವಾದ ಖಾಸಗಿ ಏಕ ಶಿಕ್ಷಕ ಶಾಲೆಗಳಿ
ಪ್ರೋತ್ಸಾಹವನ್ನೀಯಬೇಕೆಂದು ಸರಕಾರದವರು ನಿಶ್ಚಯಿಸಿರುವರು. ಇಡಿಯ
ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಣವು ಬೇಗ ಪ್ರಸಾರಗೊಳ್ಳಬೇಕೆಂದು ಜನತ
ಸರಕಾರದವರಿಗೆ ಸಹಕಾರವನ್ನೂ ಸಹಾಯವನ್ನೂ ನೀಡಲು ಬಲು ಆತುರರಾಗಿರು
ರೆಂದು ಸರಕಾರದ ಮನವರಿಕೆಯಾಗಿದೆ. ಈ ಸಂದರ್ಭದಲ್ಲಿ ಅವರಿಗೆ ಅನೇಕರಿಂದ
ಸೂಚನೆಗಳೂ ಸಲಹೆಗಳೂ ಬಂದಿವೆ. ಅನೇಕ ಸಂಘಗಳೂ ಮುಂದಾಳುಗಳೂ
ಈ ತರದ ಶಾಲೆಗಳನ್ನು ತೆರೆಯುವ ಉದ್ದೇಶದಿಂದ ಕಳೆದ ಕೆಲವು ತಿಂಗಳುಗಳಲ್ಲಿ
ಸರಕಾರದವರನ್ನು ಕಂಡು ಮಾತುಕತೆಯಾಡಿ ಹೋಗಿರುವರು.

ಆದಷ್ಟು ಬೇಗ ಮತ್ತು ಆದಷ್ಟು ಹೆಚ್ಚಾಗಿ ಈ ತರದ ಶಾಲೆಗಳನ್ನು
ತೆಗೆಯಬೇಕೆಂದು ವ್ಯಕ್ತಿಗಳಿಗಾಗಲಿ ಸಂಘಗಳಿಗಾಗಲಿ ವಿಶೇಷ ಉತ್ತೇಜನವನ್ನೂ
ಸಹಾಯವನ್ನೂ ಕೊಡಬೇಕೆಂದು ಸರಕಾರದವರು ನಿಶ್ಚಯಿಸಿರುವರು. ಇಂ
ಶಾಲೆಗಳಿಗೆ ೧೯೨೩ನೆಯ ಇಸವಿಯ ಪ್ರಾಯಮರಿ ಆಕ್ಟಿನವೇರೆಗೆ ಮಾನ್ಯತೆಯ
ಕೂಡ ಸಿಗುವದು.

ಇಂಥ ಸ್ವತಂತ್ರ ಖಾಸಗಿ (Voluntary aided) ಶಾಲೆಗಳ ವ್ಯವ
ಸಹಾಯಕ್ಕೊಸುಗ ಡಿಸ್ಟ್ರಿಕ್ಟ ಸ್ಕೂಲು ಬೋರ್ಡುಗಳಿಂದಾಗಲಿ ಸರಕಾರದ
ರಿಂದಾಗಲಿ ಒಪ್ಪಿಗೆಯನ್ನೂ ಮಾನ್ಯತೆಯನ್ನೂ ಪಡೆಯಬೇಕಾಗುವದು. ಆದ್ದರಿಂ
ಸಾಮಾನ್ಯವಾಗಿ ಈ ಶಾಲೆಗಳು ಅಪ್ರೂವ್ಡ್ ಶಾಲೆಗಳೆಂದು ಕರೆಯಲ್ಪಡುವವ
ಅನೇಕ ಕಾರಣಗಳ ಮೂಲಕ ಈತರದ ಶಾಲೆಗಳನ್ನು ಹೆಚ್ಚಾಗಿ ಬೆಳೆಯಿಸುವ
ಈ ವರೆಗೆ ಆಗಲಿಲ್ಲ.

ಆದರೆ ಇನ್ನು ಮುಂದೆ ಪ್ರತಿವರ್ಷ ಇವುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂ
ಒಂದು ದೀರ್ಘವಾದ ಯೋಜನೆಯನ್ನು (Scheme) ಸರಕಾರದವರು ತಯಾರಿ
ರುವರು. ಈ ಶಾಲೆಗಳು ಒಪ್ಪಿಗೆಯ ಶಾಲೆಗಳೆಂದು ಮಾನ್ಯತೆಯಾದಮೇಲೆ
ಸರಕಾರದಿಂದ ದ್ರವ್ಯಸಹಾಯಕ್ಕೆ ಹಕ್ಕುಳ್ಳವಾಗುವವು. ಈ ದ್ರವ್ಯಸಹಾಯ

ಶಾಲೆಗಳಲ್ಲಿಯ ಹುಡುಗರ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಈ ಸಾಲೆಗಳ ಶಾಲಕರಿಗೆ ಬೇಕಾಗುವ ರಜಿಸ್ತರುಗಳಾಗಲಿ ಬೇರೆ ಕಾಗದಗಳಾಗಲಿ ಪುಕ್ಕಟ್ಟೆ ಯಾಗಿ ವೊರೈಸಲ್ಪಡುವವು.

ಈ ಸಾಲೆಗಳು ಸುಸಂಘಟಿತವಾಗಿಯೂ ಸುವ್ಯವಸ್ಥಿತವಾಗಿಯೂ ನಡೆಯುವಂತೆ ಸಹಕಾರದವರು ಪ್ರಯತ್ನಗಳನ್ನು ಕೈಕೊಳ್ಳುವರು. ಪ್ರತಿಯೊಂದು ತಲ್ಲೂಯಲ್ಲಿ ಈ ಸಾಲೆಗಳ ಶಿಕ್ಷಕರಿಗೋಸ್ಕರ ರಿಫ್ರೆಶರ ಕೋರ್ಸುಗಳು ನಡೆಯುವವು. ಆಯಾ ಕ್ಷೇತ್ರದೊಳಗಿನ 'ಅ' ವರ್ಗದ ಸಾಲೆಗಳ ಹೆಡ್‌ಮಾಸ್ತರರು ಈ ಸಾಲೆಗಳ ಶಿಕ್ಷಕರಿಗೂ ಸಂಚಾಲಕರಿಗೂ ಸಹಾಯಕರೂ ಮಾರ್ಗದರ್ಶಕರೂ ಆಗುವಂತೆ ಅವರಿಗೆ ಕಾಲಕಾಲಕ್ಕೆ ಸೂಚನೆಗಳು ಕಳುಹಲ್ಪಡುವವು. ಈ ಸಾಲೆಗಳನ್ನು ಮೇಲಿಂದಮೇಲೆ ಸಂದರ್ಶಿಸಿ ಅಲ್ಲಿ ಮಾಡರಿಯ ಪಾಠಗಳನ್ನು ಕೊಟ್ಟು ಪರೀಕ್ಷೆಗಳ ವಿಷಯವಾಗಿ ಇಲ್ಲವೆ ಮೇಲಿನ ವರ್ಗಕ್ಕೆ ವಿದ್ಯಾರ್ಥಿಗಳನ್ನು ಹಾಕುವ ವಿಷಯವಾಗಿ ಹೆಚ್ಚಾಗಿ ಅಡ್ಡಿ ಆತಂಕಗಳನ್ನು ಒಡ್ಡದೆ ಶಾಲೆಗಳ ಸುಧಾರಣೆಗೆ ಅವಶ್ಯವಾದ ಯೋಗ್ಯ ಸಲಹೆಗಳನ್ನು ಕೊಡುವಂತೆ ಅವರು ಸುಪರ್ವಾಯಿಝರರಿಗೆ ಅಧಿಕೃತವಾಗಿ ಹೇಳುವರು. ಈ ಸಾಲೆಗಳು ಕೆಲವು ವರ್ಷಗಳವರೆಗೆ ಏಕಶಿಕ್ಷಕ ಸಂಸ್ಥೆಗಳಾಗಿ ಉಳಿಯಬೇಕಾಗಿರುವದರಿಂದ ಈ ಸಾಲೆಗಳಿಗೋಸ್ಕರ ಸುಲಭವಾದ ಅಭ್ಯಾಸ ಪತ್ರಿಕೆಗಳನ್ನು ತಯಾರಿಸಬೇಕೆಂದು ಸರಕಾರದವರು ಇಚ್ಛಿಸಿರುವರು.

ಈ ಸಾಲೆಗಳಿಗೆ ಮಾದರಿಯ ವೇಳಾಪತ್ರಿಕೆಗಳನ್ನು ಒದಗಿಸಿಕೊಡುವರು. ಹಳ್ಳಿಗಳಲ್ಲಿ ವಾಚನಾಲಯಗಳನ್ನು ತೆರೆಯುವ ಕಾರ್ಯವನ್ನು ಕೈಕೊಂಡು ಸಾಕ್ಷರತೆಯನ್ನು ಹೊಂದಿದವರು ತಮ್ಮ ಸಾಕ್ಷರತೆಯನ್ನು ತೃಪ್ತಿಕರವಾಗಿ ಉಳಿಸಿಕೊಳ್ಳುವದಕ್ಕೆ ಅನುವು ಮಾಡಿಕೊಡುವರು.

ಗ್ರಾಮಶಿಕ್ಷಣ ವಿಷಯದಲ್ಲಿ ಆಸ್ಥೆಯುಳ್ಳ ಜನರಿಗೆ ತಮ್ಮ ತಮ್ಮ ಕ್ಷೇತ್ರದಲ್ಲಿ ಈ ತರದ ಸಾಲೆಗಳನ್ನು ತೆರೆದು ಅವುಗಳಿಗೆ ಬೋರ್ಡುಗಳಿಂದ ಒಪ್ಪಿಗೆ ಪಡೆಯುವ ಪ್ರಯತ್ನವನ್ನು ಮಾಡಬೇಕೆಂದು ಸರಕಾರದವರು ಈ ಸಂದರ್ಭದಲ್ಲಿ ಎಲ್ಲರಿಗೂ ವಿನಂತಿ ಮಾಡಿಕೊಂಡಿರುವರು. ಆಯಾ ಸ್ಕೂಲಬೋರ್ಡುಗಳು ಇಂಥ ಅರ್ಜಿಗಳನ್ನು ತಮಗೆ ಮುಟ್ಟಿದ ೩ ತಿಂಗಳುಗಳೊಳಗಾಗಿಯೇ ವಿಚಾರ ಮಾಡಿ ನಿರ್ಧರಿಸಬೇಕೆಂದು ಸರಕಾರದವರ ಇಚ್ಛೆ. ಹಾಗೆ ಮಾಡದಿದ್ದರೆ ಸಂಚಾಲಕರು ಸರಕಾರಕ್ಕೆ ಅರ್ಜಿ ಮಾಡಿಕೊಂಡಲ್ಲಿ ಸರಕಾರದವರು ಅವುಗಳ ವಿಚಾರಣೆಯನ್ನು ಮಾಡುವರು. ಈ ಸಂಚಾಲಕರು ತಮ್ಮಲ್ಲಿದೊಂದು ಸಂಘವನ್ನು ಏರ್ಪಡಿಸಿಕೊಂಡು ತಮ್ಮ ಸಾಲೆಗಳ ವ್ಯವಸ್ಥೆಯನ್ನು ನೋಡಿಕೊಳ್ಳಬೇಕು. ಈ ತರದ ಸಂಘವು

ತಾಲೂಕಿನಲ್ಲಾಗಲಿ ಅಲ್ಲಿಯ ವಿಶಿಷ್ಟ ಭಾಗದಲ್ಲಿಯಾಗಲಿ ಇಡಿಯ ಜಿಲ್ಲೆಯಲ್ಲಾಗಲಿ ಇರುವದು ಒಳ್ಳೆಯದು. ತಮ್ಮ ಸಾಲೆಗಳಿಗೋಸ್ಕರವಾಗಿಯೇ ಆಸ್ಥೆಯುಳ್ಳವರು ತಮ್ಮ ಹಳ್ಳಿಯಲ್ಲಿಯೇ ಒಂದು ಸಂಘವನ್ನು ಮಾಡಿಕೊಳ್ಳಬಹುದು. ಅದರಿ ತಾಲೂಕಿನ ಅಥವಾ ಜಿಲ್ಲೆಯ ತಳಹದಿಯ ಮೇಲೆ ಏರ್ಪಟ್ಟ ಸಂಘಗಳವ್ವರಿ ಸರಕಾರದವರಿಗಾಗಲಿ ಬೋರ್ಡುಗಳಿಗಾಗಲಿ ಇಂಥವುಗಳ ಕೂಡ ವ್ಯವಹರಿಸ ಲಿಕ್ಕೂ ಹೆಚ್ಚು ಸಂಬಂಧವನ್ನು ಬೆಳೆಯಿಸಲಿಕ್ಕೂ ಸುಲಭವಾಗುವದು.

ಹಳ್ಳಿಯ ಪಂಚರು ಈ ಕಾರ್ಯದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಬೇಕು. ಗ್ರಾಮೋದ್ಧಾರದ ಮತ್ತು ಅದರ ಪುನರ್ಘಟನೆಯ ಒಂದು ಅಂಗವೆಂದು ತಿಳಿದು ಪ್ರತಿಯೊಂದು ಹಳ್ಳಿಯಲ್ಲಿ ಒಂದು ಸಾಲೆಯು ಇರಲೇಬೇಕೆಂದು ಅವರು ಪ್ರಯತ್ನಿಸಬೇಕು.

ಸಾಲೆಗಳಿಗೆ ಯೋಗ್ಯ ಶಿಕ್ಷಕರ ಕೊರತೆಯು ಸಂಭವಿಸಬಾರದು. ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯವರೆಗೆ ಓದಿದವರಾಗಲಿ ಆ ಪರೀಕ್ಷೆ ಪಾಸಾದವರಾಗಲಿ ಇಲಾಖೆಯ ಕೆಲವು ಹಳ್ಳಿಗಳಲ್ಲಿ ಶಿಕ್ಷಕರ ಕಾರ್ಯವನ್ನು ಕೈಕೊಳ್ಳಲು ಸುಲಭವಾಗಿ ದೊರಕಬಹುದು.

ಶಿಕ್ಷಕರ ಕಾರ್ಯಕ್ಕೆ ವ್ಹ. ಫಾ. ಪರೀಕ್ಷೆಯನ್ನು ಪಾಸಾದ ಅನೇಕ ತರುಣರೂ ದೊರಕಬಹುದು. ೧೯೩೬-೧೯೩೭ರಲ್ಲಿ ಇಲಾಖೆಯ ಎಲ್ಲ ಭಾಗಗಳಿಂದ ಸುಮಾರು ೨೦೪೨೦ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಕುಳಿತಿದ್ದರು. ಅವರಲ್ಲಿ ೭೭೧೭ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದರು. ಉರ್ದು ವ್ಹ. ಫಾ. ಪರೀಕ್ಷೆಗೆ ೧೨೨೧ ವಿದ್ಯಾರ್ಥಿಗಳು ಕುಳಿತಿದ್ದರು. ಅವರಲ್ಲಿ ೪೮೯ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದರು. ಇವರಲ್ಲಿ ಸುಮಾರು ೧೦೦ಕ್ಕೆ ೫ರಷ್ಟು ವಿದ್ಯಾರ್ಥಿಗಳಿಗೆ ಲೋಕಲ್ ಬೋರ್ಡುಗಳಲ್ಲಿ ಶಿಕ್ಷಕರ ಕೆಲಸವು ದೊರಕಿರಬಹುದು. ಉಳಿದವರಲ್ಲಿ ಕೆಲವರು ಏನಾದರೊಂದು ಗ್ರಾಮೋದ್ಯೋಗವನ್ನು ಕೈಕೊಳ್ಳುವರು. ಅದರಲ್ಲಿಯೂ ಒಕ್ಕಲತನವನ್ನೇ ಹೆಚ್ಚಾಗಿ ಮಾಡುವರು. ಉಳಿದವರು ನಿರುದ್ಯೋಗಿಗಳಾಗಿ ಏನಾದರೊಂದು ಅಂಥ ಇಂಥ ಕಾರ್ಯದಲ್ಲಿ ಅಪೂರ್ಣೋದ್ಯೋಗಿಗಳಾಗಿ ಉಳಿಯುವರು. ಈ ಜನರ ಸಮಸ್ಯೆಯು ಬಿಡಿಸಲು ಬಹು ಬಿಗಿಯಾದ ಮಾತಾಗಿದೆ.

ಈ ಜನರಲ್ಲಿ ಅನೇಕರನ್ನು ಅವರವರ ಹಳ್ಳಿಗಳಲ್ಲಿ ಈ ತರದ ಖಾಸಗೀ ಶಾಲೆಗಳಲ್ಲಿ ಶಿಕ್ಷಕರನ್ನಾಗಿ ನೇಮಿಸಿಕೊಳ್ಳಬಹುದು, ಅವರು ತಮ್ಮ ಮನೆ ಮಾರುಗಳಲ್ಲಿಯೇ ಉಳಿದು ತಮ್ಮ ಕುಟುಂಬದ ಉತ್ಪನ್ನವನ್ನು ತುಸಮಟ್ಟಿಗಾದರೂ

ಚ್ಚಿಸಬಲ್ಲರು. ಜಿಲ್ಲೆಯ ತಾಲೂಕಿನ ಅಥವಾ ಹಳ್ಳಿಯ ಸಂಘಗಳು ಈ ಜನರಿಗೆ ಲ್ಲಿಯ ಪರಿಸ್ಥಿತಿಗನುಸರಿಸಿ ಅವರವರ ಯೋಗ್ಯತೆಗನುಸರಿಸಿ ಹಣವನ್ನು ಸಲ್ಲಿಸ ಲ್ಲರು. (Remuneratas) ಸೇವಾನಿವೃತ್ತರಾದ ಪ್ರಾಥಮಿಕ ಶಾಲೆಗಳ ಶಿಕ್ಷಕರೂ ನೇಕ ಹಳ್ಳಿಗಳಲ್ಲಿ ಸಿಗಬಹುದು ಇವರು ಈ ಖಾಸಗೀ ಶಾಲೆಗಳಲ್ಲಿ ಶಿಕ್ಷಕರೆಂದು ಲಸ ಮಾಡಲು ಬಹಳ ಯೋಗ್ಯರಾಗುವರು. ಕೆಲವು ವಿಶೇಷ ಪ್ರಸಂಗಗಳಲ್ಲಿ ಸೂಕ್ತ ಪರೀಕ್ಷೆಯನ್ನೂ ಪಾಸಾಗದಿದ್ದಂಥವರನ್ನು ನೇಮಿಸಿಕೊಂಡರೂ ಸರಕಾರ ವದು ಆಕ್ಷೇಪಣೆ ಮಾಡಲಿಕ್ಕಿಲ್ಲ.

ಶಾಲೆಯು ಕಟ್ಟಡಗಳು ವಿಶೇಷ ಹೆಚ್ಚಿನ ತರಗತಿಯವಿರಬೇಕೆಂದು ಅಪೇಕ್ಷಿಸು ವದು ಜಾಣತನದ್ದಲ್ಲ. ಲೋಕಲ್‌ಬೋರ್ಡು ಶಾಲೆಗಳಲ್ಲಾಗಲಿ ಖಾಸಗಿ ಶಾಲೆಗಳ ಲ್ಲಾಗಲಿ ಸೂಕಷ್ಟು ಸ್ಥಳ, ಬೆಳಕು, ಇದ್ದು ಮಳೆ ಬಿಸಿಲುಗಳ ಬಾಧೆಯಿಲ್ಲದಿದ್ದರೆ ಸಾಕು. ಹೆಚ್ಚಿನ ಇನ್ನುಳಿದ ಸೌಕರ್ಯಗಳಿಗಾಗಿ (restrictions ಕರಾರು) ಗಳನ್ನು ಹಾಕುವದು ಸರಿ ಎನಿಸಲಾರದು. ಹೊಸ ಶಾಲೆಗಳನ್ನು ತೆರೆಯುಲಿಕ್ಕೆ ಕಟ್ಟಡಗಳನ್ನು ಕುರಿತು ಅತಿ ಗಡುಚಾವ ಕರಾರು (rigid restrictions) ಗಳನ್ನು ಹಾಕಿದ್ದರಿಂದಲೇ ಅಡ್ಡಿಯೊದಗಿತೆಂದು ಸರಕಾರಕ್ಕೂ ಮನವರಿಕೆಯಾದ್ದರಿಂದ ಇನ್ನು ಮೇಲೆ ಈ ತರದ ಕರಾರುಗಳನ್ನು ಮುಂದೆ ತರಗೊಡುವ ಇಚ್ಛೆಯು ಈಗ ಸರಕಾರಕ್ಕೆ ಇಲ್ಲ.

ಈ ಯೋಜನೆಯ ಮೂಲ ಉದ್ದೇಶ: - ಈ ಖಾಸಗೀ ಶಾಲೆಗಳ ಮೂಲ ಉದ್ದೇಶವು ಸಾಕ್ಷರತೆಯನ್ನು ಪ್ರಸಾರ ಮಾಡುವದೇ ಆಗಿದೆ. ಸಾಕ್ಷರತೆಗಷ್ಟೇ ಕೃಪ್ತಿಗೊಡದೆ ಅದಕ್ಕೂ ಹೆಚ್ಚಿನ ಶೈಕ್ಷಣಿಕ ಕಾರ್ಯವನ್ನು ಅನೇಕ ಖಾಸಗಿ ಶಾಲೆಗಳು ಮಾಡಬಹುದೆಂದು ಆಶಿಸಲಾಗಿದೆ. ಈ ಶಾಲೆಗಳೊಳಗಿನ ಹಲವು ಶಾಲೆಗಳು ತಮ್ಮವೇ ಒಂದು ಹಾದಿಯನ್ನು ಕಲ್ಪಿಸಿಕೊಂಡು ಅಭಿವೃದ್ಧಿಯಾಗುವವೆಂದೂ ಗ್ರಾಮದಲ್ಲಿಯ ಜನರ ಅಪೆ ಆಕಾಂಕ್ಷೆಗಳನ್ನು ಮನಗಂಡು ಅವರ ಕೊರತೆಗಳನ್ನು ಪೂರೈಸಿಕೊಡುವಂಥ ಕೇಂದ್ರಗಳಾಗಿ ಕಾರ್ಯನೂಡುವವೆಂದೂ ಸರಕಾರದವರು ಆಶಿಸುತ್ತಾರೆ.

ಈತರದ ಖಾಸಗಿ ಶಾಲೆಗಳು ಹೊರಟು ಸರಿಯಾಗಿ ನಡೆಯುವಂತೆ ಮಾಡಲು ಆಸ್ಥೆಗಳ ಸಂಚಾಲಕರಿಗೆ ಸರ್ವವಿಧವಾಗಿಯೂ ಸಹಾಯಮಾಡಲು ಎಲ್ಲ ಸರಕಾರಿ ಅಧಿಕಾರಿಗಳೂ ವಿಶೇಷವಾಗಿ ಶಿಕ್ಷಣಖಾತೆಯವರೂ ಮುಂದೆ ಬರಬೇಕಾಗುವದು. ತಮ್ಮ ಹಳ್ಳಿಯಲ್ಲಿಯ ಸಾರ್ವಜನಿಕ ಕಟ್ಟಡಗಳನ್ನು ಅಥವಾ ಗುಡಿಗಳನ್ನು ಶಾಲೆಗಳಿಗೆ ಉಪಯೋಗಿಸುವಂತೆ ಈ ಅಧಿಕಾರಿಗಳು ಹಳ್ಳಿಗರ ಮನವೊಲಿಸಬೇಕು.

ಸರಕಾರದವರು ತಮ್ಮ ಆಯವ್ಯಯದ ಮುಂಗಡಪತ್ರಿಕೆಯಲ್ಲಿ ಸುಮಾರು ೮ ಲಕ್ಷ ರೂಪಾಯಿಗಳನ್ನು ಖಾಸಗಿ ಶಾಲೆಗಳಿಗೆಂದು ತೆಗೆದಿಟ್ಟಿರುವರು. ಪ್ರಾಥಮಿಕ ಶಿಕ್ಷಣದ ಪ್ರಸಾರಕಾರ್ಯದಲ್ಲಿ ಸರಕಾರದವರ ಕೂಡ ಸಹಕಾರವನ್ನು ನೀಡಲು ಜನತೆ (Public) ಗೆ ಬಿನ್ನಹಮಾಡಿಕೊಂಡುದುದಕ್ಕೆ ಜನತೆಯು ಯೋಗ್ಯ ಮನ್ನಣೆ ಕೊಡುವದೆಂದು ಸರಕಾರದವರು ಇಚ್ಛಿಸುತ್ತಾರೆ. (ಈ ಬಿನ್ನಹಕ್ಕನುಸಾರವಾಗಿ ಮುಂಬಯಿ ಇಲಾಖೆಯ ವಿದ್ಯಾಖಾತೆಯ ಡಾಯರೆಕ್ಟರ ಸಾ॥ ರವರ ಕೂಡ ಪತ್ರ ವ್ಯವಹಾರ ಮಾಡಬಹುದು.)

ಮುಂಬಯಿ ಇಲಾಖೆಯಲ್ಲಿ ಶಿಕ್ಷಣಪ್ರಸಾರವು ಹೆಚ್ಚುತ್ತ ಹೋಗಬೇಕೆಂಬ ಲವಲವಿಕೆಯು ಸುಶಿಕ್ಷಿತರಲ್ಲಿಯೂ ಶಿಕ್ಷಣಾಭಿಮಾನಿಗಳಲ್ಲಿಯೂ ಅನೇಕ ವರ್ಷಗಳಿಂದ ಇದೆ. ಡೌ ಪರಾಂಜಪೆಯವರಾದರೂ ಪ್ರಚಲಿತ ಪ್ರಜಾಸತ್ತಾತ್ಮಕ ವಿಚಾರಗಳಿಗನುಸರಿಸಿ ೧೯೩೩ನೆಯ ಇಸವಿಯ ಪ್ರಾಥಮಿಕ ಶಿಕ್ಷಣ ಕಾಯಿದೆಯನ್ನು ಶಿಕ್ಷಣ ಪ್ರಸಾರವು ಭರದಿಂದ ಸಾಗಬೇಕೆಂಬ ಸದುದ್ದೇಶದಿಂದಲೇ ಮಾಡಿದರೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆ ಉದ್ದೇಶವು ಸಫಲವಾಗಬೇಕೆಂದೇ ಪ್ರತಿವರ್ಷ ಈ ವಿಷಯಕ್ಕಾಗಿ ಸರಕಾರದವರು ಹೆಚ್ಚು ಹಣವನ್ನು ವೆಚ್ಚಮಾಡುತ್ತ ಬಂದಿದ್ದಾರೆ. ಆದರೆ ಅಪೇಕ್ಷಿಸಿದಷ್ಟು ಪ್ರತಿಫಲವು ದೊರಕಲಿಲ್ಲೆಂದು ಕಂಡುಬಂದದ್ದರಿಂದ ಸರಕಾರದವರಿಗೆ ಬೇರೊಂದು ಯೋಜನೆಯನ್ನು ಯೋಚಿಸಬೇಕಾಯಿತು.

ಸರಕಾರದವರ ಉದ್ದೇಶವು ಉದಾತ್ತವಾದುದು. ಆಶೆಯು ಆಶಾವಾದಿಗಳದು, ದಾರಿಯು ಪ್ರಯತ್ನವಾದಿಗಳದು. ಅವರ ಈ ಪ್ರಯತ್ನವು ಕೈಗೂಡುವದು ಜನತೆಯ ಸಹಕಾರದ ಮೇಲೆಯೇ ಹೆಚ್ಚು ಅವಲಂಬಿಸಿರುವದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಅವರು ಅನುಸರಿಸಬೇಕೆಂದಿರುವ ದಾರಿಯನ್ನು ಭಾವನಾತ್ಮಕವಾಗಿ ನೋಡದೆ ತುಸು ನಿರ್ಣಯಾತ್ಮಕರೀತಿಯಿಂದ ವಿಚಾರಿಸಿ ನೋಡಬೇಕು. ಎಂದರೆ ಈ ದಾರಿಯಿಂದ ಪ್ರಯತ್ನಿಸಿದರೆ ನಮಗೆ ಯಶಸ್ಸು ಎಷ್ಟರಮಟ್ಟಿಗೆ ಸಿಗಬಲ್ಲದು; ನಿಜವಾದ ಶಿಕ್ಷಣದ ಪ್ರಸಾರವು ಎಷ್ಟರಮಟ್ಟಿಗೆ ಸಾಗಬಹುದು ಎಂಬುದನ್ನು ಆಲೋಚಿಸಬೇಕು. ಹಿಂದುಸ್ತಾನದ ಶಿಕ್ಷಣದ ಪ್ರಗತಿಯನ್ನು ಕಂಡುಹಿಡಿಯಲಿಕ್ಕೆಂದು ಕೆಲವು ವರ್ಷಗಳ ಹಿಂದೆ ನೇಮಕವಾದ ಹಾರ್ಟಾಗ್ ಕಮಿಟಿಯವರು ಏಕ ಶಿಕ್ಷಕ ಪದ್ಧತಿಯಿಂದ ಸಾಗಿಸಿದ ಶಾಲೆಗಳೆಲ್ಲವೂ ನಿರರ್ಥಕವಾದವುಗಳು; ಅವುಗಳಿಂದ ಹಣದ ಅಪವ್ಯಯವೇ ಹೆಚ್ಚಾಗಿ ಆಗುತ್ತದೆ ಎಂಬ ಸಂಗತಿಯನ್ನು ಕಂಡುಹಿಡಿದರು. ಆದರೆ ಗಾವತಿ ಶಾಲೆಗಳನ್ನು ಹೆಚ್ಚಿಸಿದರೆ ಅಪವ್ಯಯದ ಪ್ರಮಾಣವು ತುಸು ಕಡಿಮೆ ಯಾಗಬಹುದೆಂದು ತೋರುತ್ತದೆ. ಇದಲ್ಲದೆ ಅಸಾಮ ಮತ್ತು ಬಿಹಾರ ಪ್ರಾಂತ

ಗಳಲ್ಲಿ ಏಕಶಿಕ್ಷಕ ಪದ್ಧತಿಯು ಅಯಶಸ್ವಿಯಾಗಿದೆ ಎಂದು ತಿಳಿದುಬಂದಿದೆ. ಈ ಕಾರ್ಯವನ್ನು ಯಶಸ್ವಿಯಾಗುವಂತೆ ಸಾಗಿಸಬೇಕಾದರೆ ಶಿಕ್ಷಕರು ಉತ್ತಮ ತರಗತಿ ಗುರುಗಳೂ ಟ್ರೇಂಡರೂ ಹೆಚ್ಚು ತ್ಯಾಗಬುದ್ಧಿಯುಳ್ಳವರೂ ಇರಬೇಕಾಗುವದು. ವ್ಹಿ. ಫಾ. ಪರೀಕ್ಷೆ ಪಾಸಾದ ಅನನುಭವಿಕರು ಈ ಕಾರ್ಯವನ್ನು ಸಾಗಿಸಿಕೊಂಡು ಹೋಗಲಾರರೆಂದು ನಮ್ಮ ನಂಬಿಕೆ. ಅದರಲ್ಲಿಯಂತೂ ಏನೂ ಟ್ರೇನಿಂಗ ಇಲ್ಲದೆ ಸಮೀಪದ ಶಾಲೆಗಳ ಹೆಡ್‌ಮಾಸ್ತರರ ಕಡೆಯಿಂದ ಶಿಕ್ಷಣದ ವಿಷಯವಾಗಿ ಕೊಂಡುವ ಜ್ಞಾನವಾದರೂ ಅಷ್ಟಕ್ಕಷ್ಟೇ. ಆ ಮೇಲೆ ಈ ಗಾವಠಿ ಶಾಲೆಗಳಿಗೆ ಸುಪರ್ವಾಯಿಸುರರು ಆಗಾಗ್ಗೆ ಹೋಗಿ ಅಲ್ಲಿಯ ಶಿಕ್ಷಕರಿಗೆ ಯೋಗ್ಯ ದಾರಿಯನ್ನು ತೋರಿಸಿಕೊಡುವದೂ ಪಾಠ ಕಲಿಸಿ ತೋರಿಸುವದೂ ಎಂಬ ಮಾತುಗಳಾದರೂ ನಿಷ್ಫಲಮಟ್ಟಿಗೆ ಪರಿಣಾಮಕಾರಿಯಾಗುವನೆಂಬದೂ ಸಂಶಯಾಸ್ಪದವಾದದ್ದು.

ಈ ಯೋಜನೆಯಿಂದ ಶಾಲೆಗಳ ಸಂಖ್ಯೆಯು ಹೆಚ್ಚಾಗಬಹುದು. ಆದರೆ ನಿಜವಾದ ಮುಕ್ತ ಸ್ಥಿರವಾದ ಶಿಕ್ಷಣವು ದೊರೆಯಲಿಕ್ಕಿಲ್ಲೆಂದು ನಮಗೆ ಅನಿಸುತ್ತದೆ. ಈಗಿನ ಪ್ರಾಥಮಿಕ ಶಿಕ್ಷಣವು ನಿರುಪಯೋಗಿಯಾಗಿರುವದೆಂದು ಮನವರಿಕೆಯಾಗಿ ದೇಶದಲ್ಲೆಲ್ಲ ಇದರ ಸುಧಾರಣೆಯ ಬಗ್ಗೆ ಹೊಸ ವಿಚಾರಗಳು ಹೊರಟು ಅವುಗಳನ್ನು ಪ್ರಚಾರದಲ್ಲಿ ತರಬೇಕೆಂದು ಪ್ರಯತ್ನಗಳು ನಡೆದಾಗ ನಮ್ಮ ಹಳ್ಳಿಯ ಹುಡುಗರಿಗೆ ಕೇವಲ ಅಕ್ಷರಜ್ಞಾನವನ್ನು ಮೂಡಿಸೊಡಲು ಯೋಗ್ಯವಾಗಲಿಕ್ಕಿಲ್ಲ. ನರ್ಧಾ ಶಿಕ್ಷಣದ ಯೋಜನೆಯನ್ನು ಕಾರ್ಯರೂಪದಲ್ಲಿ ತರಬೇಕೆಂದು ಸರಕಾರದವರು ನಿರ್ಧರಿಸಿದರೆ ಈತರದ ಶಿಕ್ಷಕರು ಆ ಕಾರ್ಯವನ್ನು ಫಲಕಾರಿಯಾಗುವಂತೆ ಸಾಗಿಸಬಲ್ಲರೇ !

ಮೊದಲು ಕೆಲವೊಂದು ಪ್ರದೇಶದಲ್ಲಿ ಮಾತ್ರ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಯೋಗ್ಯಶಿಕ್ಷಕರಿಂದ ಆಚರಣೆಗೆ ತರುವದು ಯೋಗ್ಯ ದಾರಿಯಾಗಬಹುದೆಂದು ನಮ್ಮ ಭಾವನೆ. ಈ ಕಾರ್ಯವು ಅಷ್ಟು ತೀವ್ರವಾಗಿ ಸಾಗಲಿಕ್ಕಿಲ್ಲ ಆದರೂ ಮಾಡಿದ ಕೆಲಸವು ಚೊಕ್ಕವಾಗಿಯೂ ಭದ್ರವಾಗಿಯೂ ಆಗಬಹುದೆಂಬದರಲ್ಲಿ ಸಂದೇಹವಿಲ್ಲ. ಯಾವ ಪ್ರದೇಶದಲ್ಲಿ ಆರಂಭಿಸಬೇಕೆಂಬದನ್ನು ನಿರ್ಧರಿಸುವಾಗ ಅಲ್ಲಿಯ ವಿದ್ಯಾರ್ಥಿಗಳ ಸಂಖ್ಯೆಯು ಇಬ್ಬರು ಶಿಕ್ಷಕರಿಗಾದರೂ ಕಡಿಮೆಯಾಗದಷ್ಟು ಇರಬೇಕು ಎಂಬ ಮಾತನ್ನು ನಾವು ಗಮನಿಸಬೇಕು. ಕೊಟ್ಟ ಶಿಕ್ಷಣವು ಚಿರಸ್ಥಾಯಿಯಾಗಿ ಉಳಿದು ಹೆಚ್ಚು ಪ್ರಗತಿಹೊಂದಬೇಕಾದರೆ ಅದರ ಮಹತ್ವದಬಗ್ಗೆ ಪ್ರಚಾರ ಕಾರ್ಯವನ್ನು ಕೈಕೊಂಡು ಜನರ ಮನಸ್ಸಿನಲ್ಲಿ ಜಾಗ್ರತೆಯನ್ನು ಹುಟ್ಟಿಸಬೇಕು. ಈ ಗಾವಠೀ ಶಾಲೆಗಳನ್ನು ನಡೆಸುವಂಥ ಶಿಕ್ಷಕರು ಬರಿ ವ್ಹಿ. ಫಾ. ಪರೀಕ್ಷೆ ಪಾಸಾದವರಾದರೆ ಸಾಗದು. ಅವರೆಲ್ಲರೂ ಹೆಚ್ಚು ಜ್ಞಾನವನ್ನು ಪಡೆದ

ವರೂ ಶರೀರದಿಂದ ಸುದೃಢರೂ ಸಾಮಾಜಿಕ ಕಾರ್ಯವನ್ನು ಮಾಡಬೇಕೆಂಬ ವೃತ್ತಿಯುಳ್ಳವರೂ ಯಾವದೊಂದು ಹಸ್ತವ್ಯವಸಾಯದಲ್ಲಿ ಒಲುವುಳ್ಳವರೂ ಇರಬೇಕಲ್ಲದೆ ಅವರನ್ನು ತುಸುದಿವಸಗಳವರೆಗಾದರೂ ಟ್ರೇನಿಂಗ್ ಕೊಟ್ಟು ತರಬೇತು ಮಾಡಬೇಕಾಗುವದು.

ಸರಕಾರದವರು ಕೈಕೊಂಡ ಕಾರ್ಯವು ಆದಷ್ಟು ಬೇಗ ಕಾರ್ಯರೂಪಕ್ಕೆ ಬಂದು ಯಶಸ್ವಿಯಾಗಿ ಸಾಗಬೇಕಾದರೆ ಶಿಕ್ಷಕರಲ್ಲಿ ತ್ಯಾಗಬುದ್ಧಿಯು ಬೆಳೆಯಬೇಕು. ಬರಿ ನಿರುದ್ಯೋಗತನವನ್ನು ಹೋಗಲಾಡಿಸುವದಕ್ಕಾಗಿ ಈ ಕೆಲಸವನ್ನು ಕೈಕೊಂಡರೆ ಸಾಗದು. ಆದ್ದರಿಂದ ಜನತಾಸೇವಾಪ್ರವೃತ್ತಿಯುಳ್ಳ ಜನರು ಮುಂದೆಬಂದು ಸರಕಾರದವರೊಡನೆ ಸಹಕಾರವನ್ನು ಮಾಡಿ ಅವರಿಗೆ ಆಶೆಯುಂಟಾಗುವಂತೆ ಮಾಡಬೇಕೆಂದು ನಮ್ಮ ವಿನ್ನಹ. ಮತ್ತು ಆದಷ್ಟು ಸರಿಯಾದ ಶಿಕ್ಷಣವು ನಮ್ಮ ಚಿಕ್ಕ ಬಾಲಕರಿಗೆ ಬೇಗನೆ ದೊರೆಯಲೆಂದು ಹಾರೈಸುತ್ತೇವೆ.

ಹೈಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನೆಗಳು

Department of Public Instruction, Bombay

High and Special School Scholarship Examination

1938

(ಮುಂದೆ ಸಾಗಿದ್ದು)

ಕಳೆದ ಸಂಚಿಕೆಯಲ್ಲಿ ಪರೀಕ್ಷೆಯ ಪ್ರಶ್ನೆಗಳ ಸಂಬಂಧವಾಗಿ ಚನ್ನಾಗಿ ಬರೆದದೆ. ಹೊಸ ಪದ್ಧತಿಯ ಪರೀಕ್ಷೆಯ ಪ್ರಶ್ನೆಗಳಿಂದ ವಿದ್ಯಾರ್ಥಿಗಳ ಬುದ್ಧಿಗೆ ಚಾಲನೆ ಹೊರಿಯುತ್ತದೆಂದು ಕಳೆದ ಸಂಚಿಕೆಯ ಪರೀಕ್ಷೆಯ ಪ್ರಶ್ನೆಗಳಿಂದ ವಾಚಕರಿಗೆ ವಗತವಾಗಿರಬಹುದು. ಈ ಸಂಚಿಕೆಯಲ್ಲಿ ಹೈಸ್ಕೂಲ್ ಸ್ಕಾಲರಶಿಪ್ಪ ಪರೀಕ್ಷೆಯ ಶ್ನೆಗಳನ್ನು ಕೊಟ್ಟಿರುತ್ತೇವೆ. ಯಾಕಂದರೆ ಇವು ಕನ್ನಡ ಒನೆಯ ಇಯತ್ತೆಯ ಭ್ಯಾಸಪತ್ರಿಕೆಯ ವಿಷಯಗಳಿಗೆ ಪೂರಾ ಹೋಲುತ್ತವೆ. ಇವುಗಳನ್ನು ಓದುವದ ಂದ ಒನೆಯ ಇಯತ್ತೆಯ ಗಣಿತ, ಭಾಷಾ, ಇತಿಹಾಸ, ಭೂಗೋಲ, ಶಾಸ್ತ್ರೀಯ ತಗಳು ಇತ್ಯಾದಿ ವಿಷಯಗಳನ್ನು ಕಲಿಸುವ ಪದ್ಧತಿಯ ಧೋರಣವು ಪ್ರಾಥಮಿಕ ಕ್ಷಕರಿಗೆ ಅನಾಯಾಸವಾಗಿ ಲಭಿಸುವದು. ಆದುದರಿಂದ ಪ್ರಾಥಮಿಕ ಶಿಕ್ಷಕರು ವುಗಳನ್ನೋದಿ ನೂತನ ಶಿಕ್ಷಣಕ್ರಮಕ್ಕೆ ಆವಶ್ಯಕವಾದ ತಕ್ಕ ಲಾಭವನ್ನು ಮಾಡಿ ೊಳ್ಳುವರೆಂದು ಆಶಿಸುತ್ತೇವೆ.

ಮೌನವಾಚನ

ಕನ್ನಡ—೧ನೆಯ ಕಾಗದದ ೧ನೆಯ ಪ್ರಶ್ನೆಯ ಭಾಗ.

ಕೆಳಗಿನ ಕಥೆಯನ್ನು ನೀವು ಎಂಟು ನಿಮಿಟು ಓದಿ ಈ ಪ್ರಶ್ನೆಕಾಗದವನ್ನು ಟ್ಟುಬಿಡಬೇಕು:—

ಸಖಿಯಾದ ಮೂರು ಮದ್ದುಗಳು

ಒಬ್ಬ ಶ್ರೀಮಂತನು ದೇಶಸಂಚಾರ ಮಾಡುತ್ತ ಒಂದು ದಿನ ಒಬ್ಬ ಬಡನೆಯ ಡಿಸಲಿನೊಳಗೆ ಹೋದನು. ಆಗ ಮಕ್ಕಳು ಮಜ್ಜಿಗೆ ಬೆರಸಿದ ರಾಗಿಯ ಅಂಬಲಿ ನ್ನು ಸಂತೋಷದಿಂದ ಕುಡಿಯುತ್ತಿದ್ದರು. ಅವರು ಮೈಕೈ ತುಂಬಿಕೊಂಡು

ಚೆನ್ನಾಗಿದ್ದರು. ಅದನ್ನು ಕಂಡು ಆತನು ತಾಯಿಯನ್ನು ನೋಡಿ "ಅಮ್ಮಾ, ನಿನ್ನ ಮಕ್ಕಳನ್ನು ನೋಡಿದರೆ ಬಲು ಸಂತೋಷವಾಗುತ್ತದೆ. ನನಗೂ ಇಬ್ಬರು ಮಕ್ಕಳಿರುವರು. ಅವರಿಗೆ ನಿತ್ಯವೂ ಹಾಲು ಹಣ್ಣು ಹಂಪಲು ಮಿಠಾಯಿಗಳನ್ನು ಕೊಡುವೆವು. ಅವರಿಗಾಗಿ ನಾಲ್ಕುಮಂದಿ ಆಳುಗಳನ್ನಿಟ್ಟಿರುವೆನು; ಬೇಕಾದ ಬಟ್ಟೆಗಳನ್ನೂ ಒಡವೆಗಳನ್ನೂ ಕೊಡುತ್ತಿರುವೆನು. ಅವರಿಗೆ ಏತರಲ್ಲಿಯೂ ಕೊರತೆಯಿಲ್ಲ. ಆದರೆ ಏನು ಫಲ! ನನ್ನ ಮಕ್ಕಳು ಸಕಲ ಭೋಗಗಳನ್ನು ಅನುಭವಿಸುತ್ತಿದ್ದರೂ ನಿನ್ನ ಮಕ್ಕಳಂತೆ ಗಟ್ಟಿಮುಟ್ಟಾಗಿರದೆ ಒಣಕಲು ಕಪ್ಪೆಗಳಂತೆ ಬಡಕಲಾಗಿದ್ದಾರೆ. ಏನು ತಿಂದರೂ ಅರಗಿಸಿಕೊಳ್ಳಲಾರರು. ಪ್ರತಿದಿನವೂ ವೈದ್ಯನು ಬಂದು ಔಷಧ ಕೊಡದಿದ್ದರೆ ಅವರಿಗೆ ಊಟವೇ ಇಲ್ಲ. ನಿಸ್ಸಾರವಾದ ಈ ಅಂಬಲಿಯಲ್ಲಿ ನೀನು ಪುಷ್ಟಿಕವಾದ ಯಾವ ಔಷಧವನ್ನಾಗಲಿ ಬೆರಸುವೆಯಾ?" ಎಂದು ಕೇಳಿದನು. ಅದಕ್ಕಾಗಿ ಭಾಗ್ಯಶಾಲಿನಿಯು "ಅಯ್ಯಾ ಇವರ ಅಂಬಲಿಯಲ್ಲಿ ಸವಿಯಾದ ಮೂರು ಮದ್ದುಗಳು ಬೆರೆತಿರುವವು. ಅವುಗಳಲ್ಲಿ ಮೊದಲನೆಯ ಮದ್ದು ನನ್ನ ಮಕ್ಕಳು ಮೈಬೆವರುವತನಕ ಕಷ್ಟಬಟ್ಟು ಬಂದ ಹೊರತು ಊಟಕ್ಕೆ ಕೂಡಿಸುವದಿಲ್ಲ. ಎರಡನೆಯ ಮದ್ದು, ನಡುನೆ ನಡುನೆ ಇವರು ಯಾವ ಕಾಲು ತಿಂಡಿಯನ್ನು ತಿನ್ನದೆ ಹೊಟ್ಟೆ ಕೆರೆಕೆರೆದು ಚೆನ್ನಾಗಿ ಹಸಿವೆಯಾಗುವ ತನಕ ಉಣ್ಣದಂತೆ ಪಾಟ ಮಾಡಿಸಿದ್ದೇನೆ. ಮೂರನೆಯ ಮದ್ದು ಸವಿಭಕ್ಷ್ಯವೆಂದರೇನೋ ಇವರಿಗೆ ಅದರ ಗುರುತೇ ತಿಳಿಯದು. ಮನೆಯಲ್ಲಿ ಕಾಯಿಸಿದ ಉಪ್ಪು ಬೆರೆತ ಅಂಬಲಿಯ ಕುಡಿದು ಅದರಿಂದಲೇ ತೃಪ್ತಿಹೊಂದುತ್ತಿರುವರು. ಇವರಿಗೆ ನಾನು ಆಹಾರದಲ್ಲಿ ಕಲಿಸುತ್ತಿರುವ ಮದ್ದುಗಳು ಈ ಮೂರು ಮಾತ್ರವೇ. ಇವುಗಳಲ್ಲದೆ ಮತ್ತಾವ ಔಷಧವು ನನ್ನಲ್ಲಿಲ್ಲ. ಇವರ ಹಸಿವೆಗೂ ಆರೋಗ್ಯಕ್ಕೂ ನಾನು ಮಾಡುತ್ತಿರುವ ಔಷಧಗಳು ಇವೆ." ಎಂದಳು.

ಈ ಮಾತು ಕೇಳಿ ಆ ಶ್ರೀಮಂತನು ತನ್ನ ಮಕ್ಕಳಿಗೂ ಅದೇ ಅಭ್ಯಾಸವನ್ನು ಮಾಡಿಸುತ್ತಾ ಬರಲು ಅವರು ದೃಢಾಂಗರಾಗಿ ಬೆಳೆದರು.

ಸೂಚನೆ:—ನೀವು ಕಥೆ ಬರೆಯುವಾಗ ಎಚ್ಚರದಿಂದ ಬರೆಯಿರಿ. ಚೆನ್ನಾಗಿ ಬರೆಯಿರಿ, ಅಚ್ಚುಕಟ್ಟುತನವಿಲ್ಲದಿರುವಿಕೆ ಇದಕ್ಕಾಗಿ ಗುಣಗಳನ್ನು ಕಡಿಮೆ ಮಾಡಲಾಗುವದು.

(ವೇಳೆ : ೧೧–೩೦ರಿಂದ ೧೨–೩೦ರ ವರೆಗೆ)

ಕನ್ನಡ–೧ನೆಯ ಕಾಗದ

೧. ಸವಿಯೂದ ಮೂರು ಮುದ್ದುಗಳು ಈ ಕಥೆಯ ಸಾರಾಂಶವನ್ನು ೨೦
ಬರೆವೆಯು ತನ್ನ ಮಕ್ಕಳಿಗೆ ಹೇಳಿದಂತೆ ಸ್ವಲ್ಪದರಲ್ಲಿ ನಿಮ್ಮ ಸ್ವಂತ ಮಾತು
ಗಳಲ್ಲಿ ಬರೆಯಿರಿ.

೨. ನೀವು ನೋಡಿದ ಒಂದು ವಿದೇಶೀಯ ಆಟ ಅಥವಾ ಉಗಿ- ೩೦
ಬಂಡಿಯು ಬಂದ ಹೊತ್ತಿನಲ್ಲಿ ಸ್ಟೇಷನಿನಲ್ಲಿ ಕಾಣುವ ನೋಟ ಈ ಬಗ್ಗೆ ೨೦
ಸಾಲು ಒಂದುವರ್ಣನೆಯನ್ನು ಬರೆಯಿರಿ.

(ವೇಳೆ : ೧ರಿಂದ ೩ರ ವರೆಗೆ)

ಕನ್ನಡ– ೨ನೆಯ ಕಾಗದ

(ಬಲಕ್ಕೆ ಬರೆದ ಅಂಕೆಗಳು ಪ್ರಶ್ನಗಳ ಪೂರ್ಣ ಗುಣಗಳು.)

೧. ಕೆಳಗೆ ಕೊಟ್ಟ ಪದ್ಯಗಳನ್ನು ಲಕ್ಷ್ಯಗೊಟ್ಟು ಓದಿ, ಮುಂದಿನ ೧೪
ಪ್ರಶ್ನಗಳಿಗೆ ಉತ್ತರ ಬರೆಯಿರಿ :—

ಇರಲೆನಗೆ ಕರಕನ್ನ ಉಣ್ಣಲು ।
ಬರಿಯ ನೆಲ ಇರಲೆನಗೆ ಮಲಗಲು ।
ಹರಕು ಬಟ್ಟೆಗಳಿನ್ನ ಮೈಯನು ಮುಚ್ಚಲಿರಲೆನಗೆ ॥
ಮುರುಕು ಗುಡಿಸಲು ಇರಲಿ ಚಾಟೆಗೆ ।
ಸಿರಿಯರಸ ! ಮತ್ತೇನ ಬೇಡೆನು ।
ಭರತಭೂಮಿಯೊಳಿರುವದೇ ನನಗೊಂದು ಸುಖವಿಹುದು ॥
ಧನವ ಬೇಡೆನು ನಾನು, ನಾರಾ– ।
ಯಣನೆ । ಸನ್ಮಾನವನು ವಿದ್ವ– ।
ಜ್ಜನರ ಸಭೆಯಲಿ ಬೇಡೆನೈ, ನಾ ಬೇಡೆ ಕೀರ್ತಿಯನು ॥
ಕನಸು ಮನಸಿನಲಿರಲಿ, ಕರುಣಾ– ।
ಘನನೆ, ಧ್ಯಾನವು ಜನ್ಮಭೂಮಿಯ ! ।
ತನುವು ಸವೆಯುತಲಿರಲಿ ಹಗಲಿರುಳವಳ ಸೇವೆಯಲಿ ॥

(ಅ) ಈ ಕವಿತೆಗಳಲ್ಲಿ ಬೇಡಿಕೊಳ್ಳುವವನು ಯಾರು ? ಅವನು ಒಟ್ಟು
ಬೇಡುವದೇನು ?

(ಬ) ಅವನು ಹೇಗೆ ಜೀವಿಸಲು ಸಿದ್ಧನಿರುವನು ? ನಿಮ್ಮ ಮಾತಿನಲ್ಲಿ ಬರೆಯಿರಿ.

(ಕ) ಸಿರಿಯರಸ ಅಂದರೆ ಯಾರು ? ಅವನಿಗೆ ಈ ಹೆಸರು ಯಾಕೆ ಬಂದಿದೆ ?

(ಡ) ಸಾಮಾನ್ಯವಾಗಿ ಜನರು ಏನೇನು ಕೋರುವರು ?

(ಇ) ಕನಸು ಮನಸಿನಲಿ ಇರಲಿ ಅಂದರೇನು ?

(ಫ) ಇಲ್ಲಿ ಯಾರ ಸೇವೆಯ ಬಗ್ಗೆ ಹೇಳಿದೆ ? ಅದನ್ನು ಹೇಗೆ ಮಾಡಬೇಕೆಂದು ಹೇಳಿದೆ ?

(ಗ) ಬೇಡಿಕೊಳ್ಳುವವನು ಯಾವ ದೇಶದವನು ? ಆ ದೇಶಕ್ಕೆ ಅವನು ಹೇಳುವ ಹೆಸರು ಯಾಕೆ ಬಂದಿದೆ ?

೨. ಕೆಳಗಿನ ಶಬ್ದಗಳಿಗೆ ವಿರುದ್ಧಾರ್ಥವುಳ್ಳ ಯೋಗ್ಯ ಶಬ್ದಗಳನ್ನು ಹೇಳಿರಿ. ಉದಾ : ಇರುಳು– ಹಗಲು —
ಉದಯ, ಹುಟ್ಟು, ಹರಕೆ, ದೇಶಾಂತರ, ತಿಳಿಗೇಡಿ, ಕೊಲ್ಲು, ಮರುಗು, ಗರ್ವ.

೩. (ಅ) ಕೆಳಗಿನ ಶಬ್ದಗಳ ಅರ್ಥವು ಅರಸ ಎಂದು ಹೇಗೆ ಉಂಟಾಗುವ ೬
ದೆಂಬುದನ್ನು ಸ್ಪಷ್ಟಮಾಡಿರಿ – ಉದಾ: ಧರಣೀಶ ಅಂದರೆ ಭೂಮಿಗೆ ಒಡೆಯ, ಅರಸ, ಜನನಾಥ, ಜನಪ, ನರೇಂದ್ರ, ಅವನಿಪಾಲ, ಭೂಕಾಂತ

(ಬ) ರಾಮನೇ ಹೇಳಲಿ, ರಾಮನೂ ಹೇಳಲಿ. ರಾಮನೋ ಭೀಮನೋ ಹೇಳಲಿ ಇವುಗಳಲ್ಲಿರುವ ಭೇದವನ್ನು ಹೇಳಿರಿ.

೪. (ಅ) ಪರರ ಹಿತವನ್ನು ಬಯಸುವವನು ತನ್ನ ಸ್ವಂತ ಹಿತವನ್ನು ೧೦
ಎಂದೂ ಲೆಕ್ಕಿಸುವದಿಲ್ಲ.

(ಬ) ಸುವಾಸನೆಯ ಹೂಗಳು ಯಾರಿಗೆ ಸುಖಕೊಡಲಾರವು ?

ಮೇಲಿನ ವಾಕ್ಯಗಳಲ್ಲಿ ಗೆರೆಹಾಕಿದ ಶಬ್ದಗಳ ವ್ಯಾಕರಣ ಮಾಡಿರಿ; ಆ ವಾಕ್ಯಗಳ ಕರ್ತೃಕರ್ಮ ಕ್ರಿಯಾಪದಗಳನ್ನು ಹೇಳಿರಿ.

೫. ಕೆಳಗಿನ ಹೋಲಿಕೆಗಳಲ್ಲಿ ಬೇಕಾದ ಐದನ್ನು ಯೋಗ್ಯ ಶಬ್ದಗಳಿಂದ ೧೦
ಪೂರ್ಣಮಾಡಿ ಉತ್ತರ ಬರೆಯಿರಿ—

ಉದಾ : ಬಂಗಾರದಂತೆ ಬೆಲೆಯುಳ್ಳದ್ದು.

(ಅ) ಉಕ್ಕಿನಂತೆ _____

(ಬ) ಸೂರ್ಯನಂತೆ _____

(ಕ) ನಕ್ಷತ್ರದಂತೆ _____

(ಡ) ಮುಳ್ಳಿನಂತೆ _____

(ಇ) ಹಿಮದಂತೆ _____

(ಫ) ಸಮುದ್ರದಂತೆ _____

(ಗ) ಮುತ್ತಿನಂತೆ _____

(ಹ) ಇಂದ್ರನಂತೆ _____

(ವೇಳೆ : ೧೧–೩೦ ರಿಂದ ೧೨–೩೦ ರ ವರೆಗೆ.)

ಅಂಕಗಣಿತ.

ಸೂಚನೆ:—(೧) ಆದಷ್ಟು ತೀವ್ರವಾಗಿ ಲೆಕ್ಕಗಳನ್ನು ಬಿಡಿಸಿರಿ. ಒಂದು ಲೆಕ್ಕವು ಬರದಿದ್ದರೆ, ವೇಳೆ ಕಳೆಯದೆ, ಮುಂದಿನ ಲೆಕ್ಕಕ್ಕೆ ಸಾಗಿರಿ.

(೨) ಭಾಗ ಅ ದಲ್ಲಿ ಲೆಕ್ಕಕ್ಕೆ ೧ ಗುಣ, ಭಾಗ ಬ ದಲ್ಲಿ ಲೆಕ್ಕಕ್ಕೆ ೧೦ ಗುಣಗಳು.

ಭಾಗ ಅ.

ಮುಂದೆ ಕೊಟ್ಟ ಲೆಕ್ಕಗಳನ್ನು ಶಕ್ಯವಾದರೆ ಮನಸಿನಲ್ಲಿಯೇ ಮಾಡಿ, ಬಲಗಡೆಗೆ ಬಿಟ್ಟಿರುವ ಸ್ಥಳದಲ್ಲಿ ಉತ್ತರಗಳನ್ನು ಬರೆಯಿರಿ. ಎಡಗಡೆಗೆ ಬಿಟ್ಟ ಸ್ಥಳವನ್ನು ಬೇಕಾದರೆ ಲೆಕ್ಕಗಳನ್ನು ಬಿಡಿಸಿಕೊಳ್ಳಲಿಕ್ಕೆ ಉಪಯೋಗಿಸಬಹುದು—

(೧) ೯ + ೭ .. =

(೨) ೪೮ + ೩೭ + ೭೫ .. =

(೩) ೭೫ – ೧೪ .. =

(೪) ೧೦ + ೪ – ೩ + ೪ .. =

(೫) ೨೦೦೦ – ೧೭ .. =

(೬) ೧೫೦ – ೪ – ೧೪೬ .. =

(೭) ೬೭ × ೪ .. =

(೮) ೬೫ × ೮ ÷ ೯ . .

(೯) ೬೨೭ × ೭ . .

(೧೦) ೨ ÷ ೨ . .

(೧೧) ೦ ÷ ೫ . .

(೧೨) ೨೯೬೮ ÷ ೭ . .

(೧೩) ೧ × ೧ × ೧ × ೧ × ೧ . .

(೧೪) ೧೯ × ೧೯ . .

(೧೫) ೭೪ × ೨೦೩ . .

(೧೬) ೭ × ೫ × ೬ × ೦ . .

(೧೭) ೧೪ರೂ. ೧೨ಆ. + ೧೫ರೂ. ೪ಆ. ೬ಪೈ + ೧೭ರೂ. ೮ಆ. ೯ಪೈ. . .

(೧೮) ೭ಪೌ. – ೩ಪೌ. ೧೩ಶಿ. ೬ಪೆ. . .

(೧೯) ೫ತಾ. ೪೫ಮಿ. ೧೫ಸೆ. + ೪೬ಮಿ. ೫೦ಸೆ. . .

(೨೦) ೪ಪೌ. ೬ಔನ್ಸ್ – ೨ಪೌ. ೮ಔನ್ಸ್ . .

(೨೧) ೫ಯೂ. ೧೪ೂ. ೪೩ಂ. – ೧೪ೂ. ೮೩ಂ. . .

(೨೨) ೧೬ರೂ. ೧೦ಆ. ೮ಪೈ × ೬ . .

(೨೩) ೧೯ಪೌ. ೧೪೩ಶಿ. ೧೧ಪೆ. ÷ ೭ . .

(೨೪) ೧೨ಪೌ. ೩ಔನ್ಸ್ ÷ ೫ . .

(೨೫) ೮ವಾರ ೩ದಿನ ೯ತಾಸು × ೪ . .

(೨೬) ೫ಯೂ. ೦ೂ. ೬೩ಂ. ÷ ೬ . .

(೨೭) $\frac{೧}{೩} + \frac{೧}{೪}$ . .

(೨೮) $\frac{೩}{೫} - \frac{೧}{೭}$ . . .

(೨೯) $೩\frac{೧}{೭} - ೨$ . .

(೩೦) $೬\frac{೩}{೮} - ೪\frac{೧}{೨}$ . .

(೩೧) $\frac{೩}{೪} \times ೪\frac{೧}{೨}$ . .

(೩೨) $\frac{೩}{೪} + \frac{೫}{೬}$ . .

(೩೩) $\frac{೩}{೪} \times ೪\frac{೧}{೨} \div \frac{೩}{೪}$ . .

(೩೪) ೧೮·೨ – ೭·೬ + ೧೧·೯ . .

(೩೫) ೨೦ – ೮·೦೫ . .

(೫೬) ೦೬ × ೦೮೭ .. =

(೫೭) ೫ ÷ ೦೪೪ .. =

(೫೮) ೭·೫ × ೮ ÷ ೬ .. =

(೫೯) ೭೪. ೬ಪೈ ಇದು ೨ರೂ. ಯ ಯಾವ ದಶಾಂಶವು .. =

(೬೦) ೩ : ಕ್ಷ : : ೫ : ೧೦.....ಕ್ಷ =

ಭಾಗ ಬ.

ಮುಂದೆ ಕೊಟ್ಟ ಲೆಕ್ಕಗಳನ್ನು ಕೆಳಗೆ ಬಿಟ್ಟಿರುವ ಸ್ಥಳಗಳಲ್ಲಿ ಬಿಡಿಸಿರಿ.)

೧. ಒಬ್ಬನು ೬೦ ಮೈಲು ಪ್ರವಾಸ ಮಾಡುವನು. ಇದರಲ್ಲಿ ಅರ್ಧ ಭಾಗವನ್ನು ತಾಸಿಗೆ ೨೦ ಮೈಲು ಹೋಗುವ ಮೋಟಾರದಲ್ಲಿ ಕುಳಿತು, ಮಿಕ್ಕ ಭಾಗವನ್ನು ರೇಲ್‌ಗಾಡಿಯಲ್ಲಿ ಕುಳಿತು ಹೋಗುವನು. ಒಟ್ಟು ಪ್ರವಾಸವು ೨ ತಾಸು ೫೦ ನಿಮಿಟುಗಳಲ್ಲಿ ಮುಗಿಯುವದು. ಆದರೆ ರೇಲ್‌ಗಾಡಿಯ ವೇಗವು ತಾಸಿಗೆ ಎಷ್ಟು ಮೈಲಿನಂತೆ ಇತ್ತು ?

೨. ಒಬ್ಬನ ಪಗಾರವು ಹತ್ತರಲ್ಲಿ ಒಂದು ಪಾಲು ಹೆಚ್ಚಾಯಿತು; ಆ ಮೇಲೆ ಹತ್ತರಲ್ಲಿ ಒಂದು ಪಾಲು ಕಡಿಮೆಯಾಯಿತು. ಕೊನೆಗೆ ಅವನಿಗೆ ಲಾಭ ವಾಯಿತೋ ಹಾನಿಯಾಯಿತೋ ತೆಗೆಯಿರಿ. ಈ ಲಾಭವು ಅಥವಾ ಹಾನಿಯು ಅವನ ಮೂಲ ಪಗಾರದ ಎಷ್ಟನೇ ಪಾಲು ಇತ್ತು ?

೩. ಒಬ್ಬನು ೫ ಆಣೆಗೆ ೮ರಂತೆ ೩೬ ಕಿತ್ತಳೇ ಹಣ್ಣುಗಳನ್ನು ನವ್ಹೆಂಬರ ೩ನೆಯ ತಾರೀಖಿನ ದಿವಸ ಕೊಂಡು ಅವುಗಳನ್ನು ೧೪ನೆಯ ನವ್ಹೆಂಬರ ದಿವಸ ಆಣೆಗೆ ಒಂದು ಡಝನ್ ಹಣ್ಣಿನಂತೆ ಮಾರಿದನು. ಅವನಿಗೆ ಲಾಭ ಅಥವಾ ಹಾನಿಯು ಎಷ್ಟಾಯಿತು ?

೪. ೫೫ ಕಿತ್ತಳೇ ಹಣ್ಣುಗಳನ್ನೂ ೪೫ ಸೇಬೂ ಹಣ್ಣುಗಳನ್ನೂ ಹುಡುಗ ರಿಗೆ ಹಂಚಿಕೊಟ್ಟಿತು. ಪ್ರತಿಯೊಬ್ಬ ಹುಡುಗನಿಗೆ ೨ ಕಿತ್ತಳೇ ಹಣ್ಣು ಅಥವಾ ೩ ಸೇಬೂ ಹಣ್ಣು ಅಥವಾ ಒಂದು ಕಿತ್ತಳೇ ಹಣ್ಣು ಮತ್ತು ೧ ಸೇಬೂ ಹಣ್ಣು ಈ ಪ್ರಕಾರ ಕೊಟ್ಟಿತು. ೧೭ ಹುಡುಗರಿಗೆ ಪ್ರತಿಯೊಬ್ಬನಿಗೆ ೨ ಕಿತ್ತಳೇ ಹಣ್ಣು ಬಂದವು. ಆದರೆ ಪ್ರತಿಯೊಬ್ಬನಿಗೆ ೨ ಸೇಬೂ ಹಣ್ಣಿನಂತೆ ಎಷ್ಟು ಹುಡುಗರಿಗೆ ಬಂದವು ?

೫. ಒಂದು ಸಂಖ್ಯೆಯಲ್ಲಿ ೧೭ ಕೂಡಿಸಿ ಬಂದದ್ದನ್ನು ೫ರಿಂದ ಗುಣಿಸಿರಿ ಎಂದು ಪರೀಕ್ಷೆಯಲ್ಲಿ ಲೆಕ್ಕ ಕೊಟ್ಟಿತ್ತು. ಆದರೆ ಒಬ್ಬ ಹುಡುಗನು ಮೊದಲು

ಅದನ್ನು ೫ರಿಂದ ಗುಣಿಸಿ ೪ ಬಳಿಕ ಅದರಲ್ಲಿ ೧೭ ಕೂಡಿಸಿದ್ದನು. ಅವನ ಉತ್ತರ ೩೨೨ ಬಂದಿತ್ತು. ಸರಿಯಾದ ಉತ್ತರವು ಎಷ್ಟು ಇರಬೇಕು ?

೬. ೯೧ ಯಾರ್ಡ್ ಉದ್ದವಿದ್ದ ಒಂದು ಉಗಿಬಂಡಿಯು ತಾಸಿಗೆ ೨೪ ಮೈಲಿ ನಂತೆ ಹೋಗುತ್ತಿದ್ದಾಗ, ತುದಿಯಿಂದ ತುದಿಗೆ ೬೫ ಯಾರ್ಡ್ ಉದ್ದವಿದ್ದ ಒಂದು ಪೂಲನ್ನು ಪೂರ್ಣವಾಗಿ ದಾಟಬೇಕಾದರೆ ಅದಕ್ಕೆ ಎಷ್ಟು ಸೆಕಂಡುಗಳು ಹತ್ತುವವು ?

(ವೇಳೆ : ೩ರಿಂದ ೪ರ ವರೆಗೆ.)

ಸಾಮಾನ್ಯ ಜ್ಞಾನ (೨ನೆಯ ಕಾಗದ.)

ಭೌಗೋಲಿಕ (ಪ್ರಾಕೃತಿಕ) ಹಾಗು ಶಾಸ್ತ್ರೀಯ.

ಸೂಚನೆ :— (೧) ಎಲ್ಲ ಉತ್ತರಗಳನ್ನು ಈ ಕಾಗದದ ಮೇಲೆಯೇ ಬರೆಯ ಬೇಕು.

(೨) ಅಪಷ್ಟ ತೀವ್ರ ಉತ್ತರ ಬರೆಯಿರಿ.

(೩) ಬಲಕ್ಕೆ ಬರೆದ ಅಂಕೆಗಳು ಪ್ರಶ್ನೆಗಳ ಪೂರ್ಣ ಗುಣಗಳು.

೧. ತೆರವು ಬಿಟ್ಟ ಸ್ಥಳಗಳನ್ನು ತುಂಬಿರಿ :—

(೧) ಹಿಂದುಸ್ತಾನದಲ್ಲಿ ಬೇಸಿಗೆಯಲ್ಲಿ _____ ಗಾಳಿಯಿಂದಲೂ ಚಳಿಗಾಲದಲ್ಲಿ _____ ಗಾಳಿಯಿಂದಲೂ ಮಳೆಯಾಗುವದು.

(೨) _____ ಅಲ್ಲಿ ಇರದಿದ್ದರೆ ಗಂಗೆಯ ಬೈಲಿನಲ್ಲಿ ಮಳೆ ಬೀಳುತ್ತಿರಲಿಲ್ಲ.

(೩) _____ ಇರುವ ಮೂಲಕ ಪಂಜಾಬದಲ್ಲಿ _____ ಮತ್ತು _____ ಇವುಗಳನ್ನು ಬೆಳೆಯಬಹುದಾಗಿದೆ.

(೪) _____ ಹಿಂದುಸ್ತಾನದಲ್ಲಿ ಒಳದೇಶದಲ್ಲಿ ಇರುವ ಎಲ್ಲಕ್ಕೂ ದೊಡ್ಡ ಔದ್ಯೋಗಿಕ ಪಟ್ಟಣವು.

(೫) ಕಾಶ್ಮೀರದಿಂದ ನಮ್ಮಲ್ಲಿಗೆ _____ ಮತ್ತು _____ ಬರುತ್ತವೆ.

(೬) ನಾವು ಮುಖ್ಯವಾಗಿ ಕರಾಚಿಯಿಂದ _____, ಮುಂಬಯಿಯಿಂದ _____ ಕಲಕತ್ತೆಯಿಂದ _____ ಹಾಗು ಕೋಚೀನದಿಂದ _____ ಇವನ್ನು ಪರದೇಶಗಳಿಗೆ ಕಳಿಸುತ್ತೇವೆ.

(೭) ಹಿಂದುಸ್ತಾನದಲ್ಲಿ ಕಾಫೀಬೀಜವನ್ನು _____ಲ್ಲಿ, ಚಹವನ್ನು _____ ಲ್ಲಿ, ಬತ್ತವನ್ನು _____ಲ್ಲಿ ನೆಲಗಡಲೆಯನ್ನು _____ಲ್ಲಿ ಹಾಗು ಕಬ್ಬನ್ನು _____ಲ್ಲಿ ಬೆಳೆಯುತ್ತೇವೆ.

೨. ಕಂಸಗಳೊಳಗೆ ಇರುವ ಕಾರಣಗಳಲ್ಲಿ ತಪ್ಪಾದವುಗಳ ಮೇಲೆ ಗೆರೆ ಹೊಡೆಯಿರಿ :—

೧. ನೈಋತ್ಯ ಮನ್ಸೂನ ಗಾಳಿಗಳು ಮಳೆಗರೆಯುತ್ತವೆ, ಯಾಕೆಂದರೆ [ಅವು ಪಶ್ಚಿಮ ಘಟ್ಟಗಳಿಗೆ ಅಪ್ಪಳಿಸುತ್ತವೆ ; ಅವುಗಳಲ್ಲಿ ನೀರಿನ ಉಗಿಯು ಬಹಳ ಇರುತ್ತದೆ; ಪಶ್ಚಿಮ ಘಟ್ಟಗಳು ಅವುಗಳನ್ನು ಎತ್ತರದ ತಂಪು ಪ್ರದೇಶಗಳಿಗೆ ಏರಹಚ್ಚುತ್ತವೆ].

೨. ಕೆಲವು ನದಿಗಳು ತಮ್ಮ ಮುಖಗಳಲ್ಲಿ ಡೆಲ್ಟಾ ಪ್ರದೇಶಗಳನ್ನು ಉಂಟು ಮಾಡುತ್ತವೆ, ಯಾಕೆಂದರೆ (ಅವು ತಮ್ಮ ಪ್ರವಾಹದ ಕೂಡ ಬಹಳ ರೇವೆಯನ್ನು ತರುತ್ತವೆ ; ಅವು ಮುಖದ ಬಳಿಯಲ್ಲಿ ಬಹಳ ಅಗಲ ವಿರುತ್ತವೆ ; ಅವು ಅನೇಕ ಶಾಖೆಗಳಾಗಿ ಒಡೆದಿರುತ್ತವೆ).

೩. ಗಂಗೆಯ ಕೊಳ್ಳವು ಫಲವತ್ತಾದದ್ದು, ಯಾಕೆಂದರೆ (ನೈಋತ್ಯದ ಮನ್ಸೂನ ಗಾಳಿಗಳು ಅದರ ಮೇಲೆ ಬೀಸುತ್ತವೆ ; ಅಲ್ಲಿಯ ಜನರು ಹಲವು ಬೆಳೆಗಳನ್ನು ಬೆಳೆದುಕೊಳ್ಳುವರು ; ನದಿಯು ಕೊಳ್ಳದ ಮೇಲೆ ರೇವೆಯನ್ನು ಬಿಟ್ಟು ಭೂಮಿಯನ್ನು ಕಸುವುಳ್ಳದ್ದಾಗಿ ಮಾಡುವದು).

೪. ಗುಡ್ಡಗಾಡ ಜನರು ಶ್ರಮಸಹಿಸಲು ತಕ್ಕವರು, ಯಾಕೆಂದರೆ (ಅವರು ಕಗ್ಗ ಆಹಾರವನ್ನು ಉಣ್ಣುವರು ; ಅವರು ಹವೆಯನ್ನು ಸಹಿಸಿಕೊಂಡು ಆಹಾರಕ್ಕಾಗಿ ಕಷ್ಟಬಟ್ಟು ದುಡಿಯಬೇಕಾಗುವದು ; ಅವರು ಗುಡ್ಡಗಳ ನಾಡಿನಲ್ಲಿರುವರು).

(೩) ಪ್ರತಿಯೊಂದು ಮಾತಿನಲ್ಲಿರುವ ಅನವಶ್ಯಕವಾದ ಶಬ್ದಗಳ ಮೇ
ಗೆರೆ ಹೊಡೆಯಿರಿ :—

(೧) ಬೇಸಿಗೆಯಲ್ಲಿ ರಾತ್ರಿಗಿಂತ ಹಗಲು $\frac{\text{ದೊಡ್ಡವು}}{\text{ಸಣ್ಣವು}}$ ಇರುತ್ತವೆ.

(೨) ಇಡಿವರುಷ ಇಂಗ್ಲಂಡಿನಲ್ಲಿ ಸೂರ್ಯಕಿರಣಗಳು $\frac{\text{ನೀಟಾಗಿ}}{\text{ಡೊಂಕಾಗಿ}}$ ಬೀಳುತ್ತ

(೩) ಎತ್ತರದ ಗುಡ್ಡದಿಂದ ಕೆಳಕ್ಕಿಳಿದಂತೆ ನಮಗೆ $\frac{\text{ತಂಪು}}{\text{ಸೆಕೆ}}$ ಎನಿಸುವದು.

(೪) ನದಿಯು ಬೈಲಿಗೆ ಬಂದ ಕೂಡಲೆ $\frac{\text{ಮೆಲ್ಲನೆ}}{\text{ತೀವ್ರ}}$ ಹರಿಯುವದು.

೪. ಮುಂದೆ ಕೊಟ್ಟ ವಾಕ್ಯಗಳನ್ನು ಪೂರ್ಣಮಾಡಿರಿ —

(೧) ಹುರಿದ ಬೀಜವು ಮೊಳಿಕೆಯೊಡೆಯುವದಿಲ್ಲ, ಯಾಕೆಂದರೆ _____

_____

(೨) ಎಲೆಗಳಿಗೆ ಬೆಳಕು ಬೇಕು. ಯಾಕೆಂದರೆ _____

_____

(೩) ನಾವು ಬಾಯಿಯಿಂದ ಉಸಿರಾಡಿಸಬಾರದು, ಯಾಕೆಂದರೆ _____

_____

(೪) ಮಲಿನ ರಕ್ತನಾಳಗಳಲ್ಲಿ ಪಟಲಗಳುಂಟು, ಯಾಕೆಂದರೆ _____

_____

(೫) ಬಾತುಗೋಳಿಗಳು ಈಸಬಲ್ಲವು, ಯಾಕೆಂದರೆ _____

_____

(೬) ಬರ್ಫವನ್ನು ಕಟ್ಟಿಗೆಯ ಪುಡಿಯಲ್ಲಿಡುವರು, ಯಾಕೆಂದರೆ _____

_____

(೭) ಇಟ್ಟಂಗಿಗಳನ್ನು ಮಾಡಲಿಕ್ಕೆ ಕಪ್ಪು ಮಣ್ಣನ್ನು ಉಪಯೋಗಿಸು
ಯಾಕೆಂದರೆ _____

_____

(೮) ಏರೋಪ್ಲೇನ (ವಿಮಾನ) ಗಳನ್ನು ಮಾಡಲಿಕ್ಕೆ ಅಲ್ಯುಮಿನಿಯ
ವನ್ನು ಉಪಯೋಗಿಸುವರು, ಯಾಕೆಂದರೆ _____

_____

೫. (೧) ಗೋವಿನ ಜೋಳ, ದಾಸವಾಳ, ತುಳಸಿ, ಬೆಂಡಲ, ಗುಲಾಬಿ, ಕಣಸೆ ಈ ವನಸ್ಪತಿಗಳನ್ನು ಕೆಳಗಿನ ಕೋಷ್ಟಕದಂತೆ ವರ್ಗೀಕರಿಸಿರಿ :—

ಎಲೆಗಳಲ್ಲಿಯ ಸಿರಗಳ ರಚನೆ.	ವನಸ್ಪತಿಯ ಹೆಸರು.
ಪುಚ್ಛದಂತಿರುವ ಸಿರಗಳು	
ಅಂಗೈ ಬೆರಳುಗಳಂತಿರುವ ಸಿರಗಳು	
ಸಮಾಂತರ ಸಿರಗಳು	

(೨) ಪುಷ್ಪಪಾತ್ರ, ಪುಷ್ಪಮುಕುಟ, ಪುಂಕೇಸರ, ಸ್ತ್ರೀಕೇಸರ ಇವುಗಳಲ್ಲಿ ೨ ವ ಕೆಲವು ಭಾಗಗಳು ರಕ್ಷಣಕಾರ್ಯಕ್ಕಾಗಿಯೂ ಮಿಕ್ಕವು ಫಲಧಾರಣೆಗಾಗಿಯೂ ಉಪಯುಕ್ತವಾಗುವವು. ಇಂಥ ಭಾಗಗಳು ಇಂಥ ಕಾರ್ಯಕ್ಕೇ ರುವವೆಂಬದನ್ನು ಕೆಳಗೆ ಕಾಣಿಸಿದಂತೆ ಬರೆಯಿರಿ —

ರಕ್ಷಣಕ್ಕೆ ನೆರವಾಗುವ ಭಾಗಗಳು _____

_____

ಫಲಧಾರಣೆಗೆ ಉಪಯುಕ್ತವಾಗುವ ಭಾಗಗಳು _____

_____

(೩) ಕೆಳಗೆ ಕೊಟ್ಟ ಆಹಾರದ ಪದಾರ್ಥಗಳ ಪಚನಕ್ಕೆ ನೆರವಾಗುವ ೨ ಸಗಳ ಹೆಸರುಗಳನ್ನು ಅವುಗಳ ಮುಂದೆ ಬರೆಯಿರಿ :—

ಪಿಷ್ಟಮಯ ಪದಾರ್ಥಗಳು _____

ಸ್ನಿಗ್ಧ ಪದಾರ್ಥಗಳು _____

೬. ಕೆಳಗಿನ ವಾಕ್ಯಗಳಲ್ಲಿ ತೆರವಿದ್ದ ಸ್ಥಳಗಳನ್ನು ತುಂಬಿರಿ —

(೧) ಕೀಟಕಗಳು ಹೂವುಗಳ _____ ಅಥವಾ _____ ಅಥವಾ _____ ಳಿಂದ ಎಳೆಯಲ್ಪಟ್ಟು ಅವುಗಳ ಕಡೆಗೆ ಹೋಗುತ್ತವೆ

(೨) ರೇಶಿಮೆಯು ಹುಳದ ಜೀವಿತಚಕ್ರದ ಮೆಟ್ಟಿಗಳು _____ _____ _____, ಮತ್ತು _____ ಇರುತ್ತವೆ.

(೩) ಆಕಳು ಹುಲ್ಲುಮೇಯುವ ಪ್ರಾಣಿಯು, ಆದ್ದರಿಂದ ಅದರ ಹಲ್ಲುಗಳು _____

ಇರುತ್ತವೆ; ಆದರೆ ಹುಲಿಯು ಮಾಂಸಭಕ್ಷಕ ಪ್ರಾಣಿಯು, ಆದ್ದರಿಂದ ಅದರ ಹಲ್ಲುಗಳು _____ ಇರುತ್ತವೆ.

(ಳ) ರಕ್ತದ ಘಟಕಗಳು _____ _____, _____, ಮತ್ತ _____ ಇರುವವು.

(ಱ) ಕೋಳಿಯ ತತ್ತಿಯಲ್ಲಿರುವ ಗರ್ಭವು _____ ಹಾಗು _____ ಇವುಗಳಿಂದ ಪೋಷಿಸಲ್ಪಡುತ್ತದೆ.

೭. ಒರಳಿನ ಕೀಲು, ಹಾಳೀಹದ್ದಿನ ಚುಂಚು, ಗಿಳಿಯ ಕಾಲು, ಆಕಳ ಹೊಟ್ಟೆ ಇವುಗಳಲ್ಲಿ ಬೇಕಾದ ಮೂರರ ಸಾದಾ ಆಕೃತಿಗಳನ್ನು ತೆಗೆಯಿರಿ

ಸಾಮಾನ್ಯ ಜ್ಞಾನ (೧ನೆಯ ಕಾಗದ)

(ವೇಳೆ: ೧ರಿಂದ ೨ರ ವರೆಗೆ)

ಐತಿಹಾಸಿಕ ಹಾಗು ಭೌಗೋಲಿಕ (ರಾಜಕೀಯ).

ಸೂಚನೆ:—(೧) ಎಲ್ಲ ಉತ್ತರಗಳನ್ನು ಈ ಕಾಗದದ ಮೇಲೆಯೇ ಬರೆಯಿರಿ

(೨) ಆದಷ್ಟು ತೀವ್ರ ಉತ್ತರ ಬರೆಯಿರಿ.

(೩) ಬಲಕ್ಕೆ ಬರೆದ ಅಂಕೆಗಳು ಪ್ರಶ್ನೆಗಳ ಪೂರ್ಣ ಗುಣಗಳು

೧. ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಬೇಕಾದ **ಎಂಟು** ವಾಕ್ಯಗಳ ಬಗ್ಗೆ ಅವುಗಳ ಕೊನೆಗೆ ಇರುವ ಕಂಸದಲ್ಲಿ ತಕ್ಕಂತೆ "ಹೌದು" ಅಥವಾ "ಅಲ್ಲ" ಎಂದು ಬರೆಯಿರಿ:—

೧. ಕನೋಜದ ಯುದ್ಧದಲ್ಲಿ ಹುಮಾಯುನನು ಶೇರಶಹನನ್ನು ಪೂರ್ಣವಾಗಿ ಸೋಲಿಸಿದನು ( )

೨. ಸರ್ ಜಾನ್ ಷೋರನು "ದೇಶೀಯ ಅರಸರ ಜಗಳದಲ್ಲಿ-ಕೈಹಾಕ ಕೊಡದೆಂಬ" ಧೋರಣವನ್ನು ಅನುಸರಿಸಿದನು ( )

೩. ಮಾರ್ಕ್ವಿಸ್ ಆಫ್ ಹೇಸ್ಟ್ಟಿಂಗ್ಸ್‌ನ ಕಾಲದಲ್ಲಿ ಮುಂಬಯಿ ಇಲಾಖೆಯನ್ನು ಬ್ರಿಟಿಷ್ ರಾಜ್ಯಕ್ಕೆ ಸೇರಿಸಿಕೊಳ್ಳುವ ಕಾರ್ಯವು ಪೂರ್ಣವಾಯಿತು ( )

೪. ಎಡನೆಯ ಬಾಜೀರಾಯನು ಎಲ್ಲ ಪೇಶವೆಯರಲ್ಲಿ ಹೆಚ್ಚಿನವನಾಗಿದ್ದನು ( )

೫. ಪಾಣಿಪತ್ತಿನ ಯುದ್ಧದಲ್ಲಿ ವಿಶ್ವಾಸರಾಯನು ಮಹಾರಾಷ್ಟ್ರರ ಸೇನಾಧಿಪತಿಯಾಗಿದ್ದನು ( )

೬. ಲಾರ್ಡ ವುಲಿಯಮ್ ಬೆಂಟಿಂಕನು ಖಾಲಸಾ ಪದ್ಧತಿಯ ಧೋರಣವನ್ನು ಅನುಸರಿಸಿದನು ( )

೭. ಮಾನಸಿಂಗನು ಅಕಬರನ ಕಂದಾಯಮಂತ್ರಿಯಾಗಿದ್ದನು ( )

೮. ಅಶೋಕನು ಹಿಂದೂಧರ್ಮವನ್ನು ಸ್ವೀಕರಿಸಿದ ಮೊದಲನೆಯ ಹಿಂದೂ ಚಕ್ರವರ್ತಿಯು ( )

೯. ಔರಂಗಜೇಬನು ಡೆಕ್ಕನವನ್ನು ಗೆದ್ದುಕೊಳ್ಳಲು ಮಾಡಿದ ಪ್ರಯತ್ನವು ಘಾತಕವಾದದ್ದಿತ್ತು ( )

೧೦. ಕ್ಲೈವನ ದುಹೇರಿ ಪದ್ಧತಿಯು ಮೂಲಕ ಬಂಗಾಲಪ್ರಾಂತದ ಆಡಳಿತೆಯು ಸುಲಭವಾಯಿತು ( )

೨. ಕೆಳಗೆ ಸಂಗತಿಗಳ ಒಂದು ಯಾದಿ, ವರುಷಗಳ ಒಂದು ಯಾದಿ ಈ ಹೀಗೆ ಎರಡು ಯಾದಿಗಳು ಇವೆ. ಸಂಗತಿಗಳ ಮುಂದೆ ಸರಿಯಾದ ವರುಷಗಳನ್ನು ಬರೆಯಿರಿ—

ಸಂಗತಿ	ವರುಷ.
ಪ್ಲಾಸಿಯ ಕಾಳಗ	
ನಾದಿರಶಹನು ಹಿಂದುಸ್ಥಾನದ ಮೇಲೆ ದಂಡೆತ್ತಿ ಬಂದದ್ದು	
ಬುದ್ಧನ ಮರಣ	
ರೆಗ್ಯುಲೇಟಿಂಗ ಅಕ್ಟ್	
ಸಿಪಾಯಿಗಳ ಬಂಡಾಯ	
ಈಸ್ಟ ಇಂಡಿಯಾ ಕಂಪನಿಯ ಸ್ಥಾಪನೆ	
ಶಿವಾಜಿಯ ಪಟ್ಟಾಭಿಷೇಕ	
ಪಾಣಿಪತ್ತಿನ ಮೂರನೆಯ ಕಾಳಗ	
ಔರಂಗಜೇಬನ ಮರಣ	
ಸಿಕಂದರನು ಹಿಂದುಸ್ಥಾನದ ಮೇಲೆ ದಂಡೆತ್ತಿ ಬಂದದ್ದು	

೩೨೭ (ಕ್ರಿ. ಶ. ಹಿಂದೆ); ೧೭೬೧; ೧೭೫೭; ೧೭೦೭; ೧೬೦೦; ೧೭೫೯; ೪೫೭ (ಕ್ರಿ. ಶ. ಹಿಂದೆ); ೧೮೫೭; ೧೭೭೩; ೧೬೬೪.

೩. ತಪ್ಪಾದ ಶಬ್ದದ ಅಥವಾ ಶಬ್ದಗಳ ಮೇಲೆ ಗೆರೆಹೊಡೆದು ಅವರ ಅಥವಾ ಅವುಗಳ ಬದಲು ಸರಿಯಾದ ಶಬ್ದ ಇಲ್ಲವೆ ಶಬ್ದಗಳನ್ನು ಬರೆದು, ಮುಂದೆ ಕೊಟ್ಟಿರುವ ಗಳಲ್ಲಿ ಬೇಕಾದ **ಎಂಟು** ವಾಕ್ಯಗಳನ್ನು ತಿದ್ದಿರಿ:—

೧. ಪಾಣಿಪತ್ತಿನ ಮೊದಲನೆಯ ಕಾಳಗದಲ್ಲಿ ಬಾಬರನು ಶೇರಶಹನನ್ನು ಸೋಲಿಸಿದನು.

೨. ಬಕ್ಸಾರ ಎಂಬಲ್ಲಿ ಮೀರಜಾಫರನು ಇಂಗ್ಲಿಷರೊಡನೆ ಕಾದಿದನು.

೩. ಮೊಗಲರ ಕಾಲದಲ್ಲಿ ಹುವೆನ್‌ತ್ಸಾಂಗನು ಹಿಂದುಸ್ತಾನಕ್ಕೆ ಬಂದಿದ್ದನು.

೪. ಕಲಕತ್ತೆಯ ಕತ್ತಲೆಯ ಕೋಣೆಯ ಬಗ್ಗೆ ಮೀರಕಾಸಿಮನು ಹೊಸೆಗಾರನಿದ್ದನು.

೫. ಶಿವಾಜಿಯು ದಿಲ್ಲಿಯಲ್ಲಿ ಮೊಗಲರ ಸೆರೆಯಲ್ಲಿದ್ದನು.

೬. ಲಾರ್ಡ್ ವುಲಿಯುಮ್ ಬೆಂಟಿಂಕನ ಕಾಲದಲ್ಲಿ ಪೆಂಡಾರಿಗಳು ಮುರಿಬಡಿಯಲ್ಪಟ್ಟರು.

೭. ನಾಗಪುರವು ಸಿಂಧ್ಯನ ರಾಜಧಾನಿ ಇತ್ತು.

೮. ಬಂಗಾಲದಲ್ಲಿ ವಾರ್ನ್ ಹೆಂಸ್ಟಿಂಗ್ಸನು ಕಾಯಂ ಕಂದಾಯಪದ್ಧತಿಯನ್ನು ಆರಂಭಿಸಿದನು.

೯. ಸರ್ ಆಯರ್ ಕೂಟನು ಅರ್ಕಾಟಿನ ಮುತ್ತಿಗೆಯ ವೀರನಾಗಿದ್ದನು.

೧೦. ಸಿಪಾಯಿಗಳ ಬಂಡಾಯವು ಮೊದಲು ದಿಲ್ಲಿಯಲ್ಲಿ ಆರಂಭವಾಯಿತು.

೪. ಕೆಳಗೆ ಕೊಟ್ಟ ವಾಕ್ಯಗಳಲ್ಲಿ ಬೇಕಾದ **ಎಂಟರಲ್ಲಿ** ತೆರವಿದ್ದ ಸ್ಥಳವನ್ನು ತುಂಬಿರಿ—

೧. ಬಾಬರನು ಮೂಲತಃ _____ದಿಂದ ಬಂದನು.

೨. ಗೌತಮ ಬುದ್ಧನು _____ ಸ್ಥಾಪಿಸಿದನು.

೩. _____ ಹಿಂದುಸ್ತಾನದಲ್ಲಿ ಬ್ರಿಟಿಷರ ಸಾಮ್ರಾಜ್ಯವನ್ನು ಸ್ಥಾಪಿಸಿದನು.

೪. ತಾಜಮಹಾಲವು _____ ಸ್ಮರಣಾರ್ಥವಾಗಿ ಕಟ್ಟಿಲ್ಪಟ್ಟಿತು.

೫. ವಸಯಿಯ ಒಪ್ಪಂದದಿಂದ _____ ದೈವಹೀನರಾದರು.

೬. _____ ಹಿಂದುಸ್ತಾನದ ಮೊದಲನೆಯ ವೈಸ್ರಾಯಿಯರಾಯನು.

೭. ಸರ್ ಟಾಮಸ್ ರೋ ಈತನು ೧೬೧೫ ರಲ್ಲಿ _____ ಓಲಗಕ್ಕೆ ಬಂದನು.

೮. ಇಂಗ್ಲಿಷರು ತಮ್ಮ ಮೊದಲನೆಯ ವಖಾರನನ್ನು _____ ದಲ್ಲಿ ಆರಂಭಿಸಿದರು.

೯. ಸಬ್‌ಸಿಡಿಯರಿ ಪದ್ಧತಿಯನ್ನು ಆರಂಭಿಸಿದವನು _____

೧೦. ಹಿಂದುಸ್ತಾನದಲ್ಲಿ ಮೊದಲನೆಯ ರೇಲ್ವೆಯು _____ ನ ಕಾಲದಲ್ಲಿ ಆರಂಭವಾಯಿತು.

೫. (ಅ) ಕೆಳಗೆ ಕಾಣಿಸಿದವರ ಹೆಸರುಗಳನ್ನು ಮುಂದೆ ಇರುವ ಕಂಸದಲ್ಲಿ ಬರೆಯಿರಿ:—

(i) ಮುಂಬಯಿ ಇಲಾಖೆಯ ಈಗಿನ ಮುಖ್ಯ ಮಂತ್ರಿ ( )

(ii) ಮುಂಬಯಿ ಇಲಾಖೆಯ ಈಗಿನ ಗವ್ಹರ್ನರ ( )

(iii) ಹಿಂದುಸ್ತಾನದ ಈಗಿನ ವ್ಹಾಯಿಸರಾಯ್ ( )

(ಬ) ಕೆಳಗೆ ಕೊಟ್ಟ ದೇಶಗಳ ಇದುರಿಗೆ ಅಲ್ಲಿ ಅರಸರಿದ್ದರೆ ಗುಣಕದ (×) ಈ ಗುರುತನ್ನೂ ಅಲ್ಲಿ ಪ್ರಜಾಸತ್ತೆಯ ರಾಜ್ಯಪದ್ಧತಿಯಿದ್ದರೆ ಒಂದು ಸಣ್ಣ ಪೂಜಿಯನ್ನೂ (೦) ಬರೆಯಿರಿ:—

ಫ್ರಾನ್ಸ	ಜಪಾನ
ಇಂಗ್ಲಂಡ	ಅಮೇರಿಕದ ಸಂಯುಕ್ತ ಸಂಸ್ಥಾನಗಳು
ಅಫಗಾಣಿಸ್ತಾನ	ಜರ್ಮನಿ

೬. ಹಡಗುಪಡೆಯ ಸ್ಥಳ, ಅಟ್ಟಿಗೆಗಳು, ಗಡಿಯಾರಗಳು, ಸಕ್ಕರೆ, ಜವಿಟನಾರು, ಮಾಂಸ, ತೇಗು, ದೊಡ್ಡಗೋಡೆ, ವಸ್ತ್ರಗಳು, ಪನಾಮದ ಸಂಯೋಗ ಭೂಮಿ, ಕಾಫೀ, ಬಂಗಾರ, ಯಾಕ ಇವು ಕೆಳಗೆ ಕೊಟ್ಟ ದೇಶಗಳಿಗೆ ಅಥವಾ ಪಟ್ಟಣಗಳಿಗೆ ವಿಶೇಷ ಸಂಬಂಧಪಟ್ಟವೆ. ಇವುಗಳನ್ನು ಹೊಂದಿಸಿ ಬರೆಯಿರಿ—

ಸ್ವಿತ್ಸರಲಂಡ	ಮಾಂಚೆಸ್ಟರ
ತಿಬೇಟ	ನ್ಯೂಯಿಲಂಡ
ಸಿರಿಗಾಪೂರ	ಬ್ರಾಜಿಲ
ಜಪಾನ	ಇಜಿಪ್ತ
ಜಾವಾ	ಮಧ್ಯ ಅಮೇರಿಕೆ
ಚೀನ	ಬ್ರಹ್ಮದೇಶ
ಕಲಕತ್ತೆ	ಜೋಹಾನ್ಸಬರ್ಗ

೭. ತೆರವು ಬಿಟ್ಟಿರುವ ಸ್ಥಳವನ್ನು ತುಂಬಿರಿ—

(i) _____ ಹಿಂದೂ ಜನರ ಪವಿತ್ರ ಸ್ಥಳವು, ಕ್ರಿಸ್ತರದು, _____ ಮುಸಲ್ಮಾನರದು.

(ii) ಎಲ್ಲಕ್ಕೂ ದೊಡ್ಡ ಹೊಳೆಯು _____ ಲ್ಲಿದೆ; ಎಲ್ಲಕ್ಕೂ ಎತ್ತರವಾದ ಪರ್ವತವು _____ ಲ್ಲಿದೆ; ಎಲ್ಲಕ್ಕೂ ಆಳವಾದ ಸಮುದ್ರವು _____ ಲ್ಲಿದೆ; ಎಲ್ಲಕ್ಕೂ ದೊಡ್ಡ ಮರುಭೂಮಿಯು _____ ಲ್ಲಿದೆ; ಹಾಗು ಎಲ್ಲಕ್ಕೂ ದಟ್ಟವಾದ ಅರಣ್ಯಗಳು _____ ಲ್ಲಿವೆ.

(iii) _____ ಯು ಇಜಿಪ್ತಕ್ಕಿರುವಂತೆ ಸಿಂಧುವು ಸಿಂಧಪ್ರಾಂತಕ್ಕಿದೆ. _____ ವು ಚೀನಕ್ಕಿರುವಂತೆ ಕಲಕತ್ತೆಯು ಹಿಂದುಸ್ತಾನಕ್ಕಿದೆ _____ ವು ಅಮೇರಿಕದ ಸಂಯುಕ್ತ ಸಂಸ್ಥಾನಗಳಿಗಿರುವಂತೆ ಲಂಡನ್ನು ಇಂಗ್ಲಂಡಕ್ಕಿದೆ.
ವ್ಹಾಯಿಸರಾಯನಿಗೆ ಸಿಮಲಾ ಪಟ್ಟಣವಿರುವಂತೆ ಮದ್ರಾಸಿನ ಗವ್ಹರ್ನರನಿಗೆ _____ ಇರುವದು.
ಕಿರಗಿಝು ಜನರಿಗೆ ಸ್ಟೆಪ್ ಭೂಮಿಗಳಿರುವಂತೆ _____ ಜನರಿಗೆ ತುಂದ್ರಾ ಪ್ರದೇಶಗಳು ಇರುವವು ಹಾಗು _____ ಜನರಿಗೆ ಸಹಕಾರದ ಮರುಭೂಮಿಗಳು ಇರುವವು.

೮. ಕಂಸಗಳೊಳಗಿನ ತಪ್ಪು ಕಾರಣಗಳ ಮೇಲೆ ಗೆರೆಹೊಡೆಯಿರಿ :—

(i) ಬಂಗಾಲದಲ್ಲಿ ಜನದಟ್ಟಣೆ ಬಹಳ, ಯಾಕೆಂದರೆ (ಅಲ್ಲಿ ಬಹಳ ಜನರಿರುವರು ; ಅಲ್ಲಿ ಪ್ರತಿ ವರುಷ ಎರಡು ಬೆಳೆಗಳನ್ನು ತೆಗೆಯು ಕೊಳ್ಳಬಹುದು ; ಅದು ಬ್ರಿಟಿಷರ ವಶದಲ್ಲಿರುವದು).

(ii) ಇಂಗ್ಲಂಡವು ಜಿಬ್ರಾಲ್ಟರವನ್ನು ತನ್ನ ವಶದಲ್ಲಿಟ್ಟುಕೊಳ್ಳಲು ಇಚ್ಛಿಸುವದು, ಯಾಕೆಂದರೆ, (ಅದು ಭೂಮಧ್ಯಸಮುದ್ರದ ಕೀಲಿಯುಕ್ಕೆ ಆಗಿದೆ ; ಅದು ಭದ್ರವಾದ ಬಂಡೆಯ ಕೋಟೆಯಿದೆ; ಅದು ಆಫ್ರಿಕೆಯ ಬಳಿಯಲ್ಲಿದೆ).

(iii) ಆಸ್ಟ್ರೇಲಿಯದಲ್ಲಿರುವ ಬ್ರಿಟಿಷರು ಬ್ರಿಟಿಷರಲ್ಲದ ಜನರನ್ನು ಅಲ್ಲಿ ನೆಲೆಗೊಳ್ಳಲು ಕೊಡುವದಿಲ್ಲ, ಯಾಕೆಂದರೆ (ಅಲ್ಲಿ ಹವೆಯು ತಕ್ಕದ್ದಿರುವದಿಲ್ಲ; ತಮ್ಮೊಡನೆ ಅವರು ಮೇಲಾಟವಾಡುವರೆಂದು ಅವರು ಹೆದರುತ್ತಾರೆ; ಅವರು ಅಲ್ಲಿ ಒಂದು ಶತಮಾನಕ್ಕಿಂತ ಹೆಚ್ಚು ಕಾಲದ ವರೆಗೆ ಇದ್ದಾರೆ).

(iv) ಇಂಗ್ಲಂಡದಲ್ಲಿ ಯಂತ್ರಗಳು ತಯಾರಾಗುತ್ತವೆ, ಯಾಕೆಂದರೆ (ಇಂಗ್ಲಿಷ ಜನರು ಉದ್ಯೋಗಪ್ರಿಯರು; ಹಲವು ದೇಶಗಳಲ್ಲಿ ಯಂತ್ರಗಳ ಬಗ್ಗೆ ಬೇಡಿಕೆ ಬಹಳವಾಗಿದೆ; ಅಲ್ಲಿ ಕಬ್ಬಿಣ ಕಲ್ಲಿದ್ದಲು ಇವು ನೆರೆನೆರೆಯಲ್ಲಿಯೇ ದೊರೆಯುತ್ತವೆ).

ವರ್ಧಾಶಿಕ್ಷಣದ ಯೋಜನೆಯು

ಈ ವಿಷಯವಾಗಿ ನಾವು ಈ ಮೊದಲೆ ೩, ೪ ಆವರ್ತ ಲೇಖನಗಳನ್ನು ಕೊಟ್ಟಿರುವೆವು. ಕಾಂಗ್ರೆಸ್ ಪಕ್ಷದವರು ಅಧಿಕಾರಾರೂಢರಾದಂದಿನಿಂದ ಎಲ್ಲ ಒಗೆಯಿಂದಲೂ ದೇಶದಲ್ಲಿ ಪ್ರಗತಿಯಾಗುವಂತೆ ಪ್ರಯತ್ನ ಬಡುತ್ತಿರುವರು. ಶಿಕ್ಷಣ ವಿಷಯದಲ್ಲಿಯೂ ಅವರು ಒಳ್ಳೆಯ ಉತ್ಸಾಹದಿಂದಲೂ ಪರಿಶ್ರಮದಿಂದಲೂ ಕಾರ್ಯಗಳನ್ನು ಸಾಗಿಸುತ್ತಿರುವರು. ನಾಡಿನಲ್ಲಿ ಯಾವ ಸುಧಾರಣೆಯಾಗ ಬೇಕಾದರೂ ಶಿಕ್ಷಣವು ಮುಖ್ಯವಾಗಿಯೂ ಮೂಲವಾಗಿಯೂ ಬೇಕೆಂಬದನ್ನು ಅವರು ಮರೆತಿಲ್ಲ. ನಮ್ಮ ನಾಡಿನಲ್ಲಿ ನೆಲೆಗೊಂಡ ನಿರಕ್ಷರತೆಯನ್ನು ಕ್ಷಿಪ್ರದಿಂದ ದೂರೀಕರಿಸಲು ಅವರು ಪರಮಾವಧಿ ಸಾಹಸಬಡುತ್ತಿರುವರು. ಪ್ರೌಢರ ಶಿಕ್ಷಣ, ಸಾರ್ವತ್ರಿಕ ಶಿಕ್ಷಣಗಳು ಅವರ ಕಾರ್ಯಕ್ಷೇತ್ರಗಳಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುವವು.

ಅದೇ ಮೇರೆಗೆ ಸಾಲೆಗೆ ಹೋಗಲು ತಕ್ಕ ವಯಸ್ಸಿನ ಬಾಲಕ-ಬಾಲಿಕೆಯರ ಶಿಕ್ಷಣವು ಒತ್ತಾಯದಿಂದ ಸಾಗಬೇಕಾಗಿದೆ. ಆ ಶಿಕ್ಷಣಕ್ರಮವೂ ಪದ್ಧತಿಯೂ ಹಿಂದಿನಂತೆ ಇದ್ದರೆ ಸಾಗದು. ಆ ರೀತಿಯು ದೇಶೋನ್ನತಿಗೆ ಅಷ್ಟೂ ಮಟ್ಟಿಗೆ ಸಹಾಯ್ಯಕವಾಗಿಲ್ಲವಾದುದರಿಂದ ವರ್ಧಾ ಶಿಕ್ಷಣದ ಯೋಜನೆಯು ಮೇರೆಗೆ **ಹಸ್ತವ್ಯವಸಾಯ ಮುಖಾಂತರ**ವಾಗಿಯೇ ಶಿಕ್ಷಣವನ್ನು ಪ್ರಾರಂಭಿಸಬೇಕೆಂಬ **ಕ್ರಾಂತಿಕಾರಕ** ಉಪಾಯವನ್ನು ಶೋಧಿಸಿ ತೆಗೆದು ಆ ಯೋಜನೆಯ ಸಂಪೂರ್ಣ ಅಭ್ಯಾಸ ಪತ್ರಿಕೆಯನ್ನು ಪ್ರಸಿದ್ಧಪಡಿಸಿದ ಸಂಗತಿಯು ನಮ್ಮ ಓದುಗರಿಗೆ ವಿದಿತವಾಗಿಯೇ ಇದೆ.

ಆ ಯೋಜನೆಯ ಸಮಿತಿಯವರು ಅದನ್ನು ಅಮಲಿನಲ್ಲಿ ತರುವ ಮೊದಲು ಕಾಂಗ್ರೆಸ್ ಪ್ರಾಂತ್ಯಗಳ ಅಧಿಕಾರಸ್ಥರ ಅನುಮತಿಯ ಮೇರೆಗೆ ಬೇರೆ ಬೇರೆ ಪ್ರಾಂತ್ಯಗಳ ಶಿಕ್ಷಣಾಗ್ರೇಸರರನ್ನು ತಮ್ಮಲ್ಲಿಗೆ ಕಳೆದ ಜೂನ ತಿಂಗಳಿನಲ್ಲಿ ಕರೆಸಿಕೊಂಡು ೧೫ ದಿನಗಳ ಮಟ್ಟಿಗೆ ಆ ಯೋಜನೆಯ ವಿಷಯವಾಗಿ ಆ ಶಿಕ್ಷಕರಿಗೆ ಟ್ರೇನಿಂಗ ಕೊಟ್ಟು ಕಳಿಸಿರುವರು. ಹೀಗೆ ಕಳಿಸಿದವರಲ್ಲಿ ಭಾಷಾನು ಸಾರ ಭಾಗಕ್ಕೊಬ್ಬರಂತೆ ಮುಂಬಯಿ ಪ್ರಾಂತ್ಯದ ಐದು ಜನ ಶಿಕ್ಷಕರು ಅಲ್ಲಿ ಶಿಕ್ಷಣವನ್ನು ಪಡೆದು ಬಂದಿರುವರು. ಕರ್ನಾಟಕದಿಂದ ನಮ್ಮ ಶಾಲೆಯ ಇನಿಸ್ಪೆಕ್ಟರಾದ ಶ್ರೀ. ಕೊಪ್ಪಳ ಗುಂಡೇರಾಯರು ಅಲ್ಲಿ ಶಿಕ್ಷಣವನ್ನು ಪಡೆದು ಬಂದಿರುವರು. ಬಿಹಾರ ಮತ್ತು ಓರಿಸಾ ಪ್ರಾಂತ್ಯದವರು ಈಗಾಗಲೆ ಪ್ರಾಥಮಿಕ ಶಿಕ್ಷಕರಿಗಾಗಿ ಒಂದೊಂದು ಶಾಲೆಯನ್ನು ಕೂಡಲೆ ಸ್ಥಾಪಿಸುವರೆಂದು ಸರಕಾರದ ಪ್ರಕಟನೆಗಳನ್ನು ಹೊರಡಿಸಿರುವರು.

ನಮ್ಮ ಪ್ರಾಂತ್ಯದಲ್ಲಿಯೂ ಒಂದು ವರ್ಗವು ಬೇಗನೆ ಹೊರಡುವಂತೆ ಕಾಣುತ್ತದೆ. ಇಂಥ ವರ್ಗವನ್ನು ಎಲ್ಲಿ ಸ್ಥಾಪಿಸಬೇಕು? ಎಷ್ಟು ಜನ ಶಿಕ್ಷಕರಿಗೆ ಪ್ರಥಮದಲ್ಲಿ ಟ್ರೇನಿಂಗ್ ಕೊಡಬೇಕು? ಯಾವ ಜಿಲ್ಲೆಯಲ್ಲಿ ಯಾವ ಭಾಗದಲ್ಲಿ ಎಷ್ಟು ಶಾಲೆಗಳನ್ನು ಹೊರಡಿಸಬೇಕು? ಈ ಮೊದಲಾದ ವಿಚಾರಗಳು ನಿಶ್ಚಯವಾದ ಕೂಡಲೆ ಈ ಹೊಸ ವರ್ಗವು ಸ್ಥಾಪಿಸಲ್ಪಡುವದೆಂದು ತೋರುತ್ತದೆ.

ಈ ಹೊಸ ಶಾಲೆಯಲ್ಲಿ ಶಿಕ್ಷಣವನ್ನು ಪಡೆಯಬೇಕೆಂಬ ಶಿಕ್ಷಕರು ಯಾವದೊಂದು ಹಸ್ತವ್ಯವಸಾಯವನ್ನು ಬಲ್ಲವರಾಗಿರಬೇಕು. ಟಕಲಿಯಿಂದಾಗಲಿ ರಾಟೆಯಿಂದಾಗಲಿ ನೂಲುವದು ಮತ್ತು ಕೈಮಗ್ಗದಿಂದ ನೇಯ್ಯುವದು ಅವರಿಗೆ ಗೊತ್ತಿರಬೇಕು. ಟಕಲಿಯಿಂದ ನೂಲುವದು ತೀರ ಸುಲಭ ವಿಷಯ. ಇಂಥ ದೊಂದು ಟ್ರೇನಿಂಗ್ ವರ್ಗವು ಹೊರಡುವದೆಂಬುವರಲ್ಲಿ ಸಂದೇಹವೇನೂ ಇರುವ ದಿಲ್ಲ. ಈ ವರ್ಗದಲ್ಲಿ ಟ್ರೇನಿಂಗ್ ಪಡೆಯಲು ಉತ್ಸುಕರುಳ್ಳ ಶಿಕ್ಷಕರು ಈಗಿನಿಂದಲೇ ತಮ್ಮ ಸಿದ್ಧತೆಯನ್ನು ಮಾಡಿಕೊಳ್ಳಬೇಕೆಂದು ನಮ್ಮ ಸೂಚನೆ. ಅಲ್ಲದೆ ಈ ವರ್ಗದಲ್ಲಿ ಶಿಕ್ಷಣವನ್ನು ಪಡೆಯಬೇಕೆಂಬುವವರು ಶಿಕ್ಷಣ ಕಾರ್ಯದಲ್ಲಿ ಅನುಭವವುಳ್ಳವರಿದ್ದರೆ ಹೆಚ್ಚು ಒಳ್ಳೆಯದಾಗುವದು.

ವರ್ಧಾ ಶಿಕ್ಷಣದ ಯೋಜನೆಯು ಮೇರೆಗೆ ಹೊರಡುವ ಶಾಲೆಗಳು ತೀರ ಚಿಕ್ಕ ಹಳ್ಳಿಗಳಲ್ಲಿ ಅಂದರೆ ಇದುವರೆಗೆ ಶಾಲೆಗಳಿಲ್ಲದ ಸ್ಥಳಗಳಲ್ಲಿ ಸ್ಥಾಪಿಸಲ್ಪಡುವವು. ಅಲ್ಲಿ ಕೆಲಸ ಮಾಡುವ ಶಿಕ್ಷಕರು **ಗ್ರಾಮೋದ್ಧಾರ ಕಾರ್ಯಕ್ಷಮರೂ ಸಮಾಜ ಹಿತೈಷಿಗಳೂ** ಇರಬೇಕು.

ಈ ಯೋಜನೆಯ ವಿಷಯವಾಗಿ ಸಂದೇಹಗಳಿದ್ದವರು ನಮ್ಮ ಕಡೆಗೆ ತಮ್ಮ ಪ್ರಶ್ನೆಗಳನ್ನು ಕಳಿಸಿದರೆ ಮುಂದಿನ ಸಂಚಿಕೆಗಳಲ್ಲಿ ಉತ್ತರಗಳನ್ನು ಪ್ರಸಿದ್ಧಿಸಲು ನಮಗೆ ಅನುಕೂಲ್ಯವಾಗುವದು.

೧೯೩೮ನೆಯ ಇಸವಿಯಲ್ಲಿ ಆದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ ಧಾರವಾಡ ಇಲ್ಲಿಯ ವಾರ್ಷಿಕ ಪರೀಕ್ಷೆಯ ಪರಿಣಾಮವು

೧ನೆಯ ವರ್ಷದ ಕ್ಲಾಸು

ಧಾರವಾಡ ಡಿ। ಸ್ಕೂಲ ಬೋರ್ಡು

ಅ. ನಂ.	ಹೆಸರು	೧೪೦೦ ಗುಣಗಳ ಪೈಕಿ ಪಡೆದ ಗುಣಗಳು.
೧	ಪಾರ್ವತೆವ್ವ ಗುರಪ್ಪ ಕುರ್ಲಿ	೮೭೬
೨	ಮಾಗ್ದಾಲೇನ ಆಂತೋನ ರೋಡ್ರಿಗುಸ್	೮೩೦
೩	ಸೀತವ್ವ ವಿಠ್ಠಲರಾವ ಕುಲಕರ್ಣಿ	೮೧೦
೪	ಸುಂದ್ರವ್ವ ವೆಂಕಪ್ಪ ಗದ್ವಾಲ	೮೦೯

ಬೆಳಗಾವ ಡಿ। ಸ್ಕೂಲಬೋರ್ಡು

೫	ಸಾವಿತ್ರವ್ವ ಕಾಡಪ್ಪ ಲತ್ತಿ	೯೯೫
೬	ಲಕ್ಷ್ಮೀಬಾಯಿ ಧರ್ಮರಾವ ತನ್ನಿಯವರ	೮೩೯
೭	ಪ್ರವಾಸಿ ಬಸವಂತ ಗವಳಿ	೮೩೨
೮	ಕಾಶವ್ವ ಬಸವಂತರಾವ ಪೂಜಾರ	೭೭೯

ವಿಜಾಪುರ ಡಿ। ಸ್ಕೂಲಬೋರ್ಡು

೯	ಗೋದುಬಾಯಿ ಪಂಚಾಕ್ಷರಯ್ಯಾ ಮಠಪತಿ	೮೯೨
೧೦	ಕೆಂಚವ್ವ ಯಂಕಪ್ಪ ಈಟಿ	೮೭೨
೧೧	ಪಾರುಬಾಯಿ ಲಕ್ಷ್ಮಣರಾವ ದರ್ಜಿ	೭೨೪

ಧಾರವಾಡ ಮುನಸಿಪಾಲಿಟಿ

೧೨	ತಂಗವ್ವ ಶಿನಪ್ಪ ಕನಕೂರ	೮೬೪

ಹುಬ್ಬಳ್ಳಿ ಮುನಸಿಪಾಲಟಿ

೧೩	ಗಂಗವ್ವ ಶಿವಯ್ಯ ಕಲ್ಮಠ	೮೦೪
೧೪	ಲಕ್ಷ್ಮೀಬಾಯಿ ಮಾರಸ್ವಾಮಿ ಫೋಡಕೆ	೮೦೨

ಗದಗ ಮುನಸಿಪಾಲಿಟಿ

೧೫	ಗಂಗವ್ವಾ ಗಿರಿಯಪ್ಪ ಬಾರಿಕರ	೮೬೯

ವಿಜಾಪೂರ ಮುನಸಿಪಾಲಿಟಿ

೧೬	ಜೀವುಬಾಯಿ ಧಾವಿದಪ್ಪ ನಾಯಿಕರ	೮೬೦

೧೭ ರಾಜವ್ವ ಶಿವಲಿಂಗಪ್ಪ ಮೋಚಿ ೭೭೯

ವನಿತಾಸೇವಾ ಸಮಾಜ ಧಾರವಾಡ

೧೮ ತಿಪ್ಪವ್ವ ಭರಮಪ್ಪ ಕುರುಬರ ೮೮೭

ಸಾಂಗಲಿ ಸಂಸ್ಥಾನ

೧೯ ಇಂದಿರಾಬಾಯಿ ಕೃಷ್ಣರಾವ ಕುಲಕರ್ಣಿ ೯೭೧

ಹುಬ್ಬಳ್ಳಿ ಸೆಟಲಮೆಂಟ

೨೦ ಯಮನವ್ವ ಯಮನಪ್ಪ ಗೌಡರ ೭೭೨

೨ನೆಯ ವರ್ಷ

೧೫೦೦ ಪೈಕಿ

ಧಾರವಾಡ ಡಿ। ಸ್ಕೂಲಬೋರ್ಡು

೧ ವೀರವ್ವ ಶಿವಪ್ಪ ದೊಡ್ಡಮನಿ. ೮೭೬

೨ ವೀರವ್ವ ಶಿವಮೂರ್ತಿಪ್ಪ ತಲವಾಯಿ ೮೭೧

೩ ಗಂಗವ್ವ ಬಸಪ್ಪ ಭಾವಿ ೮೫೨

೪ ಮನೋರಮಾ ಸಿದ್ದಪ್ಪ ಘೋರ್ಪಡೆ ೮೫೨

ಬೆಳಗಾವ ಡಿ। ಸ್ಕೂಲಬೋರ್ಡು

೫ ತಾರಾಬಾಯಿ ವಾಸುದೇವ ಶೆಟ್ಟಿ ೧೦೦೯

೬ ದುಂಡವ್ವ ಮುರಿಗೆಯ್ಯಾ ಹಿರೇಮಠ ೮೩೪

ವಿಜಾಪೂರ ಡಿ। ಸ್ಕೂಲಬೋರ್ಡು

೭ ಸಾತವ್ವ ಇರಬಸಪ್ಪ ಗೋನಾಳ ೧೦೬೯

೮ ಶಿವು ಕಾಳಿಂಗ ಹೊಲೇರ ೯೭೪

೯ ಗಂಗಾಬಾಯಿ ಮಹಾದೇವಪ್ಪ ಶಿರ್ಶಿಕರ ೮೯೧

೧೦ ಬಸವಂತೆವ್ವ ವೀರಭದ್ರಪ್ಪ ಧಸ್ಕಾಣಿಕರ ೭೧೫

ಎಕ್ಸಸ್ಟಾಡಂಟ

೧೧ ಭೀಮವ್ವ ಭರಮಗೌಡ ಪಾಟೀಲ ೭೨೨

ಧಾರವಾಡ ಮುನಸಿಪಾಲಿಟಿ

೧೨ ಕಮಲಾಬಾಯಿ ಆನಂದರಾವ ಯಾದವ ೯೬೦

೧೩ ಚಿನ್ನಪ್ಪ ಲಿಂಗಪ್ಪ ಮಾಯಕಾರ ೯೦೬

ವಿಜಾಪೂರ ಮುನಸಿಪಾಲಿಟಿ

೧೪ ಸುಭದ್ರಾಬಾಯಿ ಮೋನರಾವ ಪತ್ತಾರ ೯೧೩

ವನಿತಾ ಸೇವಾಸಮಾಜ ಧಾರವಾಡ

೧೫ ಬಾಯವ್ವ ಆನಂದರಾವ ಸಿಂಪಿ ೯೬೧

ಧಾರವಾಡದಲ್ಲಿಯು ಕನ್ನಡ ಬುಕ್ ಕಮಿಟಿಯವರು ೧೯೩೮ ಜೂನ ತಿಂಗಳಿನಲ್ಲಿ ಮಂಜೂರು ಮಾಡಿದ

ಕನ್ನಡ ಪುಸ್ತಕಗಳ ಯಾದಿಯು ಕೆಳಗೆ ಬರೆದಂತೆ ಅದೆ.

ಪ್ರಾ. ಶಾ = ಪ್ರಾಥಮಿಕಶಾಲೆ ಶಿ = ಶಿಕ್ಷಕರು ವಿ = ವಿದ್ಯಾರ್ಥಿಗಳು L = ಲಾಯಬ್ರರಿ T = ಟೆಕ್ಸ್ಟ

ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂಜೂರ	ಮಂಜೂರೀ ನಂಬರು ಇ. ಸಾ. ಡಾ. ಸಾ. ರ.
೧	ಗುಲಾಮರ ಜಯೋ ತ್ಸಾಹ ಭಾಗ ೧, ಹಿಂಸವಿಜಯ	ಮಿಸ್. ಕೆ. ಇ. ಮುನಸನ್ ಎಡಿಟರದಿ ಟ್ರೇರುುರ ಚಸ್ಟ ಲ ಬೆಂಗಳೂರ	ಗ್ರಂಥಕರ್ತರು	೦-೪-೦	ಪ್ರಾ. ಶಾ. ಗಳ ವಿ. ಗಳ ಹಾಗು ಟ್ರೇ. ಸಂ. ಗಳ ವಿ. ಗಳ L ಮತ್ತು ಪ್ರಾ. ಶಾ. ಗಳ ಹಾಗು ಮೂ. ಶಾ. ಗಳ T ಬುಕ್	47P. 3200 4-7-38 S. 86-C. 788-C 29/6/38
೨	ನಿಡಗುಂದಿ ಮಾಸ್ತರ ಚರಿತ್ರೆ ೧ನೇ ೧೯೩೭	ಮು.ತುಕಾರಾಮಪ್ಪ ರತ್ನಪ್ಪ ಕೋಪರ್ಡೆ C/o ಎಸ್. ಕೆ ಬಿಲ್ಲೂರ ಸಂಕೇಶ್ವರ	ಡಾ. ಎಸ್. ಕೆ. ಬಿಲ್ಲೂರ	೦-೩-೦	ಪ್ರಾ.ಶಾ. ಗಳ ಶಿ.ರ ಮತ್ತು ವ್ಹ. ಟ್ರೇ. ಸಂ. ಗಳ L ಹಾಗು ಮಾಧ್ಯಮಿಕ ಶಾಲೆಗಳಿಗಾಗಿ	ಸದರ 3202 ಸದರ ಸದರ 784 23/6/38
೩	ಅಸ್ಪೃಶ್ಯತೆಯು (ಬೆಳಿಸಿದ್ದು) ೩ನೆ ಆ. ೧೯೩೭	ಸದರ	ಶ್ರೀ. ಸೋಮಶೇಖರ ಶಾಸ್ತ್ರಿಗಳು ಹಿರೇ ಮಠ ಬೆನಕಲ್ಲು	೦-೪-೦	ಪ್ರಾ. ಶಾ. ಗಳ ಶಿ. ರ ಹಾಗು ಟ್ರೇ. ಸಂ. ಗಳ L ಮತ್ತು ಮೂ. ಶಾ. ಗಳ ಶಿ. ರ L	ಸದರ 3204 ಸದರ 783
೪	ಗುಲಾಮರ ಜಯೋ ತ್ಸಾಹ ಕಂಬಾ ಯಿಂದ ೧೯೩೭	ಮಿಸ್. ಕೆ. ಇ. ಮುನಸನ್ ಬೆಂಗಳೂರ	ಗ್ರಂಥಕರ್ತರು	೧-೦-೦	ಪ್ರಾ. ಶಾ. ವಿ. ಗಳ ಹಾಗು ವ್ಹ. ಟ್ರೇ. ಸಂ ಗಳ L ಮತ್ತು ಮೂ. ಶಾ. ಗಳ T ಬುಕ್ಕು	ಸದರ 3206 ಸದರ 788

೫	ಆಳಿದ ಚಕ್ರವರ್ತಿ ಸಾರ್ವಭೌಮ ಜನೆ ಜಾರ್ಜರವರು ೧೯೩೭	ವಿ. ಕೆ. ದೊರೆಸ್ವಾಮಿ ಅಯ್ಯಂಗಾರ ಬಿ. ಎ. (ಆನರ್ಸ) ಟ್ರಾನ್ಸಲೇಟರ ದಿ. ಮೈಸೂರ ಅಗ್ರಿಕಲ್ಚರ ಲ್ ಎಕ್ಸಪರಿಮೆಂಟಲ್ ಯೂನಿಯನ್, ಬೆಂಗಳೂರ	ಕರ್ನಾಟಕ ಪಬ್ಲಿಸಿಂಗ ಹೌಸ	೦-೬-೦	ಪ್ರಾ. ಶಾ. ವಿ. ಗಳ ಹಾಗು ಸದರ ವ್ಹ. ಟ್ರೇ. ಸಂ. ಗಳ L ಹಾಗು ಮಾ. ಶಾ. ಗಳ ವಿ. ಗಳ L	3208 ಸದರ	781	ಸಂ
೬	ಕೋಗಿಲೆ ೧೯೩೧	ಮ. ಡಿ. ಆರ್. ರಾಮಯ್ಯ ಕನ್ನಡ ಟ್ರಾನ್ಸಲೇಟರ್ಸ ಆಫೀಸ ಬೆಂಗಳೂರ	ಗ್ರಂ. ಕ.	೦-೮-೦	ಮಾ. ಶಾ. ಗಳ T		ಸದರ 791	
೭	ಮೇಲ್ಪಂಕ್ತಿ ೧೯೩೩	ಸದರ	ಸದರ	೦-೪-೦	ಮಾ. ಶಾ. ವಿ. ಗಳ L		ಸದರ 780	ಪ್ರಕಟಿಸಿದ ಪುಟ
೮	ಇನೆಯನಿಂಪಿ ೧೯೩೮ ಹೂ (ಪತಿವ್ರತ) ೧೯೩೬	ವಿ. ತುಕಾರಾಮಪ್ಪ ರತ್ನಪ್ಪ ಕೋಪರ್ಡೆ C/0 ಡಾ. ಬಿಲ್ಲೂರ ಸಂಕೇಶ್ವರ	ಮ. ಮಹಾರುದ್ರಪ್ಪ ವೀರಭದ್ರಪ್ಪ ಆಥಣಿ ಬನಹಟ್ಟಿ ಜಮಖಂಡಿ ಸಂ.	೦-೧೦-೬	ಪ್ರಾ. ಶಾ. ಗಳ ಗರ್ಲ ಶಾಲೆಗಳ ವಿ. ಗಳ ಟ್ರೇ. ಸ. ಗಳ ಹಾಗು ಮಾ. ಶಾ. ಗಳ ವಿ. ಗಳ L	3223 ಸದರ	786 ಸದರ	
೯	ಮರೆತು ಹೋದ ಮುಲ್ಲ ಸಾಮ್ರಾಜ್ಯ ೧೯೩೮	ವಿ. ಎಚ್.ಸಿ. ಆವರಗುಪ್ಪಿ ಹೆ. ಮಾ. ಕ. ಬಾ. ಸ್ಕೂಲ ಸಿದ್ದಾಪೂರ.	ಗ್ರಂಥಕರ್ತ	೦-೪-೦	ಪ್ರಾ. ಶಾ. ಗಳ ಶಿ ರ ಹಾಗು ವ್ಹ. ಟ್ರೇ. ಸಂ. ಗಳ ವಿ. ಗಳ L	3222 ಸದರ	782 ಸದರ	

ಸಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂಜೂರು.	ಮಂಜೂರೀ ನಂಬರ ಇ. ಸಾ. ಡಾ. ಸಾ. ರ
೧೦	ಕೃಷಿಜ್ಞಾನ ಪ್ರದೀಪಕ ೧೯೩೬	ರಾವಸಾಹೇಬ ಪಿ. ಜಿ. ಹಳಕಟ್ಟಿ ಬಿ. ಎ. ಎಲ್‌ಎಲ್. ಬಿ. ಪ್ಲೀಡರ ವಿಜಾಪುರ	ಗ್ರಂಥಕರ್ತರು	೧೪-೦	ಪ್ರಾ. ಶಾ. ಗಳ ವಿ. ಗಳ ಹಾಗು ಶಿ. ರ ಮತ್ತು ವ್ಹ. ಟ್ರೇ. ಸಂ. ಗಳ L ಬುಕ್ಕು ಮತ್ತು ಮಾ. ಶಾ.ಗಳ ವಿ. ಗಳ ಶಿ. ರ. L	3218 ಸದರ 789 ಸದರ
೧೧	ಶೈತನಜೀವನ ಅಥವಾ ನಮ್ಮಬಾಳು ೧೯೩೩	ಮು. ಡಿ. ಆರ್. ರಾಮಯ್ಯ ಬಿ. ಎ. ಕನ್ನಡ ಟ್ರಾನ್ಸ್‌ಲೇಟರ ಆಫೀಸ, ಬೆಂಗಳೂರ	ಗ್ರಂಥಕರ್ತರು	೦-೨-೦	ಪ್ರಾ. ಶಾ. ಗಳ ವಿ. ಗಳ ಹಾಗು ವ್ಹ. ಟ್ರೇ. ಸಂ.ಗಳ ಮತ್ತು ಮಾ. ಶಾ. ಗಳ ವಿ. ಗಳ L	3216 ಸದರ 779 ಸದರ
೧೨	ಶೂರಸುಭಾಸಚಂದ್ರ ಬೋಸ	ಮಿ. ಕೆ. ಎಫ್. ಪಾಟೀಲ ಬಿ. ಎ., ಪಿ. ಓ. ಕಾಕೋಳ (ಧಾರವಾಡ ಡಿ.)	ಪಾಟೀಲ ಕಲ್ಲನಗೌಡರು ಶಾಂತಿಕುಟೀರ ಮೋಟೇಬೆನ್ನೂರ	೧೨ಆ.	ಪ್ರಾ. ಶಾ. ಗಳ ಶಿ. ರ ಹಾಗು ವ್ಹ. ಟ್ರೇ. ಸಂ.ಗಳ L ಮತ್ತು ಮಾ. ಶಾ. ಗಳ ವಿ. ಗಳ ಹಾಗು ಶಿ. ರ. L	3214 ಸದರ 778 ಸದರ
೧೩	ಗುಲಾಮರ ಜಯೋತ್ಸಾಹ ಭಾಗ ೨ ಪ್ರೇಮ ೧೯೩೬	ಮಿಸ್. ಕೆ.ಇ. ಮುನ್‌ಸನ್ ಎಡಿಟರರು ಟ್ರೇಡ್ಸುರ ಚಸ್ಪ ಬೆಂಗಳೂರ	ಗ್ರಂ. ಕ.	೦.೫-೦	ಪ್ರಾ. ಶಾ. ಗಳ ವಿ. ಗಳ ಹಾಗು ವ್ಹ. ಟ್ರೇ. ಸಂ. ಗಳ L ಮತ್ತು ಮಾ. ಶಾ. ಗಳ T ಬುಕ್ಕು	3212 778

(೩೭ ಪುಟ)

೧೪ ಗುಲಾಮರ ಜಯೋತ್ಸಾಹ ಭಾಗ ೩ ಕುರುಳಿನ ಮಹಿಮೆ, ೧೯೩೭	ಸದರ	ಸದರ		ಸದರ	3210	788
					ಸದರ	
೧೫ ವಿಧಿಯ ವೈಚಿತ್ರ್ಯ	ಮ್ಯಾನೇಜರ ಬಾಲಸಾಹಿತ್ಯ ಮಂಡಳ, ಮಂಗಳೂರ	ಗ್ರಂಥಕರ್ತರು	೦೧೨	ಪ್ರಾ. ಶಾ. ಗಳ ವಿ. ಗಳ ಹಾಗು ಟ್ರೇ. ಗಳ ಮತ್ತು ಮೂ. ಶಾ. ಗಳ ವಿ. ಗಳ L	3240	790

ಬಿ. ಜೆ. ಜಿ. ಶಾಸ್ತ್ರಿ,
ಎ. ಇ. ದ. ಭಾಗ

ಪ್ರತಿಲಿಪಿಕಾರರ ಟಿಪ್ಪಣಿ

ದಿರಿ ! ತ್ವರಿಮಾಡಿರಿ ! !

ವಾಗ್ವಿಲಾಸ ಬುಕ್ ಡಿಪೋಕ್ಕೆ ಇಂದೇ ಪತ್ರ ಬರೆಯಿರಿ

ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಕ ಬಿ. ಎ., ಡಿಪ್ಯುಟಿನಿಸ್ಪೆಕ್ಟರ್ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರು ಪ್ರವಹಿಸಿ ಬರೆದ ಪುಸ್ತಕವಿದು. ಬೆಲೆ ೬ ಆ. ಮಾತ್ರ.

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದೀಹಾಳಮಠ ಸುಪರವಾಯಿಝರರು ಗ್ರಂಥಕರ್ತರು. ಬೆಲೆ ೧ ಆ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

ಳನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಪಸಂದು ಪಡೆದದೆ. ಬರೆದವರು ಕ. ರಾ. ಅಡಬಡ್ಡಿ. ಬೆಲೆ ೬ ಆ.

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ ೬ ಆ.)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು, ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರಪೂರ ಕಮೀಶನ್ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಎ. ಆರ್. ಶಿವನಾಗಪ್ಪ,

ಪ್ರೊಪ್ರಾಯಿಟರ

ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ.

Reg. No. B. 3691

"ಜಯಂತಿ" ಚಿತ್ರಮಯ ಮಾಸಪತ್ರಿಕೆ

ವಿಲಾಸಿಗಳಿಗಾಗಿ ಕತೆಗಳ ಸೊಬಗು-ಸಿಂಗಾರ ಇವೆ.

ಸಂಸಾರಿಗಳಿಗಾಗಿ ನಗಿಸುವ ನಯಗಾರಿಕೆಯ ನಿಬಂಧ ಇವೆ

ತರುಣರಿಗಾಗಿ ಇಂದಿನ ಜೀವನ ಮೇಲಾಟದ ಸಮಾಚಾರ ಇವೆ.

ಕೋಲಾಹಲ ಇವೆ.

ಮುದುಕರಿಗಾಗಿ ಮನೆಯಲ್ಲಿಯೆ ವಿಶ್ವವ್ಯವಹಾರಗಳನ್ನು ತಂದೊಡ್ಡುವ

ಲೇಖನಗಳಿವೆ

'ಜಯಂತಿ' ಕಾರ್ಯಾಲಯ
ಧಾರವಾಡ

ಚಂದಾದಾರರಾಗಿರಿ
ವಾ. ಚಂ. ೩ ರೂ. ಮಾತ್ರ

ಪುಕ್ಕಟೆ ಮಾದರಿಯ ಪ್ರತಿಯ ಸಲುವಾಗಿ ಬರೆಯಿರಿ.

ಪತ್ರಗಳ ಸಾರಾಂಶ

೧. **ಶಾಳಾ ಹುನಗುಂದ** (ಜಿಲ್ಲಾ ಕಾರವಾರ) ಈ ಊರ ಗ್ರಾಮ ರಾ. ಕ. ದ ಕಾರ್ಯದರ್ಶಿಗಳು ತಿಳಿಸುವದೇನಂದರೆ—"ಈ ಶಾಲೆಗೆ ಹೊಸದಾಗಿ ಶಿಕ್ಷಕರಾಗಿ ಬಂದ ಶ್ರೀ. ಶಂಕರ ನಾರಾಯಣ ಭಟ್ಟರು, ಊರ ಪ್ರಮುಖರಾದ ಶ್ರೀ. ರುದ್ರಗೌಡರು ಪಾಟೀಲ, ಶ್ರೀ. ಬಸಪ್ಪ ತಳವಾರ, ಶ್ರೀ ಹಾಫೀಸಖಾನ ಇವರೆಲ್ಲರ ಪ್ರಯತ್ನ ಸಹಾಯಗಳಿಂದ ಶಾಲೆಯು ಸುಧಾರಿಸಿದೆ. ಶಾಲೆ ವಿದ್ಯಾರ್ಥಿಗಳಿಗೆ ಬೇಸಾಯದ ರೂಢಿ ಸಹ ಆಗಿದೆ. ಶಾಲೆಯ ಬಡ ಹುಡುಗರ ಬಗ್ಗೆ ಊರ ಸಭ್ಯಗೃಹಸ್ಥರು ಸಹಾಯಮಾಡಿದ ಹಣದ ವಿವರ.

ಶೇತಕೇ ಸಹಕಾರಿ ಸಂಘ		೧೫ ರೂ.
ಶ್ರೀ.	ರುದ್ರಗೌಡಾ ಪಾಟೀಲರು	೧ ,,
,,	ಬಸಪ್ಪ ತಳವಾರ	೧ ,,
,,	ಭರಮಣ್ಣನವರ	೧ ,,
,,	ಹಾಫೀಸಖಾನರು	೧ ,,
,,	ಜೀವನಗೌಡರು	೧ ,,
,,	ಮಲ್ಲಪ್ಪ ಬಡಗೇರ	೧ ,,

ಈ ಹಣದಿಂದ ಈ ಶಾಲೆಯ ಶಿಕ್ಷಕರು ಬಡ ವಿದ್ಯಾರ್ಥಿಗಳ ಪುಸ್ತಕ, ಉಡುಪುಗಳಿಗಾಗಿ ವೆಚ್ಚವಾಡಬೇಕೆಂದು ಗೊತ್ತಾಗಿದೆ. ಗ್ರೂಫ. ರಾ. ಕ. ಕಾರ್ಯದರ್ಶಿ

ಜಗಸ್ಪ ೧೯೩೮ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ನಂ.	ವಿಷಯ.	ಪುಟ.
೧.	ವಿದ್ಯಾಸುಧಾರಣೆಯ ವೃತ್ತಾಂತಗಳು	೧
೨.	ದಿಕ್ಸೂಚನ	೨
೩.	ಹೆಣ್ಣುಗಳು ಕೊಳೆಯದಂತೆ ಕಾದಿಡುವದು	೧೦
೪.	ಜೇನ್ನೊಳಗಳ ಜೀವನ ವೈಚಿತ್ರ್ಯ	೧೫
೫.	ಪ್ರಾಥಮಿಕ ಮಾಧ್ಯಮಿಕ ಸಾಲೆಗಳಲ್ಲಿ ಔದ್ಯೋಗಿಕ ಶಿಕ್ಷಣವ ಏರ್ಪಾಡು ಮಾಡುವ ಬಗ್ಗೆ ಕಮೀಟಿಯ ವರದಿ	೨೦
೬.	ಉದ್ಯೋಗಿಕ ಕಮೀಟಿಯ ಪುಸ್ತಕಗಳು	೨೨
೭.	ಹಿಂದುಸ್ತಾನದ ಸ್ಕೌಟ ಅಸೋಸಿಯೇಶನ್ ಮುಂಬಯಿ ಇಲಾಖೆ	೨೪
೮	ಪ್ರಕಟನೆ	೨೭
೯.	ಶಾಲಾಗೃಹಗಳಿಗಾಗಿ ಧನ	೨೭
೧೦.	ಪ್ರಾಯಮರಿ ಸ್ಕೂಲ ಲೀವ್ವಿಂಗ ಸರ್ಟಿಫಿಕೇಟ ಪರೀಕ್ಷೆ	೨೯

Printed by K. R. Bhise at the Karnatak Printing Works, Dharwar and Published by D. V. Kale, B. A., Head Master Training School, Dharwar at his Office.

ಜಾಹೀರಾತು

ರಾಮಾಶ್ರಯ ಬುಕ್‌ಡಿಪೊ, ಧಾರವಾಡ.

೧. **ಪುಸ್ತಕ ಶಾಖೆ.** ಕಾಯಿಪಲ್ಲೆ ಮಾರ್ಕೇಟ, ಧಾರವಾಡ.

೨. **ಸ್ಟೇಶನರಿ ಮತ್ತು ಇತರ ಸಾಮಾನಗಳ ಶಾಖೆ, ಮಾರ್ಕೆಟ ರೋಡ**

ನಮ್ಮಲ್ಲಿ ಕನ್ನಡ, ಇಂಗ್ಲೀಷ, ಹಿಂದಿ, ಮರಾಠಿ, ಉರ್ದು, ಭಾಷೆಯಲ್ಲಿ ಸಾ ಕಾಲೇಜುಗಳಿಗೆ ಉಪಯುಕ್ತವಾದ ಟೆಕ್ಸ್ಟಬುಕ್ಕುಗಳೂ ಅವುಗಳ ಟಿಪ್ಪಣಿಗಳೂ ಗಾಯಿಡ್, ಡಿಕ್ಷನರಿ, ಮ್ಯಾಪ್ಸ, (ನಕಾಶಗಳು) ಡಾಯರಿ, ಪಂಚಾಂಗ ಕಾದಂಬರಿಗಳೂ ಚಿಲ್ಲರೆ ಹಾಗೂ ತೋಕ ದರದಿಂದ ಯೋಗ್ಯಬೆಲೆಗೆ ದೊರೆಯುವವೆ

ಧಾರವಾಡದಲ್ಲಿ ಪ್ರಸಿದ್ಧಿಸಲ್ಪಟ್ಟ ಎಲ್ಲ ತರದ ಪುಸ್ತಕಗಳನ್ನು ಅಂದ ಕರ್ನಾಟಕದ ಇತಿಹಾಸಬೋಧಿನಿ, ಹಿಂದುಸ್ಥಾನ ಇತಿಹಾಸ ಬೋಧಿನಿ ನುಡಿಗನ್ನಡಿ, ಉಮಡಿಕರ ಜಮಾಖರ್ಚು, ನಿಂಬಾಳಕರ ಇವರಿಂದ ಪ್ರಸಿದ್ಧಿಸಲ್ಪಟ್ಟ ಹೊಸಪದ್ಧತಿಯ ಗಣಿತ, ಧಾರವಾಡ ಜಿಲ್ಲೆಯ ಭೂಗೋಲು ಹಾಗು ಕಟ್ಟಿಮನಿ ಕೃತ ಬಾಲಬೋಧೆ ಈ ಎಲ್ಲ ಪುಸ್ತಕಗಳು ತೋಕ ಹಾಗೂ ಕಿರುಕಳ ದರದಿಂದ ಸಿಗುತ್ತವೆ.

ಎಕ್ಸರಸಾಯಿಜ, ನೋಟಬುಕ್ಕುಗಳು, ಖಾತೆ ಕೀರ್ದಿಬುಕ್ಕು, ಜೋಡಾ ಕಾಪಿಬುಕ್ಕು, ಡ್ರಾಯಿಂಗಬುಕ್ಕು, ಇವುಗಳನ್ನು ನಾವು ಮುದ್ದಾಂ ಉತ್ತಮ ಕಾಗದ ಹಾಕಿಸಿ ಅಂದವಾಗಿ ತಯಾರಿಸಿ ಇಟ್ಟಿರುವೆವು.

ತಾಳಿಕೆಯಲ್ಲಿ ಮೇಲಾದ ಪಾರಕರ, ರಾಜಾ, ಕ್ಯಾಪ್ಟನ್, ಸೇಲರ ಮುಂತಾ ಎಲ್ಲತರದ ಹೊಸಮಾದರಿಯ ಫೌಂಟನ್‌ಪೆನ್ಸ, ಮತ್ತು ಅವುಗಳ ಮಸಿಯನ್ನು ಗ್ಯಾರಂಟಿಯಿಂದ ಕೊಡುತ್ತೇವೆ. ಪೆನ್ನುಗಳ ಮೇಲೆ ಇಂಗ್ಲಿಷದಲ್ಲಿ ಠಸರ ಹಾಕುತ್ತೇವೆ. ನಾದುರಸ್ತಾದ ಪೆನ್ನುಗಳನ್ನು ದುರಸ್ತು ಮಾಡುತ್ತೇವೆ.

ಇದಲ್ಲದೆ ಫೂಲ್‌ಸ್ಕೇಪ, ಕ್ರವೂನ್, ಡೆಮಿ, ರಾಯಲ್, ಬಾಂಡ, ಅನ್‌ಗ್ಲೇಜ ಹಾಗೂ ಗ್ಲೇಜಕಾಗದ ಪ ಕಾರ್ಡಬೋರ್ಡ, ಇನಿವಿಟೇಶನ್, ಕ್ಯಾಲಿಕೊ ಮುಂತಾ ಪ್ರಿಂಟಿಂಗ ಪ್ರೆಸ್ಸಿಗೆ ಉಪಯುಕ್ತವಾದ ಸಾಮಾನುಗಳೂ ಮತ್ತು ಎಲ್ಲ ನಮೂನೆಯ ಸ್ಟೇಶನರಿ ಸಾಮಾನುಗಳೂ ಸಿಗುತ್ತವೆ.

ಸೇಂಟ್ಸ, ಸ್ನೋ, ಹೇಅರಆಯಿಲ್ಸ, ದೇಶೀ ವಿದೇಶಿ ಸುವಾಸಿಕ ತೈಲಗಳೂ ಸಿಗುತ್ತವೆ.

ಸಾತೆ ಬಿಸ್ಕೀಟು, ಪೇಪರಮಿಠಾಯಿ, ಮೈಸೂರ ಕಾಫೀ ಬೀಜ, ಹುರಿದ ಜಹಾದ ಪುಡಿಯ ಅನೇಕ ನಮೂನೆಯ ಬಂಡಲಗಳು ದೊರೆಯುವವು.

ತಮ್ಮ,

ಈಶ್ವರಪ್ಪ ರಾಮಪ್ಪ ಆಕಳವಾಡಿ ಆ್ಯಂಡ ಸನ್ಸ.
ರಾಮಾಶ್ರಯ ಬುಕ್ಕಡಿಪೊ, ಮಾರ್ಕೆಟ ಧಾರವಾಡ.

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ದತ್ತಾತ್ರೇಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೭ | ಅಗಸ್ಟ ೧೯೩೮ | ವರ್ಷ ೧೦. ಸಂ. ೫

ವಿದ್ಯಾಸುಧಾರಣೆಯ ವೃತ್ತಾಂತಗಳು

(೧) ಶಾಲಾಗೃಹಗಳು

ನಮ್ಮ ನಾಡಿನಲ್ಲಿ ಸದ್ಯಕ್ಕೆ ಎಷ್ಟೋ ಶಾಲೆಗಳಿಗೆ ಯೋಗ್ಯವಾದ ಮನೆಗ ಇರುವದಿಲ್ಲ. ಎಷ್ಟೋ ಕಡೆಗೆ ಮಕ್ಕಳಿಗೆ ಕುಳಿತುಕೊಳ್ಳಲು ಸಾಕಷ್ಟು ಸ್ಥಳ ಇರುವದಿಲ್ಲ. ಶಾಲಾಗೃಹಗಳಲ್ಲಿ ಸಾಕಷ್ಟು ಬೆಳಕು, ಶುದ್ಧವಾದ ಹವೆಯು ಕೂಡ ಇರುವದಿಲ್ಲ. ಬಾಲಕರಲ್ಲಿ ಸರ್ವಾಂಗೀಣ-ಅಭಿವೃದ್ಧಿ ಆಗಬೇಕೆಂದು ನಾವು ಬಯಸುತ್ತೇವಷ್ಟೇ! ಆದರೂ ಮೇಲಿನ ಕೊರತೆಗಳನ್ನು ದೂರಮಾಡಲು ನಮ್ಮ ನಾಗರಿಕರು ಸಾಕಷ್ಟು ಪ್ರಯತ್ನಗಳನ್ನು ಮಾಡಿರುವದಿಲ್ಲ. ಸ್ಥಾನಿಕ ಸ್ವರಾಜ್ಯಸಂಸ್ಥೆಗಳಂತೂ ಹಣದ ಕೊರತೆಯ ಮೂಲಕ ಶಾಲೆಗೊಂದು ಯೋಗ್ಯ ವಾದ ಮನೆಯನ್ನು ಕೊಡಲಾರದೆ ಕುಳಿತಿರುವವು. ಇದನ್ನೆಲ್ಲ ಅವಲೋಕಿಸಿ **ಇಂಡಿನ ಸರಕಾರದವರು** ಸ್ವಲ್ಪ ಪ್ರಮಾಣದಲ್ಲಿಯಾದರೂ ಮುಂದುವರಿಯು ವದೆಂದು ಶಾಲಾಮಂದಿರಗಳಿಗಾಗಿ ಇಡೀಯ ಇಲಾಖೆಯ ಪೆಜ್ಜದಲ್ಲಿ ಒಂದು ಲಕ್ಷ ರೂಪಾಯಿಗಳ ವ್ಯವಸ್ಥೆ ಮಾಡಿದ ಸಂಗತಿಯು ಅವರ ಪ್ರಯತ್ನಗಳ ಪ್ರತ್ಯಕ್ಷ ಸಾಕ್ಷ್ಯವಾಗಿದೆ. ಈ ವಿಷಯವಾಗಿ ಸರಕಾರದವರು ಮಾಡಿದ ಯೋಜನೆಯ ಸಂಪೂರ್ಣ ವರ್ಣನೆಯನ್ನು ಇದೇ ಸಂಚಿಕೆಯ ಬೇರೊಂದು ಭಾಗದಲ್ಲಿ ನಾವು ಕೊಟ್ಟಿರುವೆವು. ಈ ಯೋಜನೆಯ ಮೇರೆಗೆ ಪ್ರತಿಯೊಂದು ಜಿಲ್ಲೆಗೆ ಸರಕಾರ ದವರು ೫೦೦೦ ರೂ. ಕೊಟ್ಟಿರುವರು. ಇದರ ಜತೆಗೆ ಸ್ಥಾನಿಕ ಸ್ವರಾಜ್ಯ ಸಂಸ್ಥೆ ಯಾದ ಜಿಲ್ಲಾ ಲೋ. ಬೋರ್ಡಿನವರು ೫೦೦೦ ರೂ. ಕೊಡುವರು. ಆದರೆ

ಉದಾರವನಸ್ಸಿನವರೂ ವಿದ್ಯಾಭಿಮಾನಿಗಳೂ ಬಾಲಕರ ಬೆಳವಣಿಗೆಯನ್ನು ಅಪೇಕ್ಷಿಸುವವರೂ ಈ ಸುಸಂಧಿಯನ್ನು ವ್ಯರ್ಥ ಹೋಗಗೊಡಬಾರದು. ಒಂದು ಜಿಲ್ಲೆಗೆ ದೊರೆತ ಹಣವು ತೀರ ಸ್ವಲ್ಪವಿರುವದು. ಆದರೂ ಮೊದಲು ಮುಂದೆ ಬಂದವರು ಅದರ ಉಪಯೋಗಮಾಡಿಕೊಂಡು ಬಿಡುವರು. ಆದಕಾರಣ ತಮ್ಮ ತಮ್ಮ ಗ್ರಾಮಗಳಲ್ಲಿ ಯೋಗ್ಯ ಶಾಲಾಗೃಹಗಳಿಲ್ಲದವರು ಆದಷ್ಟು ಬೇಗನ ಮುಂದು ಬಂದು ಈ ಹಣದ ಸದುಪಯೋಗವನ್ನು ಮಾಡಿಕೊಳ್ಳುವರೆಂದು ನಾವು ತುಂಬಾ ಆಶಿಸುತ್ತೇವೆ. ಇಷ್ಟೇ ಅಲ್ಲದೆ ಆ ಶಾಲಾಗೃಹದ ಕ್ಷಿನೆಯ ಅಂಶ ಮೆಚ್ಚಿದ ಹಣವನ್ನು ದಾನಮಾಡಿ ತಮಗೆ ಇಷ್ಟವಾದ ಹೆಸರನ್ನು ಆ ಶಾಲಾಗೃಹಕ್ಕೆ ಇಡಲು ಅವಕಾಶವನ್ನು ಕೊಟ್ಟಿರುವರು. ಆದದರಿಂದ ವಿದ್ಯಾದಾನಕ್ಕೆ ಸಹಾಯ ಮಾಡಲಪೇಕ್ಷಿಸುವ ಮಹನೀಯರು ಈ ಸಮಯದಲ್ಲಿ ತಮ್ಮ ಹೆಸರುಗಳನ್ನು ಅಜರಾಮರ ಉಳಿಯುವಂತೆ ಮಾಡುವರೆಂದು ನಮ್ಮ ನಂಬುಗೆ. ಸರಕಾರದವರು ಕೂಡ ಉತ್ತರೋತ್ತರ ಹೆಚ್ಚು ಹಣವನ್ನು ಕೊಡುವರೆಂಬುದರಲ್ಲಿ ಏನೂ ಸಂದೇಹವಿಲ್ಲ. ನಾಡಿನ ನಾಗರಿಕರೂ ಅವರನ್ನಾಳುವ ಸರಕಾರದವರೂ ಏಕ ಮುಖವಾಗಿ ಪ್ರಯತ್ನಮಾಡಿ ಕೆಲವು ವರ್ಷಗಳಲ್ಲಿಯೇ ಹಳ್ಳಿಗೊಂದು ಸಾರ್ವಜನಿಕ ಮನೆಯೊಂದನ್ನು ಒದಗಿಸಿಕೊಡುವ ಕಾಲವು ಬೇಗನೆ ಬರುವದೆಂದು ನಮಗೆ ತೋರುತ್ತದೆ. ಪ್ರಾ. ಶಾ. ಶಿಕ್ಷಕರು ತಮ್ಮ ಹಳ್ಳಿಯ ಜನರಿಗೂ ಮುಖ್ಯವಾಗಿ ಗ್ರಾಮಪಂಚರಿಗೂ ಈ ಸಂಗತಿಯನ್ನು ತಿಳಿಸಿ ಹೇಳಬೇಕು.

(೨) ೧೯೨೩ನೆಯ ಇಸವಿಯ ಪ್ರಾಥಮಿಕ ಶಿಕ್ಷಣ ಕಾಯದೆಯ ತಿದ್ದುಪಡಿ

೧೯೨೩ನೆಯ ಇಸವಿಯ ಪ್ರಾಥಮಿಕ ಶಿಕ್ಷಣದ ಕಾಯದೆಯು ಸುಮಾರು ೧೫ ವರ್ಷಗಳ ವರೆಗೆ ಸಾಗುತ್ತ ಬಂದು ಈಗ ಅದು ತುಸು ಹೆಚ್ಚು ಕಡಿಮೆಗಳನ್ನು ಹೊಂದಿ ಮೊನ್ನಿನ ಅಸೆಂಬ್ಲಿಯಲ್ಲಿ ಪಾಸಾಗಿ ಜುಲೈ ೧ನೆಯ ತಾರೀಖಿನಿಂದ ಪ್ರಚಾರದಲ್ಲಿ ಬಂದಿದೆ ಇದರಲ್ಲಿ ಆದ ಬದಲಾವಣೆಗಳು ಹೆಚ್ಚಿನ ಪ್ರಮಾಣವೆಂದೂ ಪ್ರಜಾಪ್ರಭುತ್ವದ ತತ್ವಗಳಿಗೆ ಹಾನಿತರುವಂಥವೆಂದೂ ಕೆಲವು ಜನರು ಹೇಳುತ್ತಿದ್ದಾರೆ. ಆದರೆ ತುಸು ಆಳವಾಗಿ ನೋಡಿದರೆ ಹಾಗೇನೂ ಆದಂತೆ ಕಂಡುಬರುವದಿಲ್ಲ. ಈ ಹೆಚ್ಚು ಕಡಿಮೆಗಳಿಗೆ ಮೇರೆಗೆ ಬೋರ್ಡುಗಳಿಗೆ ಇದ್ದ ಮತ್ತು ಕೊಟ್ಟ ಅಧಿಕಾರಗಳು ಯೋಗ್ಯವಾಗಿವೆಯೋ ಇಲ್ಲವೋ ಎಂಬುದನ್ನೂ ಅವರು ಮಾಡಬೇಕೆಂದು ಇಚ್ಛಿಸುವ ಅನೇಕ ಕಾರ್ಯಗಳು ಕೃತಿರೂಪದಲ್ಲಿ ಬರಬಲ್ಲವೋ ಇಲ್ಲವೋ ಒಂದರೆ ಎಷ್ಟು ಉಪಯುಕ್ತವಾಗುವದೆಂಬುದನ್ನೂ ಸರಕಾರದವರು ಹೆಚ್ಚು ದಕ್ಷತೆಯಿಂದ ನೋಡಲು ಮಾತ್ರ ತಮ್ಮ ಮೈಮೇಲೆ ತೆಗೆದುಕೊಂಡಿರುವರು.

ಹೊಸದಾಗಿ ಕೆಲ ತಿದ್ದುಪಡಿಗಳಾಗಿದ್ದರೂ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಬಹುತರ ಎಲ್ಲ ಕಾರ್ಯಗಳು ಸ್ಕೂ. ಬೋರ್ಡಿನವರ ಅಧಿಕಾರದಲ್ಲಿವೆ. ಸ್ಕೂ. ಆಯವ್ಯಯ ಪತ್ರಿಕೆಯನ್ನು ಅವರೇ ತಯಾರಿಸಬಹುದು. ಪ್ರಾಥಮಿಕ ಶಿಕ್ಷಣವನ್ನು ಒತ್ತಾಯವಾಗಿ ಮಾಡಬಹುದು. ಅಭ್ಯಾಸ ಪತ್ರಿಕೆಗಳಲ್ಲಿ ಸರಕಾರದ ಹಿಡಿತಕ್ಕೆ ಪಡೆದು ಹೆಚ್ಚು ಕಡಿಮೆಗಳನ್ನು ಮಾಡಬಹುದು. ಶಿಕ್ಷಕರನ್ನೂ ಕೆಳಗಿನ ನೌಕರರನ್ನೂ ತಾವೇ ನಿಯಮಿಸಿಕೊಳ್ಳಬಹುದು. ಅವರಿಗೆ ಹೆಚ್ಚಿನ ರಜೆ ಕೊಡಬಹುದು. ಅಡ್ಮಿನಿಸ್ಟ್ರೇಟಿವ್ ಆಫೀಸರರು ವಿಚಾರಣೆ ಮಾಡಿದನಂತರ ಕೆಲಸದಿಂದ ಡಿಸ್‌ಮಿಸ್ ಕೂಡ ಮಾಡಬಹುದು.

ಆದರೆ ಇಲ್ಲಿಯವರೆಗೆ ತಮ್ಮ ಅಡ್ಮಿ. ಆಫೀಸರರನ್ನು ತಾವೇ ನಿಯಮಿಸಿಕೊಳ್ಳುತ್ತಿದ್ದರು. ಅವನು ಬೋರ್ಡಿನಿಂದ ನಿಯಂತ್ರಿತನಾಗಿರುತ್ತಿದ್ದನು. ಈಗ ಪ್ರತಿವರ್ಷ ಒಂದು ಲಕ್ಷಕ್ಕಿಂತ ಹೆಚ್ಚು ಹಣವನ್ನು ಪ್ರಾಥಮಿಕ ಶಿಕ್ಷಣಕ್ಕೆ ವೆಚ್ಚ ಮಾಡುತ್ತಿದ್ದ ಮುನಿಸಿಪಾಲಿಟಿ (ಉದಾ– ಮುಂಬಯಿ, ಹುಬ್ಬಳ್ಳಿ ಮು.)ಗಳನ್ನು ಬಿಟ್ಟು ಉಳಿದ ಎಲ್ಲ ಸ್ಕೂಲ ಬೋರ್ಡಗಳ ಅ. ಆ. ರನ್ನು ಸರಕಾರದವರು ನಿಯಮಿಸುವರು. ಇವರು ಈಗ ಸರಕಾರ ನೌಕರರು. ಮತ್ತು ಸರಕಾರದವರಿಂದ ನಿಯಂತ್ರಿಸಲ್ಪಡುವರು. ಇಲ್ಲಿಯವರೆಗೆ ಬೋರ್ಡುಗಳ ಆಡಳಿತೆಯಲ್ಲಿ ಅವರ ನಿರ್ಣಯಗಳಲ್ಲಿ ಸರಕಾರದವರು ಹೆಚ್ಚಾಗಿ ಕೈಹಾಕುತ್ತಿದ್ದಿಲ್ಲ. ಆದರೆ ಈಗ ಅ. ಆ. ರಿಗೂ ಸ್ಕೂ. ಬೋ. ಗೂ ಮತಭೇದವಾದಲ್ಲಿ ಪ್ರಕರಣವು ಎ. ಇ ರವರ ಕಡೆಗೆ ಹೋಗಿ ಅಲ್ಲಿ ಅವರು ಕೊನೆಯ ತೀರ್ಪು ಕೊಡುವರು. ಅವರ ತೀರ್ಪು ಹುಕುಮಿನಂತಿರುವದು.

ಎರಡನೆಯ ಮುಖ್ಯ ತಿದ್ದುಪಡಿಯೆಂದರೆ ಅ. ಆ. ನಾದರೂ ಕೆಲವು ಕಾರ್ಯಗಳಲ್ಲಿ ಸ್ವತಂತ್ರನಾಗಿ ವರ್ತಿಸಬಹುದು. ಉದಾಹರಣೆಗಾಗಿ ಶಿಕ್ಷಕರ ವರ್ಗಾವರ್ಗಿ, ತುಸು ಅವಧಿಯವರೆಗೆ ರಜೆ ಕೊಡುವದು ಇ. ಮೂರನೆಯ ಮುಖ್ಯ ಬದಲಾವಣೆಯೆಂದರೆ ಇಲ್ಲಿಯವರೆಗಿದ್ದ ಸುಪರವಾಯಿಜರರೆಲ್ಲರು ಈಗ ಅಸಿಸ್ಟಂಟ ಪಿ. ಎಜ್ಯುಕೇಶನಲ್ ಇನ್ಸ್‌ಪೆಕ್ಟರರಾಗಿ ಸರಕಾರೀ ನೌಕರರೆಂದು ಕರೆಯಲ್ಪಟ್ಟು ಸೀನಿಯರ್ ಐ. ಡಿ. ಇ. ಆಯ್ ಇವರ ಅಧೀನತೆಯಲ್ಲಿ ಬಂದಿರುವರು. ಇನ್ನು ಮೇಲೆ ಸೀನಿಯರ್ ಎ. ಡಿ. ಇ. ಆಯ್ ಇವರ ಶಿಫಾರಸುಗಳಿಗೆ ಬಹಳ ಮಹತ್ವ ಬಂದು ಶಿಕ್ಷಕರ ಏರಿಳಿತಗಳು ಇವರ ಶಿಫಾರಸುಗಳನ್ನು ಅವಲಂಬಿಸುವವು. ಶಾಲೆಗಳ ಪ್ರಗತಿಯ ತಪಾಸಣೆಯನ್ನು ಈ ಐ. ಡಿ. ಇ. ರ ಮುಖಾಂತರ ಸರಕಾರವು ತಮ್ಮ ಕೈಯಲ್ಲಿ ತೆಗೆದುಕೊಂಡು ಮೇಲ್ವಿಚಾರಣೆಯನ್ನು ಸಾಗಿಸುವರು. ಶಿಕ್ಷಣ ಕಾರ್ಯದಲ್ಲಿ ಮುಂದಾದ ಇಂಗ್ಲಂಡ ಮುಂತಾದ ದೇಶಗಳಲ್ಲಿಯಾದರೂ

ಇದೇ ಪ್ರಕಾರವಾಗಿದ್ದು ಸರಕಾರದವರು ಲೋಕಲ್ ಅಥಾರಿಟಿಗಳಿಗೆ ಧನಸಹಾಯಮಾಡಿ ಸಾಲೆಗಳನ್ನು ನಡೆಸಿ ಪ್ರಾಥಮಿಕ ಶಿಕ್ಷಣದ ಕಾರ್ಯವನ್ನು ಅವರಿಗೆ ಒಪ್ಪಿಸಿರುವರು. ದುಡ್ಡಿನ ವೆಚ್ಚವು ಯೋಗ್ಯರೀತಿಯಿಂದ ಸಾಗಬೇಕೆಂಬ ವಿಷಯದಲ್ಲಿ ಮೇಲ್ವಿಚಾರಣೆಯನ್ನು ತಮ್ಮ ಕೈಯಲ್ಲಿಟ್ಟುಕೊಂಡಿರುವರು. ಹೀಗಾಗುವದರಿಂದ ಕೈಕೊಂಡ ಕಾರ್ಯವು ಹೆಚ್ಚು ಸಫಲವಾಗಿ ಸಾಗುವದು. ಮತ್ತು ಇಲ್ಲಿಯವರೆಗೆ ಸೀನಿಯರ ಏ. ಡಿ. ಇ. ಆಯ್ ರವರಿಗೂ ಮತ್ತು ಸ್ಕೂಲ ಬೋರ್ಡಿನವರಿಗೂ ಪ್ರತ್ಯಕ್ಷ್ಯವಾದ ಸಂಬಂಧವಿರಲಿಲ್ಲ. ಆದರೆ ಈಗ ಇವರ ಶಿಫಾರಸುಗಳಿಗನುಸರಿಸಿ ಅ. ಆ. ರು ಕೆಲಸಮಾಡಬೇಕಾಗುತ್ತದೆ. ಆದ್ದರಿಂದ ಅವರಲ್ಲಿ ಪರಸ್ಪರ ಸಹಕಾರವು ಹೆಚ್ಚಾಗಿ ಶಿಕ್ಷಣ ಪ್ರಸಾರವು ಭರದಿಂದ ಸಾಗುವದೆನ್ನಲಿಕ್ಕೆ ಏನೂ ಸಂದೇಹವಿಲ್ಲ.

ಸುಹೃದಯಿಗಳಾದ ಜನರು ತಮಗೆ ಸಲ್ಲಿಸಿದ ಹಕ್ಕು-ಬಾಧ್ಯತೆಗಳನ್ನು ಸತ್ಕರಿಸಿ ಅವುಗಳ ಸದುಪಯೋಗವನ್ನು ಮಾಡಿಕೊಂಡು ಸರಕಾರದವರು ಕೈಕೊಂಡ ಈ ಕಾರ್ಯದಲ್ಲಿ ಸಹಾಯ ಸಹಕಾರಗಳನ್ನು ಇತ್ತು ಇಲಾಖೆಯಲ್ಲಿಯು ಜನರು ಎಂದರೆ ಮುಖ್ಯವಾಗಿ ಹಳ್ಳಿಗಳಲ್ಲಿ ವಾಸಮಾಡುತ್ತಿರುವ ನಿರಾಶ್ರಿತರಾದ ನಿರಕ್ಷರಿಗಳ ಶಿಕ್ಷಣಾಭಿವೃದ್ಧಿಯಾಗುವಂತೆ ಮಾಡಬೇಕೆಂದು ನಾವು ಮನಃಪೂರ್ವಕವಾಗಿ ಬಿನ್ನಯಿಸುವೆವು; ಈ ಕಾರ್ಯವು ಸುಗಮವಾಗಿ ಸಾಗಿ ಜನರ ಕಲ್ಯಾಣವಾಗಲೆಂದು ಹಾರೈಸುವೆವು.

ಈಗಿನ ಮಂತ್ರಿಮಂಡಲವು ಅಧಿಕಾರವನ್ನು ಸ್ವೀಕರಿಸಿದ ಕೂಡಲೆ ಮುಖ್ಯವಾಗಿ ಶಿಕ್ಷಣದ ಕಡೆಗೆ ತಮ್ಮ ಲಕ್ಷ್ಯವನ್ನು ಪೂರೈಸಿದರು. ಮುಖ್ಯ ಪ್ರಧಾನರಾದ ಶ್ರೀಮಾನ್ ಖೇರರವರೇ ಶಿಕ್ಷಣ ಖಾತೆಯನ್ನು ತಮ್ಮ ಕೈಯಲ್ಲಿರಿಸಿಕೊಂಡು ಅದರ ಸುಧಾರಣೆಗಾಗಿ ಕೆಲವು ತಜ್ಞಜನರ ಕಮೀಟಿಗಳನ್ನು ನೇಮಿಸಿದರು. ಆರಂಭದಲ್ಲಿ ಎಲ್ಲಕ್ಕೂ ಮೊದಲನೆಯದೆನಿಸಿದ ಶಾರೀರಿಕ ಶಿಕ್ಷಣದ ಬಗ್ಗೆ ಕುನಲಯಾನಂದ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ೧೯೩೭ನೆಯ ಸಪ್ಟಂಬರದಲ್ಲಿ ಕಮೀಟಿಯು ನೇಮಕವಾಗಿ ಅವರ ಶಿಫಾರಸುಗಳೂ ಹೊರಬಿದ್ದವು. ತರುವಾಯ ಪ್ರೌಢ ಶಿಕ್ಷಣ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಔದ್ಯೋಗಿಕ ಶಿಕ್ಷಣ ಇವುಗಳ ಬಗ್ಗೆ ಕಮೀಟಿಗಳು ನೇಮಕವಾಗಿ ಅವರ ವರದಿಗಳಾದರೂ ಮೊನ್ನೆ ಮೊನ್ನೆ ಪ್ರಸಿದ್ಧವಾಗಿವೆ. ಶಿಕ್ಷಕರ ಟ್ರೇನಿಂಗಿನ ವಿಷಯವಾಗಿ ನೇಮಿಸಿದ ಕಮೀಟಿಯ ವರದಿಯು ಶೀಘ್ರದಲ್ಲಿಯೇ ಪ್ರಸಿದ್ಧಿಸಲಾಗುವದೆಂದು ತಿಳಿದು ಬರುತ್ತದೆ. ಸರಕಾರದ ಪರವಾಗಿ

(೩) ಮುಂಬಯಿ ಸರಕಾರದವರು ನಿಯಮಿಸಿದ ಶೈಕ್ಷಣಿಕ ಕಮೀಟಿಯ ವರದಿಗಳು

ಪ್ರಯತ್ನ ಪಟ್ಟು ಕಮೀಟಿಗಳನ್ನೆಲ್ಲ ನೇಮಿಸಿ ಅವರಿಂದ ಶೀಘ್ರದಲ್ಲಿ ವರದಿಗಳು ಹೊರಡುವಂತೆ ಮಾಡಿದ ಬಗ್ಗೆ ಶ್ರೀಮಾನ್ ಜೇರರವರಿಗೆ ಇಡಿಯ ಇಲಾಖೆಯವರು ಚಿರಋಣಿಯಾಗಿರುವರಲ್ಲದೆ ಅವರ ಸ್ವದೇಶಪ್ರೀತಿ ದೇಶಹಿತದ ಬಗ್ಗೆ ಇದ್ದ ಅವರ ಉತ್ಸುಕತೆ ಇವೆಲ್ಲವುಗಳಿಗೂ ಅವರನ್ನು ತುಂಬ ಅಭಿನಂದಿಸುವೆವು. ಕಮೀಟಿ ಗಳಲ್ಲಿಯ ಸದಸ್ಯರು ಗೌರವಶಾಲಿಗಳೂ ಆಳವಾಗಿ ಅಭ್ಯಾಸಿಸಿದವರೂ ಸಮಾಜ ಸೇವೆಗೆ ಟೊಂಕಕಟ್ಟಿದವರೂ ಆಗಿರುವರು. ತಮ್ಮ ಕಾರ್ಯದಲ್ಲಿ ಅವರು ತೋರಿಸಿದ ಕಳಕಳಿ, ಕರ್ತವ್ಯದಕ್ಷತೆ ಇವು ನಿಜವಾಗಿಯೂ ದೇಶಕ್ಕೆ ಹತ್ತಿದ ರೋಗ ವನ್ನು ನಿರ್ಮೂಲಮಾಡಿ ವೃಕ್ಷವು ಭರದಿಂದ ಬೆಳೆಯಬೇಕೆಂಬ ಅವರ ಹಂಬಲ, ಕೈಕೊಂಡ ಕಾರ್ಯವನ್ನು ಇಷ್ಟೊಂದು ಶೀಘ್ರವಾಗಿ ಕೊನೆಗಾಣಿಸಲು ಅವಿಶ್ರಾಂತವಾಗಿ ಪ್ರಯತ್ನಪಟ್ಟ ಅವರ ಜಾಗರೂಕತೆ ಇವೆಲ್ಲವುಗಳಿಗೂ ಅವರನ್ನು ಎಷ್ಟು ಮನ್ನಿಸಿದರೂ ಕಡಿಮೆ. ಈ ವರದಿಗಳಲ್ಲಿ ಕೆಲವು ಸದಸ್ಯರು ಕೆಲವು ಕಡೆಯಲ್ಲಿ ಭಿನ್ನ ಮತಪತ್ರಿಕೆಯನ್ನು ಜೋಡಿಸಿರುವದನ್ನು ನೋಡಿದರೆ ಅವರ ಆಸೆಯು ಎಷ್ಟು ಆಳವಾಗಿರುವದೆಂಬುದು ಸಹಜವಾಗಿ ಕಾಣಬಹುದು.

ವರದಿಗಳಲ್ಲಿ ಕಾಣಬರುವ ಶಿಫಾರಸುಗಳು ಹೆಚ್ಚಾಗಿ ಶೈಕ್ಷಣಿಕವೂ ಶಿಕ್ಷಣಾರ್ಹವೂ ಆಗಿರುವವಲ್ಲದೆ ಪ್ರಯೋಗಾರ್ಹವೂ ಆಗಿರುವವು. ಇದಲ್ಲದೆ ಹಿಂದುಸ್ಥಾನದ ಪರಿಸ್ಥಿತಿಗೆ ಹೊಂದಿಕೊಂಡಂಥವೂ ಇರುವವು. ಇವು ಬೇಗನೆ ಆಚರಣೆಯಲ್ಲಿ ಬಂದುಬಿಟ್ಟರೆ ದೇಶದ ಪ್ರಗತಿಯು ಉತ್ಕ್ರಾಂತಿಯುಕ್ತವೂ ಕ್ರಾಂತಿಕಾರಕವೂ ಆಗಿ ನಮ್ಮ ದೇಶದ ಶಿಕ್ಷಣದ ಪ್ರಗತಿಯು ಭರದಿಂದ ಸಾಗುವ ದೆಂಬದರಲ್ಲಿ ಸಂದೇಹವಿಲ್ಲ.

ಸರಕಾರದವರು ಇಟ್ಟುಕೊಂಡ ಉದಾತ್ತವಾದ ಉದ್ದೇಶವನ್ನು ಉತ್ಸಾಹ ದಿಂದ ಉಪಕ್ರಮಿಸಲು ಜನತೆಯು ಮುಂದೆ ಬಂದು ಅವರಿಗೆ ಸಹಕಾರವನ್ನು ನೀಡಬೇಕೆಂದು ನಮ್ಮ ಬಿನ್ನಹ. ಶಿಕ್ಷಕರು ಕರ್ತವ್ಯಭಾವನೆಯಿಂದ ಪ್ರೇರಿತರಾಗಿ ತಮ್ಮ ಪಾಲಿಗೆ ಬಂದ ಕಾರ್ಯವನ್ನು ನಿಸ್ವಾರ್ಥಬುದ್ಧಿಯಿಂದ ಸಾಗಿಸಬೇಕೆಂದು ನಮ್ಮ ವಿನಂತಿ.

ಸರಕಾರದವರು ಕೈಕೊಂಡ ಈ ಕಾರ್ಯಗಳು ಬಾಲಕರ ಬೆಳವಣಿಗೆ, ಜನಹಿತ, ರಾಷ್ಟ್ರೋದ್ಧಾರ ಇವುಗಳ ದೆಶೆಯಿಂದ ಹೊರಟ ಜಯಪ್ರಾಪ್ತಿಯ ಹೆದ್ದಾರಿಯ ಹೆಗ್ಗುರುತುಗಳಾಗಿ ಪರಿಣಮಿಸಲೆಂದು ನಮ್ಮ ಹಾರೈಕೆ; ನಮ್ಮ ಬೇಡಿಕೆ.

ದಿಕ್ಸಾಧನ

ಲೇಖಕಃ— ಶ್ರೀ. ಬಿ. ಎಸ್. ಜೀರೆ, ಬಿ. ಎಸ್‌ಸಿ. ಬಿ. ಟಿ. ಅಸಿ. ಮಾಸ್ತರ
ಎ. ಕೆ. ಗರ್ಲಸ್ಕೂಲ ಧಾರವಾಡ

ಕೋಲಿನ ನೆರಳಿನ ನಿರೀಕ್ಷಣೆ ನಮ್ಮ ಜ್ಯೋತಿಃಶಾಸ್ತ್ರದಲ್ಲಿ ಅತಿ ಮಹತ್ವವಾದದ್ದಾಗಿತ್ತೆಂದು ನಮ್ಮ ಜ್ಯೋತಿಃಶಾಸ್ತ್ರಜ್ಞರು ಉಪಯೋಗಿಸುವ ಪಾರಿಭಾಷಿಕ ಶಬ್ದಗಳಿಂದ ತಿಳಿದುಬರುತ್ತದೆ. ಆದ್ದರಿಂದ ಆ ಪಾರಿಭಾಷಿಕ ಶಬ್ದಗಳ ವಿವರವನ್ನು ಇಲ್ಲಿ ಕೊಟ್ಟಿದೆ.

ಒಂದು ಸಮವಾದ ಸ್ಥಳದಲ್ಲಿ ಹನ್ನೆರಡು ಅಂಗುಲ ಉದ್ದವಾದ ಕೋಲನ್ನು ಭೂಮಿಗೆ ಲಂಬವಾಗುವಂತೆ ನಿಲ್ಲಿಸುತ್ತಿದ್ದರು. ಅದಕ್ಕೆ ಶಂಕು (gnomon) ಎಂದು ಹೆಸರು. ಶಂಕುವಿನ ಉದ್ದಳತೆಯು ೧೨ ಅಂಗುಲವೇ ಇರಬೇಕೆಂದು ಗೊತ್ತು ಮಾಡಿದ್ದರು. ವಿಷುವ ದಿವಸ (equinoctial day) ಯಾವದೇ ಸ್ಥಳದಲ್ಲಿ ಹನ್ನೆರಡು ಅಂಗುಲ ಉದ್ದವಾದ ಶಂಕುವಿನ ಮಧ್ಯಾಹ್ನದ ನೆರಳಿನ ಅಳತೆಗೆ ಪಲಭಾ ಎಂದು ಹೆಸರು. ಶಂಕುವಿನ ತುದಿ ಮತ್ತು ಮಧ್ಯಾಹ್ನನೆರಳಿನ ತುದಿ ಇವೆರಡು ಬಿಂದುಗಳನ್ನು ಸಾಧಿಸುವ ರೇಖೆಗೆ ಅಕ್ಷ್ಣಕರ್ಣವೆಂದು ಹೆಸರು. ಪಲಭಾ, ಶಂಕು, ಅಕ್ಷ್ಣಕರ್ಣ ಹೀಗೆ ಮೂರೂ ಕೂಡಿ ಒಂದು ಕಾಟಕೋನ ತ್ರಿಕೋನವಾಗುವದು. ಇದಕ್ಕೆ ಅಕ್ಷ್ಣಕ್ಷೇತ್ರವೆಂದು ಹೆಸರು. ಇದು ಅತಿಮಹತ್ವವಾದದ್ದು. ಯಾಕಂದರೆ ಇದರಿಂದ ಅಕ್ಷಾಂಶವನ್ನು, ದಿಕ್ಕನ್ನು ವೇಳೆಯನ್ನು ಗೊತ್ತುಪಡಿಸುತ್ತಿದ್ದರು. ದಿಶೆ, ದೇಶ, ಕಾಲ ಈ ಮೂರರ ಬಗ್ಗೆ ಹೇಳುವ ಅಧ್ಯಾಯಕ್ಕೆ ತ್ರಿಪ್ರಶ್ನಾಧಿಕಾರವೆಂದೆನ್ನುತ್ತಿದ್ದರು. ತ್ರಿಪ್ರಶ್ನಾಧಿಕಾರದಲ್ಲಿ ನೆರಳಿನ ಉಪಯೋಗವು ಬಹಳವಿತ್ತು.

ಶಂಕುವಿನ ನೆರಳಿನ ನಿರೀಕ್ಷಣೆಯಿಂದ ದಿಕ್ಕನ್ನು ಗೊತ್ತುಪಡಿಸುವ ಕ್ರಮಗಳು ಎರಡು (೧) ಒಂದೇ ಒಂದು ದಿವಸ ನಿರೀಕ್ಷಣೆಮಾಡಿ (೨) ವರ್ಷದ ವರೆಗೆ ಪ್ರತಿದಿವಸ, ನಿರೀಕ್ಷಣಮಾಡಿ, ಗೊತ್ತುಪಡಿಸುವದು.

दृक्तुल्यैः सुसमीकृतक्षितिगते केंद्रस्थ शंकौ कमा-
द्छायं यत्रविशत्यपैति च यतस्तत्रापरेंद्र्यौ दिशौ ॥

(सिद्धांतशिरोमणि, त्रिप्रश्नाधिकारे)

ಒಂದು ಸಮವಾದ ಸ್ಥಳದಲ್ಲಿ ಒಂದು ಶಂಕುವನ್ನು ನಿಲ್ಲಿಸಬೇಕು. ಆ ಶಂಕುವಿನ ತಳವು ಕೇಂದ್ರದಲ್ಲಾಗುವಂತೆ ಒಂದು ವರ್ತುಲವನ್ನು ತೆಗೆಯಬೇಕು. ಮುಂಜಾವಿನಲ್ಲಿ ಈ ಕೋಲಿನ ನೆರಳಿನ ತುದಿಯು ವರ್ತುಲಕ್ಕೆ ಎಲ್ಲಿ ಸ್ಪರ್ಶ ಮಾಡುವದೋ ಅಲ್ಲಿ ಪಶ್ಚಿಮವೆಂದು ಗುರುತು (ಉದಾ:– ಪ) ಹಾಕಬೇಕು. ಸಂಜೆಯ ಮುಂದೆ ನೆರಳಿನ ತುದಿಯು ಎಲ್ಲಿಂದ ವರ್ತುಲವನ್ನು ಬಿಟ್ಟು ಹೊರಗೆ ಹೋಗುವದೋ ಅಲ್ಲಿ ಪೂರ್ವದಿಕ್ಕಿನ ಗುರುತನ್ನು ಹಾಕಬೇಕು. (ಉದಾ: ಪೂ). ಆ ಮೇಲೆ ಎರಡೂ ಬಿಂದುಗಳನ್ನು ಒಂದು ರೇಖೆಯಿಂದ ಕೂಡಿಸಬೇಕು. ಇದೇ ಪೂರ್ವಪಶ್ಚಿಮ ರೇಖೆಯು. ಕೇಂದ್ರದಿಂದ ಈ ರೇಖೆಗೆ ಒಂದು ಲಂಬವನ್ನು ತೆಗೆಯಬೇಕು. ಇದೇ ದಕ್ಷಿಣೋತ್ತರ ರೇಖೆಯು.

೨. ಮೇಲೆ ಹೇಳಿದಂತೆ ಒಂದು ಕೋಲನ್ನು ನಿಲ್ಲಿಸಬೇಕು. ಸೂರ್ಯೋದಯವಾದಮೇಲೆ ಬೀಳುವ ಆ ಕೋಲಿನ ನೆರಳನ್ನು ನೆಲದಮೇಲೆ ಗುರ್ತಿಸಬೇಕು. ಹೀಗೆಯೇ ಸೂರ್ಯಾಸ್ತವಾಗುವಾಗಲೂ ಮಾಡಬೇಕು. ಇದರಂತೆ ಪ್ರತಿದಿವಸ ಮಾಡುತ್ತ ಹೋದರೆ ವರ್ಷದ ಕೊನೆಗೆ ಆ ಗುರುತುಗಳು ಕೆಳಗೆ ಕೊಟ್ಟ ಆಕೃತಿಯಂತೆ ಆಗುವವು.



ಮೇಲಿನ ಆಕೃತಿಯಲ್ಲಿ 'ಅ' ಎಂಬುದು ಕೋಲು ನಿಲ್ಲಿಸಿದ ಸ್ಥಳ 'ಅ' ದಿಂದ ಹೊರಟ ಗೆರೆಗಳು ಬೇರೆ ಬೇರೆ ದಿವಸ ಬೀಳುವ ನೆರಳುಗಳು. ಸೂರ್ಯನು ಪೂರ್ವಕ್ಕೆ ಇದ್ದರೆ ಕೋಲಿನ ನೆರಳು ಪಶ್ಚಿಮಕ್ಕೆ ಬೀಳುವದು. ನೆರಳಿನ ಮೇಲಿಂದ ಸೂರ್ಯ ಯಾವದಿವಸ ಯಾವ ದಿಕ್ಕಿನಲ್ಲಿ ಉದಯವಾಗುತ್ತಾನೆ ಮತ್ತು ಎಲ್ಲಿ ಮುಣಗುತ್ತಾನೆಂಬದು ತಿಳಿಯುತ್ತದೆ. ಗೆರೆಗಳ ತುದಿಗೆ ಕೆಲವು ಅಕ್ಷರಗಳನ್ನು ಬರೆದಿದೆ. ಅವು ತಿಂಗಳುಗಳ ಸಂಜ್ಞೆ. ಆ ಆ ತಾರೀಖಿನ ಬೆಳಿಗ್ಗೆ ಮತ್ತು ಸಾಯಂಕಾಲಕ್ಕೆ ಬೀಳುವ ನೆರಳುಗಳನ್ನು ತೋರಿಸಿದೆ. ಈ ಆಕೃತಿಯನ್ನು ಎರಡು ಭಾಗಗಳಾಗುವಂತೆ 'ಅ' ದಿಂದ ಒಂದು ಗೆರೆಯನ್ನು ತೆಗೆಯಬೇಕು. ಇದೇ ದಕ್ಷಿಣೋತ್ತರ ರೇಷೆಯು.

ಪ್ರತಿನಿತ್ಯ ಕೋಲಿನ ನೆರಳಿನ ನಿರೀಕ್ಷಣೆ ಮಾಡಿದರೆ ಸೂರ್ಯನ ಕ್ರಾಂತಿಯು (declination) ಹೇಗೆ ಬದಲಾಗುತ್ತ ಹೋಗುತ್ತದೆಂಬದು ಸ್ಪಷ್ಟವಾಗುವದು.

ಮೇಲೆ ಹೇಳಿದ ಎರಡೂ ಪ್ರಕಾರದ ದಿಕ್ಸಾಧನಗಳಲ್ಲಿ ಅಡಗಿರುವ ತತ್ವ:— ಯಾವದೇ ಒಂದು ಸ್ಥಳದಲ್ಲಿ ಸೂರ್ಯನು ಯಾಮ್ಯೋತ್ತರ ವೃತ್ತಕ್ಕೆ ಬಂದಾಗ ಕೋಲಿನ ನೆರಳು ಸೂರ್ಯನ ವಿರುದ್ಧ ದಿಕ್ಕಿಗೆ ದಕ್ಷಿಣೋತ್ತರವಾಗಿ ಬೀಳುವದು. ಅಂದಮೇಲೆ ಯಾಮ್ಯೋತ್ತರ ವೃತ್ತಕ್ಕೆ ಸೂರ್ಯನು ಬಂದಾಗ್ಗೆ ನೆರಳನ್ನು ನಿರೀಕ್ಷಿಸಿ ಅದನ್ನು ಗುರ್ತಿಸಿದರೆ ಸಾಕು. ಆ ನೆರಳೇ ದಕ್ಷಿಣೋತ್ತರ ರೇಷೆಯು. ಇದು ಸಾಧಿಸಲಿಕ್ಕೆ ಬಹು ಕಠಿಣವಾದದ್ದು. ಯಾಕಂದರೆ ಸೂರ್ಯನು ಆ ವೃತ್ತದ ಮೇಲೆ ಬಂದಿರುವನೆಂಬುದು ನಮಗೆ ಗೊತ್ತಾಗುವದಿಲ್ಲ.

ನೆರಳು ಬೆಳಿಗ್ಗೆ ಉದ್ದವಾಗಿದ್ದು ಬರಬರುತ್ತ ಸಣ್ಣದಾಗುತ್ತ ಹೋಗುವದು. ಹೀಗೆ ಮಧ್ಯಾಹ್ನದ (ಸೂರ್ಯನು ಯಾಮ್ಯೋತ್ತರವೃತ್ತಕ್ಕೆ ಇದ್ದಾಗ) ವರೆಗೆ ಆಗುವದು. ಮಧ್ಯಾಹ್ನದ ನಂತರ ಅದು ದೊಡ್ಡದಾಗುತ್ತ ಹೋಗುವದು. ಅಂದಮೇಲೆ ಮಧ್ಯಾಹ್ನಕ್ಕೆ ಬೀಳುವ ನೆರಳು ಅತಿ ಸಣ್ಣದಾದದ್ದು ಎಂದು ಸ್ಪಷ್ಟವದೆ. ಮಧ್ಯಾಹ್ನದ ಸುಮಾರಕ್ಕೆ ನೆರಳಿನ ತುದಿಗಳನ್ನು ಪ್ರತಿ ಮಿನಿಟಿಗೆ ಗುರ್ತಿಸುತ್ತ ಹೋಗಬೇಕು. ಯಾವ ನೆರಳಿನ ತುದಿಯು ಕೋಲಿನ ಕೆಳಗಿನ ತುದಿಯಿಂದ ಅತಿ ಸಮೀಪವಾಗುವದೋ ಅದೇ ತುದಿಯು ಕೋಲಿನ ಕೆಳಗಿನ ತುದಿಯಿಂದ ಉತ್ತರಕ್ಕಾಗಲೀ ದಕ್ಷಿಣಕ್ಕಾಗಲೀ ಇರುವದು.

ಇದಾದರೂ ನಿರೀಕ್ಷಣೆಗೆ ಅನುಕೂಲವಿಲ್ಲ. ಯಾಕಂದರೆ ನಿರೀಕ್ಷಣ ಮಾಡುವವನು ಒಂದು ತಾಸಿನ ವರೆಗೆ ನೆರಳಿನ ತುದಿಯನ್ನು ಗುರ್ತಿಸುತ್ತ ಇರಬೇಕು. ಮತ್ತು ನೆರಳಿನ ತುದಿಯು ಸಾವಕಾಶವಾಗಿ ಸ್ಥಳವನ್ನು ಬದಲಿಸುತ್ತ ಹೋಗುವದು. ಆದ್ದರಿಂದ ಅದನ್ನು ಗುರ್ತಿಸುವದು ಸುಲಭಸಾಧ್ಯವಲ್ಲ.

ನೆರಳು ಮುಂಜಾವಿನಲ್ಲಿ ಸಣ್ಣದಾಗುತ್ತ ಮಧ್ಯಾಹ್ನಕ್ಕೆ ಅತಿ ಸಣ್ಣದಾಗಿ ಮಧ್ಯಾಹ್ನನಂತರ ಬೆಳೆಯುತ್ತ ಹೋಗುವದು ಎಂದು ಮೇಲೆ ಹೇಳಿದೆ. ಮಧ್ಯಾಹ್ನಕ್ಕಿಂತ ಒಂದು ತಾಸು ಮೊದಲಿಗೆ ಬಿದ್ದ ನೆರಳೂ ಮಧ್ಯಾಹ್ನನಂತರ ಒಂದು ತಾಸಿಗೆ ಬೀಳುವ ನೆರಳೂ ಅಷ್ಟೇ ಉದ್ದಳತೆಯುಳ್ಳವುಗಳಾಗಿರುವವು. ಉದಾ - ಮಧ್ಯಾಹ್ನವು ಹನ್ನೆರಡುಗಂಟೆಗೆ ಆಗುತ್ತದೆಂದು ಕಲ್ಪಿಸುವಾ. ೧೧ ಗಂಟೆಗೆ ಬೀಳುವ ನೆರಳು ಮತ್ತು ೧ ಘಂಟೆಗೆ ಬೀಳುವ ನೆರಳು ಅಷ್ಟೇ ಉದ್ದಳತೆಯುಳ್ಳವುಗಳು. ಇವೆರಡರ ನಡುವಿನ ನೆರಳು ಮಧ್ಯಾಹ್ನದ ನೆರಳು. ಮಧ್ಯಾಹ್ನದ ನೆರಳು ದಕ್ಷಿಣೋತ್ತರವಾಗಿ ಬೀಳುವದು. ಆದ್ದರಿಂದ ಎರಡು ಸಮವಾದ ಉದ್ದಳತೆ

ಯುಳ್ಳ ನೆರಳುಗಳ ನಡುವಿನ ರೇಖೆಯೇ ದಕ್ಷಿಣೋತ್ತರ ರೇಖೆಯು. ಸಮವಾದ ನೆರಳುಗಳ ಸ್ಥಳಗಳನ್ನು ಕಂಡುಹಿಡಿಯಲಿಕ್ಕೆ ಕೋಲು ಕೇಂದ್ರದಲ್ಲಿ ಬರುವಂತೆ ಒಂದು ವರ್ತುಲವನ್ನು ತೆಗೆಯಬೇಕು. ವರ್ತುಲದ ಎಲ್ಲ ತ್ರಿಜ್ಯಗಳು ಸಮವಾಗಿರುವವು. ನೆರಳು ತ್ರಿಜ್ಯದಂತೆ ಬಿದ್ದಾಗ ನೆರಳಿನ ತುದಿಯನ್ನು ಗುರ್ತಿಸಬೇಕು. ನೆರಳುಗಳಿಂದಾದ ಕೋನವನ್ನು ಸಮಭಾಗವಾಡಲಿಕ್ಕೆ ನೆರಳುಗಳ ತುದಿಯನ್ನು ಕೂಡಿಸುವಂಥ ರೇಖೆಗೆ ಕೇಂದ್ರದಿಂದ ಒಂದು ಲಂಬವನ್ನು ತೆಗೆಯಬೇಕು. ಈ ಲಂಬವು ನೆರಳುಗಳಿಂದಾದ ಕೋನವನ್ನು ಸಮವಾಗಿ ಛೇದಿಸುವದು.

ಸೂರ್ಯನ ಕ್ರಾಂತಿಯು ಪ್ರತಿಕ್ಷಣಕ್ಕೆ ಬದಲಾಗುತ್ತ ಇರುವದು. ಮೇಲೆ ಹೇಳಿದ ಎರಡೂ ರೀತಿಗಳಲ್ಲಿ ಕ್ರಾಂತಿಯ ಬದಲಾವಣೆಯನ್ನು ಲಕ್ಷಕ್ಕೆ ತಂದು ಕೊಂಡಿಲ್ಲ. ಸೂರ್ಯೋದಯದಿಂದ ಸೂರ್ಯಾಸ್ತದತನಕ ಅವನ ಕ್ರಾಂತಿಯು ಅಷ್ಟೇ ಇರುತ್ತದೆಂದು ತಿಳಿದು ಮೇಲಿನ ರೀತಿಗಳನ್ನು ಹೇಳಿದೆ. ಕ್ರಾಂತಿಯು ಬದಲಾದರೆ ಎರಡು ಸಮವಾದ ನೆರಳಿನ ನಡುವಿನ ನೆರಳು ಮಧ್ಯಾಹ್ನದ ನೆರಳು ಆಗುವದಿಲ್ಲ.

ಕ್ರಾಂತಿಯು ಪ್ರತಿದಿವಸಕ್ಕೆ ೧೫ ವಿ. ಗಳಂತೆ ಬದಲಾಗುತ್ತ ಹೋಗುವದು. ಈ ಬದಲಾವಣೆಯಿಂದ ನಮ್ಮ ದಿಕ್ಸಾಧನದಲ್ಲಿ ಸ್ವಲ್ಪ ತಪ್ಪು (error) ಬರುವದು. ಈ ತಪ್ಪನ್ನು ಅದಷ್ಟು ಕಡಿಮೆಮಾಡಬೇಕು. ಎರಡೂ ನಿರೀಕ್ಷಣ ಕಾಲಗಳ ಅಂತರವು ಅದಷ್ಟು ಕಡಿಮೆ ಇದ್ದರೆ ಕ್ರಾಂತಿಯ ಬದಲಾವಣೆಯು ಕಡಿಮೆಯಾಗುವದು. ಅರ್ಥಾತ್ ದಿಕ್ಸಾಧನದಲ್ಲಿ ಬರುವ ತಪ್ಪಾದರೂ ಕಡಿಮೆ ಆಗುವದು. ಅಂದಮೇಲೆ ಮುಂಜಾನೆ ೯ ಘಂಟೆಗೆ ಕೋಲಿನ ನೆರಳಿನ ತುದಿಯು ವರ್ತುಲಕ್ಕೆ ತಗಲುವಂತೆ ಮಾಡುವದಕ್ಕಿಂತ ೧೦,೧೧ ಘಂಟೆಗೆ ತಗಲುವಂತೆ ವರ್ತುಲವನ್ನು ತೆಗೆದರೆ ನಮ್ಮ ದಿಕ್ಸಾಧನವು ಹೆಚ್ಚು ಸರಿಯಾದದ್ದಾಗುವದು. ಸಾಧಾರಣ ೯ ಘಂಟೆಗೆ ಕೋಲಿನ ನೆರಳು ಕೋಲಿನಷ್ಟೇ ಬೀಳುವದು. ಆದ್ದರಿಂದ ವರ್ತುಲದ ತ್ರಿಜ್ಯವು ಕೋಲಿನ ಎತ್ತರಕ್ಕಿಂತ ಕಡಿಮೆ ಇದ್ದರೆ ನಮ್ಮ ನಿರೀಕ್ಷಣಕಾಲಗಳ ಅಂತರವು ಆರುತಾಸುಗಳಿಗಿಂತ ಹೆಚ್ಚಾಗಲಾರದು. ವರ್ತುಲವು ಸಣ್ಣದಿದ್ದರೆ ದಿಕ್ಸಾಧನವು ಹೆಚ್ಚು ಸರಿಯಾದದ್ದಾಗುವದು. ಆದ್ದರಿಂದ ಕೋಲಿನ ಉದ್ದಳತೆಯನ್ನು ಅದಷ್ಟು ಹೆಚ್ಚುಮಾಡಿ ವರ್ತುಲವನ್ನು ಅದಷ್ಟು ಸಣ್ಣದಾಗಿ ತೆಗೆದರೆ ನಮ್ಮ ದಿಕ್ಸಾಧನವು ಹೆಚ್ಚು ಸರಿಯಾದದ್ದೆಂದು ಹೇಳಬಹುದು.

ಹೀಗೆ ಸಾಧಿಸಿದ ದಿಕ್ಕು ಸರಿಯಾಗಿದೆಯೋ ಇಲ್ಲೊ ಎಂಬದನ್ನು ಧ್ರುವ ನಕ್ಷತ್ರವನ್ನು ಇರುಳಿನಲ್ಲಿ ನಿರೀಕ್ಷಣಮಾಡಿ ತಿಳಕೊಳ್ಳಬೇಕು.

ಹಣ್ಣುಗಳು ಕೊಳೆಯುದಂತೆ ಕಾದಿಡುವದು

ಲೇಖಕ :— ಶ್ರೀ. ಕೆ. ಬಿ. ತೇರಗಾವಕರ ಬಿ. ಎಸ್. ಸಿ ಬಿ. ಟಿ. ಟ್ರೇ. ಸ್ಕೂ. ಧಾರವಾಡ.

ಹಣ್ಣು ಹಂಪಲಗಳು ಕೆಡದಂತೆ ಅವುಗಳನ್ನು ಕಾದಿಡುವ ಪರಿಪಾಠವು ನಮ್ಮ ದೇಶದಲ್ಲಿ ಅನೇಕ ದಿವಸಗಳಿಂದ ನಡೆದು ಬಂದಿರುವದು. ನಮ್ಮ ಜನರಿಗೆ ಮಾವಿನ-ಹಣ್ಣನ್ನು ಜೇಸುತಂಪ್ಪದಲ್ಲಿ ಹೂಳಿಟ್ಟರೆ ಅದು ಅನೇಕ ದಿವಸ ಕೊಳೆಯದೆ ಬಾಳುವದೆಂಬ ಮಾತು ಗೊತ್ತು. ಅದೇ ಪ್ರಕಾರ ಉಪ್ಪಿನಕಾಯಿ ತಯಾರಿಸುವದೂ ಮಾವಿನ, ನೆಲ್ಲಿಯ ಅಥವಾ ಇನ್ನಿತರ ಕಾಯಿಗಳ ಪಾಕಮಾಡುವದೂ ಅಷ್ಟೇ ಯಾಕೆ, ತುಂಬುಗಾಯಿ ಬದನೆಕಾಯಿಯ ಪಲ್ಲೆಯನ್ನು ಹೆಚ್ಚು ದಿವಸ ತಡೆಯ ಬೇಕೆಂದು ಎಣ್ಣೆಯನ್ನು ಹೆಚ್ಚಾಗಿ ಹಾಕಿ ಇಡುವ ರೂಢಿಯೂ ನಮ್ಮಲ್ಲಿದೆ. ಸಮುದ್ರದಂಡೆಯ ಜನರು ಮೀನಗಳು ಕೆಡಬಾರದೆಂದು ಉಪ್ಪಿನಲ್ಲಿ ಬೆರೆಸಿಟ್ಟು ಬೇರೆ ದೇಶಗಳಿಗೆ ವ್ಯಾಪಾರಕ್ಕಾಗಿ ಕಳಿಸುವರು. ಹಿಂದಿನ ಅನುಭವದಿಂದ ನಮ್ಮ ಹೆಂಗಸರು ಹೀಗೆ ಮಾಡುತ್ತ ಬಂದರೂ ಯಾಕೆ ಹೀಗೆ ಮಾಡಬೇಕು, ಹೀಗೆ ಮಾಡುವದರಿಂದ ಆ ಪದಾರ್ಥಗಳು ಯಾಕೆ ಕೊಳೆಯುವದಿಲ್ಲ, ಮುಂತಾದ ಸಂಗತಿಗಳು ನಮಗೆ ಗೊತ್ತಿರಲಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಪ್ರಾಯೋಗಿಕ ಸಂಶೋಧನಗಳು ಭರದಿಂದ ಸಾಗಿದಂದಿನಿಂದ ಈ ವಿಷಯದ ಕಡೆಗೂ ಅವರ ಲಕ್ಷ್ಯವು ವೇಧಿಸಿ ಅವರು ಈ ಕ್ರಿಯೆಯು ಹೇಗೆ ಸಾಗುತ್ತದೆ, ಅದರ ವೃದ್ಧಿ ಯಾಗಲು ಅನುಕೂಲ ಪರಿಸ್ಥಿತಿ ಯಾವವು ಮತ್ತು ನಾಶವಾಗಲು ಪ್ರತಿಕೂಲ ವಿಧಾನಗಳು ಯಾವವು ಎಂಬುದನ್ನು ಕಂಡುಹಿಡಿದರು. ಮುಖ್ಯವಾಗಿ ಈ ಕೊಳೆಯುವ ಕ್ರಿಯೆ ಅಥವಾ ವಿಪಾಕ ಹೊಂದುವ ಕ್ರಿಯೆಯು ಅಣುಜಂತುಗಳ ಬೆಳವಣಿಗೆಯ ಮೂಲಕ ಮತ್ತು ಇನ್ನಿತರ ಸೂಕ್ಷ್ಮ ವನಸ್ಪತಿಗಳ ಬೆಳವಣಿಗೆಯ ಮೂಲಕ ಉಂಟಾಗುತ್ತದೆ. ಸಾಕಷ್ಟು ಆಹಾರ, ತೇವು, ಹವೆ ಮತ್ತು ಸಕ್ಕ ಉಷ್ಣತೆ ಇವು ಸಿಕ್ಕರೆ ಅವುಗಳ ಬೆಳವಣಿಗೆಯು ಭರದಿಂದ ಸಾಗುತ್ತದೆ. ಹವೆ ತೇವಗಳಿಲ್ಲದಂತೆ ಮಾಡಿದರೆ ಅವುಗಳ ಬೆಳವಣಿಗೆಗೆ ತಡೆಯುಂಟಾಗುವದು. ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಕಾಸಿ ಹವೆಯ ಪ್ರವೇಶವಾಗದಂತೆ ಭದ್ರವಾಗಿ ಮುಚ್ಚಿಟ್ಟರೆ ಇದ್ದ ಅಣುಜಂತುಗಳು ನಾಶವಾಗಿ ಹೋಗುವವು. ಮತ್ತು ಹೊರಗಿನ ವಿನಾಶಕ ಜಂತುಗಳು ಒಳಗೆ ಬರಲಾರವು. ಕೆಲವು ಸಾರೆ ಆಹಾರ ಪದಾರ್ಥಗಳಿಗೆ

ಕ್ಕದ ತಂಪು ತಗಲಿಸಿ ಆ ಮೇಲೆ ಅವುಗಳನ್ನು ಹವೆಯು ಪ್ರವೇಶವಾಗದಂತೆ ತಬ್ಬಿಗಳಲ್ಲಿ ಭದ್ರವಾಗಿ ಮುಚ್ಚಿಟ್ಟರೂ ಅವುಗಳ ಆಟ ಸಾಗಲಾರದು. ಹುಳಿ, ಉಪ್ಪು, ಸಕ್ಕರೆ ಮುಂತಾದವುಗಳನ್ನು ಆಹಾರ ಪದಾರ್ಥಗಳಲ್ಲಿ ಸಾಕಷ್ಟುಪ್ರಮಾಣ ದಂದ ಬೆರೆಸಿದರೆ ಈ ಜಂತುಗಳ ಅಭಿವೃದ್ಧಿಯಾಗದಂತೆ ಮತ್ತು ಆದ ತುಸು ಜಂತುಗಳನ್ನು ನಿರ್ಮೂಲಗೊಳಿಸಿ ಪದಾರ್ಥಗಳು ಕೊಳೆಯದೆ ಉಳಿಯುವಂತೆ ಮಾಡಲಿಕ್ಕಾಗುವುದು. ಈ ಸಂಶೋಧನಗಳಿಗನುಸರಿಸಿ ಪಾಶ್ಚಾತ್ಯ ದೇಶಗಳಲ್ಲಿ ವೈದ್ಯಕೀಯ ಶಾಸ್ತ್ರದಲ್ಲಿ ಮತ್ತು ಅದಕ್ಕನುಸರಿಸಿದ ಕಾರ್ಯಗಳಲ್ಲಿ ಅನೇಕ ಸುಧಾರಣೆಗಳನ್ನು ಮಾಡಿಕೊಂಡಿರುವರು. ಇದಲ್ಲದೆ ಹಣ್ಣು ಹಂಪಲಗಳು, ಆಹಾರ ಪದಾರ್ಥಗಳು ಕೆಡದಂತೆ ಕಾದಿಟ್ಟುಕೊಳ್ಳುವದೂ ಪರದೇಶಗಳಿಗೆ ಕಳಿಸುವದೂ ಮುಂತಾದ ಕಾರ್ಯಗಳಲ್ಲಿ ಈ ತತ್ವವನ್ನು ಉಪಯೋಗಿಸಿ ಕೊಂಡಿರುವರು. ಅದೇ ಕಾರಣದಿಂದ ಇಟಲಿ, ಫ್ರಾನ್ಸ್, ಅಮೇರಿಕಾ ಮುಂತಾದ ದೇಶಗಳಲ್ಲಿ ಬೆಳೆಯುವ ಹಣ್ಣು ಹಂಪಲಗಳನ್ನೂ ಇಂಗ್ಲಂಡ ನ್ಯೂಫೌಂಡಲಂಡ ಮುಂತಾದ ದೇಶಗಳಿಂದ ಬಂದ ಮೀನಗಳನ್ನೂ ನಮ್ಮ ಹಿಂದುಸ್ಥಾನದ ಅಂಗಡಿ ಬೀದಿಗಳಲ್ಲಿ ಕಾಣಬಹುದು.

ನಮ್ಮ ಹಿಂದುಸ್ತಾನದ ಒಕ್ಕಲುತನದ ಖಾತೆಯವರು ಅದರಲ್ಲಿಯೂ ನಮ್ಮ ಮುಂಬಯಿ ಇಲಾಖೆಯ ಒಕ್ಕಲುತನದ ಖಾತೆಯವರು ಕೆಲವು ವರ್ಷಗಳಿಂದ ಈ ಕಾರ್ಯದಲ್ಲಿ ಮನಸ್ಸು ಹಾಕಿ ಇಲ್ಲಿಯ ಹಣ್ಣು ಹಂಪಲಗಳನ್ನು ಕಾದಿಡಲು ಬರುವ ಮತ್ತು ಹೇಗೆ ಕಾದಿಡಬೇಕು ಎಂಬ ಉದ್ದೇಶದಿಂದ ಸಂಶೋಧನಗಳನ್ನು ನಡೆಸಿ ದ್ದಾರೆ. ಈಗ ಅವರ ಪ್ರಯತ್ನಗಳು ಯಶಸ್ವಿಯಾಗಹತ್ತಿರುವವೆಂದು ಕಂಡುಬಂದಿದೆ. ಈಗ ಸುಮಾರು ಎರಡು ಮೂರು ವರ್ಷಗಳ ಹಿಂದೆ ಇಲ್ಲಿಯ ಮಾವಿನ ಹಣ್ಣು ಗಳನ್ನು ಇಂಗ್ಲಂಡಕ್ಕೆ ಕಳಿಸುವ ಏರ್ಪಾಡು ಮಾಡಿ ಅವು ಅಲ್ಲಿ ಕೊಳೆಯದಂತೆ ಮಾರಾಟ ಮಾಡಲು ಯೋಗ್ಯ ಸಿದ್ಧತೆಗಳನ್ನು ಕೈಕೊಂಡು ತಮ್ಮ ಪ್ರಯತ್ನಗಳು ಯಶಸ್ವಿಯಾದವೆಂದು ತೋರಿಸಿದರು. ಈ ಸಂಶೋಧನಗಳು ನಮ್ಮಲ್ಲಿ ಹೆಚ್ಚು ಪ್ರಚಾರವಾಗಬೇಕೆಂದು ಅವರ ಹಂಬಲ. ಆ ಉದ್ದೇಶದಿಂದ ಪುಣೆಯಲ್ಲಿ ೩ ತಿಂಗಳುಗಳ ವರೆಗಿನ ಒಂದು ಇಂಥ ವರ್ಗವನ್ನು ತೆರೆದು ಆ ಬಲುವು ಇರುವ ಜನರಿಗೆ ಕಲಿಸುವ ಏರ್ಪಾಡುಗಳನ್ನೂ ಮಾಡಿರುವರು.

ಈ ಕಲೆಯನ್ನು ಸಾಮಾನ್ಯ ಜನರು ಕಲಿಯಲು ಸಾಧ್ಯವಿದ್ದು ಅದರಂತೆ ಉಪಕ್ರಮಿಸಲೂ ಶಕ್ಯವಿರುವದು. ಇದಕ್ಕೆ ಬೇಕಾಗುವ ಉಪಕರಣಗಳು ತುಸು ಬೆಲೆಯಲ್ಲಿ ಸಿಗುವವು. ಈ ಉದ್ಯೋಗವು ನಮ್ಮ ಬಡ ರೈತರಲ್ಲಿ ಕೆಲವರಿಗೆ ಹಾದು ಉತ್ತೋದ್ಯೋಗವಾಗಿ ಪರಿಣಮಿಸಬಲ್ಲದು. ನಮ್ಮ ಕರ್ನಾಟಕದಲ್ಲಿಯಂತೂ

ತರತರದ ಹಣ್ಣಿನ ಗಿಡಗಳು ಬೆಳೆಯಲಿಕ್ಕೆ ಅನುಕೂಲವಾದ ಹವಾಮಾನವೂ ಭೂಗುಣವೂ ಇರುವವು. ಧಾರವಾಡ ಜಿಲ್ಲೆಯಲ್ಲಿ ಪಶ್ಚಿಮಭಾಗ, ಬೆಳಗಾವಿ ಜಿಲ್ಲೆಯ ಪಶ್ಚಿಮ ಮತ್ತು ಉತ್ತರಭಾಗ, ಕಾರವಾರದಲ್ಲಿ ಕುಮಟಾ ಅಂಕೋಲಾ ತಾಲೂಕುಗಳು, ವಿಜಾಪೂರ ಜಿಲ್ಲೆಯ ಬಾಗಲಕೋಟ,ಬಾಗೇವಾಡಿ,ಇಂಡಿ ಸಿಂದಗಿ ಮುಂತಾದ ಪ್ರದೇಶಗಳು ವಗಇಳಲ್ಲಿ ಹಣ್ಣಿನ ತೋಟಗಳನ್ನು ಹೆಚ್ಚು ಮಾಡಲು ಅನುಕೂಲವಿರುವದು. ಮತ್ತು ನಮ್ಮ ದೇಶದ ಹಣ್ಣುಗಳು ಕೆಡದಂತೆ ಕೊಳೆಯದಂತೆ ಯೋಗ್ಯರೀತಿಯಿಂದ ಉಪಯೋಗಿಸಲ್ಪಟ್ಟು ಲಾಭದಾಯಕವಾಗುವದೆಂದು ಕಂಡುಬಂದಲ್ಲಿ ಜನರು ಉತ್ತೇಜಿತರಾಗಿ ಹೆಚ್ಚಾಗಿ ಇವುಗಳ ಕಡೆಗೆ ತಮ್ಮ ಲಕ್ಷ್ಯವನ್ನು ಪೂರೈಸುವರು. ಹೀಗಾಗಿ ಜನರ ಆರ್ಥಿಕ ಸ್ಥಿತಿಯು ಸುಧಾರಿಸಬಲ್ಲದು. ವ್ಯಾಪಾರವು ಹೆಚ್ಚಾಗಬಲ್ಲದು. ಮತ್ತು ತುಸು ಜನರಾದರೂ ಈ ಕಾರ್ಯದಲ್ಲಿ ತೊಡಗಬಹುದು.

ಈ ಪ್ರಯೋಗಗಳನ್ನು ಹೇಗೆ ಮಾಡಬೇಕು ಇದರಿಂದ ಯಾವ ಲಾಭಗಳಿವೆ ಮುಂತಾದವುಗಳನ್ನು ತಿಳಿಸಿಕೊಡಲಿಕ್ಕೂ ಸಪ್ರಯೋಗವಾಗಿ ಮಾಡಿತೋರಿಸಲಿಕ್ಕೂ ಒಕ್ಕಲುತನದ ಖಾತೆಯವರು ಸದಾ ಸಿದ್ಧರಿರುವರು. ಧಾರವಾಡದ ಕರ್ನಾಟಕ ಹಾಯಸ್ಕೂಲಿನ ಪರವಾಗಿ ಇಂಥದೊಂದು ವರ್ಗವನ್ನು ೧೫ ದಿವಸಗಳ ಮಟ್ಟಿಗೆ ನಡಿಸಲು, ಪುಣೆಯಲ್ಲಿ ಹಣ್ಣಿನ ವ್ಯವಸಾಯ ಮತ್ತು ಅದಕ್ಕನುಸರಿಸಿದ ಖಾತೆಯಲ್ಲಿ ಉಪವರಿಷ್ಠರಾಗಿ ಕೆಲಸ ಮಾಡುತ್ತಿರುವ ಶ್ರೀಯುತ ಪಿ. ಜಿ. ಪಾಣಿಯವರು ಇಲ್ಲಿಗೆ ಬಂದು ತಮ್ಮ ವರ್ಗವನ್ನು ಆರಂಭಿಸಿರುವರು. ಸುಮಾರು ೪೦ ಜನ ವಿದ್ಯಾರ್ಥಿಗಳು ಈ ವರ್ಗದಲ್ಲಿ ಸೇರಿರುವರು. ಗುರುವಾರ ತಾ. ೨೧-೭-೨೫ ಶಿಲನೆಯ ದಿವಸ ನಮ್ಮ ಟ್ರೇನಿಂಗ ಕಾಲೇಜಿನ ವಿದ್ಯಾರ್ಥಿಗಳ ಸಲುವಾಗಿ ಪ್ರತ್ಯೇಕವಾಗಿ ರಾವಬಹಾದ್ದೂರ ಎಸ್. ಎಸ್. ಸಾಲೀಮಠ ಡೆಪ್ಯೂಟಿ ಡಿರೆಕ್ಟರ ಆಫ್ ಅಗ್ರಿಕಲ್ಚರ ದಕ್ಷಿಣಭಾಗ ಇವರ ಅಧ್ಯಕ್ಷತೆಯ ಕೆಳಗೆ ಒಂದು ಸಪ್ರಯೋಗ ವಾಖ್ಯಾನವನ್ನು ಕೊಟ್ಟರು. ಅವರು ಪೇರಲ ಹಣ್ಣಿನ ಪಾಕವನ್ನು ಹೇಗೆ ತಯಾರಿಸುವದು ಮತ್ತು ನೀರಲ ಹಣ್ಣಿನ ರಸವನ್ನು ಹೇಗೆ ಕಾದಿಡುವದು ಎಂಬುವನ್ನೂ ಅದರೊಳಗೆ ಅಡಕವಾದ ಶಾಸ್ತ್ರೀಯ ತತ್ವವನ್ನೂ ವಿದ್ಯಾರ್ಥಿಗಳಿಗೆ ತಿಳಿಸಿ ತೋರಿಸಿಕೊಟ್ಟರು.

೧. **ಪ್ರಯೋಗ:—** ಪೇರಲ ಹಣ್ಣಿನ ಪಾಕವನ್ನು ತಯಾರಿಸುವದು:- ಅವರು ಮೊದಲು ಪಕ್ವವಾದ ಪೇರಲ ಹಣ್ಣನ್ನು ಸಣ್ಣ ಸಣ್ಣ ಚೂರುಗಳಾಗಿ ಕೊಯ್ದು ಅವುಗಳಲ್ಲಿ ಹಣ್ಣಿನ ೧೪ ನೀರು ಬೆರಿಸಿ ಕುದಿಸಿದರು. ಕುದಿಯುತ್ತಿರುವಾಗ ತುಸು ಲಿಂಬೆಯ ಹಣ್ಣನ್ನು ಅದರಲ್ಲಿ ಹಿಂಡಿದರು. ಆಗ ಪೇರಲ ಹಣ್ಣಿನಲ್ಲಿ

ಪ ಪೆಕ್ಟಿನ್ ಎಂಬ ದ್ರವ್ಯವು ನೀರಿನಲ್ಲಿ ಬೆರೆಯಲಾರಂಭಿಸಿತು. ತುಸು ಮೇಳೆ ಪ್ರಾಸನೆಯೇಲೆ ಆ ಕುದಿದ ಹಣ್ಣಿನ ಮಿಶ್ರಣವನ್ನು ಅರಿವೆಯಲ್ಲಿ ಹಾಕಿ ಚೆನ್ನಾಗಿ ಂಡಲಾಗಿ ಶುದ್ಧವಾದ ಪೆಕ್ಟಿನ್ ಬೆರೆತ ರಸವು ದೊರಕಿತು. ಈ ರಸವನ್ನು ಉಣ್ಣೆಯ ವಸ್ತ್ರದಲ್ಲಿ ಎರಡು ಸಾರೆ ಸೋಸಿದರು. ಈ ರಸವನ್ನು ಅಳೆಯುವ ಪಾತ್ರೆಯಿಂದ ಅಳೆದು ಅದರ ಮುಕ್ಕಾಲು ಪಾಲಿನ ಪ್ರಮಾಣದಂತೆ ಅದಕ್ಕೆ ಸಕ್ಕರೆಯನ್ನು ಬೆರಿಸಿ ಅದನ್ನು ಪಾಕ ಬರುವಂತೆ ಕುದಿಯಲು ಇಟ್ಟರು. ತುಸು ಕುದಿಯುತ್ತಿರುವಾಗ ಅದು ಹುಳಿ ಮಧುರವಾಗಿ ಹತ್ತುವಷ್ಟು ಅದರಲ್ಲಿ ಲಿಂಬೆಯ ಸಾರನ್ನು ಹಾಕಿ ಸುಮಾರು ೫ ತಾಸುಗಳವರೆಗೆ ಚೆನ್ನಾಗಿ ಕುದಿಸಿದರು. ಅದು ಚೆನ್ನಾಗಿ ಕುದಿದು ಪಾಕವಾದಾಗ ಅದರ ಉಷ್ಣತೆಯನ್ನು ನೋಡಲಾಗಿ ಆ ಪಾಕದ ಉಷ್ಣತೆಯು ೧೦೪-೧೦೫ ಸೇಂ. ಇದ್ದು ಆ ಪಾಕಕ್ಕೆ ಜಿಗಟುತನವು ಬಂದಿತ್ತು. ಬಳಿಕ ಅದನ್ನು ಕುದಿಯುವ ನೀರಿನಿಂದ ತೊಳೆದ ಬಾಟಲಿಯಲ್ಲಿ ಪಾಕ ಅದರ ಮೇಲೆ ಕರಗಿದ ಒಂದುತರದ ಮೇಣಬತ್ತಿಯ ರಸವನ್ನು ಸುರುವಿ ಅವರ ಬಾಯಿಯನ್ನು ಭದ್ರವಾಗಿ ಮುಚ್ಚಿದರು. ಇಷ್ಟೆಲ್ಲ ಮಾಡುವದಕ್ಕೆ ಬೇಕಾಗುವ ಪದಾರ್ಥಗಳ ಬೆಲೆ ಮತ್ತು ಮಾಡುವ ಶ್ರಮ ಇವುಗಳನ್ನು ಲಕ್ಷ್ಯದಲ್ಲಿ ತೆಗೆದುಕೊಂಡು ಮಾರಾಟ ಮಾಡಿದರೆ ಸುಲಭವಾಗಿ ೧.೮೦ಕ್ಕೆ ೨ಸೇರಂತೆ ಲಾಭ ಹೊಂದಬಹುದೆಂದು ಅವರ ಅಭಿಪ್ರಾಯ. ಹೀಗೆಯೇ ಅವರು ನೀರಲ ಹಣ್ಣಿನ ರಸವನ್ನು ಹೇಗೆ ಕಾದಿಡಬೇಕೆಂಬದನ್ನು ಪ್ರಯೋಗದಿಂದ ತೋರಿಸಿದರು.

೨. **ಪ್ರಯೋಗ:—** ಪಕ್ವವಾದ ನೀರಲ ಹಣ್ಣುಗಳನ್ನು ದಪ್ಪಾದ ಕರಿಬೆಯಲ್ಲಿ ಹಾಕಿ ಚೆನ್ನಾಗಿ ಬಡಿದು ಆ ಮೇಲೆ ನುರಿಯಾಗಿ ಹಿಂಡಿದರು. ಬಳಿಕ ಆ ರಸವನ್ನು ಎರಡು ಸಾರೆ ಉಣ್ಣೆಯ ಬಟ್ಟೆಯಲ್ಲಿ ಸೋಸಿದರು. ಮೊದಲೇ ಕುದಿಯುವ ನೀರಿನಿಂದ ತೊಳೆದಿಟ್ಟ ಹೊಸ ನಮೂನೆಯ ಸೋಡಾವಾಟರ ಬಾಟಲಿಯಲ್ಲಿ ಬಾಯಿಗೆ ತುಸು ಬಿಡುವಷ್ಟು ತುಂಬಿ ಆ ಬಾಟಲಿಯನ್ನು ಬಿಸಿ ನೀರಲ್ಲಿಟ್ಟು ಆ ರಸದ ಉಷ್ಣತೆಯು ಸುಮಾರು ೭೫ ಸೇಂ. ಬರುವಂತೆ ಉಷ್ಣತೆಯನ್ನು ಕೊಡಲಾರಂಭಿಸಿದರು. ಮತ್ತು ಈ ಉಷ್ಣತೆಯು ೫ ತಾಸಿನವರೆ ಕಾಯವು ಉಳಿಯುವಂತೆ ಸಾವಕಾಶವಾಗಿ ಉಷ್ಣತೆಯನ್ನು ಪೂರೈಸಿದರು. ತರುವಾಯ ಆ ಬಾಟಲಿಗೆ ಗಟ್ಟಿಯಾಗಿ ಕೂಡುವಂತೆ ತಗಡಿನ ಬೂಜುಗಳನ್ನು ಒಂದು ವಿಶಿಷ್ಟವಾದ ಯಂತ್ರದಿಂದ ಕೂಡ್ರಿಸಿದರು. ಇದೇ ಪ್ರಕಾರ ಇನ್ನಿತರ ಹಣ್ಣು ಹಂಪಲುಗಳನ್ನು ಕಾದಿಡಲು ಬರುವದು.

ಅಧ್ಯಕ್ಷರಾದ ಸಾಲೀಮಠ ಸಾಹೇಬರು ತಮ್ಮ ವಿಚಾರ ಪರಿಪ್ಲುತವಾದ ಭಾಷಣದಿಂದ ಒಕ್ಕಲಿಗನ ಪರಿಸ್ಥಿತಿಯ ಬಗ್ಗೆ, ಅವನಿಗೆ ಸಿಗುವ ಆಹಾರ, ನಿಜವಾಗಿ

ಯೋಗ್ಯವಾದ ಆಹಾರದ ಮಹತ್ವ, ಉದರಲ್ಲಿ ಹಣ್ಣಿನ ಸ್ಥಾನ ಮುಂತಾದವುಗಳನ್ನು ಸರಸವಾಗಿ ವರ್ಣಿಸಿದರು. ಇದೇ ಕಾಲಕ್ಕೆ ಒಕ್ಕಲಿಗನ ಪರಿಸ್ಥಿತಿ ಹೇಗೆ ಸುಧಾರಿಸಿ ಬಹುದು, ಈ ಕಾರ್ಯದಲ್ಲಿ ಶಿಕ್ಷಕರು ಹೇಗೆ ಸಹಾಯಕಾರಿಯಾಗಬಲ್ಲರು ಎಂಬುದರ ಬಗ್ಗೆ ತುಸು ಹೇಳಿದರಲ್ಲದೆ ತಾವೂ ತಮ್ಮ ಖಾತೆಯವರೂ ಯಾವಾಗಲೂ ಈ ಪ್ರಶ್ನೆಗಳನ್ನು ಬಿಡಿಸಲು ಸದಾಸಿದ್ಧರಿರುವದಾಗಿಯೂ ನಿವೇದಿಸಿದರು. ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀಯುತ ಕಾಳೆಯವರು ಅಧ್ಯಕ್ಷರ ಮತ್ತು ವ್ಯಾಖ್ಯಾತರಾದ ಶ್ರೀಯುತ ದಾಣಿಯವರ ಆಭಾರ ಮನ್ನಿಸಿ ತಮ್ಮ ವಿದ್ಯಾರ್ಥಿಗಳಿಗೆ ಇಷ್ಟೊಂದು ಪರಿಶ್ರಮಪಟ್ಟು ಪ್ರಯೋಗಮಾಡಿ ತೋರಿಸಿದುದಕ್ಕೂ ಕೆಲವು ಉಪದೇಶಪರ ಮಾತುಗಳನ್ನು ಹೇಳಿದುದಕ್ಕೂ ಈರ್ವರ ಉಪಕಾರವನ್ನು ಸ್ಮರಿಸಿದರು. ಹಣ್ಣು ಕಾದಿಡುವ ಕ್ರಮ ಮತ್ತು ಮಹತ್ವ ಇವುಗಳ ವಿಷಯವಾಗಿ ಮಾತಾಡುವಾಗ ಅವರು ಈ ವಿಷಯಕ್ಕೂ ಈಗಿನ ಶಿಕ್ಷಣದಲ್ಲಿಯ ಹೊಸ ವಿಚಾರವಾದ ವೃತ್ತಿಯ ಮುಖಾಂತರ ಶಿಕ್ಷಣಕೊಡುವದು, ಕೊಟ್ಟ ಶಿಕ್ಷಣವು ವಿದ್ಯಾರ್ಥಿಗೆ ತನ್ನ ಜೀವನವನ್ನು ಸಾಗಿಸಲು ಅದರಿಂದ ಆಗುವ ಉಪಯೋಗ ಇವೆಲ್ಲವುಗಳಿಗೂ ಹೇಗೆ ನಿಕಟ ಸಂಬಂಧವಿರುವದೆಂಬುದನ್ನೂ ಒತ್ತಿ ಹೇಳಿದರು. ಈ ಪದ್ಧತಿಯಿಂದ ಬೇಕಾದ ಹಣ್ಣು ಬೇಕಾದ ದೇಶದಲ್ಲಿ ಬೇಕಾದ ಕಾಲದಲ್ಲಿ ಹೇಗೆ ದೊರೆಯಬಹುದು, ಮತ್ತು ದೊರೆಯುವದು ಖಂಡಿತವಾಗಿದ್ದಾಗ ಜನರು ಆ ಹಣ್ಣುಗಳು ಹೆಚ್ಚಾಗಿ ಬೆಳೆಯುವ ಕಾಲದಲ್ಲಿಯೇ ವಿುತಿ ವಿುೀರಿ ತಿಂದು ಕಾಲರಾ ಜಳಿಜ್ವರ ಮುಂತಾದ ರೋಗಗಳಿಗೀಡಾಗುವದನ್ನು ತಪ್ಪಿಸುಕೊಳ್ಳುವದು ಹೇಗೆ ಸುಲಭ ಎಂಬ ಮಾತುಗಳನ್ನು ಮನದಟ್ಟಾಗುವಂತೆ ಹೇಳಿದರು. ಈ ಉದ್ಯೋಗವನ್ನು ಗಂಡಸರಿಗಿಂತ ಮಹಿಳೆಯರು ಹೆಚ್ಚಾಗಿ ಆಸ್ಥೆಯಿಂದ ಕಲಿತು ತಾವು ಮನೆಯಲ್ಲಿ ಈಗ ಮಾಡುತ್ತ ಬಂದಿರುವ ಕ್ರಮದಲ್ಲಿಯೂ ಇದರಲ್ಲಿಯೂ ಯಾವ ವ್ಯತ್ಯಾಸವಿದೆ ಎಂಬುದನ್ನು ಕಂಡುಹಿಡಿಯಬೇಕು. ಮತ್ತು ತಾವು ಹೊಂದಿದ ಜ್ಞಾನದಿಂದ ಮನೆಯಲ್ಲಿ ಎಲ್ಲರ ಸುಖ ಸೌಕರ್ಯ ಆರೋಗ್ಯ ಮುಂತಾದವುಗಳ ಕಡೆಗೆ ಹೆಚ್ಚು ಲಕ್ಷ್ಯ ಪೂರೈಸಲು ಹೇಗೆ ಅವಕಾಶವಿರುವದೆಂಬುದನ್ನು ಹೇಳಿದರು.

ಜೇನ್ನೊಳಗಳ ಜೀವನ ವೈಚಿತ್ರ್ಯ

ಲೇಖಕ:— ಶ್ರೀ. ಕೊಪ್ಪಳ ಗುಂಡೇರಾಯರು ಬಿ. ಎ.

ಇದು ಹೇಗೆ ಇದು ಏಕೆ ಎಂದು ಕೇಳುವವರವರಲ್ಲ ||
ಸದಾ ಸತತ ದುಡಿದು ಸಾಯಲು ಹುಟ್ಟಿದವರವರು ||

ಜೇನ್ನೊಳಗಳನ್ನು ನೋಡಿ ಅಂಥ ಕುಲದವರು ನಾವಾಗಬಾರದೇ ಎಂದು ಷ್ಟೋ ಸಾರೆ ನಾವು ಎನ್ನುವದಿಲ್ಲವೇ! ಅಶ್ರಾಂತ ಪರಿಶ್ರಮಮಾಡುವ ಅಲ್ಪ ಜೀವಿಗಳಲ್ಲವೇ ಅವು! ಅವುಗಳ ಮನೆ, ಮನೆಯ ಅಡಳಿತೆ, ಅವುಗಳ ಜೀವನ ಮಗಳನ್ನು ತಿಳಿದುಕೊಳ್ಳುವದು ನಮಗೆ ಅಗತ್ಯವಿಲ್ಲವೇ?

ಜೇನ್ನೊಳಗಳ ಸಾಮ್ರಾಜ್ಯವು ಒಂದು ಅತ್ಯುತ್ಕೃಷ್ಟ ಕಲ್ಪನಾ ಸಾಮ್ರಾಜ್ಯವದು. ಯಾವನೊಬ್ಬ ಕವಿಯು, ಕಾಲ್ಪನಿಕ ಸಾಮ್ರಾಜ್ಯವು ಈ ಮೇರೆಗೆ ಇರಬೇಕು; ಪ್ರಜೆಗಳು ಈ ರೀತಿ ಒಕ್ಕಟ್ಟಿನಿಂದ ಇರಬೇಕು; ಅಲ್ಲಿನ ಅರಸಿಯು ಹೀಗೊಂದು ವೈಭವದಿಂದ ಇರಬೇಕು ಎನ್ನುವಹಾಗೆ ಜೇನ್ನೊಳಗಳ ಜೀವನ ಮುವಿರುವದು. ಇದುವರೆಗೆ ಒಳ್ಳೆಯ ಸುಧಾರಣೆಗಳನ್ನು ಹೊಂದಿದ ಜನಾಂಗ ರಿಗೂ ಕೂಡ ಸಾಧ್ಯವಾಗದಂಥ ಸಾಮ್ರಾಜ್ಯವನ್ನು ಅವುಗಳು ಸ್ಥಾಪಿಸಿರು ವೆ. ಅವುಗಳ ಸಾಮ್ರಾಜ್ಯದಲ್ಲಿ ನೀವು ಯಾವುದಾದರೊಂದು ಸುಧಾರಣೆಯನ್ನು ಆಚರಿಸುವಂತೆ ಇರುವದಿಲ್ಲ. ಒಳ್ಳೆಯ ಉದ್ಯಮಗಾರರ ಜೀವನವು ಅವುಗಳ ಯವದು. ಇಂಥ ಅಲ್ಪಜೀವಿಗಳ ಜೀವನ ಕ್ರಮವನ್ನು ನಾವು ಅರಿತುಕೊಳ್ಳು ಮು ಎಷ್ಟೊಂದು ಸೊಗಸಿನ ಸಂಗತಿಯಿರುವದು?

ೇನ್ನೊಳಗಳ ಅರಸಿಯ ಮುದುವೆ

ಅವುಗಳ ರಾಜ್ಯದಲ್ಲಿ ಅವುಗಳ ಅರಸಿಗೊಂದು ಬೆಡಗಿನ ಮನೆಯಿರುವದು. ಳು ಅಸದೃಶ ಕಾರ್ಯತತ್ಪರಳು. ಅವಳ ಮಹಿಮೆಯು ಅನುಪಮವಿರುವದು. ಳ ನಡಿಗೆಯು ಗಾಂಭೀರ್ಯವುಳ್ಳದು. ಅವಳ ಸುತ್ತುಮುತ್ತಲು ದೊಡ್ಡ ಂದು ಪರಿವಾರವು. ಆ ರಾಜ್ಯದಲ್ಲಿ ಅವಳದು ಎಣೆಯಿಲ್ಲದಷ್ಟು ಅಧಿಕಾರ-ಪತ್ತು. ಅವಳ ಐಶ್ವರ್ಯ ವೈಶಿಷ್ಟ್ಯವು ಅಲೌಕಿಕವಿರುವದು. ಅಂಡವಾಸ ತಿಯಲ್ಲಿ ಅವಳು ಬೇರೆಯವರಂತೆ ತಾನೂ ಒಬ್ಬ ಸಾಮಾನ್ಯಳು. (ಉದ್ಯಮಗಾರ ಳು.) ಆದರೆ ಎಲ್ಲರ ಅಪೇಕ್ಷೆಯ ಮೇರೆಗೆ ಜೇನ್ನೊಳಗಳ ಜನಾಂಗದ

ಯೋಗ್ಯವಾದ ಆಹಾರದ ಮಹತ್ವ, ಉದರಲ್ಲಿ ಹಣ್ಣಿನ ಸ್ಥಾನ ಮುಂತಾದವುಗಳನ್ನು ಸರಸವಾಗಿ ವರ್ಣಿಸಿದರು. ಇದೇ ಕಾಲಕ್ಕೆ ಒಕ್ಕಲಿಗನ ಪರಿಸ್ಥಿತಿ ಹೇಗೆ ಸುಧಾರಿಸ ಬಹುದು, ಈ ಕಾರ್ಯದಲ್ಲಿ ಶಿಕ್ಷಕರು ಹೇಗೆ ಸಹಾಯಕಾರಿಯಾಗಬಲ್ಲರು ಎಂಬುದರ ಬಗ್ಗೆ ತುಸು ಹೇಳಿದರಲ್ಲದೆ ತಾವೂ ತಮ್ಮ ಖಾತೆಯವರೂ ಯಾವಾಗಲೂ ಈ ಪ್ರಶ್ನೆಗಳನ್ನು ಬಿಡಿಸಲು ಸದಾಸಿದ್ಧರಿರುವದಾಗಿಯೂ ನಿವೇದಿಸಿದರು. ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀಯುತ ಕಾಳೆಯವರು ಅಧ್ಯಕ್ಷರ ಮತ್ತು ವ್ಯಾಖ್ಯಾತರಾದ ಶ್ರೀಯುತ ದಾಣಿಯವರ ಆಭಾರ ಮನ್ನಿಸಿ ತಮ್ಮ ವಿದ್ಯಾರ್ಥಿಗಳಿಗೆ ಇಷ್ಟೊಂದು ಪರಿಶ್ರಮಪಟ್ಟು ಪ್ರಯೋಗಮಾಡಿ ತೋರಿಸಿದುದಕ್ಕೂ ಕೆಲವು ಉಪದೇಶಪರ ಮಾತುಗಳನ್ನು ಹೇಳಿದುದಕ್ಕೂ ಈರ್ವರ ಉಪಕಾರವನ್ನು ಸ್ಮರಿಸಿದರು. ಹಣ್ಣು ಕಾದಿಡುವ ಕ್ರಮ ಮತ್ತು ಮಹತ್ವ ಇವುಗಳ ವಿಷಯವಾಗಿ ಮಾತಾಡುವಾಗ ಅವರು ಈ ವಿಷಯಕ್ಕೂ ಈಗಿನ ಶಿಕ್ಷಣದಲ್ಲಿಯ ಹೊಸ ವಿಚಾರವಾದ ವೃತ್ತಿಯ ಮುಖಾಂತರ ಶಿಕ್ಷಣಕೊಡುವದು, ಕೊಟ್ಟ ಶಿಕ್ಷಣವು ವಿದ್ಯಾರ್ಥಿಗೆ ತನ್ನ ಜೀವನವನ್ನು ಸಾಗಿಸಲು ಅದರಿಂದ ಆಗುವ ಉಪಯೋಗ ಇವೆಲ್ಲವುಗಳಿಗೂ ಹೇಗೆ ನಿಕಟ ಸಂಬಂಧವಿರುವದೆಂಬುದನ್ನೂ ಒತ್ತಿ ಹೇಳಿದರು. ಈ ಪದ್ಧತಿಯಿಂದ ಬೇಕಾದ ಹಣ್ಣು ಬೇಕಾದ ದೇಶದಲ್ಲಿ ಬೇಕಾದ ಕಾಲದಲ್ಲಿ ಹೇಗೆ ದೊರೆಯಬಹುದು, ಮತ್ತು ದೊರೆಯುವದು ಖಂಡಿತವಾಗಿದ್ದಾಗ ಜನರು ಆ ಹಣ್ಣುಗಳು ಹೆಚ್ಚಾಗಿ ಬೆಳೆಯುವ ಕಾಲದಲ್ಲಿಯೇ ಮಿತಿ ಮೀರಿ ತಿಂದು ಕಾಲರಾ ಚಳಿಜ್ವರ ಮುಂತಾದ ರೋಗಗಳಿಗೀಡಾಗುವದನ್ನು ತಪ್ಪಿಸುಕೊಳ್ಳುವದು ಹೇಗೆ ಸುಲಭ ಎಂಬ ಮಾತುಗಳನ್ನು ಮನದಟ್ಟಾಗುವಂತೆ ಹೇಳಿದರು. ಈ ಉದ್ಯೋಗವನ್ನು ಗಂಡಸರಿಗಿಂತ ಮಹಿಳೆಯರು ಹೆಚ್ಚಾಗಿ ಆಸ್ಥೆಯಿಂದ ಕಲಿತು ತಾವು ಮನೆಯಲ್ಲಿ ಈಗ ಮಾಡುತ್ತ ಬಂದಿರುವ ಕ್ರಮದಲ್ಲಿಯೂ ಇದರಲ್ಲಿಯೂ ಯಾವ ವ್ಯತ್ಯಾಸವಿದೆ ಎಂಬುದನ್ನು ಕಂಡುಹಿಡಿಯಬೇಕು. ಮತ್ತು ತಾವು ಹೊಂದಿದ ಜ್ಞಾನದಿಂದ ಮನೆಯಲ್ಲಿ ಎಲ್ಲರ ಸುಖ ಸೌಕರ್ಯ ಆರೋಗ್ಯ ಮುಂತಾದವುಗಳ ಕಡೆಗೆ ಹೆಚ್ಚು ಲಕ್ಷ್ಯ ಪೂರೈಸಲು ಹೇಗೆ ಅವಕಾಶವಿರುವದೆಂಬುದನ್ನು ಹೇಳಿದರು.

ಜೇನ್ನೊಳಗಳ ಜೀವನ ವೈಚಿತ್ರ್ಯ

ಲೇಖಕ:— ಶ್ರೀ. ಕೊಪ್ಪಳ ಗುಂಡೇರಾಯರು ಬಿ. ಎ.

ಇದು ಹೇಗೆ ಇದು ಏಕೆ ಎಂದು ಕೇಳುವವರವರಲ್ಲ ॥
ಸದಾ ಸತತ ದುಡಿದು ಸಾಯಲು ಹುಟ್ಟಿದವರವರು ॥

ಜೇನ್ನೊಳಗಳನ್ನು ನೋಡಿ ಅಂಥ ಕುಲದವರು ನಾವಾಗಬಾರದೇ ಎಂದು ಷ್ಟೋ ಸಾರೆ ನಾವು ಎನ್ನುವದಿಲ್ಲವೇ! ಅಶ್ರಾಂತ ಪರಿಶ್ರಮಮಾಡುವ ಅಲ್ಪ ಜೀವಗಳಲ್ಲವೇ ಅವು! ಅವುಗಳ ಮನೆ, ಮನೆಯ ಆಡಳಿತೆ, ಅವುಗಳ ಜೀವನ ಕ್ರಮಗಳನ್ನು ತಿಳಿದುಕೊಳ್ಳುವದು ನಮಗೆ ಅಗತ್ಯವಿಲ್ಲವೇ?

ಜೇನ್ನೊಳಗಳ ಸಾಮ್ರಾಜ್ಯವು ಒಂದು ಅತ್ಯುತ್ಕೃಷ್ಟ ಕಲ್ಪನಾ ಸಾಮ್ರಾಜ್ಯವಿರುವದು. ಯಾವನೊಬ್ಬ ಕವಿಯು, ಕಾಲ್ಪನಿಕ ಸಾಮ್ರಾಜ್ಯವು ಈ ಮೇರೆಗೆ ಇರಬೇಕು; ಪ್ರಜೆಗಳು ಈ ರೀತಿ ಒಕ್ಕಟ್ಟಿನಿಂದ ಇರಬೇಕು; ಅಲ್ಲಿನ ಅರಸಿಯು ಷ್ಟೊಂದು ವೈಭವದಿಂದ ಇರಬೇಕು ಎನ್ನುವಹಾಗೆ ಜೇನ್ನೊಳಗಳ ಜೀವನ ಕ್ರಮವಿರುವದು. ಇದುವರೆಗೆ ಒಳ್ಳೆಯ ಸುಧಾರಣೆಗಳನ್ನು ಹೊಂದಿದ ಜನಾಂಗ ವರಿಗೂ ಕೂಡ ಸಾಧ್ಯವಾಗದಂಥ ಸಾಮ್ರಾಜ್ಯವನ್ನು ಅವುಗಳು ಸ್ಥಾಪಿಸಿರುವು. ಅವುಗಳ ಸಾಮ್ರಾಜ್ಯದಲ್ಲಿ ನೀವು ಯಾವುದಾದರೊಂದು ಸುಧಾರಣೆಯನ್ನು ಆಚರಿಸುವಂತೆ ಇರುವದಿಲ್ಲ. ಒಳ್ಳೆಯ ಉದ್ಯಮಗಾರರ ಜೀವನವು ಅವುಗಳ ರುವದು. ಇಂಥ ಅಲ್ಪಜೀವಿಗಳ ಜೀವನ ಕ್ರಮವನ್ನು ನಾವು ಅರಿತುಕೊಳ್ಳು ದು ಎಷ್ಟೊಂದು ಸೊಗಸಿನ ಸಂಗತಿಯಿರುವದು?

ೀನ್ನೊಳಗಳ ಅರಸಿಯ ಮುದುವೆ

ಅವುಗಳ ರಾಜ್ಯದಲ್ಲಿ ಅವುಗಳ ಅರಸಿಗೊಂದು ಬೆಡಗಿನ ಮನೆಯಿರುವದು. ವಳು ಅಸದೃಶ ಕಾರ್ಯತತ್ಪರಳು. ಅವಳ ಮಹಿಮೆಯು ಅನುಪಮವಿರುವದು. ವಳ ನಡಿಗೆಯು ಗಾಂಭೀರ್ಯವುಳ್ಳದು. ಅವಳ ಸುತ್ತುಮುತ್ತಲು ದೊಡ್ಡ ೂಂದು ಪರಿವಾರವು. ಆ ರಾಜ್ಯದಲ್ಲಿ ಅವಳದು ಎಣೆಯಿಲ್ಲದಷ್ಟು ಅಧಿಕಾರ– ಯಿರುತ್ತ್ತು. ಅವಳ ಐಶ್ವರ್ಯ ವೈಶಿಷ್ಟ್ಯವು ಅಲೌಕಿಕವಿರುವದು. ಅಂಡವಾಸ ಸ್ಥಿತಿಯಲ್ಲಿ ಅವಳು ಬೇರೆಯವರಂತೆ ತಾನೂ ಒಬ್ಬ ಸಾಮಾನ್ಯಳು. (ಉದ್ಯಮಗಾರ ಸ್ತ್ರೀಯಳು.) ಆದರೆ ಎಲ್ಲರ ಅಪೇಕ್ಷೆಯ ಮೇರೆಗೆ ಜೇನ್ನೊಳಗಳ ಜನಾಂಗದ

ಜನರಿಂದ ಆರಿಸಿಬಂದ ಅರಸಿಯು ಅವಳು. ತಮಗೊಬ್ಬ ಅರಸಿಯಿರಬೇಕೆಂದು ಅವೆಲ್ಲ ಆ ಅಂಡಸ್ಥಜೀವಿಗೆ ವಿಶಿಷ್ಟತರದ ಪೋಷಣೆಯನ್ನು ಕೊಟ್ಟು ಅವಳನ್ನು ಅರಸಿಯನ್ನಾಗಿ ಆರಿಸುವವು. ಹುಟ್ಟಿದ ತುಸ ದಿವಸಗಳಲ್ಲಿಯೇ ಅವಳು ಉಪವರಳಾಗಿ ತನ್ನ ವಿವಾಹದಿನವನ್ನು ನಿಶ್ಚಯಿಸುವಳು. ಲಜ್ಜಾವಿನೀತಳಾದ ಈ ಕನ್ಯೆಯು ಮದುವೆಗೆ ಸುಲಭಸಾಧ್ಯಳಲ್ಲ. ಆದರೂ ಅನೇಕಜನ ಪತಿಗಳನ್ನು ಅಪೇಕ್ಷಿಸುವ ಪ್ರಮದೆಯು ಅವಳಲ್ಲ. ಅವಳು ಒಂದೇ ಒಂದು ಸಾರೆ ಪತಿಯ ಕೂಡ ಸಮಾಗಮ ಸುಖವನ್ನು ಅನುಭವಿಸಬೇಕೆಂಬ ಸೃಷ್ಟಿಯ ನಿಯಮವಿರುವದು. ಅದಕ್ಕಾಗಿ ಅವಳು ತಕ್ಕವರನನ್ನು ಆರಿಸುವಳು. ತನ್ನ ವಿವಾಹವನ್ನು ಅವಳು ತೀರ್ಥಯಾತ್ರಾರವಾಗಿ ಮಾಡಿಕೊಳ್ಳುವಳು. ವಿವಾಹಕಾಲವು ಸಮೀಪಿಸಲು ಅವಳು ವಸಂತಮಾಸದ ಉನ್ಮತ್ತವಾದ ವಾತಾವರಣದಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಸಡಗರದಿಂದ ಹಾರಾಡುವಳು, ನಲಿದಾಡುವಳು ಮತ್ತು ಕುಣಿದಾಡುವಳು. ಕೊನೆಗೆ ಅವಳು ತನ್ನ ಮನೋಹರವಾದ ರೆಕ್ಕೆಗಳನ್ನು ಹರಡಿಕೊಳ್ಳುವಳು. ತನ್ನ ಅರಮನೆಯ ಬಾಗಿಲ ಬಳಿಯಲ್ಲಿ ಬಂದು ರಮಣೀಯವಾಗಿ ಕುಣಿದಾಡುವಳು. ತತ್ಪರರಾದ ಪರಿಚಾರಕರ ಬಳಗವು ತಮ್ಮ ಅರಸಿಯ ಅಪ್ಪಣೆಯನ್ನು ನೆರವೇರಿಸಲು ಸದಾಸನ್ನದ್ಧವಾಗಿರುವದು; ಯಾಕಂದರೆ ಅವಳ ವಿವಾಹಸಮಯವು ಅಷ್ಟೊಂದು ಪವಿತ್ರವಾದದ್ದು ಇರುವದು. ಆ ಕಾಲದಲ್ಲಿ ಯಾವುದರಲ್ಲಿಯೂ ಕೊರತೆ ಇರಕೂಡದು.

ಎಲ್ಲಕ್ಕೂ ವೀರನು ಮಾತ್ರ ವರನಾಗಬಲ್ಲನು

ಅವಳನ್ನು ಮದುವೆಯಾಗಬೇಕೆಂಬ ವೀರರ ಬಳಗವೆಷ್ಟು ದೊಡ್ಡದು. ಅವರ ಮುಖದ ಮೇಲೆ ಚಿಂತೆಯು ಒಡೆದು ಮೂಡಿರುವದು. ಎಲ್ಲರೂ ಅವಳನ್ನು ಮದುವೆಯಾಗಬೇಕೆನ್ನುವರು. ಅವಳು ಎಲ್ಲರಲ್ಲಿಯೂ ಹೆಚ್ಚಿನವನಾದ ಒಬ್ಬನನ್ನು ಮಾತ್ರ ಅಪೇಕ್ಷಿಸುವಳು. ಅವಳ ಪತಿಯಾಗುವದು ಸುಖದಾಯಕವಲ್ಲ. ಯಾಕಂದರೆ ಅವನಿಗೆ ಮದುವೆಯೂ ಮರಣವೂ ಒಂದೇ ಕಾಲಕ್ಕೆ ಒದಗುವವು. ಆದರೆ ವ್ಯರ್ಥವಾಗಿ ಸಾವಿರವರ್ಷ ಬಾಳುವದಕ್ಕಿಂತ ಒಂದು ನಿಮಿಷ ಮಾತ್ರ ಸ್ವರ್ಗೀಯ ಸುಖವನ್ನು ಅನುಭವಿಸಿ ಮೃತ್ಯುವನ್ನು ಆಲಿಂಗಿಸುವದು ಲೇಸೆಂದೇ ಆದಕಾರಣ ಎಲ್ಲರೂ ಮದುವೆಯಾಗಬೇಕೆನ್ನುವರು. ಅರಸಿಯು ಎಲ್ಲಕ್ಕೂ ವಿುಗಿಲಾದವನನ್ನು ಕೂಡಿಕೊಂಡು ತನ್ನ ಆಯುಷ್ಯದ ಒಂದು ಕ್ಷಣ ಸುಖವನ್ನು ಪಡೆಯುವಳು. ಈ ಕ್ಷಣದಲ್ಲಿ ಪತಿಯು ಸುಖವನ್ನನುಭವಿಸಿ ತನ್ನ ಮುಖ್ಯಾಂಗವನ್ನು ಸತಿಗೊಪ್ಪಿಸುವನು. ಬಳಿಕ ಮರಣವನ್ನು ಹೊಂದುವನು. ಅರಸಿಯ ದಾಸಿಯರು ಅತನನ್ನು ಕೊಂಡುಹಾಕುವರು.

ಅರಸಿಯ ಓಲಗ

ತನ್ನ ಮದುವೆಗಿಂತ ತನ್ನ ರಾಜ್ಯದ ಕಾರಭಾರವನ್ನು ನೀಗಿಸುವದು ಅವಳಿಗೆ ಹೆಚ್ಚು ಪವಿತ್ರಕರವಾದ ಕಾರ್ಯವು. ತಲೆಯ ಮೇಲೆ ಕಿರೀಟವನ್ನು ಮಾತ್ರ ಇಟ್ಟುಕೊಳ್ಳುವದು ತನ್ನ ಕೆಲಸವೆಂದು ಅವಳು ತಿಳಿದಿಲ್ಲ. ತನ್ನ ರಾಜ್ಯಕ್ಕಾಗಿ ಎಷ್ಟು ಜನರನ್ನು ಹುಟ್ಟಿಸಬೇಕು; ಹೆಣ್ಣು ಮಕ್ಕಳು ಎಷ್ಟು? ಗಂಡು ಮಕ್ಕಳು ಎಷ್ಟು? ಎಷ್ಟು ಜನ ಬೇಕೋ ಅಷ್ಟೇ ಜನರನ್ನು ಹುಟ್ಟಿಸುವ ಅಧಿಕಾರವು ಅವಳ ದಿರುವದು. ಈ ಸಂಗತಿಗಳನ್ನೆಲ್ಲ ಯೋಗ್ಯವಾಗಿ ವಿಚಾರಿಸಿ ಅವಳು ತತ್ತಿಗಳನ್ನಿಡುವಳು. ಅವಳು **ಜನನ-ನಿಗ್ರಹ** (Birth-control) ನಿಯಮವನ್ನು ಪಾಲಿಸುವಳು. ಅಂದರೆ ಎಷ್ಟು ಜನರನ್ನು ತನ್ನ ರಾಜ್ಯದಲ್ಲಿ ಯೋಗ್ಯವಾಗಿ ಸಾಕಿ ಸಲಹಬಹುದೋ ಅಷ್ಟೇ ತತ್ತಿಗಳನ್ನು ಅವಳು ಹಾಕುವಳು. ಇದೆಂಥ ಸೃಷ್ಟಿ ಸೌಕರ್ಯವು! ಜೇನ್ನೊಳಗಳಿಗೆ ಮಾತ್ರ ಯಾಕೆ! ಸುಗ್ಗಿಯ ಸಮೃದ್ಧಿಕಾಲದಲ್ಲಿ ಅವಳು ಬಹಳ ತತ್ತಿಗಳನ್ನಿಡುವಳು. ಬರಗಾಲದ ಬಡತನದಲ್ಲಿ ತುಸು ತತ್ತಿಗಳನ್ನು ಹಾಕುವಳು. ಅರಸಿಯ ಆಯುರ್ಮರ್ಯಾದೆಯು ಮೂರು-ನಾಲ್ಕು ವರುಷ. ಆದರೆ ಅವಳ ಅಕ್ಕತಂಗಿಯರು ತುಸ ವಾರಗಳ ಮಟ್ಟಿಗೆ ಮಾತ್ರ ಬದುಕಿರುವರು. ಅವಳು ತತ್ತಿಗಳನ್ನಿಕ್ಕುವ ತನ್ನ ತಾಯ್ತನವನ್ನು ಕೂಡಲೆ ಮಾಡದಿದ್ದರೆ ಎಲ್ಲ ಜೇನ್ನೊಳಗಳು ಹಾರಿಹೋಗಿ ಅವಳೊಬ್ಬಳೇ ತನ್ನ ದೊಡ್ಡ ಅರಮನೆಯಲ್ಲಿರ ಬೇಕಾಗುವದು. ಆದಕಾರಣ ಅವಳು ಭರದಿಂದ ತತ್ತಿಗಳನ್ನು ಇಡುವಳು. ಕೂಡಲೇ ಆ ರಾಜ್ಯವೆಲ್ಲ ಭ್ರಮಿಸುವ ಜೇನ್ನೊಣಗಳಿಂದ ತುಂಬಿಹೋಗುವದು.

ನಿಸ್ವಾರ್ಥ ಕಾರ್ಯಕ್ರಮ

ಜೇನ್ನೊಳಗಳ ರಾಜ್ಯದ ನಿಷ್ಠಾವಂತರಾದ ನಾಗರಿಕರಿಗೆ ರಾಜನಿಷ್ಠೆಯು ಅವರ ನುಡಿಯಪಲ್ಲವಿಯು. ತಮ್ಮ ಅರಸಿಯ ಸುಖಕ್ಕಾಗಿ ಎಳ್ಳಷ್ಟು ಬೇಸರಿಯು ವದಿಲ್ಲ. ಅವು ಅರಸಿಯ ಕೂದಲನ್ನು ಹಿಕ್ಕುವವು; ಜಳಕವನ್ನು ಮಾಡಿಸುವವು; ಎಲ್ಲಬಗೆಯ ಆರೈಕೆಯನ್ನು ಮಾಡುವವು. ಅವಳು ರಾಜವೈಭವದಿಂದ ಹಾರಾಡುವಾಗ ಅವಳ ಸೇವೆಯಲ್ಲಿ ಅವು ಅಹಮಹಮಿಕೆಯನ್ನು ("ನಾ ಮುಂದೆ. ನೀ ಮುಂದೆ" ಭಾವವನ್ನು) ತೋರಿಸುವವು. ಇದರಲ್ಲಿ ಅವುಗಳ ಸ್ವಾರ್ಥವೇನೂ ಇರುವದಿಲ್ಲ. ಮನುಷ್ಯರ ಸಾಮ್ರಾಜ್ಯದಲ್ಲಿ ಸ್ವಾರ್ಥಬುದ್ಧಿಯುಳ್ಳವರು ತಮ್ಮ ಅರಸು-ಅರಸಿಯರ ವಿಷಯವಾಗಿ ತತ್ಪರರಿರುವಂತೆ ನಟಿಸಿ ತಮ್ಮ ಹಿತವನ್ನು ಸಂಪಾದಿಸಿಕೊಳ್ಳುವರು. ಆದರೆ ಜೇನ್ನೊಳಗಳ ರಾಜ್ಯದಲ್ಲಿ ಸ್ವಹೇತು ಸಾಧನವಿರದೆ ಮನುಷ್ಯರಲ್ಲಿ ದೇವರ ವಿಷಯವಾಗಿರುವಂತಹ ಭಕ್ತಿಯೇ ಅವುಗಳ ನಿಸ್ವಾರ್ಥ ಸೇವೆಯ ಮೂಲವಾಗಿರುವದು.

ಜನರಿಂದ ಆರಿಸಿಬಂದ ಅರಸಿಯು ಅವಳು. ತಮಗೊಬ್ಬ ಅರಸಿಯಿರಬೇಕೆಂದು ಅವೆಲ್ಲ ಆ ಅಂಡಸ್ಥಜೀವಿಗೆ ವಿಶಿಷ್ಟತರದ ಪೋಷಣೆಯನ್ನು ಕೊಟ್ಟು ಅವಳನ್ನು ಅರಸಿಯನ್ನಾಗಿ ಆರಿಸುವವು. ಹುಟ್ಟಿದ ತುಸ ದಿವಸಗಳಲ್ಲಿಯೇ ಅವಳು ಉಪವರಳಾಗಿ ತನ್ನ ವಿವಾಹದಿನವನ್ನು ನಿಶ್ಚಯಿಸುವಳು. ಲಜ್ಜಾವಿನೀತಳಾದ ಈ ಕನ್ಯೆಯು ಮದುವೆಗೆ ಸುಲಭಸಾಧ್ಯಳಲ್ಲ. ಆದರೂ ಅನೇಕಜನ ಪತಿಗಳನ್ನು ಅಪೇಕ್ಷಿಸುವ ಪ್ರಮದೆಯು ಅವಳಲ್ಲ. ಅವಳು ಒಂದೇ ಒಂದು ಸಾರೆ ಪತಿಯ ಕೂಡ ಸಮಾಗಮ ಸುಖವನ್ನು ಅನುಭವಿಸಬೇಕೆಂಬ ಸೃಷ್ಟಿಯ ನಿಯಮವಿರುವದು. ಅದಕ್ಕಾಗಿ ಅವಳು ತಕ್ಕವರನನ್ನು ಆರಿಸುವಳು. ತನ್ನ ವಿವಾಹವನ್ನು ಅವಳು ತೀರ್ಮಾನಮತ್ಕಾರವಾಗಿ ಮಾಡಿಕೊಳ್ಳುವಳು. ವಿವಾಹಕಾಲವು ಸಮೀಪಿಸಲು ಅವಳು ವಸಂತಮಾಸದ ಉನ್ಮತ್ತವಾದ ವಾತಾವರಣದಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಸಡಗರದಿಂದ ಹಾರಾಡುವಳು, ನಲಿದಾಡುವಳು ಮತ್ತು ಕುಣಿದಾಡುವಳು. ಕೊನೆಗೆ ಅವಳು ತನ್ನ ಮನೋಹರವಾದ ರೆಕ್ಕೆಗಳನ್ನು ಹರಡಿಕೊಳ್ಳುವಳು. ತನ್ನ ಅರಮನೆಯ ಬಾಗಿಲ ಬಳೆಯಲ್ಲಿ ಬಂದು ರಮಣೀಯವಾಗಿ ಕುಣಿದಾಡುವಳು. ತತ್ಪರರಾದ ಪರಿಚಾರಕರ ಬಳಗವು ತಮ್ಮ ಅರಸಿಯ ಅಪ್ಪಣೆಯನ್ನು ನೆರವೇರಿಸಲು ಸದಾಸನ್ನದ್ಧವಾಗಿರುವದು; ಯಾಕಂದರೆ ಅವಳ ವಿವಾಹಸಮಯವು ಅಷ್ಟೊಂದು ಪವಿತ್ರವಾದದ್ದು ಇರುವದು. ಆ ಕಾಲದಲ್ಲಿ ಯಾವುದರಲ್ಲಿಯೂ ಕೊರತೆ ಇರಕೂಡದು.

ಎಲ್ಲಕ್ಕೂ ವೀರನು ಮಾತ್ರ ವರನಾಗಬಲ್ಲನು

ಅವಳನ್ನು ಮದುವೆಯಾಗಬೇಕೆಂಬ ವೀರರ ಬಳಗವೆಷ್ಟು ದೊಡ್ಡದು. ಅವರ ಮುಖದ ಮೇಲೆ ಚಿಂತೆಯು ಒಡೆದು ಮೂಡಿರುವದು. ಎಲ್ಲರೂ ಅವಳನ್ನು ಮದುವೆಯಾಗಬೇಕೆನ್ನುವರು. ಅವಳು ಎಲ್ಲರಲ್ಲಿಯೂ ಹೆಚ್ಚಿನವನಾದ ಒಬ್ಬನನ್ನು ಮಾತ್ರ ಅಪೇಕ್ಷಿಸುವಳು. ಅವಳ ಪತಿಯಾಗುವದು ಸುಖದಾಯಕವಲ್ಲ; ಯಾಕಂದರೆ ಅವನಿಗೆ ಮದುವೆಯೂ ಮರಣವೂ ಒಂದೇ ಕಾಲಕ್ಕೆ ಒದಗುವವು. ಆದರೆ ವ್ಯರ್ಥವಾಗಿ ಸಾವಿರವರ್ಷ ಬಾಳುವದಕ್ಕಿಂತ ಒಂದು ನಿಮಿಷ ಪರಾತ ಸ್ವರ್ಗೀಯ ಸುಖವನ್ನು ಅನುಭವಿಸಿ ಮೃತ್ಯುವನ್ನು ಆಲಿಂಗಿಸುವದು ಲೇಸೆಂದೇ ಆದಕಾರಣ ಎಲ್ಲರೂ ಮದುವೆಯಾಗಬೇಕೆನ್ನುವರು. ಅರಸಿಯು ಎಲ್ಲರೊಳಗಿಂಗಿಲಾದಪಸನ್ನು ಕೂಡಿಕೊಂಡು ತನ್ನ ಆಯುಷ್ಯದ ಒಂದು ಕ್ಷಣ ಸುಖವನ್ನು ಪಡೆಯುವಳು. ಈ ಕ್ಷಣದಲ್ಲಿ ಪತಿಯು ಸುಖವನ್ನನುಭವಿಸಿ ತನ್ನ ಮುಖ್ಯಾಂಗವನ್ನು ಸತಿಗೊಪ್ಪಿಸುವನು. ಬಳಿಕ ಮರಣವನ್ನು ಹೊಂದುವನು. ಅರಸಿಯ ದಾಸಿಯರು ಆತನನ್ನು ಕೊಂದುಹಾಕುವರು.

ಅರಸಿಯ ಓಲಗ

ತನ್ನ ಮದುವೆಗಿಂತ ತನ್ನ ರಾಜ್ಯದ ಕಾರಭಾರವನ್ನು ನೀಗಿಸುವದು ಅವಳಿಗೆ ಹೆಚ್ಚು ಪವಿತ್ರಕರವಾದ ಕಾರ್ಯವು. ತಲೆಯ ಮೇಲೆ ಕಿರೀಟವನ್ನು ಮಾತ್ರ ಇಟ್ಟುಕೊಳ್ಳುವದು ತನ್ನ ಕೆಲಸವೆಂದು ಅವಳು ತಿಳಿದಿಲ್ಲ. ತನ್ನ ರಾಜ್ಯಕ್ಕಾಗಿ ಎಷ್ಟು ಜನರನ್ನು ಹುಟ್ಟಿಸಬೇಕು; ಹೆಣ್ಣು ಮಕ್ಕಳು ಎಷ್ಟು? ಗಂಡು ಮಕ್ಕಳು ಎಷ್ಟು? ಎಷ್ಟು ಜನ ಬೇಕೋ ಅಷ್ಟೇ ಜನರನ್ನು ಹುಟ್ಟಿಸುವ ಅಧಿಕಾರವು ಅವಳ ದಿರುವದು. ಈ ಸಂಗತಿಗಳನ್ನೆಲ್ಲ ಯೋಗ್ಯವಾಗಿ ವಿಚಾರಿಸಿ ಅವಳು ತತ್ತಿಗಳನ್ನಿಡುವಳು. ಅವಳು **ಜನನ-ನಿಗ್ರಹ** (Birth-control) ನಿಯಮವನ್ನು ಪಾಲಿಸುವಳು. ಅಂದರೆ ಎಷ್ಟು ಜನರನ್ನು ತನ್ನ ರಾಜ್ಯದಲ್ಲಿ ಯೋಗ್ಯವಾಗಿ ಸಾಕಿ ಸಲಹಬಹುದೋ ಅಷ್ಟೇ ತತ್ತಿಗಳನ್ನು ಅವಳು ಹಾಕುವಳು. ಇದೆಂಥ ಸೃಷ್ಟಿ ಸೌಕರ್ಯವು! ಜೇನ್ನೊಳಗಳಿಗೆ ಮಾತ್ರ ಯಾಕೆ! ಸುಗ್ಗಿಯ ಸಮೃದ್ಧಿಕಾಲದಲ್ಲಿ ಅವಳು ಬಹಳ ತತ್ತಿಗಳನ್ನಿಡುವಳು. ಬರಗಾಲದ ಬಡತನದಲ್ಲಿ ತುಸು ತತ್ತಿಗಳನ್ನು ಹಾಕುವಳು. ಅರಸಿಯ ಆಯುರ್ಮರ್ಯಾದೆಯು ಮೂರು-ನಾಲ್ಕು ವರುಷ. ಆದರೆ ಅವಳ ಅಕ್ಕತಂಗಿಯರು ತುಸ ವಾರಗಳ ಮಟ್ಟಿಗೆ ಮಾತ್ರ ಬದುಕಿರುವರು. ಅವಳು ತತ್ತಿಗಳನ್ನಿಕ್ಕುವ ತನ್ನ ತಾಯ್ತನವನ್ನು ಕೂಡಲೆ ಮಾಡದಿದ್ದರೆ ಎಲ್ಲ ಜೇನ್ನೊಳಗಳು ಹಾರಿಹೋಗಿ ಅವಳೊಬ್ಬಳೇ ತನ್ನ ದೊಡ್ಡ ಅರಮನೆಯಲ್ಲಿರಬೇಕಾಗುವದು. ಆದಕಾರಣ ಅವಳು ಭರದಿಂದ ತತ್ತಿಗಳನ್ನು ಇಡುವಳು. ಕೂಡಲೇ ಆ ರಾಜ್ಯವೆಲ್ಲ ಭ್ರಮಿಸುವ ಜೇನ್ನೊಣಗಳಿಂದ ತುಂಬಿಹೋಗುವದು.

ನಿಸ್ವಾರ್ಥ ಕಾರ್ಯಕ್ರಮ

ಜೇನ್ನೊಳಗಳ ರಾಜ್ಯದ ನಿಷ್ಠಾವಂತರಾದ ನಾಗರಿಕರಿಗೆ ರಾಜನಿಷ್ಠೆಯು ಅಪರ ನುಡಿಯಪಲ್ಲವಿಯು. ತಮ್ಮ ಅರಸಿಯ ಸುಖಕ್ಕಾಗಿ ಎಳ್ಳಷ್ಟು ಬೇಸರಿಯುವದಿಲ್ಲ. ಅವು ಅರಸಿಯ ಕೂದಲನ್ನು ಹಿಕ್ಕುವವು; ಜಳಕವನ್ನು ಮಾಡಿಸುವವು; ಉಣ್ಣಿಸಿಗೆಯ ಆರೈಕೆಯನ್ನು ಮಾಡುವವು. ಅವಳು ರಾಜವೈಭವದಿಂದ ಹಾರಾಡುವಾಗ ಅವಳ ಸೇವೆಯಲ್ಲಿ ಅವು ಅಹಮಹಮಿಕೆಯನ್ನು ("ನಾ ಮುಂದೆ. ನೀ ಮುಂದೆ" ಭಾವವನ್ನು) ತೋರಿಸುವವು. ಇದರಲ್ಲಿ ಅವುಗಳ ಸ್ವಾರ್ಥವೇನೂ ಇರುವದಿಲ್ಲ. ಮನುಷ್ಯರ ಸಾಮ್ರಾಜ್ಯದಲ್ಲಿ ಸ್ವಾರ್ಥಬುದ್ಧಿಯುಳ್ಳವರು ತಮ್ಮ ಅರಸು-ಅರಸಿಯರ ವಿಷಯವಾಗಿ ತತ್ಪರರಿರುವಂತೆ ನಟಿಸಿ ತಮ್ಮ ಹಿತವನ್ನು ನೆರವೇರಿಸಿಕೊಳ್ಳುವರು. ಆದರೆ ಜೇನ್ನೊಳಗಳ ರಾಜ್ಯದಲ್ಲಿ ಸ್ವಹೇತು ಸಾಧನವಿರದೆ ಮನುಷ್ಯರಲ್ಲಿ ದೇವರ ವಿಷಯವಾಗಿರುವಂತಹ ಭಕ್ತಿಯೇ ಅವುಗಳ ನಿಸ್ವಾರ್ಥ ಸೇವೆಯ ಮೂಲವಾಗಿರುವದು.

ಪ್ರಾವೀಣ್ಯಪ್ರಾಪ್ತಿ

ಜೇನ್ನೊಳಗಳ ರಾಜ್ಯಕಾರಭಾರದಲ್ಲಿರುವಷ್ಟು ವ್ಯವಸ್ಥೆ ಇನ್ನಾವ ಪ್ರಾಣಿಗಳ ಪ್ರಪಂಚದಲ್ಲಿರುವದಿಲ್ಲ. ಒಂದೊಂದು ವರ್ಗದ ಪ್ರಾಣಿಗಳು ಒಂದೊಂದು ಕಾರ್ಯವನ್ನು ವಹಿಸಿಕೊಂಡಿರುವವು. ಒಂದು ಗುಂಪಿನವರ ಕಾರ್ಯವು ಇನ್ನೊಂದು ಗುಂಪಿನವರ ಕಾರ್ಯಕ್ಕೆ ತಿಲಮಾತ್ರ ತೊಂದರೆಯನ್ನು ಕೊಡುವ ದಿಲ್ಲ. ಅವುಗಳ ರಾಜ್ಯದಲ್ಲಿ ವಯೋಮಾನಾನುಸಾರ ವರ್ಗೀಕರಣ ಮಾಡಲಾಗಿದೆ. ಅಂದರೆ ಅವುಗಳಲ್ಲಿ ಕಾರ್ಯಭೇದ ಮೂಲಕ ಜಾತಿಭೇದಗಳಿರುವದಿಲ್ಲ. ಈ ರೀತಿ ಕಾರ್ಯವ್ಯವಸ್ಥೆಯಿರುವ ಮೂಲಕ ಅವು ತಮ್ಮ ಕಾರ್ಯಗಳಲ್ಲಿ ನೈಪುಣ್ಯ ಹೊಂದಲು ಅವಕಾಶ ದೊರೆತಿದೆ. ನೈಪುಣ್ಯ ಪ್ರಾಪ್ತಿಯ ಮೂಲಕ ರಾಜ್ಯದಲ್ಲಿ ಸುವ್ಯವಸ್ಥೆ ನೆಲೆಗೊಂಡಿದೆ. ಅವುಗಳ ಕಾರ್ಯವು ಶ್ರಮವಿಲ್ಲದೆ ಯಾಂತ್ರಿಕವಾಗಿ ನಡೆಯಲು ಈ ಕೌಶಲ್ಯವೇ ಕಾರಣವಾಗಿದೆ. ಮನುಷ್ಯಮಾತ್ರರು ಜೇನ್ನೊಳಗಳಿಂದ ಚಟಪಟಂತೆ ಕಾರ್ಯವನ್ನು ಮಾಡುವ ಗುಣವನ್ನು ಅವಶ್ಯವಾಗಿ ಕಲಿಯುತಕ್ಕದ್ದು.

ಕ್ರೀಡಾರೂಪ ಕಾರ್ಯಪದ್ಧತಿ

ಗಂಡು ಜೇನ್ನೊಳಗಳ ಗುಂಪಿನೊಳಗಿಂದ ಒಂದನ್ನು ತನ್ನ ಗಂಡನನ್ನಾಗಿ ಆರಿಸಿಯು ಆರಿಸುವ ಮೂಲಕ ಗಂಡು ಜೇನ್ನೊಳಗಳ ಗುಂಪಿಗೊಂದು ಗರ್ವ ಬಂದಿದೆ; ಗಂಡು ಜೇನ್ನೊಳಗಳು ಸ್ವಭಾವದಿಂದ ಸೋಮಾರಿಗಳಾಗಲು ಇದೇ ಕಾರಣವೆಂದು ಹೇಳುವರು. ಆದರೆ ಕೂಲಿಕಾರ ಜೇನ್ನೊಳಗಳು ತಮ್ಮ ಕರ್ತವ್ಯವನ್ನು ನೀಗಿಸಲು ಪರಮಾವಧಿ ಕಷ್ಟಬಡುವವು. ಮೊದಲು ಅವು ಮನೆ ಕಟ್ಟುವ ಸ್ಥಳವನ್ನು ಆರಿಸುವ ಕೆಲಸದಲ್ಲಿ ನಿರವಾಗುವವು ; ಬಳಿಕ ತುಪ್ಪವನ್ನು ಕೂಡ ಹಾಕುವವು; ಮೇಣವನ್ನು ಸಂಗ್ರಹಿಸುವವು ; ಈಚಿಗೆಯಾಗಿ ತಮ್ಮ ನೆಲೆವೀಡಿನ ಸಕಲ ಸಲಕರಣೆಗಳ ಸಂಗ್ರಹವನ್ನು ಮಾಡುವವು. ನಾವೇಕೆ ಕಾರ್ಯಗಳನ್ನು ಮಾಡಬೇಕೆಂದು ಅವು ಎಂದೂ ಗುಣಗುಟ್ಟುವದಿಲ್ಲ. ತತ್ಪರತೆಯಿಂದ ಮಾಡಿದ ಕಾರ್ಯವು ಯಶಸ್ವಿಯಾಗಲು ಆ ಪ್ರಸಂಗವನ್ನು ತಮ್ಮ ನೃತ್ಯದಿಂದ ಪೂರ್ಣಗೊಳಿಸುವವು. ಕೂಲಿಕಾರ ಜೇನ್ನೊಳಗಳು ಜೇನತುಪ್ಪವನ್ನು ಬಾಯಿ ತುಂಬ ಮನೆಗೆ ತರಲು ಅವು ಅತ್ತಿಂದಿತ್ತ ಇತ್ತಿಂದತ್ತ ಸೊಗಸಿನಿಂದ ಸಂಚರಿಸುವವು. ಅವುಗಳ ಈ ಕ್ರಮವು ಅವುಗಳ ಸಂತೋಷಸಮಯದ ನೃತ್ಯವೆಂದು ಜೇನ್ನೊಳಗಳ ಸಂಗ್ರಹಕಾರರು ವರ್ಣಿಸುವರು. ಮನೆಗೆ ಬರುವಾಗ ಮನೆಯಿಂದ ಹೋಗುವಾಗ ಅವು ಕುಣಿದಾಡುವವು. ಅಹಮಹಮಿಕೆ (Selfassection) ಎಂಬ ಸಹಜ ಪ್ರವೃತ್ತಿಯ ಮೂಲಕ ಅವು ಕಾರ್ಯಮಾಡುವವೆಂದು ಹೇಳುವರು. ಆಹಾರ

ಪ್ರಾಪ್ತಿಯಾಗಲು ತುಸ ಗರ್ವ ಬಂದು ತಮ್ಮ ಯೋಗ್ಯತೆಯ ಅನುಭವವು
ಅವುಗಳಿಗೆ ಗೊತ್ತಾಗುವದು. ಈ ಕಾರಣ ಮೂಲಕ ಅವು ಕಾರ್ಯಶೀಲವಾಗು
ವವು. ಆ ಕಾರ್ಯವು ಅವುಗಳಿಗೆ ಕ್ರೀಡೆಯಾಗುವದು. ಈ ಕ್ರೀಡೆಯು
ವ್ಯರ್ಥವಲ್ಲ; **ಸಫಲಕ್ರೀಡೆಯು** ಮಾತ್ರ.

ಸೋಗ್ಯರು ಮಾತ್ರ ಬಾಳುವರು

ಜೇನ್ನೊಳಗಳ ರಾಜ್ಯದಲ್ಲಿ ಸೋಮಾರಿಯೇ ಶತ್ರುವು. ಸಂತತಿ ಸಂವರ್ಧಕ
ಸೋಮಾರಿಗಳಾದ ಗಂಡು ಜೇನ್ನೊಳಗಳ ಸಂಖ್ಯೆಯು ಆಹಾರ ಸಂಗ್ರಹಕ್ಕಿಂತ
ಮಿತಿ ಮೀರಿ ಬೆಳೆಯಲು ಕೂಲಿಕಾರ ಜೇನ್ನೊಳಗಳು ಒಟ್ಟುಗೂಡಿ ಒಮ್ಮೆಲೆ
ಅವುಗಳ ಕುಲವನ್ನೇ ನಾಶಪಡಿಸುವವು. ಇಂಥ ಅಲ್ಪ ಜಂತುಗಳಲ್ಲಿರುವ ಈ
ವಿವೇಕವು ಆಶ್ಚರ್ಯಕರವಾದದ್ದಾಗಿದೆ. ಜೇನ್ನೊಳಗಳು ತಮ್ಮ ರಾಜ್ಯದಲ್ಲಿ
ದುರ್ಬಲರನ್ನೂ ಅಯೋಗ್ಯರನ್ನೂ ಸಹಿಸಲಾರವು. ಆದಕಾರಣ ಎಲ್ಲಕ್ಕೂ ಹೆಚ್ಚು
ಸೋಗ್ಯರಾದವರು ಮಾತ್ರ ಆ ರಾಜ್ಯದಲ್ಲಿ ಬಾಳುವರು.

ನಗರಸೌಂದರ್ಯ

ಜೇನ್ನೊಳಗಳ ನಗರಸೌಂದರ್ಯವನ್ನು ನೋಡಲಪೇಕ್ಷಿಸುವವರು ಒಂದು
ಪ್ಪಣ ಜೇನ್ನೊಳಗಳಾಗಬೇಕು. ಜೇನ್ನೊಳಗಳ ದೃಷ್ಟಿಯಿಂದ ಆ ಪಟ್ಟಣವನ್ನು
ವೀಕ್ಷಿಸಬೇಕು. ನಗರದ ಹೆಬ್ಬಾಗಿಲಿನಲ್ಲಿ ಭದ್ರರಾದ ಕಾವಲುಗಾರರು
ಪರಕೀಯರನ್ನು ಒಳಗೆ ಹೋಗಗೊಡುವದಿಲ್ಲ. ಘ್ರಾಣೇಂದ್ರಿಯ ತೀಕ್ಷ್ಣತೆಯ
ಮೂಲಕ ತಮ್ಮ ಸಾವಿರಾರು ಸೈನಿಕರೊಳಗಿನ ಪ್ರತಿಯೊಬ್ಬನನ್ನು ಅವು
ಗುರುತಿಸಬಲ್ಲವು.

ಸುಂದರವಾದ ಪಟ್ಟಣದ ಒಳಗಿನ ಪ್ರಾಕಾರವನ್ನು ಪ್ರವೇಶಿಸಲು ಸಾವಿರಾರು
ಹಿರಣ್ಮಯ ಮಂದಿರಗಳು ಸಮಾಂತರವಾಗಿ ಕಣ್ಣಿಗೆ ಕಂಗೊಳಿಸುವವು.
ಸೂಕ್ಷ್ಮಾದು ಷಟ್ಕೋಣಾಕೃತಿಯುಳ್ಳ ಕೋಣೆಗಳು ದೃಷ್ಟಿಗೆ ಬೀಳುವವು. ಈ
ನಗರದ ಮೇಲುಪ್ಪರಿಗೆಗಳನ್ನು ಏರಿಹೋದರೆ ಅಲ್ಲಿ ವಸಂತಮಾಸದ ನವನವ
ಪುಷ್ಪಗಳ ಮಕರಂದವು ಮೂಗಿಗೆ ಮುತ್ತುವದು. ತರತರದ ಬಣ್ಣಗಳ ಪರಾಗವು
ಕಣ್ಣಿಗೆ ಒಂದುತರದ ಆನಂದವನ್ನು ಕೊಡುವದು. ಅಲ್ಲಿ ಮಳೆಗಾಲಕ್ಕೆಂದು
ಸದ್ರವಾಗಿ ಕಾಯ್ದಿಟ್ಟ ಜೇನುತುಪ್ಪದಿಂದ ತುಂಬಿದ ಸಾವಿರಾರು ಪಾತ್ರೆಗಳನ್ನು
ನೀವು ನೋಡಬಹುದು. ಇನ್ನೊಂದು ಭಾಗದಲ್ಲಿ ನೂರಾರು ಪಾಕಶಾಸ್ತ್ರ
ವಿಕಾರದರು ಪರಾಗದಲ್ಲಿ ಜೇನುತುಪ್ಪವನ್ನು ಬೆರಿಸಿ ರೊಟ್ಟಿಗಳನ್ನು ಮಾಡಿಡುವ
ವನ್ನು ನೀವು ನೋಡುವಿರಿ. ಇದೇ ಈಗ ತತ್ತಿಯೊಡೆದು ಬಂದ ಜೇನ್ನೊಳಗಳಿ

ಗಾಗಿ ಈ ಆಹಾರವನ್ನು ಅವು ಸಿದ್ಧಗೊಳಿಸುವವು. ತುಸ ಮುಂದಕ್ಕೆ ಹೋಗಲು ಶಿಶು-ಸಂಗೋಪನ ಮಂದಿರವು ಬರುವದು. ಇಲ್ಲಿ ನೂರಾರು ದಾಸಿಯರು ಕೊಟ್ಟಿಯಿಂದಾಗಲಿ ತುಪ್ಪದಿಂದಾಗಲಿ ಸಾವಿರಾರು ಮರಿಗಳನ್ನು ಪೋಷಿಸುತ್ತಿರುವರು. ಇಲ್ಲಿಯೇ ಅರಸಿಯು ತತ್ತಿಯನ್ನಿಡುವ ತನ್ನ ಪವಿತ್ರತರವಾದ ಕಾರ್ಯವನ್ನು ಮಾಡುತ್ತಿರುವಳು. ಬರಿದಾದ ಕೋಣೆಗಳನ್ನು ಅವಳು ತತ್ತಿಗಳಿಂದ ತುಂಬುವಳು. ಶಿಲ್ಪಿಗರು ಹೊಸ ಹೊಸ ಕೋಣೆಗಳನ್ನು ರಚಿಸುವರು. ಮಿತವ್ಯಯವು ಇವುಗಳ ನೈಶಿಷ್ಟ್ಯವು. ಯಾಕಂದರೆ ತುಪ್ಪವನನ್ನಾಗಲಿ ಮೇಣವನ್ನಾಗಲಿ ಸಂಗ್ರಹಿಸುವದು ಎಷ್ಟು ಕಷ್ಟಕರವಾಗಿರುವದೆಂಬದನ್ನು ಅವು ತುಂಬಾ ಬಲ್ಲವು. ಕಸಗೂಡಿಸುವಪ ಕಾರ್ಯವಮಹಿಮೆಯು ಕಡಮೆಯದಿಲ್ಲ. ಯಾಕಂದರೆ ಮನೆಯಲ್ಲಿ ಕಸಕೂ ಬಿದ್ದರೆ ಕೊಳೆಯಾಗುವದೆಂದು ಅವು ಚೆನ್ನಾಗಿ ಅರಿತಿರುವವು. ಅವುಗಳ ಮನೆಯು ಭದ್ರವಾಗಿರಬೇಕಾದರೆ ಉಷ್ಣತಾಮಾನವು ಒಂದೇ ಅಳತೆಯದು ಇರಬೇಕು ಉಷ್ಣತೆಯು ಮೀತಿಮೀರಿದರೆ ಅವುಗಳ ಮನೆಯು ಕರಗಿಹೋಗಬಹುದೆಂದು ಗಾಳೀ ಬೀಸುವವರು ತತ್ಪರರಾಗಿ ತಮ್ಮ ರೆಕ್ಕೆಗಳನ್ನು ಅಲ್ಲಾಡಿಸುತ್ತ ಸರಿಯಾದ ಉಷ್ಣತಾಮಾನವನ್ನು ಕಾಯುವರು.

ಒಟ್ಟಿಗೆ, ಮಾನವಕುಟುಂಬದ ಶಿಲ್ಪಶಾಸ್ತ್ರಕ್ಕೆ ಹೋಲಿಸಿ ನೋಡಿದರೆ ಅವುಗಳ ನಗರ ರಚನೆಯಲ್ಲಿ ಯಾವಬಗೆಯಿಂದಲೂ ಕುಂದುಕೊರತೆಗಳು ಕಾಣುವದಿಲ್ಲ. ಮಾನವ ಶಿಲ್ಪಶಾಸ್ತ್ರವು ಬುದ್ಧಿಪರಿಣತಿಯ ಶಿಶುವು. ಆದರೆ ಜೇನ್ನೊಳಗಣ ಶಿಲ್ಪವು ಸಹಜ ಪ್ರವೃತ್ತಿಯ ಶಿಶುವು. ಆದರೆ ಸಹಜ ಪ್ರವೃತ್ತಿಯಿಂದುಂಟಾದ ಕೌಶಲ್ಯವು ಬುದ್ಧಿಪರಿಣತಿಯ ಕೌಶಲ್ಯಕ್ಕಿಂತ ಮಿಗಿಲಾದದ್ದಿರುವದು ಆಶ್ಚರ್ಯದ ಸಂಗತಿಯು !

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಔದ್ಯೋಗಿಕ ಶಿಕ್ಷಣದ ಏರ್ಪಾಡುಮಾಡುವ ಬಗ್ಗೆ ನಿಯಮಿಸಿದ ಕಮಿಟಿಯ ವರದಿ

ಮುಂಬಯಿ ಸರಕಾರದವರು ಜಾನೇವಾರಿ ೧೯೩೮ ತಿಂಗಳಲ್ಲಿ ರಾ. ಬ ಕೆ. ಜಿ. ಜೋಶಿಯವರ ಅಧ್ಯಕ್ಷತೆಯ ಕೆಳಗೆ ನಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಔದ್ಯೋಗಿಕ ಶಿಕ್ಷಣವನ್ನು ಕೊಡುವದರ ವಿಷಯವಾಗಿ ಒಂದ

ಕಮಿಟಿಯನ್ನು ನೇಮಿಸಿದ್ದರು. ಈ ಕಮಿಟಿಯವರು ಮುಖ್ಯವಾಗಿ ಬಂಬಸ್ತಾನ ಸರಕಾರದವರು ನೇಮಿಸಿದ ವುಡ್ ಮತ್ತ ಅ್ಯಬಟ್‌ರವರ ರಿಪೋರ್ಟು ಮತ್ತು ವರ್ಧಾಶಿಕ್ಷಣಯೋಜನೆ ಇವೆರಡೂ ವರದಿಗಳನ್ನು ಬಲು ಕೂಲಂಕಷವಾಗಿ ವಿವೇಚನೆಮಾಡುವದಿತ್ತು. ಮತ್ತು ಹಾಗೆ ಮಾಡಿ ತಮ್ಮ ವರದಿಯನ್ನು ಒಪ್ಪಿಸಿದುವರು.

ಅವರು ತಮ್ಮ ವರದಿಯಲ್ಲಿ ಅಂದಿರುವದೇನಂದರೆ— 'ನಮ್ಮ ಇಲಾಖೆಯಲ್ಲಿ ಶಿಕ್ಷಕಂತ ಹೆಚ್ಚು ಜನರು ಒಕ್ಕಲುತನವನ್ನೇ ಸಾಗಿಸುವವರಿರುವರು. ನಮ್ಮ ಪ್ರಾಥಮಿಕ ಶಿಕ್ಷಣವು ಮುಖ್ಯವಾಗಿ ನಮ್ಮ ಹಳ್ಳಿಗಳಲ್ಲಿಯ ಮಕ್ಕಳಿಗಾಗಿಯೇ ಇರುವದರಿಂದ ವಿದ್ಯಾರ್ಥಿಗಳು ಹೊಂದಿದ ಪುಸ್ತಕ ಜ್ಞಾನವು ಹೆಚ್ಚು ಮಹತ್ವದ್ದೆಂದು ನಮ್ಮ ಒಕ್ಕಲಿಗರಿಗೆ ಎನಿಸುವದಿಲ್ಲ' ತಮ್ಮ ವರದಿಯನ್ನು ಮುಂದುವರಿಸುವಾಗ ಅವರು ಅಭಿಪ್ರಾಯಪಡುವದೇನಂದರೆ — 'ನಮ್ಮ ಶಿಕ್ಷಣದ ಗುರಿ ಉದ್ದೇಶಗಳ ದೃಷ್ಟಿಕೋನವೇ ಬದಲಾಗಬೇಕು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಣವು ಪ್ರಾಯೋಗಿಕವಿರಬೇಕು. ಹೀಗಾಗುವದರಿಂದ ನಮ್ಮ ಬಾಲಕರಿಗೆ ಜನರ ಸಾಂಪ್ರದಾಯ ಅವರ ಕೊರತೆ ಮತ್ತು ಜೀವನಕ್ರಮ ಮತ್ತು ಜನರ ವ್ಯವಹಾರ ಇವೆಲ್ಲವುಗಳ ನಿಕಟಸಂಬಂಧ ಉಂಟಾಗುವದು.

ಕಮಿಟಿಯವರು ಮಾಡಿದ ಶಿಫಾರಸುಗಳು

೧. ವ್ಯವಸಾಯವಾಗಿ ಪರಿಣಮಿಸುವ (leading on to productive work) ಉದ್ದೇಶಪೂರ್ವಕವಾದ ನಿರ್ಮಾಪಕ ಚಟುವಟಿಕೆಯ ಮುಖಾಂತರವಾಗಿಯೇ ಸಾಗಿಸುವ ಬಾಲಕರ ಶಿಕ್ಷಣ ಕ್ರಮವು ಭದ್ರವಾದದ್ದು. ಈಗಿನ ಶಿಕ್ಷಣಪದ್ಧತಿಯಲ್ಲಿ ಕಾಣಬರುವ ದೋಷಗಳನ್ನು ಪರಿಹಾರಮಾಡಲಿಕ್ಕೆ ಇದೇ ತಕ್ಕ ಉಪಾಯವಿರುತ್ತದೆ.

೭ ವರ್ಷದ ಪ್ರಾಥಮಿಕಶಿಕ್ಷಣ ಯೋಜನೆ

೨. ತೀರ ಕನಿಷ್ಠವೆಂದರೆ ಪ್ರತಿಯೊಬ್ಬ ನಾಗರಿಕನಿಗೆ ತಡೆಯಿಲ್ಲದೆ ೭ ವರ್ಷದ ಶಿಕ್ಷಣವು ಬೇಕು. ಈ ಯೋಜನೆಯನ್ನು ಮೂಲ ಪ್ರಾಥಮಿಕ ಅಥವಾ ತಳಹದಿಯ (Basic education) ಶಿಕ್ಷಣ ಎಂದು ಕರೆಯಬೇಕು. ಅದರಲ್ಲಿ ೧-೪ ವರ್ಷಗಳ ವರೆಗಿನದನ್ನು ಕೆಳಗಿನ ತರಗತಿಯ ಪ್ರಾಥಮಿಕ ಶಿಕ್ಷಣವೆಂದೂ ೫-೭ ರ ವರೆಗಿನದನ್ನು ಮೇಲ್ತರಗತಿಯ ಪ್ರಾಥಮಿಕ ಶಿಕ್ಷಣವೆಂದೂ ಹೇಳಬೇಕು.

೩. ೧-೭ ಇಯತ್ತೆಗಳನ್ನು ಕಲ್ಪಿಸಬೇಕು.

[ಮುಂದೆ ಸಾಗುವದು]

ಪ್ರಕಟನೆ

ಮುಂಬಯಿ ಇಲಾಖೆಯೊಳಗಿನ ಉರ್ದು ಪ್ರಾಥಮಿಕ ಶಾಲೆಗಳ ಉಪಯೋಗಕ್ಕಾಗಿ ಉರ್ದು ಬುಕ್ ಕಮೀಟಿ ಮುಂಬಯಿ ಇವರು ತಾ. ೨೬-೨-೧೯೩೮ನೇ ದಿನ ಕೂಡಿದ ಬುಕ್ ಕಮೀಟಿಯಲ್ಲಿ ಮಂಜೂರಮಾಡಿದ ಪುಸ್ತಕಗಳ ಯಾದಿಯು—

T=ಟೆಕ್ಟಸ್, L=ಲಾಯಬ್ರರಿ, P=ಪ್ರಾಯಿಝು, ಶಿ=ಶಿಕ್ಷಕರು, ವಿ=ವಿದ್ಯಾರ್ಥಿಗಳು, ಪ್ರಾ. ಶಾ.=ಪ್ರಾಥಮಿಕ ಶಾಲೆಗಳು.

ಅ. ನಂ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂಜೂರ.
೧–೨	ಹುರೂಫೆ ಶನಸಿ (ಶಮಸೀ) ಭಾಗ ೧ ಮತ್ತ ಭಾಗ ೨ ೧೯೩೬ರ ಆವೃತ್ತಿ	ಮಿ. ಶೇಖಮಹಮ್ಮದ ಅಬ್ದುಲ್‌ಗಫಾರ ಹೆ. ಮಾ. ಉರ್ದು ಸ್ಕೂಲ ಸಾಂಗಲಿ ಸ್ಟೇಟ	ಬಾಲೋದ್ಯಾನ ಪ್ರೆಸ್ ಪೂನಾ	೦–೫–೦ ೦–೫–೦	ಪ್ರಾ. ಶಾ. ಗಳ T ಬುಕ್ಕು
೩	ಆಲ್ಫಾ ಬೇಟಿಕಲ್ ಚಾರ್ಟ (ವ್ಹರ್ನಾಕ್ಯುಲರ ಉರ್ದು)	ಸದರ	ಸದರ	೮–೪–೦	ಸದರ
೪	ಗಾಡರಲೀಜ ಜಾಗ್ರಫಿಯಾ ಇನ್ ಉರ್ದು ಭಾಗ ೩ (ದುನಿಯಾಕಾ ಮುಕ್ ಸೂಸ್ ಖಿತ್ತೆ)	—	ಮ್ಯಾಕ್ಮಿಲನ್ ಕಂಪನಿ ಲಿ। ಹಾರ್ನಬಿರೋಡ ಬಾಂಬೆ	೧–೪–೦	ಪ್ರಾ. ಶಾ. ಗಳ ಶಿ. ರ L
೫–೮	ಉರ್ದು ಜಾಗ್ರಫಿಯಾ ಬುಕ್ ಭಾಗ ೧–೨–೩ ಹಾಗು ೪ ಬಾಯ್ ಪ್ರಿನ್ಸಿಪಾಲ Mr. ಕುರೇಸಿ	ಮಿ. ಕ್ಯುರೇಸಿ ಎಮ್. ಎ. ಬಿ. ಟಿ. ಲೆಕ್ಚರರ್ ಇನ್ ಜಾಗ್ರಫಿಯಾ ಮಾಲೇರ ಕೊಟ್ಯಾ ಕಾಲೇಜ	ಸದರ	ಭಾಗ ೧– ೪–೦ ೧ ಪ್ರಾ. ಶಾ. ಗಳ ವಿ. ಗಳ ೧– ೪–೦ ೨ ಹಾಗು ಶಿ. ರ L ಬುಕ್ಕಾಗಿ ೨–೧೪–೦ ೩ ೧– ೦–೦ ೪	

	ಜಾಗ್ರಫಿಯಾ ಆಫ್ ಅಪ ಮುನಸಸ ಮಹ್ಮದ ಅಬ್ದುಲ್ಲಾ ಮ್ಮದನಗರ ಡಿ। (ಉರ್ದು)	ರಜಾಖ ಖಾಜಿ	ಅಖ್ತಾರ ಬುಕ್ ಡಿಪೋ ಬಾಂಬೆ ೩	೦– ೩–೦	ಪ್ರಾ. ಶಾ. ಗಳ ಶಿಕ್ಷಕರ L ಬುಕ್ಕು
೧೦	ಖಾತೆಮುನ್ನಬಿ ಯ್ಯೀನ್ ಆವೃತ್ತಿ ೧೯೩೬	ವಿ. ಇಬ್ರಾಹಿವ್ ಇಮಾದಿ ಮಹಮ್ಮಡನ್ ಹಾಯ ಸ್ಕೂಲ ಬಾಂಬೆ	ಆಜ್ಮಲ್ ಪ್ರೆಸ್ ಬಾಂಬೆ	೦–೧೦–೦	T ಬುಕ್ಕು ಇಸ್ಲಾಮಿಕ್ ಮುಕ್ತಾಬ್ಸ ಹಾಗು ವಿ. ಗಳ ಶಿ. ರ L ಬುಕ್ಕು
೧೧	ಜಾಗ್ರಫಿಯಾ ಆಫ್ ಸಿಂಧ (ಳನೆಯ ಇ. ಗಾಗಿ ೧೯೩೭)	ಬಸೀರ ಅಹ್ಮದಖಾನ	ಬಸೀರ ಅಹ್ಮದಖಾನ ಆ್ಯಂಡ ಸನ್ಸ ಓಲ್ಡ ಮಾರ್ಕೆಟ ಕರಾಚಿ	೦– ೮–೦	ಪ್ರಾ. ಶಾ. ಗಳ T ಬುಕ್ಕು
೧೨–೧೩	ಖಲೀಲ ಪ್ರಾಯ್ಮರ ಭಾಗ ೧ ಮತ್ತು ೨	ಮೌಲಾನಾ ಖಲೀಲ ಅಹ್ಮದಖಾನ	ಯುನಿವ್ಹರ್ಸಲ್ ಪಬ್ಲಿಸಿಂಗ ಹೌಸ ಅಲಹಾಬಾದ	೦– ೧–೬ ಪ್ರತಿಒಂದಕ್ಕೆ	ಪ್ರಾ. ಶಾ. ಗಳ T ಬುಕ್ಕು
೧೪–೧೬	ಸಿಲ್‌ಸಿಲಯೆ ನಿಸಾಬಿ ಉರ್ದು 'ಉರ್ದು ಅದಾಬ' ಭಾಗ ೧, ೨, ೩, ೪	ಖ್ವಾಜಾ ಗುಲಾಮ ಸಯೀದೈನ ಪ್ರಿನ್ಸಿಪಾಲ ಟ್ರೇ. ಕಾ. ಅಲೀಗಡ	ನಂದಕಿಶೋರ ಆ್ಯಂಡ ಬ್ರದರ್ಸ ಬನಾರಸ	೦–೧೦–೦ ೦–೧೦–೦ ೦–೧೨–೦ ೦–೧೨–೦	ಭಾಗ ೧, ೨ ಇವು ಪ್ರಾ. ಶಾ. ಗಳ ೫, ೬ ಇ. ಗಳಿಗೆ ಹಾಗು A. V. Std. I ಮತ್ತು II ಇ. ಗಳಿಗೆ T. ಭಾಗ ೩ ಮತ್ತು ೪ ಇವು ಆಂಗ್ಲೋ ವ್ಹರ್ನಾಕ್ಯುಲರ ಶಾಲೆಗಳಿಗೆ ಮಾತ್ರ
೧೭	ದೀಸಿಯಾತಕೀ ತಿಸರೀ ಕಿತಾಬ ೧೯೩೭ ರ ಆವೃತ್ತಿ	ಫಜಲುಲ್ಲಾಖಾನ ಶಹಾಜಹಾನಪುರಿ	ಇಲ್ಮಿಯಾ ಬುಕ್ ಡಿಪೋ ಮಹ್ಮದಲಿರೋಡ ಮುಂಬಯಿ	೦–೩–೦	ಇಸ್ಲಾಮಿಕ್ ಸ್ಕೂಲುಗಳ T ಬುಕ್ಕಾಗಿ ಹಾಗು ಪ್ರಾ. ಶಾ. ಗಳ ಶಿ. ರ L ಬುಕ್ಕು

ಎನ್. ಜಿ. ಗಾಡಗೀಳ,

ಸೆಕ್ರೆಟರಿ ಉರ್ದುಸ್ಕೂಲು ಬುಕ್ ಕಮೀಟ ಮುಂಬಯಿ.

ಹಿಂದುಸ್ತಾನದ ಸ್ಕೌಟ ಅಸೋಸಿಯೇಸಿಯೇಶನ್
ಮುಂಬಯಿ ಇಲಾಖೆ

" ಸಿರಿಗನ್ನಡಂಗೆಲ್ಗೆ "

ಸ್ಕೌಟ ಆರ್ಗನಾಯ್ಜರರ ಆಫೀಸ
ಧಾರವಾಡ.
೨೬ನೇ ಜುಲೈ ೧೯೩೮

ಸ್ಕೌಟ ಬಂಧುಗಳೇ,

ಕಳೆದ ಕೆಲವು ತಿಂಗಳುಗಳಿಂದ ನಮ್ಮ ಸ್ಕೌಟ ಚಟುವಟಿಕೆಯನ್ನು ರಾಷ್ಟ್ರೀಕರಣ ಮಾಡುವ ಆವಶ್ಯಕತೆ ತೋರಿಬಂದು ಅದರ ವಿಷಯವಾಗಿ ವಾದವಿವಾದಗಳು ಚರ್ಚೆಗಳೂ ನಡೆಯುತ್ತಿದ್ದುದು ತಮ್ಮೆಲ್ಲರಿಗೆ ಗೊತ್ತಿದ್ದ ಸಂಗತಿ. ಈ ವಾದವಿವಾದವು ಕೊನೆಗಂಡು ಚಟುವಟಿಕೆಗೆ ಒಂದು ಚನ್ನಾದ ಸ್ವರೂಪವು ಬರುವವರೆಗೆ ನಮ್ಮ ಕೆಲಸಗಾರರಾದರೂ ಅಸಮಾಧಾನವನ್ನು ತಾಳಿದ್ದರು. ಆದರೆ ಈಗ ಮಾತ್ರ ಮುಂಬಯಿ ಇಲಾಖಾಸ್ಕೌಟ ಕೌನ್ಸಿಲ್ಲಿನವರು ಎಲ್ಲ ವಿಧದಿಂದಲೂ ವಿಚಾರಮಾಡಿ ಒಂದು ಸಮಾಧಾನಕರವಾದ ನಿರ್ಣಯಕ್ಕೆ ಬಂದಿದ್ದಾರೆ. ಇದನ್ನು ತಿಳಿದುಕೊಂಡು ಸ್ಕೌಟ ಕೆಲಸಗಾರರೆಲ್ಲರೂ ಇಷ್ಟುದಿವಸಗಳವರೆಗೆ ಉದಾಸೀನ ಯಿಂದ ಕಳೆದ ದಿನಗಳನ್ನು ಇಮ್ಮಡಿ ಉತ್ಸಾಹದಿಂದ ಕೆಲಸಮಾಡಿ ಬಾಲಕ ಶೀಲಸಂವರ್ಧನಾರೂಪ ರಾಷ್ಟ್ರಸೇವೆಯನ್ನು ತಮ್ಮ ಕೈಲಾದ ಮಟ್ಟಿಗೆ ಸಲ್ಲಿಸಲು ಮುಂದೆ ಬರಬೇಕೆಂದು ಆಗ್ರಹಪೂರ್ವಕವಾಗಿ ಬಿನ್ನಯಿಸುವದೇ ಪತ್ರಿಕೆಯ ಮುಖ್ಯ ಉದ್ದೇಶವಾಗಿದೆ.

೧೯೩೭ನೇ ಇಸ್ವಿಯ ಜುಲೈ ತಿಂಗಳ ೨೭ನೇ ತಾರೀಖಿನಿಂದ ಕೆಳಗೆ ಕಾಣಿಸಿ ಬದಲಾವಣೆಗಳು ನಮ್ಮ ಸ್ಕೌಟ ಸಂಸ್ಥೆಯಲ್ಲಿ ಉಂಟಾಗಿರುತ್ತವೆ:—

೧. ಮುಂಬಯಿ ಇಲಾಖೆಯ ಸ್ಕೌಟ ಸಂಸ್ಥೆಯು **ಲಾರ್ಡ ಬೇಡನ ಪಾವೆಲ್‌ರವರ ಸಾಮ್ರಾಜ್ಯಸಂಸ್ಥೆಯಿಂದಲೂ,** ಹಿಂದುಸ್ಥಾನದಲ್ಲಿ ಅದ ಶಾಖೆಯಾದ " **ಬಾಯ್ ಸ್ಕೌಟ್ ಅಸೋಶಿಯೇಶನ್ ಇಂಡಿಯಾ,** ದಿಲ್ಲಿ

ಈ ಸಂಸ್ಥೆಯಿಂದಲೂ ತನ್ನ ಸಂಬಂಧವನ್ನು ಕಡಿದುಕೊಂಡು '**ಹಿಂದುಸ್ತಾನ ಸ್ಕೌಟ ಅಸೋಸಿಯೇಶನ್, ಮುಂಬಯಿ ಇಲಾಖಾ**' ಈ ಹೆಸರಿನಿಂದ ನಡೆಯುತ್ತದೆ. ಮುಂದೆ ಸೇವಾಸಮಿತಿ, ಸ್ಕೌಟ ಅಸೋಸಿಯೇಶನ್ ಮುಂತಾದ ರಾಷ್ಟ್ರೀಯ ಸ್ಕೌಟ ಸಂಸ್ಥೆಗಳೆಲ್ಲವೂ ಒಟ್ಟುಗೂಡಿ ನಿರ್ಮಾಣಮಾಡಲಿರುವ '**ಹಿಂದುಸ್ತಾನ ಸ್ಕೌಟ ಅಸೋಸಿಯೇಶನ್**' ಈ ಸಂಸ್ಥೆಯಲ್ಲಿ ಸಮಾವೇಶ ವಾಗತಕ್ಕದ್ದಿರುತ್ತದೆ.

೨. ಸ್ಕೌಟ ಪ್ರತಿಜ್ಞೆಯು ಕೆಳಗಿನಂತಿರತಕ್ಕದ್ದು :—

ನಾನು ನನ್ನ ಮನಃಸಾಕ್ಷಿಯಾಗಿ.

ದೇವರಿಗೂ, ಸರಕಾರಕ್ಕೂ (State-ಶಾಸನ ಸಂಸ್ಥೆ) ದೇಶಕ್ಕೂ ಸಲ್ಲತಕ್ಕ ಕರ್ತವ್ಯವನ್ನು ಮಾಡಲಿಕ್ಕೂ ಎರಡನೇಯವರಿಗೆ ಯಾವಾಗಲೂ ಸಹಾಯ ಮಾಡಲಿಕ್ಕೂ, ಸ್ಕೌಟ ನಿಯಮಗಳನ್ನು ಪಾಲಿಸಲಿಕ್ಕೂ ಕೈಲಾದಮಟ್ಟಿಗೆ ಪ್ರಯತ್ನಮಾಡುತ್ತೇನೆ.

(**ಟೀಪು**:— ಸ್ಕೌಟ ವಚನದ ಮೊದಲನೇ ಭಾಗವು ಕೇವಲ "ದೇವರು ಮತ್ತು ದೇಶ" ಇರತಕ್ಕದ್ದೆಂಬ ಕೆಲವರ ಮತವನ್ನು ಕೂಡ ಮುಂಬಯಿ ಇಲಾಖಾ ಕೌನ್ಸಿಲ್ಲಿನವರು ವಿಚಾರಮಾಡಿದರು. ಆದರೆ ಅಡಷ್ಟು ಹೆಚ್ಚು ಸಂಸ್ಥೆಗಳು ನಮ್ಮನ್ನು ಹಿಂಬಾಲಿಸಬೇಕೆಂತಲೂ, ನಮ್ಮ ಜಟುವಟಿಕೆಗೆ ಅಖಿಲ ಭಾರತ ಸ್ವರೂಪವು ಬರಬೇಕೆಂತಲೂ ಮತ್ತು ಸರಕಾರ ಅಥವಾ ಶಾಸನಸಂಸ್ಥೆಯು ಕೇವಲ ಪ್ರಜಾಪ್ರತಿನಿಧಿಯಾಗಿರುವದರಿಂದಲೂ ಈ ಶಬ್ದವನ್ನು ಕೂಡ ಪ್ರತಿಜ್ಞೆಯಲ್ಲಿ ಸೇರಿಸಿದೆ.

೩. ಸ್ಕೌಟ ನಿಯಮಗಳಲ್ಲಿ ಕೆಳಗಿನ ಬದಲಾವಣೆಗಳನ್ನು ಮಾಡಲಾಗಿದೆ:—

ನಿಯಮ ೨. ಸ್ಕೌಟನು ನಿಷ್ಠೆಯುಳ್ಳವನು.
,, ೭. ಸ್ಕೌಟನು ಶಿಸ್ತಿನಿಂದಿರುವವನು.
,, ೯. ಸ್ಕೌಟನು ಶೂರನು.

ಉಳಿದ ನಿಯಮಗಳಲ್ಲಿ ಏನೂ ಬದಲಾವಣೆಯಾಗಿಲ್ಲ. ಒಟ್ಟು ೧೦ ನಿಯಮ ಗಳಿರುತ್ತವೆ.

೪. ಸ್ಕೌಟನ ಧ್ಯೇಯ "ಸಿದ್ಧನಾಗಿರು." ದೇಹದಿಂದ ಸದೃಢನಾಗಿಯೂ, ಮನಸ್ಸಿನಿಂದ ಜಾಗರೂಕನಾಗಿಯೂ, ನೀತಿಯಿಂದ ಪರಿಶುದ್ಧನಾಗಿಯೂ ಇದ್ದು ಎರಡನೇಯವರಿಗೆ ಯಾವಾಗಲೂ ಸಹಾಯಮಾಡಲು ಸಿದ್ಧನಾಗಿರುವದೇ ಅವನ ಧ್ಯೇಯ.

೫. ಸ್ಕೌಟ ಪದಕ:— ಈಗಿದ್ದ ಪದಕದಲ್ಲಿ ಹತ್ತು ಪಟಲಗಳುಳ್ಳ ಕವಚವನ್ನು ಜೋಡಿಸಿ ಹೊಸಪದಕವನ್ನು ಸಿದ್ಧಪಡಿಸುವವರಿದ್ದಾರೆ.

೬. ಸ್ಕೌಟ ಧ್ವಜ:— ೬ ಫೂಟು ಉದ್ದ ೪ ಫೂಟು ಅಗಲವಾದ ಕೆಂಪು ನೀಲಿ ಬಣ್ಣದ ಅರಿವೆಯ ಮಧ್ಯದಲ್ಲಿ ಹಳದಿ ಬಣ್ಣದ ಸ್ಕೌಟ ಪದಕದ ಚಿಹ್ನವಿರಬೇಕು.

೭. ಕಬ್ ವಚನ:— (ಅ) 'ಕಬ್ ಪ್ಯಾಕ್'ದ ನಿಯಮಗಳನ್ನು ಪಾಲಿಸಲಿಕ್ಕೂ,
(ಬ) ಪ್ರತಿದಿವಸ ಒಂದಾದರೂ ಸತ್ಕೃತ್ಯವನ್ನು ಮಾಡಲಿಕ್ಕೂ ನನ್ನ ಕೈಲಾದಮಟ್ಟಿಗೆ ಪ್ರಯತ್ನ ಮಾಡುತ್ತೇನೆ.

೮. ಕಬ್ ನಿಯಮ:— (೧) 'ಕಬ್'ನು ಆಜ್ಞಾಧಾರಕನು.
(೨) 'ಕಬ್'ನು ಪರಿಶುದ್ಧನು.

ಹೀಗೆ ಮೊದಲಿನ ಸ್ಕೌಟ ಚಟುವಟಿಕೆಯಲ್ಲಿ ಹಿಂದುಸ್ಥಾನದ ವಾತಾವರಣಕ್ಕೆ ಅನುಕೂಲವಾಗುವಂತೆ ಹೆಚ್ಚುಕಡಿಮೆಗಳನ್ನು ಮಾಡುವದು ನಾವು ಆರಿಸಿಕೊಟ್ಟ ಪ್ರತಿನಿಧಿಗಳ ಕೈಯಲ್ಲಿಯೇ ಇರುತ್ತದೆಂಬ ಸಂಗತಿಯನ್ನು ನಾವು ಲಕ್ಷ್ಯದಲ್ಲಿಡಬೇಕು.

ಇದೇ ಜುಲೈ ೨೭ನೇ ತಾರೀಖಿನಿಂದ "**ಹಿಂದುಸ್ಥಾನ ಸ್ಕೌಟ ಸಂಸ್ಥೆ**"ಗೆ ಸೇರಿದ ಸಭಾಸದರ ಮೇಲೆ ಅತ್ಯಂತ ಮಹತ್ವದ ಹೊಣೆಗಾರಿಕೆ ಇದೆ. ಇದನ್ನರಿತು ಈ ಸಂಸ್ಥೆಗೆ ಸೇರಿದ ಎಲ್ಲ ಸ್ಕೌಟ ಮಾಸ್ತರರೂ, ಸ್ಕೌಟುಗಳೂ, 'ಕಬ್'ಗಳೂ, ರೋವ್ಹರರೂ, ಪರಸ್ಪರ ಸಹಕಾರದಿಂದ ಕಾರ್ಯವನ್ನು ನಿರ್ವಹಿಸಿದರೆ ಸ್ವಲ್ಪೇ ದಿವಸಗಳಲ್ಲಿ **ಈ ಹಿಂದುಸ್ಥಾನ ಸ್ಕೌಟ ಸಂಸ್ಥೆಯ** ಹೆಸರು ಎಲ್ಲೆಲ್ಲಿಯೂ ಕೇಳ ಬಂದು ಅಂತರರಾಷ್ಟ್ರೀಯ ಸ್ಕೌಟ ಸಂಸ್ಥೆಯವರು ತಮ್ಮನ್ನು ಕೂಡಿಕೊಳ್ಳಲಿಕ್ಕೆ ನಮ್ಮ ಸಂಸ್ಥೆಗೆ ವಿನಂತಿಯನ್ನು ಮಾಡಿಕೊಳ್ಳಬಹುದೆಂದು ಆಶಿಸಲಾಗಿದೆ. ಆದರೆ ಈ ಗುರಿಯನ್ನು ಸಾಧಿಸುವದು ತಮ್ಮೆಲ್ಲರ ಕಾರ್ಯಕ್ಷಮತೆಯ ಮತ್ತು ಕರ್ತವ್ಯ ದಕ್ಷತೆಯ ಮೇಲೆ ಅವಲಂಬಿಸಿರುತ್ತದೆ. ಪ್ರತಿಯೊಂದು ಹಳ್ಳಿಹಳ್ಳಿಗೂ ನೂರಾರು ಜನ ಸ್ಕೌಟುಗಳು ಎರಡನೆಯ ಮತ್ತು ಮೊದಲನೆಯ ತರಗತಿ ಮುಂತಾದ ಉಚ್ಚ ತರವಾದ ಪದಕಗಳನ್ನು ಸಂಪಾದಿಸಲು ಪ್ರಯತ್ನಮಾಡಬೇಕು. ಎಲ್ಲೆಲ್ಲಿಯೂ ಸ್ಕೌಟ ಸಂಸ್ಥೆಗಳು ಸ್ಥಾಪಿಸಲ್ಪಡಬೇಕು. ಪ್ರತಿಯೊಬ್ಬ ಹುಡುಗನೂ ಒಳ್ಳೇ ತಿನ್ನಿನಿಂದಲೂ ಹುರುಪಿನಿಂದಲೂ ಕೆಲಸಮಾಡುವದು ಜನತೆಯ ನಿದರ್ಶನಕ್ಕೆ ಬರಬೇಕು. ಇವೇ ಮೊದಲಾದ ದೃಷ್ಟಿಯಿಂದ ಪ್ರತಿಯೊಬ್ಬ ಸ್ಕೌಟ ಮಾಸ್ತರನೂ ಪ್ರಯತ್ನಮಾಡಿದರೆ, ಹಾ, ಹಾ, ಅನ್ನುವದರಲ್ಲಿ ನಮ್ಮೆಲ್ಲರ ಪ್ರಗತಿಯಾಗುವದೆಂಬುದು ಖಂಡಿತವಾದ ಮಾತು.

ನಮ್ಮ ಸಂಸ್ಥೆಯು ಈಗ ಸಂಪೂರ್ಣ ರಾಷ್ಟ್ರೀಯ ಸಂಸ್ಥೆಯಾದ್ದರಿಂದ ಜನತೆಯ ಬೆಂಬಲವು ಹೆಚ್ಚು ಪ್ರಮಾಣದಿಂದ ಸಿಗುವದರಲ್ಲಿ ಸಂದೇಹವಿಲ್ಲ. ಸಂಸ್ಥೆಯಲ್ಲಿ ಆದ ಈ ಬದಲಾವಣೆಗಳನ್ನು ನಿಮ್ಮ ಊರಲ್ಲಿ ಸಭೆಗಳನ್ನು ಏರ್ಪಡಿಸಿ ಅವರಿಗೆ ಎಲ್ಲ ವಿಷಯವನ್ನು ತಿಳಿಸಿಹೇಳಿರಿ. ಶಾಲೆಯಲ್ಲಿದ್ದ ಸ್ಕೌಟ ಮಾಸ್ತರರು ನಿಮ್ಮ ಮುಖ್ಯಾಧ್ಯಾಪಕರ ಮತ್ತು ಸಹಾಧ್ಯಾಪಕರ ಸಹಾಯವನ್ನೂ ಸಹಕಾರವನ್ನೂ ಸಂಪಾದಿಸಿರಿ. ಈಗ ಮಾತ್ರ ಈ ಸ್ಕೌಟ ಕೆಲಸವನ್ನು ಕೇವಲ ಅಧಿಕಾರಿಗಳ ಹೆದರಿಕೆಗೆ ಮಾಡದೆ. ನಿಮ್ಮ ಶಾಲೆ, ಊರು, ದೇಶ, ರಾಷ್ಟ್ರ ಮೊದಲಾದವುಗಳ ಕೀರ್ತಿಧ್ವಜವನ್ನು ಮೆರೆಯಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಮಾಡಿರಿ.

ಈ ಹೊಸ ಸಂಸ್ಥೆಯ ಹೆಸರಿನಿಂದ 'ಟ್ರೂಪ್' ಮತ್ತು 'ಲೋಕಲ್ ಅಸೋಸಿಯೇಶನ್' ರಜಿಸ್ಟರ ಮಾಡಿಸುವ ಫಾರ್ಮುಗಳು ಸಿದ್ಧವಾದ ಕೂಡಲೆ ತಮ್ಮೆಡೆಗೆ ಕಳಿಸಿ ಕೊಡುತ್ತೇನೆ.

ಈಗಿದ್ದ ಸಂಸ್ಥೆ (ಬೆಡನ್ ಪಾವೆಲ್ ಸಂಸ್ಥೆ)ಯಿಂದ ತಮಗೆ ಸ್ಕೌಟಮಾಸ್ತರರ ಸನದು (Warrant) (ಸ್ಕೌಟ ಮಾಸ್ತರರ ಶಿಕ್ಷಣಪಡೆದದ್ದರ ಬಗ್ಗೆ ದೊರೆತ ಸರ್ಟಿಫಿಕೇಟುಗಳಲ್ಲ.) ಸಿಕ್ಕಿದ್ದರೆ ಮತ್ತು ತಾವು ಈ ಹೊಸ ಸಂಸ್ಥೆಗೆ ಸೇರಬೇಕೆಂಬ ಇಚ್ಛೆ ಇದ್ದರೆ ಅದನ್ನು ತಿರುಗಿ ನನ್ನ ಕಡೆಗೆ ಕಳಿಸಬೇಕು. ಅವುಗಳ ಬದಲಾಗಿ ಹೊಸ ಸಂಸ್ಥೆಯ ಸನದುಗಳು ಸಿದ್ಧವಾದ ಕೂಡಲೆ ದೊರೆಯುತ್ತವೆ. ಇದರಂತೆಯೇ ಇದೇ ತಿಂಗಳ ೨೭ನೇ ತಾರೀಖಿನಿಂದ ಹೊಸ ಸಂಸ್ಥೆಗೆ ಸೇರಲಿಚ್ಛಿಸುವ ಸ್ಕೌಟ ಮಾಸ್ತರರಿಗೂ ಸ್ಕೌಟುಗಳಿಗೂ ಮೊದಲಿನ ಪದಕಗಳನ್ನು ಧರಿಸಲು ಬರುವದಿಲ್ಲ. ಹೊಸ ಸನದುಗಳೂ ಹೊಸ ಪದಕಗಳೂ ನಿಮ್ಮ 'ಟ್ರೂಪ್' **ಹಿಂದುಸ್ಥಾನ ಸ್ಕೌಟ** ಸಂಸ್ಥೆಯಲ್ಲಿ ರಜಿಸ್ಟರ ಆದ ಕೂಡಲೆ ದೊರೆಯುತ್ತವೆ. ಜುಲೈ ೭೭ನೇ ತಾರೀಖಿಗಾಗಲಿ ಅಥವಾ ಅದೇ ಸುಮಾರಿಗಾಗಲಿ ಹೊಸ ಸಂಸ್ಥೆಗೆ ಸೇರಲಿರುವ ಎಲ್ಲ ಸ್ಕೌಟುಗಳು ಒಂದೆಡೆಗೆ ಸೇರಿ ಹೊಸ ಪ್ರತಿಜ್ಞೆಯನ್ನು ತೆಗೆದುಕೊಳ್ಳಬೇಕು.

ಲ್ಯಾಕ್ಟಿಂಗ ಪ್ರಾವಿನ್ಸಿಯಲ್ ಕಮಿಶನರರಾಗಿದ್ದ ಶ್ರೀ. ಎನ್. ಎಸ್. ಜೋಕೂರ ಅವರ ಸ್ಥಳದಲ್ಲಿ ಜುಲೈ ೭೭ನೇ ತಾರೀಖಿನಿಂದ ಪ್ರಾವಿನ್ಸಿಯಲ್ ಕಮಿಶನರರಾಗಿರುವ ಮುಂಬಯಿ ಎಲ್ಫಿನ್‌ಸ್ಟನ್ ಕಾಲೇಜಿನ ಪ್ರೊಫೇಸರರಾದ **ಶ್ರೀ. ಪ್ಹಿ. ಜಿ. ರಾವ್.** ಇವರ ನೇತೃತ್ವದಲ್ಲಿ ಇಲಾಖಾ ಸ್ಕೌಟ ಕೌನ್ಸಿಲ್ಲಿನ ಕಾರ್ಯಾರಂಭವು ಮಾಡಲ್ಪಡುತ್ತದೆ.

ತಮ್ಮೆಲ್ಲರ ಆಡಿಯಾಳು

ಕೆ. ಜಿ. ಹಲಸಿಗಿ,

ಸ್ಕೌ. ಲೀ. ದ. ಭಾಗ, ಧಾರವಾಡ.

ಪ್ರ ಕ ಟ ನೆ

ಗಂಡುಮಕ್ಕಳ ಪ್ರಾಥಮಿಕ ಶಾಲಾ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆಯು (Primary School Leaving Certificate Examination) ಭಾಷಾವಿಷಯದಲ್ಲಿ ಪಾಸಾಗುವದಕ್ಕೆ ಈವರೆಗೆ ಆ ವಿಷಯದ ಒಟ್ಟು ಗುಣಗಳಲ್ಲಿ ೧೦೦ ಕ್ಕೆ ೩೩ ರಂತೆ ಗುಣಗಳನ್ನು ಪಡೆಯಬೇಕಾಗುತ್ತಿತ್ತು. ಇನ್ನು ಮುಂದೆ ಈ ವಿಷಯದಲ್ಲಿ ಪಾಸಾಗುವದಕ್ಕೆ ೧೦೦ ಕ್ಕೆ ೪೦ ರಂತೆ ಗುಣಗಳನ್ನು ಪಡೆಯಲಿಕ್ಕೇಬೇಕು. ಈ ಬದಲಾವಣೆಯು ೧೯೩೯ ನೆಯ ಇಸವಿಯಲ್ಲಾಗುವ ಪರೀಕ್ಷೆಯಿಂದ ಅಮಲಿನಲ್ಲಿ ಬರುವದು.

ಮೆಹೆರ್ಬಾನ್ ದಕ್ಷಿಣಭಾಗದ ಎ. ಇ. ರವರ ಆಜ್ಞೆಯ ಮೇರೆಗೆ

ಡಿ. ವ್ಹಿ. ಕಾಳೆ,
ಹೆಡ್ ಮಾಸ್ತರ

ಶಾಲಾಗೃಹಗಳಿಗಾಗಿ ಧನ

ಸ್ಥಾನಿಕ ಸಂಸ್ಥೆಗಳು ಶಾಲಾಗೃಹಗಳನ್ನು ಕಟ್ಟಿಸುವದಕ್ಕೋಸುಗ

ಮುಂಬಯಿ ಸರಕಾರದ ಶಾಲಾಖಾತೆಯು ಗೊತ್ತುವಳಿ

ನಂ. ಎಸ್. ೫೦
ತಾ. ೨೩-೬-೧೯೩೮

ಸದ್ಯಕ್ಕೆ ಸ್ಥಾನಿಕ ಸಂಸ್ಥೆಗಳು ನಡೆಸುವ ಶಾಲೆಗಳಿಗಾಗಿ ಎಷ್ಟೋ ಬಾಡಿಗೆಯ ಮನೆಗಳೂ ಬಾಡಿಗೆಯಿಲ್ಲದ ಮನೆಗಳೂ ಇರುವವು. ಅವು ಸಾಮಾನ್ಯವಾಗಿ ಶಾಲಾಕಾರ್ಯಗಳಿಗೆ ಅನುಚಿತವಾದವುಗಳಾಗಿವೆ. ಇದಲ್ಲದೆ ಹಣದ ಕೊರತೆಯ ಮೂಲಕ ಈ ಸ್ಥಾನಿಕ ಸಂಸ್ಥೆಗಳ ಆಡಳಿತದಲ್ಲಿ ಹೊಸದಾಗಿ ಶಾಲಾಗೃಹಗಳನ್ನು ಒದಗಿಸುವ ನಿಶ್ಚಿತ ಕಾರ್ಯಕ್ರಮವು ಇರುವದಿಲ್ಲ.

೭. ಈ ಸ್ಥಾನಿಕ ಸಂಸ್ಥೆಗಳು ಶಾಲಾಗೃಹಗಳನ್ನು ಕಟ್ಟಿಸಲು ಅನುಕೂಲವಾಗಬೇಕೆಂದು ಈ ವರ್ಷದ ಅಂದಾಜುಪತ್ರಿಕೆಯಲ್ಲಿ ಸರಕಾರದವರು ಶಾಲಾಗೃಹಗಳನ್ನು ಕಟ್ಟಿಸುವ ಸಹಾಯ ದ್ರವ್ಯವೆಂದು ಒಂದು ಲಕ್ಷ ರೂಪಾಯಿಗಳನ್ನು ಕಾಯಿಟ್ಟಿರುವರು. ಈ ವರ್ಷದ ಅಂದಾಜುಪತ್ರಿಕೆಯ "೩೭ ಎಜ್ಯುಕೇಶನ್" ಎಂಬ ಸದರಿನಲ್ಲಿ ಹೊಸ ಯೋಜನೆಗೆಂದು ೩೨.೯೨ ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಇಟ್ಟಿರುವರು. ಈ ಹಣವನ್ನು ಶಿಕ್ಷಣದ ಪ್ರಸಾರಕ್ಕೂ ಉತ್ತೇಜನಕ್ಕೂ ವಿನಿಯೋಗಿಸುವದಿರುವದು. ಈ ಹಣದಲ್ಲಿ ಮೇಲೆ ಕಾಣಿಸಿದ ಒಂದು ಲಕ್ಷ ರೂ. ಗಳ ಸಮಾವೇಶವಾಗಿದೆ. ಈ ಹಣದಲ್ಲಿ ಪ್ರತಿ ಜಿಲ್ಲೆಗೆ ೫ ಸಾವಿರ ರೂಪಾಯಿಗಳಂತೆ ೨೦ ಜಿಲ್ಲೆಗಳಿಗೆ ಕೂಡಿ ೧ ಲಕ್ಷ ರೂ. ಗಳನ್ನು ಸರಿಯಾಗಿ ಹಂಚಬೇಕೆಂದು ಸರಕಾರದವರು ಶಾಲಾಖಾತೆಯ ಡಾಯರೆಕ್ಟರ ಸಾಹೇಬರಿಗೆ ತಿಳಿಸಿರುತ್ತಾರೆ. ಡಾಯರೆಕ್ಟರ ಸಾಹೇಬರು ಮುಂದೆ ಹೇಳುವ ಕರಾರಿಗನುಸರಿಸಿ ಈ ಹಣವನ್ನು ೪ ಸಂಸ್ಥೆಯವರಿಗೆ ಕೊಡತಕ್ಕದ್ದು. ಆ ಕರಾರು ಏನೆಂದರೆ–ಪ್ರತಿಯೊಂದು ಜಿಲ್ಲೆಗೆ ಒಂದು ವಿಶಿಷ್ಟ ಸಮಿತಿ (ಕಮಿಟಿ) ಯನ್ನು ಸ್ಥಾಪಿಸಬೇಕು. ಆ ಸಮಿತಿಯ ವಶಕ್ಕೆ ಈ ಶಾಲಾಗೃಹ ಸಹಾಯ ದ್ರವ್ಯವನ್ನು ಕೊಡಬೇಕು. ಸರಕಾರದವರು ಕೊಡುವ ಈ ೫ ಸಾವಿರ ರೂಪಾಯಿಗಳ ಜತೆಗೆ ಜಿಲ್ಲಾ ಲೋಕಲ್‌ಬೋರ್ಡಿನವರು ತಮ್ಮ ಹಣದೊಳಗಿಂದ ೫ ಸಾವಿರ ರೂಪಾಯಿಗಳನ್ನು ಕೊಡಬೇಕು. ಜಿ. ಲೋ. ಬೋರ್ಡಿನವರು ತಾವು ಕೊಡುವ ೫ ಸಾವಿರ ರೂಪಾಯಿಗಳಲ್ಲಿ ಕೆಲವು ಭಾಗವನ್ನು ತಮ್ಮ ಹಣದಿಂದ, ಕೆಲವು ಭಾಗವನ್ನು ಜನರಿಂದ ಕೂಡಿಸಿದ ವರ್ಗಣಿ ಹಣದಿಂದ ಕೂಡಿಸಿ ಒಟ್ಟು ೫ ಸಾವಿರ ರೂಪಾಯಿಗಳನ್ನು ಕೊಡಬಹುದು. ಯಾವಬಗೆಯಿಂದಾದರೂ ಜಿ. ಲೋ. ಬೋ. ನವರು ೫ ಸಾವಿರ ರೂಪಾಯಿಗಳನ್ನು ಕೊಟ್ಟಹೊರತು ಸರಕಾರದ ೫ ಸಾವಿರ ರೂಪಾಯಿಗಳು ಅವರಿಗೆ ಸಿಕ್ಕಲಾರವು.

ಜಿಲ್ಲೆಯ ಸಮಿತಿ (ಕಮಿಟಿ) ಯಲ್ಲಿ ಕೆಳಗೆ ತೋರಿಸಿದ ಮೇರೆಗೆ ಸಭಾಸದರಿರಬೇಕು.

೧. ಪ್ರಾಂತದ ಎಜ್ಯುಕೇಶನಲ್ ಇನ್‌ಸ್ಪೆಕ್ಟರ್ ಸಾಹೇಬರು (ಅಧ್ಯಕ್ಷರು)
೨. ಜಿಲ್ಲಾಲೋಕಲ್‌ಬೋರ್ಡಿನ ಪ್ರೆಸಿಡೆಂಟರು.
೩. ಸ್ಕೂಲ್‌ಬೋರ್ಡ ಚೇರಮನ್ನರು.
೪. ಜಿಲ್ಲಾ ಎಗ್ಜಿಕ್ಯೂಟಿವ್ಹ ಇಂಜನಿಯರರು.
೫. ಜಿಲ್ಲೆಯಿಂದ ಆರಿಸಿಬಂದ ಮುಂಬಯಿ ಅಸೆಂಬ್ಲಿಯ ಸಭಾಸದರು.
೬. ಜಿಲ್ಲೆಯ ಸೀನಿಯರ್ ಗವ್ಹರ್ನಮೆಂಟ್ ಇನ್ಸ್‌ಪೆಕ್ಟರರು.

ಅವಶ್ಯವಿದ್ದರೆ ಈ ಸಮಿತಿಯವರು ಬೇರೆ ಸಭಾಸದರನ್ನು ಸೇರಿಸಿಕೊಳ್ಳ ಬಹುದು.

೩. ಸರಕಾರದಿಂದ ಮಂಜೂರಾದ ನಕಾಶದ ಮೇರೆಗೆ ಈ ಸಮಿತಿಯವರು ಅವಶ್ಯವೆಂದು ಕಂಡುಬಂದ ಗ್ರಾಮಗಳಲ್ಲಿ ಶಾಲೆಗೆ ಯೋಗ್ಯವಾದ ಸ್ಥಳವನ್ನು ಆರಿಸಿ ಅಲ್ಲಿ ಶಾಲಾಗೃಹವನ್ನು ಕಟ್ಟಿಸಬೇಕು. ಶಾಲಾಗೃಹಗಳಿಗಾಗಿ ಜನರಿಂದ ದೇಣಗಿ ಹಣವನ್ನು ಸಂಗ್ರಹಿಸುವ ಅಧಿಕಾರವು ಕೂಡ ಈ ಸಮಿತಿಯವರಿಗೆ ಇರುವದು. ಶಾಲಾಗೃಹವನ್ನು ಕಟ್ಟಿಸಿದ ಬಳಿಕ ವಾಡಿಕೆಯಂತೆ ಎಗ್ಸಿಕ್ಯೂಟಿವ್ ಇಂಜನಿಯರರಿಂದ ಕಟ್ಟಡದ ವೆಚ್ಚದ ಹಣದ ಸರ್ಟಿಫಿಕೆಟನ್ನು ಪಡೆದುಕೊಂಡು ಸಮಿತಿಯವರು ಆ ಕಟ್ಟಡವನ್ನು ಅದರ ರಿಪೇರಿಯ ಜವಾಬುದಾರಿಯೊಡನೆ ಸ್ಥಾನಿಕ ಸಂಸ್ಥೆಯವರಿಗೆ ಒಪ್ಪಿಸಬೇಕು.

೪. ಶಾಲಾಗೃಹದ ಸ್ಥಳ, ಮತ್ತು ಕಟ್ಟಡ ಇವುಗಳ ಒಟ್ಟುವೆಚ್ಚದ ೩/೪ ವನ್ನು ಉದಾರ ಗೃಹಸ್ಥರಾರಾದರೂ ಕೊಟ್ಟು ತಮಗೆ ಇಷ್ಟವಾದ ಹೆಸರನ್ನು ಇಡಬೇಕೆಂದು ಬಯಸಿದರೆ ಆ ಹೆಸರನ್ನು ಶಾಲಾಗೃಹಕ್ಕೆ ಇಡಬಹುದು.

(ಮುಂಬಯಿ ಸರಕಾರದ ಅಪ್ಪಣೆಯ ಮೇರೆಗೆ)

ಪ್ರಾಯಮುರಿ ಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆ

ಅಭ್ಯಾಸ ಪತ್ರಿಕೆಯಲ್ಲಿಯ ತಿದ್ದುಪಡಿಗಳು

ಮುಂಬಯಿ ಸರಕಾರದ ಶಾಲಾಖಾತೆಯ ಗೊತ್ತುವಳಿ ನಂ. ೨೨೮೮ / ೨೧–೬–೧೯೩೮

ಗೊತ್ತುವಳಿ— ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ಪ್ರಾಯಮುರಿ ಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆ ಮತ್ತು ಗಂಡುಮಕ್ಕಳ ಅಗ್ರಿಕಲ್ಚರಲ್ ಬಾಯಸ್ ಪ್ರಾಯಮುರಿ ಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆ ಇವುಗಳ ಅಭ್ಯಾಸಪತ್ರಿಕೆಗಳಲ್ಲಿ ಕೆಳಗೆ ಹೇಳಿದ ಮೇರೆಗೆ ತಿದ್ದುಪಡಿಗಳು ಮಂಜೂರಾಗಿವೆ.

I ಗಂಡುಮಕ್ಕಳ ಪ್ರಾಯಮರಿ ಸ್ಕೂಲ್ ಲೀವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಯ ಅಭ್ಯಾಸ ಪತ್ರಿಕೆ

(ಮುಂಬಯಿ ಸರಕಾರದ ಶಾಲಾಖಾತೆಯ $\frac{\text{ತಿತಿಲಲ}}{\text{೨೪-೫-೧೯೩೭}}$ ನೆಯ ನಂಬರಿನ ಗೊತ್ತುವಳಿಯ ಮೇರೆಗೆ ತಿದ್ದುಪಡಿಹೊಂದಿದ ಸದರೀ ಪರೀಕ್ಷೆಯ ನಿಯಮಗಳಿಗೆ ಸೇರಿಸಲ್ಪಟ್ಟ "ಬ" ಪರಿಶಿಷ್ಟವನ್ನು ನೋಡಿರಿ)

ಮೊದಲನೆಯ ಮತ್ತು ಎರಡನೆಯ ಸದರುಗಳ ಅಭ್ಯಾಸ ಕ್ರಮದ ಬದಲು ಈ ಕೆಳಗಿನ ಅಭ್ಯಾಸ ಕ್ರಮವನ್ನು ಸೇರಿಸಿಕೊಳ್ಳಬೇಕು.

ಮೊದಲನೆಯ ಸದರು — ಗುಣಗಳು ೧೦೦

(ಅ) ವಿದ್ಯಾರ್ಥಿಗಳು ಓದದೆ ಇರುವ ಗದ್ಯಪದ್ಯಭಾಗಗಳ ವಿವರಣೆ— ಆ ಭಾಗಗಳನ್ನು ತಿರುಗಿ ತಮ್ಮ ಭಾಷೆಯಲ್ಲಿ ಹೇಳುವದು, ವಿಸ್ತರಿಸಿ ಹೇಳುವುದು, ಸಂಕ್ಷೇಪಿಸಿ ಹೇಳುವದು, ಮುಂ. ಶಬ್ದಗಳ ಅರ್ಥವನ್ನು ಹೇಳುವದು (ಕ್ರಮಿಕ ೭ನೆಯ ಪುಸ್ತಕದ ಯೋಗ್ಯತೆಯಷ್ಟು) ಗುಣಗಳು ೭೫.

(ಬ) ವ್ಯಾಕರಣ (ವ್ಯಾಕರಣದ ಜ್ಞಾನವನ್ನು ಉಪಯೋಗಿಸುವದು ಮತ್ತು ಕಂಡುಹಿಡಿಯುವದು ಮತ್ತು ಸಾಮಾನ್ಯ ವ್ಯಾಕರಣ ಜ್ಞಾನ), ಶಬ್ದಗಳ ವ್ಯುತ್ಪತ್ತಿಗಳು ಮು. ಗುಣಗಳು ೨೫.

ಎರಡನೆಯ ಸದರು:—ಗುಣಗಳು ೧೦೦

(ಅ) ಕೊಟ್ಟ ವಿಷಯವನ್ನು ಕುರಿತು ವರ್ಣನಪರ ನಿಬಂಧವನ್ನು ಇಲ್ಲವೆ ರಿಪೋರ್ಟನ್ನು ಬರೆಯುವದು, ಪತ್ರಲೇಖನ, ಸಂಭಾಷಣೆ, ಇತ್ಯಾದಿ.

ಆರನೆಯ ಸದರು—

(ಬ) ಉಪಸದರಿನಲ್ಲಿ (ಸಬ್‌ಹೆಡ್ಡಿನಲ್ಲಿ) ಆರಂಭದಲ್ಲಿ ಬಂದಿರುವ "ಇಲಾಖೆಯ ಮುಖ್ಯ ಭಾಗಕ್ಕೆ" ಎಂಬ ಶಬ್ದಗಳನ್ನು ಬಿಟ್ಟು ಬಿಡಬೇಕು.

ಆರನೆಯ ಸದರಿನ ಬದಲು ಈ ಕೆಳಗೆ ಹೇಳಿರುವದನ್ನು ಸೇರಿಸಿಕೊಳ್ಳಬೇಕು.

ಆರನೆಯ ಸದರು—

(ಪ್ರಾಂತಿಕ ಭಾಷೆಯನ್ನು ಹೆಚ್ಚಿನ ಐಚ್ಛಿಕ ವಿಷಯವಾಗಿ ಆರಿಸಿಕೊಂಡು ಎಲ್ಲ ವಿಷಯಗಳನ್ನು ಉರ್ದುಭಾಷೆಯ ಮುಖಾಂತರ ಕಲಿಯುವ ಉಮೇದವಾರರಿಗೆ ಮಾತ್ರ.)

ಆರನೆಯ ಸದರು (ಐಚ್ಛಿಕ) ಗುಣಗಳು ೧೦೨.

(ಅ) ವಿದ್ಯಾರ್ಥಿಗಳು ಓದದೆ ಇರುವ ಗದ್ಯಪದ್ಯ ಭಾಗಗಳ ವಿವರಣೆ — ಆ ಭಾಗಗಳನ್ನು ತಿರುಗಿ ತಮ್ಮ ಭಾಷೆಯಲ್ಲಿ ಹೇಳುವದು, ವಿಸ್ತರಿಸಿ ಹೇಳುವದು, ಸಂಕ್ಷೇಪಿಸಿ ಹೇಳುವದು, ಮುಂ. ಶಬ್ದಗಳ ಅರ್ಥವನ್ನು ಹೇಳುವದು. ಮತ್ತು ಸುಲಭವ್ಯಾಕರಣ. (ಕ್ರಮಿಕ ೫ನೆಯ ಪುಸ್ತಕದ ಯೋಗ್ಯತೆಯಷ್ಟು) ಗುಣಗಳು ೫೦.

(ಬ) ಕೊಟ್ಟ ವಿಷಯವನ್ನು ಕುರಿತು ವರ್ಣನಪರ ನಿಬಂಧವನ್ನು ಇಲ್ಲವೆ ರಿಪೋರ್ಟನ್ನು ಬರೆಯುವದು, ಪತ್ರಬರೆಹ, ಮುಂ. ಗುಣಗಳು ೫೦.

(ಉರ್ದು ಭಾಷೆಯನ್ನು ಹೆಚ್ಚಿನ ಆವಶ್ಯಕ ವಿಷಯವಾಗಿ ಆರಿಸಿಕೊಂಡು ಎಲ್ಲ ವಿಷಯಗಳನ್ನು ಪ್ರಾಂತಿಕ ಭಾಷೆಯ ಮುಖಾಂತರ ಕಲಿಯುವ ಉಮೇದವಾರರಿಗೆ ಮಾತ್ರ.)

ಆರನೆಯ ಸದರು— ಗುಣಗಳು ೧೦೦.

(ಅ) ವಿದ್ಯಾರ್ಥಿಗಳು ಓದದೆ ಇರುವ ಗದ್ಯಪದ್ಯ ಭಾಗಗಳ ವಿವರಣೆ— ಆ ಭಾಗಗಳನ್ನು ತಿರುಗಿ ತಮ್ಮ ಭಾಷೆಯಲ್ಲಿ ಹೇಳುವದು, ವಿಸ್ತರಿಸಿ ಹೇಳುವದು; ಸಂಕ್ಷೇಪಿಸಿ ಹೇಳುವದು ಮುಂ. ಶಬ್ದಗಳ ಅರ್ಥವನ್ನು ಹೇಳುವದು ಮತ್ತು ವ್ಯಾಕರಣ (ಕ್ರಮಿಕ ೭ನೆಯ ಪುಸ್ತಕದ ಯೋಗ್ಯತೆಯಷ್ಟು) ಗುಣಗಳು ೫೦.

(ಬ) ಕೊಟ್ಟ ಸುಲಭ ವಿಷಯವನ್ನು ಕುರಿತು ವರ್ಣನಪರ ನಿಬಂಧವನ್ನು ಇಲ್ಲವೆ ರಿಪೋರ್ಟನ್ನು ಬರೆಯುವದು, ಪತ್ರಲೇಖನ, ಸಂಭಾಷಣೆ, ಜೀವನ ಚರಿತ್ರೆ ಮುಂ.

II ಹೆಣ್ಣುಮಕ್ಕಳ ಪ್ರಾಯ್ಮರಿ ಸ್ಕೂಲ್ ಲೀವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಯ ಅಭ್ಯಾಸ ಪತ್ರಿಕೆ

(ಮುಂಬಯಿ ಸರಕಾರದ ಶಾಲಾಖಾತೆಯ $\frac{\text{೨೬೩೬}}{\text{೭-೫-೧೯೩೭}}$ ನೆಯ ಸಂಬರಿನ ಗೊತ್ತುವಳಿಯ ಮೇರೆಗೆ ತಿದ್ದುಪಡಿ ಹೊಂದಿದ ಸದರಿ ಪರೀಕ್ಷೆಯ ನಿಯಮಗಳಿಗೆ ಸೇರಿಸಲ್ಪಟ್ಟ 'ಬ' ಪರಿಶಿಷ್ಟವನ್ನು ನೋಡಿರಿ.) [ಕವ್ಹರ ೩, ೪ ನೋಡಿರಿ.]

ಮೊದಲನೆಯ ಮತ್ತು ಎರಡನೆಯ ಸದರುಗಳ ಅಭ್ಯಾಸಕ್ರಮದ ಬದಲು ಕೆಳಗಿನ ಅಭ್ಯಾಸ ಕ್ರಮವನ್ನು ಸೇರಿಸಿಕೊಳ್ಳಬೇಕು.

ಮೊದಲನೆಯ ಸದರು ಪ್ರಾಂತಿಕ ಭಾಷೆ— ಗುಣಗಳು ೧೦೦.

(ಅ) ವಿದ್ಯಾರ್ಥಿನಿಯರು ಓದದೆ ಇರುವ ಗದ್ಯಪದ್ಯ ಭಾಗಗಳ ವಿವರಣೆ— ಆ ಭಾಗಗಳನ್ನು ತಿರುಗಿ ತಮ್ಮ ಭಾಷೆಯಲ್ಲಿ ಹೇಳುವದು, ವಿಸ್ತರಿಸಿ ಹೇಳುವದು, ಸಂಕ್ಷೇಪಿಸಿ ಹೇಳುವದು ಮುಂ. ಶಬ್ದಗಳ ಅರ್ಥವನ್ನು ಹೇಳುವದು (ಕ್ರಮಿಕ ೬ನೆಯ ಪುಸ್ತಕದ ಅಥವಾ ಹೆಣ್ಣು ಮಕ್ಕಳ ಗುಜರಾಥಿ ಮೂರನೆಯ ಪುಸ್ತಕದ ಯೋಗ್ಯತೆಯಷ್ಟು) ಗುಣಗಳು ೭೫.

(ಬ) ವ್ಯಾಕರಣ (ವ್ಯಾಕರಣದ ಜ್ಞಾನವನ್ನು ಉಪಯೋಗಿಸುವದು ಮತ್ತು ಕಂಡುಹಿಡಿಯುವದು ಮತ್ತು ಸಾಮಾನ್ಯ ವ್ಯಾಕರಣ ಜ್ಞಾನ), ಶಬ್ದಗಳ ವ್ಯುತ್ಪತ್ತಿಗಳು. ಗುಣಗಳು ೨೫.

ಎರಡನೆಯ ಸದರು—ಗುಣಗಳು– ೧೦೦. ನಿಬಂಧ ಮತ್ತು ಕೈಬರಹ. ಕೊಟ್ಟ ವಿಷಯದಮೇಲೆ ವರ್ಣನಪರ ನಿಬಂಧವನ್ನು ಅಥವಾ ರಿಪೋರ್ಟನ್ನು ಬರೆಯುವದು, ಪತ್ರಲೇಖನ, ಸಂಭಾಷಣೆ ಮುಂ.

III ಗಂಡುಮಕ್ಕಳ ಅಗ್ರಿಕಲ್ಚರಲ್ ಬಾಯಸದ ಪ್ರಾಯ್ಮರಿಸ್ಕೂಲ್ ಲಿವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಯ ಅಭ್ಯಾಸಪತ್ರಿಕೆ.

(ಮುಂಬಯಿ ಸರಕಾರದ ಶಾಲಾಖಾತೆಯ $\frac{೧೧೯೯}{೬-೭-೧೯೨೫}$ ನೆಯ ನಂಬರಿನ ಹೊತ್ತುವಳಿಯ ಮೇರೆಗೆ ಮಂಜೂರಾದ ಅಭ್ಯಾಸಪತ್ರಿಕೆಯನ್ನು ನೋಡಿರಿ.)

ಮೊದಲನೆಯ ಮತ್ತು ಎರಡನೆಯ ಸದರುಗಳ ಅಭ್ಯಾಸಕ್ರಮದ ಬದಲು ಈ ಕೆಳಗಿನ ಅಭ್ಯಾಸಕ್ರಮವನ್ನು ಸೇರಿಸಿಕೊಳ್ಳಬೇಕು.

ಮೊದಲನೆಯ ಸದರು:— ಗುಣಗಳು ೧೦೦.

(ಅ) ವಿದ್ಯಾರ್ಥಿಗಳು ಓದದೆ ಇರುವ ಗದ್ಯಪದ್ಯ ಭಾಗಗಳ ವಿವರಣೆ– ಆ ಭಾಗಗಳನ್ನು ತಿರುಗಿ ತಮ್ಮ ಭಾಷೆಯಲ್ಲಿ ಹೇಳುವದು, ವಿಸ್ತರಿಸಿ ಹೇಳುವದು, ಸಂಕ್ಷೇಪಿಸಿ ಹೇಳುವದು, ಮುಂ. ಶಬ್ದಗಳ ಅರ್ಥವನ್ನು ಹೇಳುವದು (ಕ್ರಮಿಕ ೭ನೆಯ ಪುಸ್ತಕದ ಯೋಗ್ಯತೆಯಷ್ಟು) ಗುಣಗಳು ೭೫.

(ಬ) ವ್ಯಾಕರಣ (ವ್ಯಾಕರಣದ ಜ್ಞಾನವನ್ನು ಉಪಯೋಗಿಸು ಮತ್ತು ಕಂಡುಹಿಡಿಯುವದು ಮತ್ತು ಸಾಮಾನ್ಯ ವ್ಯಾ ಜ್ಞಾನ), ಶಬ್ದಗಳ ವ್ಯುತ್ಪತ್ತಿಗಳು. ಗುಣಗಳು ೨೫.

ಎರಡನೆಯ ಪದರು:— ಗುಣಗಳು ೧೦೦.

ಕೊಟ್ಟ ವಿಷಯವನ್ನು ಕುರಿತು ವರ್ಣನಪರ ನಿಬಂಧವನ್ನು ರಿಪೋರ್ಟನ್ನು ಬರೆಯುವದು. ಪತ್ರಲೇಖನ, ಸಂಭಾಷಣೆ ಮುಂ.

ನಾಲ್ಕನೆಯ ಪದರು:—

(ಅ) ಉಪಪದರಿನಲ್ಲಿ ಬಂದಿರುವ "ಕರಂದೀಕರ ಮತ್ತು ಕೇಳಕರ ಇವ ಬ್ರಿಟಿಷ ಹಿಂದುಸ್ತಾನಚಿ ಶಾಸನ ಪದ್ಧತಿಯ ಮೇರೆಗೆ" ಎಂ ಶಬ್ದಗಳನ್ನು ಬಿಟ್ಟು ಬಿಡಬೇಕು.

ಐದನೆಯ ಪದರು:—

(ಬ) ಉಪಪದರಿನಲ್ಲಿ ಬಂದಿರುವ ಈ ಕೆಳಗಿನ ಭಾಗಗಳನ್ನು ಬಿಟ್ಟು ಬಿಡಬೇಕು.

"ಮತ್ತು ಸಿಂಧದ ವಿಷಯದಲ್ಲಿ ೫ ರಿಂದ ೭ರ ವರೆಗಿನ ಸಿಂಧಿ ಕ್ರಮಿ ಪುಸ್ತಕಗಳೊಳಗಿನ ಈ ಕೆಳಗೆ ಹೇಳುವ ಪಾಠಗಳು.—

ಕ್ರಮಿಕ ೫ನೆಯ ಪುಸ್ತಕ— ಮೂರನೆಯಭಾಗ ೬೦ರಿಂದ ೮೪ ಪಾಠಗಳು.

ಕ್ರಮಿಕ ೬ನೆಯ ಪುಸ್ತಕ— ಮೂರನೆಯ ಭಾಗ ೫೭ರಿಂದ ೭೯ ಪಾಠಗಳು.

ಕ್ರಮಿಕ ೭ನೆಯ ಪುಸ್ತಕ— ನಾಲ್ಕನೆಯ ಭಾಗ ೬೬ರಿಂದ ೮೪ ಪಾಠಗಳು."

ಮುಂಬಯಿ ಗವ್ಹರ್ನರರ ಆಜ್ಞೆಯ ಮೇರೆ

(ಸಹಿ) **ಟಿ. ಎಮ್. ಚೌಧರಿ,**
ಸರಕಾರದ ಉಪಕಾರ್ಯದರ್ಶಿಗಳು

ನಂಬರ ೧೯೩೬ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ನಂ.	ವಿಷಯ.	ಪುಟ.
೧.	ಸ್ಫುಟವಿಚಾರಗಳು	೧
೨.	ಪ್ರಾಥಮಿಕ ಮತ್ತು ಮಾಧ್ಯಮಿಕ ಸಾಲೆಗಳಲ್ಲಿ ಔದ್ಯೋಗಿಕ ಶಿಕ್ಷಣದ ಏರ್ಪಾಡು ಮಾಡುವ ಬಗ್ಗೆ ನಿಯಮಿಸಿದ ಕಮೀಟಿಯ ವರದಿ	೯
೩.	ಚಿತ್ರಮೂಲಕ ನಿಬಂಧ ಕಲಿಸುವಬಗ್ಗೆ ಸಾಮಾನ್ಯ ವಿಚಾರಗಳು ..	೧೯
೪.	ಶಿಶುಶಾಲೆಗಳು	೨೫
೫.	ತೋಟಗಳು	೨೮
೬.	ಪ್ರಕಟನೆ	೩೧
೭.	ಪತ್ರಗಳ ಸಾರಾಂಶ	೩೧
೮.	ಪ್ರಕಟನೆ	೩೭

Printed by K. R. Bhise at the Karnatak Printing Works, Dharwar and Published by D. V. Kale, B. A., Head Master Training School, Dharwar at his Office.

ಜಾಹೀರಾತು

ರಾಮಾಶ್ರಯ ಬುಕ್‌ಡಿಪೊ, ಧಾರವಾಡ.

೧. **ಪುಸ್ತಕ ಶಾಖೆ.** ಕಾಯಿಪಲ್ಲೆ ಮಾರ್ಕೇಟ, ಧಾರವಾಡ.

೨. **ಸೇಶನರಿವ ತ್ತು ಇತರ ಸಾಮಾನುಗಳ ಶಾಖೆ, ಮಾರ್ಕೆಟ ರೋ**

ನಮ್ಮಲ್ಲಿ ಕನ್ನಡ, ಇಂಗ್ಲೀಷ, ಹಿಂದಿ, ಮರಾಠಿ, ಉರ್ದು, ಭಾಷೆಯಲ್ಲಿ ಶಾ
ಕಾಲೇಜುಗಳಿಗೆ ಉಪಯುಕ್ತವಾದ ಟೆಕ್ಸ್ಟಬುಕ್ಕುಗಳೂ ಅವುಗಳ ಟಿಪ್ಪಣಿಗಳೂ
ಗಾಯಿಡ್, ಡಿಕ್ಷನರಿ, ವ್ಯಾಪ್ಸ, (ನಕಾಶಗಳು) ಡಾಯರಿ, ಪಂಚಾಂಗ
ಕಾದಂಬರಿಗಳೂ ಚಿಲ್ಲರೆ ಹಾಗೂ ಠೋಕ ದರದಿಂದ ಯೋಗ್ಯಬೆಲೆಗೆ ದೊರೆಯುತ್ತವೆ

ಧಾರವಾಡದಲ್ಲಿ ಪ್ರಸಿದ್ಧಿಸಲ್ಪಟ್ಟ ಎಲ್ಲ ತರದ ಪುಸ್ತಕಗಳನ್ನು ಅಂದ
ಕರ್ನಾಟಕದ ಇತಿಹಾಸಬೋಧಿನಿ, ಹಿಂದುಸ್ಥಾನ ಇತಿಹಾಸ ಬೋಧಿನಿ
ನುಡಿಗನ್ನಡಿ, ಉಮಡಿಕರ ಜಮಾಖರ್ಚು, ನಿಂಬಾಳಕರ ಇವರಿಂದ ಪ್ರಸಿದ್ಧಿಸಲ್ಪಟ್ಟ
ಹೊಸಪದ್ಧತಿಯ ಗಣಿತ, ಧಾರವಾಡ ಜಿಲ್ಲೆಯ ಭೂಗೋಲು ಹಾಗು ಕಟ್ಟೀಮನೆ
ಕೃತ ಬಾಲಬೋಧೆ ಈ ಎಲ್ಲ ಪುಸ್ತಕಗಳು ಠೋಕ ಹಾಗೂ ಕಿರುಕಳ ದರದಿಂದ
ಸಿಗುತ್ತವೆ.

ಎಕ್ಸರಸಾಯಿಜ, ನೋಟಬುಕ್ಕುಗಳು, ಖಾತೆ ಕೀರ್ದಿಬುಕ್ಕು, ಜೋಪಡಾ
ಕಾಪಿಬುಕ್ಕು, ಡ್ರಾಯಿಂಗಬುಕ್ಕು, ಇವುಗಳನ್ನು ನಾವು ಮುದ್ದಾಂ ಉತ್ತಮ
ಕಾಗದ ಹಾಕಿಸಿ ಅಂದವಾಗಿ ತಯಾರಿಸಿ ಇಟ್ಟಿರುವೆವು.

ಶಾಳಿಕೆಯಲ್ಲಿ ಮೇಲಾದ ಪಾರಕರ, ರಾಜಾ, ಕ್ಯಾಪ್ಟನ್, ಸೇಲರ ಮುಂತಾ
ಎಲ್ಲತರದ ಹೊಸಮಾದರಿಯ ಫೌಂಟನ್‌ಪೆನ್ಸ, ಮತ್ತು ಅವುಗಳ ಮಸಿಯ ನ
ಗ್ಯಾರಂಟಿಯಿಂದ ಕೊಡುತ್ತೇವೆ. ಪೆನ್ನುಗಳ ಮೇಲೆ ಇಂಗ್ಲಿಷದಲ್ಲಿ ಹೆಸರ
ಮಾಡಿಕೊಡುತ್ತೇವೆ. ನಾದುರಸ್ತಾದ ಪೆನ್ನುಗಳನ್ನು ದುರಸ್ತು ಮಾಡುತ್ತೇವೆ.

ಇದಲ್ಲದೆ ಫೂಲ್‌ಸ್ಕೇಪ, ಕ್ರವೂನ್, ಡೆಮಿ, ರಾಯಲ್, ಬಾಂಡ, ಅನ್‌ಗ್ಲೇ
ಹಾಗೂ ಗ್ಲೇಜಕಾಗದವ ಕಾರ್ಡಬೋರ್ಡ, ಇನಿಟೇಶನ್, ಕ್ಯಾಲಿಕೊ ಮುಂತಾ
ಪ್ರಿಂಟಿಂಗ ಪ್ರೆಸ್ಸಿಗೆ ಉಪಯುಕ್ತವಾದ ಸಾಮಾನುಗಳೂ ಮತ್ತು ಎಲ್
ನಮೂನೆಯ ಸ್ಟೇಶನರಿ ಸಾಮಾನುಗಳೂ ಸಿಗುತ್ತವೆ.

ಸೇಂಟ್ಸ, ಸ್ನೋ, ಹೇಅರಆಯಿಲ್ಸ, ದೇಶೀ ವಿದೇಶಿ ಸುವಾಸಿಕ
ತೈಲಗಳೂ ಸಿಗುತ್ತವೆ.

ಸಾತೆ ಬಿಸ್ಕೀಟು, ಪೇಪರಮಿಠಾಯಿ, ಮೈಸೂರ ಕಾಫೀ ಬೀಜ, ಮತ್ತು
ಚಹಾದ ಪುಡಿಯ ಅನೇಕ ನಮೂನೆಯ ಬಂಡಲಗಳು ದೊರೆಯುವವು.

ತಮ್ಮ,
ಈಶ್ವರಪ್ಪಾ ರಾಮಪ್ಪಾ ಆಕಳವಾಡಿ ಅ್ಯಂಡ ಸನ್ಸ.
ರಾಮಾಶ್ರಯ ಬುಕ್ಕಡಿಪೊ, ಮಾರ್ಕೆಟ ಧಾರವಾಡ.

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.,

ಸಂಪುಟ ೭೭	ಸಪ್ಟಂಬರ ೧೯೩೫	ವರ್ಷ ೧೦. ಸಂ. ೬

ಸ್ಫುಟವಿಚಾರಗಳು

೧. ಹಿಂದುಸ್ತಾನೀ ಭಾಷೆ

ನುಡಿಯು ನಾಡಿನ ಜನರಲ್ಲಿ ಒಕ್ಕಟ್ಟನ್ನುಂಟುಮಾಡುವದು. ಒಂದೇ ಒಂದು ಭಾಷೆಯನ್ನಾಡುವ ಭಿನ್ನಮತ, ಭಿನ್ನಧರ್ಮಗಳ ಜನರಲ್ಲಿಯೂ ಏಕ ಭಾಷಾ–ಸಾಹಿತ್ಯವು ಐಕ್ಯವನ್ನುಂಟುಮಾಡುವದು.

ಹೀಗಿದ್ದು ನಮ್ಮ ನಾಡಿನಲ್ಲಿ ಅನೇಕ ಭಾಷೆಗಳು ಎಂದಿನಿಂದಲೂ ಪ್ರಚಲಿತವಾಗಿವೆ. ಒಂದು ಪ್ರಾಂತ್ಯದ ಭಾಷೆಯನ್ನು ಇನ್ನೊಂದು ಪ್ರಾಂತ್ಯದವರು ತಿಳಿಯಲಾರದವರಾಗಿರುವರು. ವ್ಯಾಪಾರೋದ್ಯೋಗಸ್ಥರಿಗೆ ಇದೊಂದು ತೊಡಕಿನ ಸಂಗತಿಯಾಗಿದೆ. ಇನ್ನು ಒಬ್ಬನು ತನ್ನ ಒಳಕೆಯ ಹಲವು ನಾಡುಗಳ ಹಲವು ಭಾಷೆಗಳನ್ನು ಕಲಿಯುವದು ಸಾಧ್ಯವಾದದ್ದಲ್ಲ. ಆದಕಾರಣ ಇಂಥ ಕಠಿಣವಾದ ಸಮಸ್ಯವನ್ನು ತಕ್ಕಮಟ್ಟಿಗಾದರೂ ಬಿಡಿಸಬೇಕೆಂದು ರಾಷ್ಟ್ರೀಯ ಸಭೆಯವರು ದೀರ್ಘಾಲೋಚನೆ ಮಾಡಿ ಸಾಲೆಗೆ ಹೋಗುವ ಬಾಲಕರೆಲ್ಲರೂ ಹಿಂದುಸ್ತಾನೀ ಭಾಷೆಯನ್ನು ಕಲಿಯಬೇಕೆಂದು ಈಗ ಗೊತ್ತುಮಾಡಿರುವರು. ಇದರಿಂದ ಕೆಲವು ವರ್ಷಗಳಾದ ಬಳಿಕ ಈಗಿನ ತೊಂದರೆಯು ದೂರಾಗುವದು.

ನರ್ಮದೆಯ ಉತ್ತರದಲ್ಲಿರುವ ಜನರೆಲ್ಲರು (ಹಿಂದೀ–ಉರ್ದು) ಹಿಂದುಸ್ತಾನೀ ಭಾಷೆಯನ್ನು ಆಡುತ್ತಿರುವರು; ಅಂದರೆ ಸಂಸ್ಕೃತ ಭಾಷೆಯನ್ನು ಬಲ್ಲ

ಹಿಂದು ಜನರು ಸಂಸ್ಕೃತ ಶಬ್ದಗಳನ್ನು ಹೆಚ್ಚಾಗಿ ಉಪಯೋಗಿಸಿ ಹಿಂದೀ ಭಾಷೆಯನ್ನೂ ಉರ್ದು-ಭಾಷೆಯನ್ನಾಡುವ ಮುಸಲ್ಮಾನ ಜನರು ಅರೆಬಿ-ಪಾರ್ಸಿ ಶಬ್ದಗಳನ್ನು ಹೆಚ್ಚಾಗಿ ಉಪಯೋಗಿಸಿ ಉರ್ದು ಭಾಷೆಯನ್ನೂ ಆಡುವರು. ಅಂದರೆ— ಸಂಸ್ಕೃತ ಶಬ್ದಗಳು ಹೆಚ್ಚಾಗಿ ಸೇರಿದ ಹಿಂದುಸ್ತಾನೀ ಭಾಷೆಯು ಹಿಂದಿ; ಅರೆಬಿ, ಪಾರ್ಸಿ ಶಬ್ದಗಳು ಹೆಚ್ಚಾಗಿ ಸೇರಿದ ಹಿಂದುಸ್ತಾನೀ ಭಾಷೆಯು ಉರ್ದು ಎಂದು ಹೇಳಬಹುದು. ಬರೆಹಕ್ಕೆ ಹಿಂದು ಜನರು ದೇವನಾಗರಿ ಲಿಪಿಯನ್ನೂ ಮುಸಲ್ಮಾನರು ಉರ್ದುಲಿಪಿಯನ್ನೂ ಉಪಯೋಗಿಸುವರು. ಇವೆರಡು ಲಿಪಿಗಳನ್ನು ಕಲಿಯದೆ ಇದ್ದ ಪರಸ್ಪರರು ಪರಸ್ಪರರ ಭಾಷೆಯನ್ನು ಅರಿಯುತ್ತಿದ್ದರೂ ಅವರಲ್ಲಿ ನಿಕಟವಾದ ಐಕ್ಯವು ಉಂಟಾಗಿಲ್ಲ. ಆ ಜನರು ಎರಡೂ ಲಿಪಿಗಳ ಅಭ್ಯಾಸವನ್ನು ಮಾಡಿದರೆ ಅವರಲ್ಲಿ ಬಳಕೆಯು ಹೆಚ್ಚಾಗಿ ಒಂದೇ ನಾಡಿನವರೆಂಬ ಭಾವನೆಯು ನೆಲೆಗೊಳ್ಳುವದೆಂಬ ನಂಬುಗೆಯು ಜನರಲ್ಲಿ ಮೂಡಿದೆ. ಕಾಲಾಂತರದಲ್ಲಿ ಹಿಂದಿ-ಉರ್ದುಗಳ ಸಮ್ಮಿಲನದಿಂದ ಅವರಲ್ಲಿಯೂ ಹಿಂದುಸ್ತಾನಿಯೊಂದೇ ಬಳಕೆಯಲ್ಲಿ ಬರಬಹುದಾಗಿದೆ.

ದಕ್ಷಿಣ ಹಿಂದುಸ್ತಾನದಲ್ಲಿ ಕೂಡ ಹಿಂದುಸ್ತಾನೀಭಾಷೆಯು ಕೆಲವು ಜನರಲ್ಲಿ ತಕ್ಕಮಟ್ಟಿಗೆ ಬಳಕೆಯಲ್ಲಿದೆ. ಈ ಭಾಷೆಯು ಉತ್ತರಹಿಂದುಸ್ತಾನದಲ್ಲಿಸಷ್ಟು ಇಲ್ಲಿ ಪ್ರಚಾರದಲ್ಲಿ ಇರುವದಿಲ್ಲ; ಆದರೂ ಇಡಿಯ ಹಿಂದುಸ್ತಾನದಲ್ಲಿ ಪ್ರವಾಸ ಮಾಡುವವರಿಗೆ ವ್ಯಾಪಾರೋದ್ಯೋಗ ಮಾಡುವವರಿಗೆ ಭಾಷೆಯ ತೊಂದರೆಯಾಗ ಬಾರದು; ಒಂದು ಪ್ರಾಂತ್ಯದವರು ಮತ್ತೊಂದು ಪ್ರಾಂತ್ಯದವರಿಂದ ಭಿನ್ನ ರಾದವರು ಎಂಬ ಭಾವನೆಯು ಬರಬಾರದು; ಯಾರಿಗಾದರೂ ತಮ್ಮ ವಿಚಾರ ಗಳನ್ನು ತಕ್ಕಮಟ್ಟಿಗೆ ಹೇಳಲು ಬರಬೇಕು; ಇನ್ನೊಬ್ಬರ ವಿಚಾರಗಳನ್ನು ತಿಳಿದು ಕೊಳ್ಳಲು ಸಾಧ್ಯವಾಗಬೇಕು; ಒಟ್ಟಿಗೆ ಈ ಎಲ್ಲ ಉದ್ದೇಶಗಳು ಸಾಧಿಸಬೇಕಾದರೆ ಇಡಿಯ ಹಿಂದುಸ್ತಾನಕ್ಕೆ ಒಂದೇ ಒಂದು ಸಾರ್ವತ್ರಿಕ ದೇಶ ಭಾಷೆಯಾಗ ಬೇಕಾಗಿದೆ. ಇದಕ್ಕಾಗಿ ಹಿಂದುಸ್ತಾನೀ ಭಾಷೆಯೇ ಎಲ್ಲಕ್ಕೂ ಹೆಚ್ಚಿಗೆ ತಕ್ಕದ್ದಾಗಿದೆ. ಎಲ್ಲರೂ ತಕ್ಕಮಟ್ಟಿಗಾದರೂ ಈ ಭಾಷೆಯನ್ನು ಕಲಿಯಬೇಕು. ಮಾಧ್ಯಮಿಕ ಶಾಲೆಗಳಲ್ಲಿ ಇನ್ನು ಈ ಭಾಷೆಯು ಆವಶ್ಯಕ ವಿಷಯಗಳಲ್ಲಿ ಒಂದಾ ಗುವದಿದೆ; ಅಲ್ಲಿನ ಬಾಲಕರು ಉಭಯ ಲಿಪಿಗಳನ್ನು ಕಲಿಯುವರು; ಆ ಕಾಲವು ಈಗ ತೀರ ಸಮೀಪಿಸಲಿದೆ.

ವರ್ಧಾ ಶಿಕ್ಷಣದ ಯೋಜನೆಯಲ್ಲಿ ಮಾತೃಭಾಷೆಯ ಮಹತ್ವವನ್ನು ಹೆಚ್ಚಿಸಿದೆ. ಹಸ್ತವ್ಯವಸಾಯವು ಎಲ್ಲ ಶಿಕ್ಷಣಕ್ಕೆ ಕೇಂದ್ರವಾಗಿದೆ; ಹಿಂದುಸ್ತಾನಿ ಭಾಷೆಯು ಪ್ರಾಂತ್ಯ-ಪ್ರಾಂತ್ಯಗಳಲ್ಲಿಯ ಬಳಕೆಯನ್ನು ಸುಗಮಗೊಳಿಸಲೋಸುಗ

ಸೇರಿಸಿದೆ. ಇವು ಮೂರು ವರ್ಧಾ ಶಿಕ್ಷಣದ ವೈಶಿಷ್ಟ್ಯಗಳೆಂದು ಹೇಳಬಹುದು. ಪ್ರಾಥಮಿಕ ಶಾಲೆಗಳ ಮೇಲಿನ (೫, ೬, ೭ನೆಯ) ಇಯತ್ತೆಗಳಲ್ಲಿ ಈ ಭಾಷಾ ಭ್ಯಾಸವು ಕೂಡಲೆ ಬಳಕೆಯಲ್ಲಿ ಬರತಕ್ಕದ್ದಿದೆ. ಅದಕ್ಕಾಗಿ ಟ್ರೇನಿಂಗ ಸಂಸ್ಥೆಗಳಲ್ಲಿ ಈಗಿರುವ ವಿದ್ಯಾರ್ಥಿಗಳು ಇದೇವರ್ಷದಿಂದ ಈ ವಿಷಯವನ್ನು ಕಲಿಯಬೇಕೆಂದು **ಮೆಹರ್ಬಾನ್ ಡಾಯರೆಕ್ಟರ ಸಾಹೇಬರು** ತಿಳಿಸಿರುವರು. ಬರುವ ಷಣ್ಮಾಸ ದಲ್ಲಿ ಈಗಿರುವ ಟ್ರೇ. ಸ್ಕೂ. ನ ವಿದ್ಯಾರ್ಥಿಗಳಿಗೆ ಹಿಂದುಸ್ಥಾನಿಯನ್ನು ಕಲಿಸುವ ಯೋಜನೆಯು ನಿಶ್ಚಿತವಾಗಿದೆ. ಪ್ರಾಥಮಿಕ ಶಾಲೆಗಳ ಎಲ್ಲ ಶಿಕ್ಷಕರು ದೇವನಾಗರಿ ಮತ್ತು ಉರ್ದು ಎರಡೂ ಲಿಪಿಗಳನ್ನು ಕಲಿತು ಈ ಭಾಷೆಯಲ್ಲಿ ತಕ್ಕಮಟ್ಟಿಗೆ ಸೈಪುಣ್ಯವನ್ನು ಪಡೆಯಬೇಕು. ಹಿಂದೀ-ಕನ್ನಡ ಸ್ವಯಂಬೋಧಿನಿ, ಬಜ್ಬೋಧಿನಿ ಕಿತಾಬ ಈ ಮೊದಲಾದ ಪುಸ್ತಕಗಳನ್ನು ತರಿಸಿಕೊಂಡು ಅವರು ಸ್ವಪ್ರಯತ್ನದಿಂದ ಈ ವಿಷಯದಲ್ಲಿ ಜ್ಞಾನವನ್ನು ಪಡೆಯಬಹುದು. ಬಾಲಕರು ಬೇಕಾದ ಒಂದು ಲಿಪಿಯ ಪರಿಚಯವನ್ನು ಮಾಡಿಕೊಳ್ಳಬೇಕು.

ಈ ಭಾಷೆಯ ಅಭ್ಯಾಸದಿಂದ ಮಾತೃಭಾಷಾಭ್ಯಾಸಕ್ಕೆ ಎಷ್ಟು ಮಾತ್ರವೂ ಕುಂದು ಬರಲಾರದು. ಅಲ್ಲದೆ ಮಾತೃಭಾಷೆಯ ಮಹತ್ವವನ್ನು ಕಡಮೆ ಮಾಡಲು ಈ ಭಾಷಾಭ್ಯಾಸವನ್ನು ಸೇರಿಸಿಲ್ಲ. ಎಷ್ಟೋ ಜನರು ಈ ವಿಷಯವಾಗಿ ತಪ್ಪು ತಿಳಿವಳಿಕೆಯನ್ನು ಮಾಡಿಕೊಂಡಿರುವ ಸಂಭವವಿದೆ. ಇಷ್ಟೇ ಆಲ್ಲ ; ಇನ್ನು ಮುಂದೆ ಮಾತೃ ಭಾಷೆಯ ಮಹತ್ವವು ಹೆಚ್ಚಾಗುವದಿದೆ. ಸುದೈವವಿದ್ದರೆ ಮಾತೃಭಾಷೆಯ ಮುಖಾಂತರವಾಗಿಯೇ ಮಾಧ್ಯಮಿಕ ಶಾಲೆಗಳ ಮತ್ತು ಉಚ್ಚ ಶಿಕ್ಷಣಾಲಯಗಳ ಎಲ್ಲ ವಿಷಯಗಳ ಅಭ್ಯಾಸವು ಸಾಗುವದಿದೆ.

ಹಿಂದುಸ್ಥಾನೀ ಭಾಷಾಭ್ಯಾಸವು ಬೇರೆ ಬೇರೆ ಭಾಗಗಳಲ್ಲಿರುವ ಜನರನ್ನು ಸಮೀಪಕ್ಕೆ ತಂದು ಏಕಬಾಂಧವ್ಯವನ್ನು ನೆಲೆಗೊಳಿಸುವದು. ಬೇರೆ ಬೇರೆ ಎಂದು ತೋರುವ ಎರಡು ಧರ್ಮಗಳ ಅಂದರೆ ಹಿಂದು-ಮುಸಲ್ಮಾನರ ನಡುವೆ ಸ್ನೇಹ ಭಾವವನ್ನು ನಿಶ್ಚಯವಾಗಿ ಬೆಳಿಸುವದು. ಈ ಐಕ್ಯದಿಂದ ದೇಶವು ಏಕಮುಖವಾಗಿ ಕಾರ್ಯಗಳನ್ನು ಮಾಡಿ ಅವುಗಳ ಫಲವನ್ನು ಹೊಂದುವದು. ಆದಕ್ಕಾಗಿ ಎಲ್ಲರೂ ಈ ಭಾಷಾಭ್ಯಾಸವನ್ನು ಆದರಪೂರ್ವಕವಾಗಿ ಮಾಡಬೇಕೆಂದು ನಮ್ಮ ವಿನಂತಿ.

೨. ಔದ್ಯೋಗಿಕ ಶಿಕ್ಷಣದ ವರದಿ

೧೯೩೮ ನೆಯ ಜಾನೇವರಿ ತಿಂಗಳಲ್ಲಿ ಮುಂಬಯಿ ಸರಕಾರದವರು ಇಲಾಖೆಯಲ್ಲಿಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿಯ ಅಭ್ಯಾಸ ಪತ್ರಿಕೆ

ಯಲ್ಲಿ ಔದ್ಯೋಗಿಕ ಶಿಕ್ಷಣದ ವಿಷಯವನ್ನು ಸೇರಿಸಲಿಕ್ಕೆಂದು ರಾವಬಹಾದ್ದೂರ ಕೇ. ಜಿ. ಜೋಶಿ ನಿವೃತ್ತ ಡೆಪ್ಯುಟಿ ಡಿರೆಕ್ಟರರವರ ಅಧ್ಯಕ್ಷತೆಯಲ್ಲಿ ಒಂದು ಕಮೀಟಿಯನ್ನು ನೇಮಿಸಿದ್ದರು. ಅವರ ಶಿಫಾರಸುಗಳು ಜುಲಾಯಿ ತಿಂಗಳಲ್ಲಿ ಪ್ರಸಿದ್ಧವಾಗಿರುವವು. ಅವುಗಳ ಸಾರಾಂಶವು ಬೇರೆ ಕಡೆಗೆ ಕೊಟ್ಟಿದೆ.

ಸರಕಾರದವರು ಕಮೀಟಿಯವರಿಗೆ ಪರಿಶೀಲಿಸಲು ಕೊಟ್ಟ ವಿಷಯಗಳಲ್ಲಿ ನಮ್ಮ ಇಲಾಖೆಯಲ್ಲಿಯ ಪ್ರಾಥಮಿಕ ಶಿಕ್ಷಣದಲ್ಲಿ ವರ್ಧಾ ಶಿಕ್ಷಣ ಮೂಲಕ ಎಷ್ಟು ಹೆಜ್ಜೆ ಕಡಿಮೆ ಮಾಡಿಕೊಳ್ಳಬೇಕು. ಮತ್ತು ಕೇಂದ್ರ ಸರಕಾರದವರು ನಿಯಮಿಸಿದ ವುಡ್ ಮತ್ತು ಅಬಟ್‌ರವರ ಶಿಫಾರಸುಗಳನ್ನು ಹೇಗೆ ಉಪಯೋಗಿಸ ಕೊಳ್ಳಬೇಕು ಎಂಬವೇ ಬಹಳ ಮಹತ್ವದ ವಿಷಯಗಳಿದ್ದವು.

ಜೋಶಿ ಕಮೀಟಿಯವರ ಶಿಫಾರಸುಗಳಲ್ಲಿ ಮೂಲ ಮತ್ತು ತಳಹದಿಯ ವ್ಯವಸಾಯದ (Basic craft) ಮುಖಾಂತರ ಶಿಕ್ಷಣವನ್ನು ಕೊಡುವದು. ೭ ವರ್ಷದ ಒತ್ತಾಯದ ಶಿಕ್ಷಣ, ಶಿಕ್ಷಣವನ್ನು ಪರಿಸ್ಥಿತಿಗೆ ಅನುಸರಿಸಿ ಕೊಡುವದು, ವಿಷಯಗಳ ಪರಸ್ಪರ ಸಂಬಂಧ, ಪ್ರಾಥಮಿಕ ಶಿಕ್ಷಣವೂ ಮಾಧ್ಯಮಿಕ ಶಿಕ್ಷಣವೂ ಹೊಂದಿಕೊಂಡು ಸಾಗುವದು. ಮಾಧ್ಯಮಿಕ ಸಾಲೆಗಳಲ್ಲಿಯೇ ವಿದ್ಯಾರ್ಥಿಗಳ ಒಲುವಿಗನುಸರಿಸಿ ಅಭ್ಯಾಸಕ್ರಮವನ್ನು ವಿಂಗಡಿಸುವದು, ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯನ್ನು ಕಿತ್ತಿ ಒಗೆಯುವದು, ಹಿಂದೀ ಕಲಿಸುವ ಮಾರ್ಪಾಟು, ಶಿಕ್ಷಕರ ಟ್ರೇನಿಂಗು ಮುಂತಾದವುಗಳು ಮುಖ್ಯವಾಗಿರುವವೆಂದು ಕಂಡು ಬರುವದು.

ಇವುಗಳಲ್ಲಿ ಕೆಲವು ವಿಷಯಗಳು ಮಾನ್ಯವಿರುವವು. ಉದಾಹರಣೆಗಾಗಿ ಕನಿಷ್ಟ ೭ ವರುಷದ ಒತ್ತಾಯದ ಶಿಕ್ಷಣವಾದರೂ ನಮ್ಮ ಇಲಾಖೆಯಲ್ಲಿಯ ಬಾಲಕರಿಗೆ ಸಿಕ್ಕರೆ ಈಗಿನ ಭಯಾನಕವಾದ ನಿರಕ್ಷರತೆಯ ಭೀತಿಯನ್ನು ಹೊಡೆದೋಡಿಸಲು ಇದು ಒಂದು ದೊಡ್ಡ ಸಾಧನ. ಬಾಲಕರು ಹೊಂದಿದ ಶಿಕ್ಷಣವು ಅವರಿಗೆ ಉಪಯುಕ್ತವಾಗಬೇಕೆಂದೂ ವ್ಯವಹಾರ ಚತುರರಾದ ಹಳ್ಳಿಯ ಜನರು ಅದರ ಮಹತ್ವವನ್ನು ಮನಗಾಣಬೇಕೆಂದೂ ನಿಶ್ಚಯಿಸಿ ಹಳ್ಳಿಗಳನ್ನನುಸರಿಸಿ ಕೆಲವೊಂದು ನಿರ್ಮಾಪಕ ಕೈ ಕೆಲಸಗಳ ಮುಖಾಂತರ ಶಿಕ್ಷಣವನ್ನು ಕೊಡಬೇಕು. ಮಾನಸಶಾಸ್ತ್ರಕ್ಕನುಸರಿಸಿ ನೋಡಿದರೆ ಬಾಲಕರಿಗೆ ಪುಸ್ತಕ ಜ್ಞಾನಕ್ಕಿಂತ ಏನಾದರೂ ಚಟುವಟಿಕೆ, ಕೃತಿ, ಕ್ರೀಡೆ ಮುಂತಾದವುಗಳೇ ಬಲು ಸೇರುತ್ತವೆ. ಮತ್ತು ಇವುಗಳ ತಳಹದಿಯ ಮೇಲೆ ಶಿಕ್ಷಣವನ್ನು ರಚಿಸಬೇಕು. ಈ ತತ್ವವು ಆಧುನಿಕ ಶಿಕ್ಷಣದ ಮೂಲಮಂತ್ರವನ್ನು ಜಪಿಸಿದ ರೂಸೋನ ಕಾಲದಿಂದಲೂ

ಸಾಗುತ್ತ ಬಂದಿದೆ. ಪಾಶ್ಚಾತ್ಯ ದೇಶಗಳಲ್ಲಿ ಈ ರೀತಿ ಪ್ರಯೋಗಗಳು ನಡೆದಿವೆ, ನಡೆಯುತ್ತ ಬಂದಿವೆ. ಅನೇಕ ಹೊಸ ಹೊಸ ಪದ್ಧತಿಗಳೂ ಹೊಸ ತರದ ಸಾಲೆಗಳೂ ಈ ತತ್ವವನ್ನು ಬಹುಮಟ್ಟಿಗೆ ಅವಲಂಬಿಸಿವೆ. ಸ್ವಯಂಪ್ರೇರಣೆ, ನಿರ್ಮಾಪಕ ಕೈ ಕೆಲಸ ಇವುಗಳನ್ನೇ ಮೂಲ ಗುರಿಯನ್ನಾಗಿಟ್ಟುಕೊಂಡು ಹೆಸರಾದ ಸಾಲೆಗಳು ಯುರೋಪದಲ್ಲಿಯೂ ಅಮೇರಿಕೆಯಲ್ಲಿಯೂ ಹೆಚ್ಚು ಕಾಣಬರುತ್ತವೆ. ಮತ್ತು ತಮ್ಮ ಹೆಸರನ್ನಾದರೂ ಆ ರೀತಿಯಾಗಿ ಇಟ್ಟುಕೊಂಡಿವೆ. ಉದಾಹರಣೆಗಾಗಿ ಗಿಸೋವಾದಲ್ಲಿಯ ಅಡಾಲ್ಫ್ ಫೆರಿಯರರ ಚಟುವಟಿಕೆ ಸಾಲೆ (Activity School). ೭ ವರ್ಷದಿಂದ ೧೨ ವರ್ಷಗಳ ವರೆಗೆ ಪ್ರಾಮುಖ್ಯವಾಗಿ ಹಸ್ತವ್ಯವ ಸಾಯ ಮತ್ತು ಕೃತಿ ಇವುಗಳು ಶಿಕ್ಷಣದ ಕೋಣ ಶಿಲೆಗಳಾಗಿರಬೇಕೆಂದು ಅಡಾಲ್ಫ್ ಫೆರಿಯರರ ಅಭಿಪ್ರಾಯ. ಶಿಕ್ಷಣವು ವಸ್ತುವಾಚಕದಿಂದ ಭಾವವಾಚಕದ ಕಡೆಗೆ ಸಾಗಬೇಕೆಂಬ ತತ್ವವಾದರೂ ಇದನ್ನವಲಂಬಿಸಿದೆ.

ಪ್ರಾಥಮಿಕ ಸಾಲೆಗಳಿಗೂ ಮಾಧ್ಯಮಿಕ ಸಾಲೆಗಳಿಗೂ ಇದುವರೆಗಿರುವ ಸಂಬಂಧವು ಸಮಾಧಾನಕರವಿರಲಿಲ್ಲ. ಮಾಧ್ಯಮಿಕ ಸಾಲೆಗಳು ಪ್ರಾಥಮಿಕ ಸಾಲೆಯಿಂದ ೪ ಇಯತ್ತೆಯನ್ನು ಮುಗಿಸಿಕೊಂಡು ಬರುವ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವ ಮಟ್ಟಿಗೆ ಮಾತ್ರ ಸಂಬಂಧವನ್ನಿಟ್ಟುಕೊಂಡಿದ್ದವು. ಈ ಎರಡೂ ಸಂಸ್ಥೆಗಳಲ್ಲಿಯ ಅಭ್ಯಾಸಕ್ರಮ, ಕಲಿಸುವ ರೀತಿ, ಮತ್ತು ಶಿಕ್ಷಕರು ಸಂಚಾಲಕರು ಇವರೆಲ್ಲರ ನಡುವೆ ಪರಸ್ಪರ ಸ್ನೇಹಭಾವ, ನಿಕಟ ಸಂಬಂಧ, ಜವಾಬ್ದಾರಿ ಇವು ಇಲ್ಲಿಯ ವರೆಗೆ ಕಾಣಬರುತ್ತಿದ್ದಿಲ್ಲ. ಆದರೆ ಜೋಶಿ ಕಮಿಟಿಯವರ ಯೋಜನೆಯ ಮೂಲಕ ಪ್ರಾಥಮಿಕ ಸಾಲೆಗಳಲ್ಲಿ ಹೊಂದಿದ ಶಿಕ್ಷಣವು ಮುಂದೆ ಯೋಗ್ಯ ರೀತಿಯಿಂದ ಕ್ರಮಬದ್ಧವಾಗಿ ಮತ್ತು ಹೊಂದಿದ ಶಿಕ್ಷಣದ ತಳಹದಿಯನ್ನು ಮೂಲವಾಗಿಟ್ಟುಕೊಂಡು ಸಾಗಿಸಲಿಕ್ಕೆ ಅನುಕೂಲವಾಗಿದೆ. ಪ್ರಾಥಮಿಕ ಸಾಲೆಗಳಲ್ಲಿಯ ವರ್ಗಗಳೇ ಮುಂದುವರಿದು ಮಾಧ್ಯಮಿಕ ಸಾಲೆಯಲ್ಲಿಯ ವರ್ಗಗಳಾಗಿರುವವು. ಇಲ್ಲಿಯ ವರೆಗೆ ಸಾಮಾನ್ಯ ಶಿಕ್ಷಣವನ್ನು ಮ್ಯಾಟ್ರಿಕ್ಯು ಲೇಶನ್ ಪರೀಕ್ಷೆಯ ವರೆಗೆ ಹೊಂದಲೇಬೇಕಾಗಿತ್ತು. ಸಾಮಾನ್ಯ ಶಿಕ್ಷಣವು ವಿದ್ಯಾರ್ಥಿಯ ಒಲುವು ಇಚ್ಛೆಗನುಸರಿಸಿ ತನ್ನ ಐಚ್ಛಿಕ ವಿಷಯಗಳನ್ನು ಕಾಲೇಜಿನಲ್ಲಿ ತರಿಸಬೇಕಾಗುತ್ತಿತ್ತು. ಈ ಯೋಜನೆಯ ಮೂಲಕ ವಿಶಿಷ್ಟ ವಿಷಯದಲ್ಲಿ ಪ್ರಾವೀಣ್ಯವನ್ನು ಪಡೆಯಲು ಅನುಕೂಲ ಮಾಡಿಕೊಡಲು ಈಗ ಮಾಧ್ಯಮಿಕ ಸಾಲೆಗಳಲ್ಲಿಯೇ ಏರ್ಪಾಡಾಗಬೇಕೆಂದು ಈ ಕಮಿಟಿಯವರ ಅಭಿಪ್ರಾಯ. ಪ್ರಾಥಮಿಕ ಸಾಲೆಗಳಲ್ಲಿ ಹೊಂದಿದ ಶಿಕ್ಷಣವು ಪ್ರತಿ ವ್ಯಕ್ತಿಗೂ ಕನಿಷ್ಟ ಪ್ರಮಾಣದ ಸಾಮಾನ್ಯ ಶಿಕ್ಷಣವಾಗಬೇಕಾಗುವದು. ಹೀಗಾಗುವದರಿಂದ

ವಿದ್ಯಾರ್ಥಿಗಳು ತಮ್ಮ ಗಳನೆಯ ವರ್ಷಕ್ಕೆ ತಮ್ಮ ಐಚ್ಛಿಕ ವಿಷಯವನ್ನು ಆರಿಸಿ ಕೊಳ್ಳಲು ಸಮರ್ಥರಾಗಬೇಕಾಗುವದು.

ಪ್ರಾಥಮಿಕ ಶಾಲೆಗಳಲ್ಲಿ ಮೇಲಿನ ವರ್ಗದಲ್ಲಿ ಹಿಂದೀ ವಿಷಯವನ್ನು ಒತ್ತಾಯವಾಗಿ ಕಲಿಸಬೇಕೆಂದು ಮಾಡಿರುವ ಶಿಫಾರಸು ಸಕಾಲದಲ್ಲಿಯೇ ಆಗಿರುವದು. ಯಾಕೆಂದರೆ ಮುಂಡಡಿಯಿಟ್ಟು ಭರದಿಂದ ಸಾಗಿದ ನಮ್ಮೆಲ್ಲರಿಗೂ ಸಾಮಾನ್ಯವಾದ ಒಂದು ರಾಷ್ಟ್ರ ಭಾಷೆ ಬೇಕಲ್ಲವೇ !

ಇಂಗ್ಲೀಷ ಭಾಷೆಯನ್ನು ಮಾಧ್ಯಮಿಕ ಶಾಲೆಗಳಲ್ಲಿ ಮಾತ್ರ ಆರಂಭ ಮಾಡಬೇಕೆಂದು ಈ ಕಮೀಟಿಯವರು ಅಭಿಪ್ರಾಯಪಟ್ಟಿರುವರು. ಆದರೆ ವಿಶ್ವ ವಿದ್ಯಾಲಯದಲ್ಲಿ ಪ್ರವೇಶಿಸಿ ಪಾಶ್ಚಾತ್ಯ ಸಾಹಿತ್ಯವನ್ನು ಸವಿಯಲು ಮತ್ತು ಆ ಕಡೆ ಸಾಗಿದ ಶೋಧಗಳನ್ನೂ ಶಾಸ್ತ್ರೀಯ ವಿಚಾರಗಳನ್ನೂ ಗ್ರಹಣ ಮಾಡಿ ಕೊಳ್ಳಲು ವಿದ್ಯಾರ್ಥಿಗಳಿಗೆ ೪ ವರ್ಷಗಳ ವರೆಗೆ ಮಾತ್ರ ಹೊಂದಿದ ಇಂಗ್ಲೀಷ ಜ್ಞಾನವು ಸಾಕಷ್ಟು ಆಗಲಾರದೆಂದು ನಮಗೆ ಎನಿಸುತ್ತದೆ.

ಶಿಕ್ಷಕರ ಟ್ರೇನಿಂಗಿನ ವಿಷಯವಾಗಿ ಹೇಳುವಾಗ ಅವರು ಅದರ ಮಹತ್ವದ ಬಗ್ಗೆಯೂ ಮತ್ತು ತಮ್ಮ ಯೋಜನೆಯು ಯಶಸ್ವಿಯಾಗಿ ಸಾಗಬೇಕಾದರೆ ಶಿಕ್ಷಕರು ಹೇಗಿರಬೇಕೆಂಬ ಬಗ್ಗೆಯೂ ಹೇಳಿರುವರು. ಪ್ರಾಥಮಿಕ ಶಾಲೆಯಲ್ಲಿ ಏಳು ವರ್ಷ ಶಿಕ್ಷಣ ಹೊಂದಿದ ಬಳಿಕ ಶಿಕ್ಷಕರಾಗಲಿಚ್ಛಿಸುವವರು ೪ ವರ್ಷ ಟ್ರೇನಿಂಗನ್ನು ಹೊಂದಬೇಕು. ಆದರೆ ಈಗ ಸದ್ಯಕ್ಕೆ ಟ್ರೇನಿಂಗ ಹೊಂದಿದವರನ್ನು ರಿಫ್ರೇಶರ್ ಕೋರ್ಸುಗಳಿಂದಾಗಲಿ ತುಸು ಅವಧಿಯ ವರೆಗೆ ಹೊಸ ಯೋಜನೆಗೆ ಸರಿ ಹೋಗುವಂತೆ ಟ್ರೇನಿಂಗನ್ನು ಕೊಟ್ಟಾಗಲಿ ತಯಾರಿಸಬೇಕು. ಮುಂಬಯಿ ಸರಕಾರದವರು ಶಿಕ್ಷಕರ ಟ್ರೇನಿಂಗಿನ ವಿಷಯವಾಗಿ ಪ್ರತ್ಯೇಕವಾದ ಒಂದು ಕಮೀಟಿಯನ್ನು ನೇಮಿಸಿರುವರು. ಅವರ ಶಿಫಾರಸುಗಳನ್ನು ಶೀಘ್ರದಲ್ಲಿಯೇ ಅಪೇಕ್ಷಿಸಲಾಗಿದೆ.

ಇನ್ನು ಈ ಕಮೀಟಿಯವರ ಶಿಫಾರಸುಗಳಲ್ಲಿ ಮುಖ್ಯವಾಗಿ ಎರಡು ವಿಷಯ ಗಳ ಬಗ್ಗೆ ಭಿನ್ನಾಭಿಪ್ರಾಯವು ಕಂಡುಬರುವದು. ಮೊದಲನೆಯ ವಿಷಯ:- ಮಾಧ್ಯಮಿಕ ಶಾಲೆಯ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯನ್ನು ಕಿತ್ತು ಹಾಕಬೇಕು. ಆದರ ಬದಲು ಪ್ರತಿಯೊಂದು ಶಾಲೆಯ ಹೆಡ್‌ಮಾಸ್ತರರು ವಿದ್ಯಾರ್ಥಿ ಗಳ ಶಾಲೆಯೊಳಗಿನ ಸರ್ವಾಂಗಿಣ ಚಟುವಟಿಕೆ ಮತ್ತು ೪ ವರ್ಷಗಳವರೆಗೆ ಅವರ ಸಂಬಾಧವಾಗಿ ಇಟ್ಟ ರಿಕಾರ್ಡು ಇವೆಲ್ಲವುಗಳನ್ನು ಪರಿಶೀಲಿಸಬೇಕು. ತಮ್ಮ ಶಾಲೆಯ ಪರೀಕ್ಷೆಯನ್ನು ತಾವೇ ತೆಗೆದುಕೊಂಡು ಸರ್ಟಿಫೀಕೇಟಗಳನ್ನು ತಾವೇ

ಕೊಡಬೇಕು. ಮತ್ತು ಕಾಲೇಜಿನವರು ಪ್ರವೇಶ ಪರೀಕ್ಷೆಯಿಂದಾಗಲೀ ವಿಶಿಷ್ಟವಾದ ಬುದ್ಧಿಮಾಪನ ಒರೆಗಳಿಂದಾಗಲೀ ಯೋಗ್ಯ ವಿದ್ಯಾರ್ಥಿಗಳನ್ನು ಆರಿಸಿಕೊಳ್ಳಬೇಕು. ಆದರೆ ಈ ವಿಷಯದಲ್ಲಿ ನಮಗೆ ತೋರುವದೇನಂದರೆ ಪರೀಕ್ಷೆಯನ್ನು ಆ ಮೂಲಾಗ್ರವಾಗಿ ಕಿತ್ತಿ ಒಗೆಯಬೇಕು ಎಂಬುದನ್ನು ಯಾರೂ ಎಂದೂ ಒಪ್ಪಲಿಕ್ಕಿಲ್ಲ. ಆ ಪರೀಕ್ಷೆಗಳು ಆದರಲ್ಲಿಯೂ ಸಾರ್ವಜನಿಕ ಪರೀಕ್ಷೆಗಳು ಅವಶ್ಯ. ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯನ್ನು ಕಿತ್ತಿ ಒಗೆಯಬೇಕೆಂದಿದ್ದರೆ, ಪ್ರವೇಶ ಪರೀಕ್ಷೆಯನ್ನು ಸೂಚಿಸಿ ಮೊದಲಿನದರಲ್ಲಿಯ ಲೋಪದೋಷಗಳು ಉಳಿಯುವಂತೆ ಏಕೆ ಮಾಡಿರುವರು ? ಮತ್ತು ಬೇರೆ ಬೇರೆ ಶಾಲೆಗಳ ಹೆಡ್‌ಮಾಸ್ತರು ಅವರು ಪರೀಕ್ಷೆ ತೆಗೆದುಕೊಳ್ಳುವ ಕ್ರಮ ಅವರು ವಿದ್ಯಾರ್ಥಿಯ ಅನೇಕ ಚಟುವಟಿಕೆಗಳಿಗೆ ಕೊಡುವ ಮಹತ್ವ ಮುಂತಾದವುಗಳನ್ನವಲಂಬಿಸಿ ಸರ್ಟಿಫಿಕೇಟುಗಳನ್ನು ಕೊಡುವದರಿಂದ ಅಮೇರಿಕೆಯಲ್ಲಿಯ ಪದ್ಧತಿಯಿಂದ ಉಂಟಾದ ದೋಷವು ಮಾತ್ರ ಹೆಚ್ಚಾಗಿ ಉತ್ಪನ್ನವಾಗಬಹುದು. ಮತ್ತು ಯಾವ ಸಾಲೆಯ ಸರ್ಟಿಫಿಕೇಟು ಸರಿಯಾದ ದರ್ಜೆಯದು ಎಂಬುದನ್ನು ನಿಶ್ಚಯಿಸುವದು ಬಳ್ಳೇ ಕಠಿಣವಾಗುವದು.

ಈ ಕಮಿಟಿಯವರು ತಮ್ಮ ವರದಿಯಲ್ಲಿ ವ್ಯವಸಾಯ ಕೈಕೆಲಸಗಳಿಗೆ ಎಷ್ಟು ವೇಳೆಯನ್ನು ಕಾದಿಡಬೇಕು. ಎಂಬುದರ ಬಗ್ಗೆ ಸಂದಿಗ್ಧತೆಯನ್ನು ತಾಳಿದಂತೆ ತೋರುತ್ತದೆ. ವರ್ಧಾ ಶಿಕ್ಷಣದ ಯೋಜನೆಯ ಪ್ರಕಾರ ಇದರ ಸಲುವಾಗಿ ೩ ತಾಸು ೩೦ ನಿ. ಕಾದಿಡಬೇಕೆಂದು ಇರುವದು. ಮತ್ತು ಈ ಬಗ್ಗೆ ಇಡೀ ಹಿಂದುಸ್ತಾನದಲ್ಲಿ ದೊಡ್ಡ ದೊಡ್ಡ ಶಿಕ್ಷಣ ತಜ್ಞರೂ ಅನುಭವಿಕರೂ ಸಂದೇಹ ಶಂಕೆಗಳನ್ನು ಪ್ರದರ್ಶಿಸಿದ್ದರು. ಇದರ ವಿಷಯವಾಗಿ ಕಮಿಟಿಯವರು ಸಾಮಾನ್ಯ ಶಿಕ್ಷಣಕ್ಕೆ ಪ್ರತಿದಿನದ ವೇಳೆಯ ಅರ್ಧಕ್ಕಿಂತ ಹೆಚ್ಚು ವೇಳೆಯನ್ನು ಉಪಯೋಗಿಸ ಬಾರದೆಂದು ಮಾತ್ರ ಹೇಳಿರುವರು.

ಈ ಕಮಿಟಿಯ ಸದಸ್ಯರಲ್ಲೊಬ್ಬರಾದ ಮಿಸ್ ರ್ಯುಬೆನ್ ಎಂಬ ವಿದುಷಿಯವರು ವಿಷಯಗಳ ಪರಸ್ಪರ ಸಂಬಂಧ ಮತ್ತು ಎಲ್ಲ ವಿಷಯಗಳನ್ನು ಯಾವದಾದರೊಂದು ಹಸ್ತವ್ಯವಸಾಯದ ಸುತ್ತುಮುತ್ತು ಹೆಣೆದು ಅಥವಾ ಪೋಣಿಸಿ ಕಲಿಸಬೇಕು ಎಂಬುದರ ವಿಷಯವಾಗಿ ತೀಕ್ಷ್ಣ ಭಿನ್ನಾಭಿಪ್ರಾಯವನ್ನು ವ್ಯಕ್ತ ಪಡಿಸಿರುವರು. ಅವರು ಹೇಳುವದೇನಂದರೆ—

‘ವಿಷಯಗಳ ಪರಸ್ಪರ ಸಂಬಂಧವನ್ನುಂಟು ಮಾಡುವದು ಅನೇಕ ವೇಳೆ ಬಲು ಕೃತ್ರಿಮವಾಗುವದು. ಹೇಳಿಕೊಟ್ಟ ವಿಷಯ ಜ್ಞಾನವು ಕ್ರಮಬದ್ಧವಾಗಿ

ಸರಿಯಾಗಿ ಸಾಕಷ್ಟು ಆಗಲಾರದು. ಮತ್ತು ಸಾಲೆಯ ಅನೇಕ ವಿಷಯಗಳಿಗೆ ಈ ತರದ ಯೋಜನೆಯಲ್ಲಿ ಸ್ಥಾನವೇ ಸಿಗಲಾರದು. ಪ್ರಪಂಚದಲ್ಲಿಯ ಅನೇಕ ಶಿಕ್ಷಕರ ಅನುಭವದಿಂದ ಹೇಳಬೇಕೆಂದರೆ ಸಾಲೆಯಲ್ಲಿಯ ವಿಷಯಗಳ ಪರಸ್ಪರ ಸಂಬಂಧವು ತಾನಾಗಿಯೇ ಸ್ವಾಭಾವಿಕವಾಗಿ ಉಂಟಾಗಬೇಕಲ್ಲದೆ ಶಿಕ್ಷಣದಲ್ಲಿ ಅದೇ ಪ್ರಾಮುಖ್ಯ ಸ್ಥಾನವನ್ನು ಆಕ್ರಮಿಸಬಾರದು. ಈ ರೀತಿಯಾಗಿ -ಶಿಕ್ಷಣವನ್ನು ಕೊಡಲು ಶಿಕ್ಷಕರು ಬಲು ಹೆಚ್ಚಿನ ತರಗತಿಯವರು ಇರಬೇಕಾಗುವದು.'

ಅವರು ಪ್ರದರ್ಶಿಸಿರುವ ವಿಚಾರಗಳು ಯೋಗ್ಯವೆಂದು ನಮಗೆ ಅನಿಸಿರುವದು. ಹಸ್ತ ವ್ಯವಸಾಯವು ಶಿಕ್ಷಣದ ಸಾಧನವಿರಬೇಕು. ಅದರಿಂದ ಕಣ್ಣು, ಕೈ ಮತ್ತು ಮನಸ್ಸು ಇವುಗಳಲ್ಲಿ ಪರಸ್ಪರ ಸಮನ್ವಯತೆ ಉಂಟಾಗಬೇಕು. ಮತ್ತು ಯಾವ ದಾದರೊಂದು ಹಸ್ತ ವ್ಯವಸಾಯವನ್ನು ಮುಂದೆ ಅದನ್ನು ಉದ್ಯೋಗವೆಂದು ತಿಳಿದು ಕಲಿಯುತ್ತ ಹೋದರೆ ಸಂಸ್ಕೃತಿ, ಶೀಲಸಂವರ್ಧನ, ನಿಶಾಲವಾದ ಹೃದಯದ ವಿಕಾಸ, ಆತ್ಮತೃಪ್ತಿ ಮುಂತಾದ ಅನೇಕ ವಿಷಯಗಳಿಗೆ ಧಕ್ಕಿ ತಟ್ಟದೆ ಹೋಗಲಾರದೆಂದು ನಮ್ಮ ಮತ; ಇದಲ್ಲದೆ ಈ ಯೋಜನೆಯನ್ನು ಇದ್ದ ಹಾಗೆ ತರಬೇಕಾದರೆ ಅದಕ್ಕೆ ಬೇಕಾಗುವ ಆರ್ಥಿಕ ಸಹಾಯವನ್ನು ಸರಕಾರದವರು ಒದಗಿಸಲಾರರೆಂದು ನಾವು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ. ಹೀಗೆ ಮಾಡದೆ ಈ ಪ್ರಾಥಮಿಕ ಸಾಲೆಯಲ್ಲಿ ಈಗ ಸದ್ಯಕ್ಕೆ ವಾಡಿಕೆಯಲ್ಲಿರುವ ಪ್ರಾಥಮಿಕ ಸಾಲೆಯಲ್ಲಿಯ ಹೊಸ ಅಭ್ಯಾಸಪತ್ರಿಕೆಗನುಸರಿಸಿ ಕೆಳಗಿನ ವರ್ಗಗಳಲ್ಲಿ ಕೈಕೆಲಸವನ್ನೂ ಮತ್ತು ಮೇಲಿನ ವರ್ಗಗಳಲ್ಲಿ ಮಾತ್ರ ಹಸ್ತ ವ್ಯವಸಾಯವನ್ನೂ ಸೇರ್ಪಡಿಸಿ ಅವು ವಿಷಯಗಳೆಂದು ತಿಳಿದು ಯೋಗ್ಯಕಂಡಲ್ಲಿ ಮಾತ್ರ ಸಾಧನಗಳೆಂದು ಉಪಯೋಗಿಸಬೇಕೆಂದು ನಮ್ಮ ಅಭಿಪ್ರಾಯ.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಔದ್ಯೋಗಿಕ ಶಿಕ್ಷಣದ ಏರ್ಪಾಡುಮಾಡುವ ಬಗ್ಗೆ ನಿಯಮಿಸಿದ ಕಮಿಟಿಯ ವರದಿ

(ಕಳಿದ ತಿಂಗಳಿನಿಂದ ಮುಂದುವರಿದುದು)

೪. ಬಾಲಕನ ೬ನೆಯ ವರ್ಷವು ಅವನ ಶಿಕ್ಷಣದ ಮೊದಲಮೆಟ್ಟಾಗಬೇಕು. ಇದಲ್ಲದೆ ಅದು ಅವನು ಒತ್ತಾಯದಿಂದ ಶಿಕ್ಷಣಹೊಂದುವ ವಯಸ್ಸಿಂದೂ ತಿಳಿಯಬೇಕು.

೫. ಆರ್ಥಿಕ ದುಃಸ್ಥಿತಿಯ ಮೂಲಕ ೬ನೆಯ ವರ್ಷಕ್ಕಿಂತ ಕಡಿಮೆ ವಯಸ್ಸಿನ ಚಿಕ್ಕ ಬಾಲಕರಿಗಾಗಿ ಕಿಂಡರಗಾರ್ಟನ ಮಾಂಟೆಸೋರಿ ಅಥವಾ ಶಿಶುಶಾಲೆ ಇವುಗಳನ್ನು ಆರಂಭಿಸುವದು ಕಷ್ಟಸಾಧ್ಯ. ಆದರೂ ಸರಕಾರದವರು ಇದರ ಹೊಣೆಗಾರಿಕೆಯನ್ನು ತಮ್ಮ ಮೇಲೆ ಹೊತ್ತುಕೊಂಡು ಸಮಯಕ್ಕನುಸರಿಸಿ ಪರಿಸ್ಥಿತಿಯು ಸುಧಾರಿಸಿದಂತೆ ಆ ದಿಕ್ಕಿನಿಂದ ವ್ಯಾವಹಾರಿಕವಾಗುವಂತೆ ಯೋಜನೆಯನ್ನು ಕೈಕೊಳ್ಳಬೇಕು. ಇಷ್ಟರಲ್ಲಿ ಖಾಸಗೀ ಸಂಸ್ಥೆಗಳಿಗೆ ಈ ತರದ ಶಾಲೆಗಳನ್ನು ಪ್ರಾರಂಭಿಸಲು ಪ್ರೋತ್ಸಾಹವನ್ನು ಕೊಡಬೇಕು.

೬. ಶಾಲೆಯ ವರ್ಷಾರಂಭದಿಂದ ೨ ತಿಂಗಳೊಳಗಾಗಿಯೇ ೧ನೆಯ ಇಯತ್ತೆಗೆ ಹೊಸ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕು.

೪ನೆಯ ಇಯತ್ತೆ ಅಥವಾ ಬಾಲಕರ ೧೧ನೆಯ ವರ್ಷದವರೆಗೆ ಶಿಕ್ಷಣವನ್ನು ಒತ್ತಾಯದ್ದನ್ನಾಗಿ ಮಾಡುವದು ಈಗಿನ ಆರ್ಥಿಕ ದುಸ್ಥಿತಿಯ ಮೂಲಕ ಅಸಾಧ್ಯವೆಂಬುದನ್ನು ನಾವು ಮನಗಂಡರೂ ಪ್ರಾಥಮಿಕ ಶಿಕ್ಷಣದ ಉದ್ದೇಶವು ಪೂರ್ಣವಾಗಿ ಸಾಧಿಸಬೇಕಾದರೆ ಹುಡುಗರಿಗೂ ಹುಡಿಗೆಯರಿಗೂ ಈ ೭ ವರ್ಷದ ಶಿಕ್ಷಣವನ್ನು ಒತ್ತಾಯವನ್ನಾಗಿ ಮಾಡಬೇಕು.

೮. ಜನಸಾಮಾನ್ಯರಲ್ಲಿ ಶಿಕ್ಷಣ ಪ್ರಸಾರವು ಭರದಿಂದ ಸಾಗಬೇಕೆಂದು ಶಾಲೆಗಳಲ್ಲಿ 'ಶಿಫ್ಟ' ಪದ್ಧತಿಯನ್ನಾಗಲಿ ಅರ್ಧಕಾಲದವರೆಗೆ ಮಾತ್ರ ಶಿಕ್ಷಣವನ್ನು ಕೊಡುವ ರೀತಿಯನ್ನಾಗಲಿ ಉಪಕ್ರಮಿಸಲು ಒಪ್ಪಿಗೆಯ ಶಾಲೆಗಳ ಸಂಚಾಲಕರಿಗೆ ಅಥವಾ ಲೋಕಲ್ ಅಥಾರಿಟಿಯವರಿಗೆ ಸರಕಾರದವರು ಅನುಮತಿ ಕೊಡಬೇಕು.

೯. ಹಳ್ಳಿಯ ಮತ್ತು ಪಟ್ಟಣದ ಸಾಲೆಗಳ ಅಭ್ಯಾಸಪತ್ರಿಕೆಯಲ್ಲಿ ಅಮೂಲಾಗ್ರ ಬದಲಾವಣೆಗಳ ಆವಶ್ಯಕತೆ ಇಲ್ಲವಾದರೂ ಶಿಕ್ಷಣವನ್ನು ವಿದ್ಯಾರ್ಥಿಗಳ ಪರಿಸ್ಥಿತಿಗೆ ಅನುಸರಿಸಿ ಸಾಗಿಸಬೇಕು.

೧೦. ಸಾಮಾನ್ಯ ಶಿಕ್ಷಣವನ್ನು ಕೊಡುವಾಗ ಹುಡುಗರ ಮತ್ತು ಹುಡಿಗೆಯರ ಅಭ್ಯಾಸಕ್ರಮದಲ್ಲಿ ಮತ್ತು ಅಭ್ಯಾಸಪತ್ರಿಕೆಯಲ್ಲಿ ಅಮೂಲಾಗ್ರ ಬದಲಾವಣೆಗಳ ಆವಶ್ಯಕತೆ ಇರುವದಿಲ್ಲ.

೧೧. ವೇಳಾಪತ್ರಿಕೆಯಲ್ಲಿಯ ಅರ್ಧ ವೇಳೆಗಿಂತ ಹೆಚ್ಚು ಅವಧಿಯನ್ನು ವರ್ಗದಲ್ಲಿ ನಡೆಯುವ ಸಾಮಾನ್ಯ ಶಿಕ್ಷಣಕ್ಕೆಂದು ಉಪಯೋಗಿಸಬಾರದು.

ವ್ಯವಸಾಯ (Basic crafts)

ಹಳ್ಳಿಗಳಲ್ಲಿ—

೧೨. ಪುನರ್ರಚನೆಯನ್ನು ಹೊಂದಿದ ಪ್ರಾಥಮಿಕ ಸಾಲೆಗಳಲ್ಲಿ ಕೆಳಗೆ ಕಾಣಿಸಿದ ವ್ಯವಸಾಯಗಳನ್ನು ಆರಿಸಿಕೊಳ್ಳಬೇಕು.

ಹಳ್ಳಿಗಳಲ್ಲಿ – ಒಕ್ಕಲುತನ ಮತ್ತು ಅದಕ್ಕನುಸರಿಸಿದ ಇನ್ನಿತರ ಉದ್ಯೋಗಗಳು

(ಹಳ್ಳಿಗಳಲ್ಲಿ) ಮತ್ತು ಪಟ್ಟಣಗಳಲ್ಲಿ—

(ಇ) ನೂಲುವದು ಮತ್ತು ನೆಯ್ಯುವದು.
(ಈ) ಕೆತ್ತಿಗೆಯ ಕೆಲಸ.
(ಉ) ಮಣ್ಣಿನ ಪಾತ್ರೆಗಳನ್ನು ಮಾಡುವದು ತಯಾರಿಸುವದು.
(ಊ) ಗೃಹವ್ಯಸಾಯ.

೧೩. ಸೆಂಟ್ರಲ್ ಸ್ಕೂಲುಗಳು ಪ್ರಾಮುಖ್ಯವಾಗಿ ಸಾಮಾನ್ಯ ಶಿಕ್ಷಣವನ್ನು ಕೊಡುವ ಸಾಲೆಗಳಾಗಿರಬೇಕು. ಅವುಗಳನ್ನು ಔದ್ಯೋಗಿಕ ಸಾಲೆಗಳೆಂದು ತಿಳಿಯಬಾರದು.

೧೪. ಬಾಲಕರು ಮಾಡಿದ (ಸಿದ್ಧಪಡಿಸಿದ) ಪದಾರ್ಥಗಳು ಅವಶ್ಯಮಟ್ಟಿಗೆ ಉಪಯುಕ್ತವಾದಂಥವು ಇಲ್ಲವೆ ಪೇಟೆಯಲ್ಲಿ ವ್ಯಾಪಾರಮಾಡಲು ಯೋಗ್ಯವಾದಂಥವು ಇರಬೇಕು.

೧೫. ಹಿಂದುಸ್ತಾನೀ ಭಾಷೆಯು ಶೀಘ್ರದಲ್ಲಿಯೇ ನಮ್ಮ ದೇಶದ ರಾಷ್ಟ್ರೀಯ ಭಾಷೆಯಾಗುವದರಿಂದ ಪ್ರಚಾರದಲ್ಲಿರದಂಥ ಪ್ರಾಂತಗಳ ಜನರು ಪ್ರತಿದಿನ ವ್ಯಾಪಾರಮಾಡುವಮಟ್ಟಿಗಾದರೂ ಹಿಂದುಸ್ತಾನಿಯನ್ನರಿತಿರಬೇಕು. ಆದ್ದರಿಂದ

ಈ ಭಾಷೆಯನ್ನು ಪ್ರಾಥಮಿಕ ಶಾಲೆಗಳ ಮೇಲಿನ ವರ್ಗಗಳಲ್ಲಿ ಕಲಿಸುವ ವ್ಯವಸ್ಥೆಯನ್ನು ಮಾಡಬೇಕು.

೧೬. ಹುಡಿಗೆಯರ ಶಿಕ್ಷಣಪ್ರಸಾರವನ್ನು ಹೆಚ್ಚು ಭರದಿಂದ ಮಾಡಬೇಕು. ಶಿಕ್ಷಣವನ್ನು ಒತ್ತಾಯದ್ದನ್ನಾಗಿ ಮಾಡುವ ಪ್ರತಿಯೊಂದು ಯೋಜನೆಯಲ್ಲಿ ಹುಡಿಗೆಯರಿಗೆ ಪ್ರಥಮಸ್ಥಾನ ಅಥವಾ ರಿಯಾಯಿತಿವನ್ನು (Preference) ಕೊಡಬೇಕು.

ಹೊರಗಿನ ಪರೀಕ್ಷೆಗಳು

೧೭. ಈಗಿನ ಶಾಲೆಗಳ ಮೇಲೆ ಪರೀಕ್ಷೆಗಳ ಭಾರನೇ ಹೆಚ್ಚಾಗಿ ಬಿದ್ದದ ಬಿಂದ ಹೊರಗಿನ ಪರೀಕ್ಷೆಗಳನ್ನು ಒಮ್ಮೆಲೆ ತೆಗೆದುಹಾಕಬೇಕು. ಶಾಲೆಯ ಮುಖ್ಯ ಅಧ್ಯಾಪಕರು ತಮ್ಮ ಶಾಲೆಗಳ ಪರೀಕ್ಷೆಯನ್ನು ತಾವೇ ತೆಗೆದುಕೊಂಡು ಯೋಗ್ಯ ಕಂಡ ವಿದ್ಯಾರ್ಥಿಗಳನ್ನು ಮೇಲಿನ ವರ್ಗಗಳಿಗೆ ಸಾಗಿಸಬೇಕು. ಹೀಗೆ ಮಾಡುವಾಗ ಆ ವಿದ್ಯಾರ್ಥಿಗಳ ಶಾಲೆಯಲ್ಲಿಯ ಹಾಜರಿ, ವರ್ಗದಲ್ಲಿಯ, ತೋಟದಲ್ಲಿಯ ಮತ್ತು ಪ್ರಯೋಗ ಶಾಲೆಯಲ್ಲಿಯ (work shop) ಅವರ ಕೆಲಸ ಮತ್ತು ಇನ್ನಿತರ ಶಾಲೆಯ ಚಟುವಟಿಕೆಗಳು (Extra activities) ಇವುಗಳನ್ನು ಲಕ್ಷದಲ್ಲಿ ತೆಗೆದುಕೊಳ್ಳಬೇಕು.

೧೮. ಇಡೀ ೭ ವರ್ಷದ ಪ್ರಾಥಮಿಕ ಶಿಕ್ಷಣವನ್ನು ಪೂರ್ಣವಾಗಿ ಹೊಂದಲಾರದೆ ಶಾಲೆಗಳನ್ನು ಬಿಟ್ಟುಂಥ ವಿದ್ಯಾರ್ಥಿಗಳ ಸಲುವಾಗಿ ಯೋಗ್ಯ ಕಂಡ ಕೆಲವು ಕೇಂದ್ರಗಳಲ್ಲಿ ಮುಂದುವರಿಯುವ ಯೋಜನೆಗೆ ವ್ಯವಸ್ಥೆ ಮಾಡಬೇಕು.

ಶಿಕ್ಷಕರ ಟ್ರೇನಿಂಗು

೧೯. ಶೀಘ್ರದಲ್ಲಿಯೇ ಟ್ರೇನಿಂಗ ಸಂಸ್ಥೆಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಪ್ರಾಥಮಿಕ ಶಾಲೆಗಳಲ್ಲಿ ಕೆಳಗಿನ ವರ್ಗದ ಸಲುವಾಗಿ ಟ್ರೇಂಡ್ ಶಿಕ್ಷಕೆಯರ ಪೂರೈಕೆಗಾಗಿ ಶಿಕ್ಷಕೆಯರ ಟ್ರೇನಿಂಗ ಸಂಸ್ಥೆಗಳನ್ನು ಹೆಚ್ಚಿಸಬೇಕು.

೨೦. ಈ ಹೊಸ ಪ್ರಾಥಮಿಕ ಶಿಕ್ಷಣವು (Basic Education) ಯಶಸ್ವಿಯಾಗಬೇಕಾದರೆ ಮಾಧ್ಯಮಿಕ ಶಾಲೆಗಳ ಯೋಜನೆಗೆ ಸರಿಯಾಗುವಷ್ಟು (with Secondary School course) ೪ ವರ್ಷಗಳ ಯೋಜನೆಯ ಟ್ರೇನಿಂಗ ಸಂಸ್ಥೆಗಳನ್ನು ಆರಂಭಿಸಬೇಕು. ಇಂಥ ಸಂಸ್ಥೆಗಳು ಪ್ರತಿಯೊಂದು ಜಿಲ್ಲೆಯಲ್ಲಿ ಒಂದಾದರೂ ಇರಲೇಬೇಕು.

೨೧. ಸೆಂಟ್ರಲ್ ಸ್ಕೂಲಿನ ಸಲುವಾಗಿ ಶಿಕ್ಷಕರನ್ನು ತರಬೇತುಮಾಡಲಿಕ್ಕೂ ಸುಪರವಾಯಿಝರರನ್ನು ತಯಾರಿಸಲಿಕ್ಕೂ ವಿಶಿಷ್ಟವಾದ (special)

ಟ್ರೇನಿಂಗ ಸಂಸ್ಥೆಗಳನ್ನು ಇಲಾಖೆಯ ಪ್ರತಿಯೊಂದು ಶೈಕ್ಷಣಿಕ ವಿಭಾಗದಲ್ಲಿ ತೆರೆಯಬೇಕು. ಸಿನೆಮಾ, ರೇಡಿಯೊ, ವಸ್ತುಸಂಗ್ರಹಾಲಯ ಮುಂತಾದವು ಗಳನ್ನು ಸಾಲೆಗಳಲ್ಲಿ ಉಪಕರಣಗಳೆಂದು ಉಪಯೋಗಿಸಲಿಕ್ಕೆ ಬರುವಂತೆಯೂ ಕ್ರಮಬದ್ಧವಾಗಿ ಅವುಗಳನ್ನು ಉಪಯೋಗಿಸಲಿಕ್ಕೆ ಬರುವಂತೆಯೂ ಈಗಾಗಲೆ ನೌಕರಿಯಲ್ಲಿದ್ದ ಶಿಕ್ಷಕರಿಗೋಸ್ಕರ ಮೇಲೆ ಹೇಳಿದ ಟ್ರೇನಿಂಗ ಸಂಸ್ಥೆಗಳಲ್ಲಿ ಸೂಟಿಯ ಸಮಯದಲ್ಲಿ ರಿಫ್ರೆಶರ್ ಕೋರ್ಸುಗಳನ್ನು ಹೊರಡಿಸಬೇಕು.

೨೨. ಪ್ರಾಥಮಿಕ ಸಾಲೆಗಳನ್ನು ಪರೀಕ್ಷಿಸುವ ಸುಪರವಾಯಿಝರರು ತಮ್ಮ ಕಾರ್ಯದಲ್ಲಿ ದಕ್ಷರಾಗುವಂತೆ ಅವರಿಗೆ ಪ್ರತ್ಯೇಕವಾಗಿ ಟ್ರೇನಿಂಗು ಕೊಡಬೇಕು. ಅವರಿಗೆ ಹಂಚಿಕೊಟ್ಟ ಭಾಗದಲ್ಲಿ ಒಂದು ಕೇಂದ್ರ ಸ್ಥಳವನ್ನು ಆರಿಸಿ ಅದರ ಸುತ್ತು ಮುತ್ತಲಿನ ಸುಮಾರು ೫೦-೬೦ ಸಾಲೆಗಳನ್ನು ಅವರ ವಶದಲ್ಲಿ ಕೊಡಬೇಕು.

೪ ವರ್ಷದ ಮಾಧ್ಯಮಿಕ ಶಿಕ್ಷಣದ ಯೋಜನೆ

೨೩. ಮಾಧ್ಯಮಿಕ ಸಾಲೆಗಳ ಯೋಜನೆಯು ೭ ವರ್ಷದ ಪ್ರಾಥಮಿಕ ಸಾಲೆಯ ಅಭ್ಯಾಸಕ್ರಮವು ಮುಗಿದಂದಿನಿಂದ ಆರಂಭವಾಗಬೇಕು.

೨೪. ಪ್ರಾಥಮಿಕ ಸಾಲೆಯ ಮೇಲಿನ ವರ್ಗಗಳನ್ನಷ್ಟೇ ಇಡಬೇಕೆಸ್ಸು ವಂಥ ಸಂಚಾಲಕರು ಇಡೀ ೭ ವರ್ಷದ ಪ್ರಾಥಮಿಕ ಸಾಲೆಗಳನ್ನೇ ನಡೆಸುವಂತೆ ಅವರಿಗೆ ಸರಕಾರದವರು ಪ್ರೋತ್ಸಾಹಕೊಡಬೇಕು.

೨೫. ಮಾಧ್ಯಮಿಕ ಸಾಲೆಗಳಲ್ಲಿಯ ಯೋಜನೆಯ ಅವಧಿಯು ನಾಲ್ಕು ವರ್ಷಗಳದಿದ್ದು ಅಲ್ಲಿಯ ಇಯತ್ತೆಗಳು ಪ್ರಾಥಮಿಕ ಸಾಲೆಯಲ್ಲಿಯ ೭ನೆ ಇಯತ್ತೆ ಯಾದನಂತರ ೮-೯-೧೦-೧೧, ಎಂದು ಇರಬೇಕು.

೨೬. ಮಾಧ್ಯಮಿಕ ಸಾಲೆಯ ಯೋಜನೆಯನ್ನು ಸಾಮಾನ್ಯ ಮತ್ತು ಶಾಸ್ತ್ರೀಯ ಹೀಗೆಂದು ಎರಡು ಭಾಗ ಮಾಡಬೇಕು. ೪ ವರ್ಷದ ಅವಧಿಯನ್ನು ಎರಡೆರಡು ವರ್ಷದಂತೆ ವಿಭಾಗಿಸಬೇಕು. ಮತ್ತು ೮ನೆಯ ಮತ್ತು ೯ನೆಯ ಇಯತ್ತೆಗಳಲ್ಲಿ ಪ್ರಾಯೋಗಿಕ ಭಾಗವನ್ನು ಬಿಟ್ಟು ಉಳಿದ ವಿಷಯಗಳು ಎಲ್ಲ ವಿದ್ಯಾರ್ಥಿಗಳಿಗೂ ಅವಶ್ಯವಾಗಿರಬೇಕು.

ಬೇರೆ ಬೇರೆ ವಿಭಾಗಗಳಲ್ಲಿ ಕೆಳಗೆ ಕಾಣಿಸಿದಂತೆ ವಿಷಯಗಳು ಸಮಾವೇಶ ವಾಗಿರಬೇಕು. ಸಾಮಾನ್ಯವಿಭಾಗ (general) :— ಸಾಹಿತ್ಯ, ಕಲೆ, ವ್ಯಾಪಾರ ಶಾಸ್ತ್ರೀಯ :— ಬುಕ್ಕಲುತನ, ಔದ್ಯೋಗಿಕ, ಟೆಕ್ನೊಲಾಜಿ.

ಶಾಸ್ತ್ರೀಯ ಮತ್ತು ಧಂದೆಗನುಸರಿಸಿದ ಪ್ರತ್ಯೇಕವಾಗಿ ಒಂದು ತಜ್ಞರ ಕಮಿಟಿಯನ್ನು ನೇಮಿಸಿ ಅವರ ಕಡೆಯಿಂದ ಸವಿಸ್ತಾರವಾದ ಅಭ್ಯಾಸಪತ್ರಿಕೆಯನ್ನು ತಯಾರಿಸಿಕೊಳ್ಳಬೇಕು.

೨೭. ತಜ್ಞರನ್ನೊಳಗೊಂಡ ಒಂದು ಬೋರ್ಡಿನ ಕೂಡ ವಿಚಾರವಿನಿಮಯ ಮಾಡಿ, ಕೆಲವು ವರ್ಷಗಳವರೆಗೆ ಸರಿಯಾಗಿ ಸಾಗುತ್ತಬಂದಿರುವ ಔದ್ಯೋಗಿಕ ಸಂಸ್ಥೆಗಳಲ್ಲಿ ಕೆಲಸಮಾಡಿರುವ ಅಥವಾ ಈಗ ಮಾಡುತ್ತಿರುವ ಶಿಕ್ಷಕರೊಳಗಿಂದ ಔದ್ಯೋಗಿಕ ಕಾರ್ಯಕ್ಕೆಂದು ಯೋಗ್ಯರಾದವರನ್ನು ಸದ್ಯಕ್ಕೆ ಆರಿಸಬೇಕು.

೨೮. ಮಾಧ್ಯಮಿಕ ಶಾಲೆಗಳಲ್ಲಿ ಇಂಗ್ಲೀಷು ಮತ್ತು ಹಿಂದುಸ್ತಾನೀ ಈ ವಿಷಯಗಳ ಹೊರತು ಉಳಿದವುಗಳನ್ನು ಮಾತೃಭಾಷೆಯ ಮುಖಾಂತರವಾಗಿಯೇ ಕಲಿಸತಕ್ಕದ್ದು.

ಇಂಗ್ಲಿಷಿನ ಸ್ಥಾನ

೨೯. ಮಾಧ್ಯಮಿಕ ಶಾಲೆಯ ಮೊದಲನೆಯ ಇಯತ್ತೆಗೆ ಬರುವದಕ್ಕಿಂತ ಮುಂಚಿತವಾಗಿ ಇಂಗ್ಲೀಷನ್ನು ಸಾಧಾರಣವಾಗಿ ಆರಂಭಿಸಬಾರದು. ಯಾವದಾದರೊಂದು ಮರ್ಯಾದಿತ ಕ್ಷೇತ್ರದಲ್ಲಿ (Locality) ಪ್ರಾಥಮಿಕ ಶಾಲೆಯ ಮೇಲಿನ ವರ್ಗಗಳಲ್ಲಿ ಇಂಗ್ಲೀಷನ್ನು ಕಲಿಸುವದರ ಸಲುವಾಗಿ ಬೇಡಿಕೆಯು ಕಂಡುಬಂದರೆ ಮತ್ತು ಇಂಗ್ಲೀಷನ್ನು ಕಲಿಸಲು ಯೋಗ್ಯ ಶಿಕ್ಷಕರನ್ನು (Qualified Teachers) ನಿಯಮಿಸುವ ಏರ್ಪಾಡನ್ನು ತೃಪ್ತಿಕರವಾಗಿ ಮಾಡಿದರೆ ಆ ವಿಷಯವನ್ನು ಐಚ್ಛಿಕ ವಿಷಯವೆಂದು ಪ್ರಾಥಮಿಕ ಶಾಲೆಗಳ ಮೇಲಿನ ವರ್ಗಗಳ ಅಭ್ಯಾಸಪತ್ರಿಕೆಯಲ್ಲಿ ಸೇರಿಸಲು ಅಡ್ಡಿ ಇಲ್ಲ. ಆದರೆ ಅದರ ಖರ್ಚಿನ ಹೊಣೆಗಾರಿಕೆಯನ್ನು ಸರಕಾರದವರು ಹೊತ್ತುಕೊಳ್ಳುವದಿಲ್ಲ.

೩೦. ಇಂಗ್ಲೀಷ ಶಿಕ್ಷಣದ ಮೂಲ ಉದ್ದೇಶವು ವ್ಯವಹಾರದ ಸಲುವಾಗಿ ಎಂದೇ ತಿಳಿಯತಕ್ಕದ್ದು.

೩೧. ಮಾಧ್ಯಮಿಕ ಶಾಲೆಗಳಮೇಲೆ ಪರೀಕ್ಷೆಗಳ ಭಾರವು ಬಹಳವಾಗಿ ಬಿದ್ದಿರುವದೆಂದು ನಮ್ಮ ಅಭಿಪ್ರಾಯ. ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯ ಕಾಟವನ್ನು (tyranny) ಸಂಪೂರ್ಣವಾಗಿ ತೆಗೆದು ಹಾಕುವ ಉದ್ದೇಶದಿಂದ ಮಾಧ್ಯಮಿಕ ಶಾಲೆಗಳ ಮುಖ್ಯ ಅಧ್ಯಾಪಕರೇ ತಮ್ಮ ವಿದ್ಯಾರ್ಥಿಗಳಿಗೆ ಸೆಕಂಡರಿ ಸ್ಕೂಲ ಲೀವ್ವಿಂಗ ಸರ್ಟಿಫಿಕೆಟುಗಳನ್ನು ದಯಪಾಲಿಸಬೇಕು. ಆಗ ಅವರು ವರ್ಗ, ಆಟದ ಬೈಲು, ಪ್ರಾಯೋಗಿಕ ಶಾಲೆ (workshop), ಶಾಲೆಯ ಸಾಮಾಜಿಕ, ಮತ್ತು ಸಾಮಾನ್ಯ ಚಟುವಟಿಕೆಗಳು, ಶಾಲೆಯ ಪರೀಕ್ಷೆಗಳು ಇವೆಲ್ಲವುಗಳಲ್ಲಿಯ ೪ ವರ್ಷಗಳ ವರೆಗಿನ ಆ ಆ ವಿದ್ಯಾರ್ಥಿಯ ಕಾರ್ಯವನ್ನು ಅನುಲಕ್ಷಿಸಬೇಕು.

೩೨. ಈಗಿನ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯ ಬದಲಾಗಿ ವಿಶಿಷ್ಟವಾದ ಒರೆಗೆ ಹಚ್ಚಿಯಾಗಲಿ ಪ್ರವೇಶ ಪರೀಕ್ಷೆಯನ್ನು ತೆಗೆದುಕೊಂಡಾಗಲಿ ತಮ್ಮ ಆಶ್ರಯಕ್ಕೆ ಹೊಂದಿದ (affiliated) ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿ ಕೊಳ್ಳುವಂತೆ ವಿಶ್ವವಿದ್ಯಾಲಯದ ಅಧಿಕಾರಿಗಳ ಕಡೆಯಿಂದ (move) ಮಾಡಿಸ ಬೇಕು. ಹೀಗಿರುವಾಗ ಯೋಗ್ಯರಾದ ವಿದ್ಯಾರ್ಥಿಗಳೇ ಮಾತ್ರ ಸಿಕ್ಕಬಲ್ಲರು ಮಾಧ್ಯಮಿಕ ಸಾಲೆಗಳ ಸರ್ಟಿಫಿಕೇಟು ಹೊಂದಿದವರು ಮಾತ್ರ ಈತರಹ ಪ್ರವೇಶಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರೆಂದು ತಿಳಿಯಬೇಕು.

೩೩. ವಿಶ್ವವಿದ್ಯಾಲಯದವರು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯನ್ನು ಅಮೂಲಾಗ್ರವಾಗಿ ಕಿತ್ತಿ ಒಗೆಯುವವರೆಗೆ ಪರೀಕ್ಷೆಯಲ್ಲಿ ಸಾಮಾನ್ಯವಾಗಿ ಈಚೆಯ ಹೆಚ್ಚುಕಡಿಮೆಗಳನ್ನು ಮಾಡುವಂತೆಯೂ ಮತ್ತು ಅಭ್ಯಾಸ ಪತ್ರಿಕೆಯಲ್ಲಿ ಐಚ್ಛಿಕ (alternative) ವಿಷಯಗಳನ್ನು ಒದಗಿಸಿಕೊಡುವಂತೆಯೂ ಮಾಡಿ ಈಗಿನ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತಿದ್ದುಪಡಿ ಮಾಡುವಂತೆ ಅವರಿಗೆ ಹಚ್ಚಬೇಕು.

೩೪. ಆರಂಭದಿಂದಲೂ ಇಂಗ್ಲೀಷನ್ನು ಕಲಿಸುವಂಥ ಸಾಲೆಗಳು ಈಗಿನಂತೆ ಮುಂದುವರಿಯಲು ಅವರಿಗೆ ಪರವಾನಿಗೆ ಇದ್ದರೂ ಪ್ರಾಂತದ ಯಾವದಾದರೊಂದು ನಿಶ್ಚಿತ (recognised) ಭಾಷೆಯನ್ನೂ ಮತ್ತು ಅಥವಾ ಹಿಂದುಸ್ತಾನಿಯನ್ನು ಕಲಿಸಲು (regular) ವ್ಯವಸ್ಥೆಯನ್ನು ಮಾಡುವಂತೆ ಒತ್ತಾಯಪಡಿಸಬೇಕು.

೩೫. ತಜ್ಞರ ಸಹಾಯದಿಂದ ಮಾಧ್ಯಮಿಕ ಸಾಲೆಯಲ್ಲಿಯ ಔದ್ಯೋಗಿಕ ಕೆಲಸವನ್ನು ಆಗಾಗ್ಗೆ ಪರೀಕ್ಷಿಸುವಂತೆ ಶಿಕ್ಷಣಖಾತೆಯವರು ಏರ್ಪಾಡು ಮಾಡಬೇಕು.

೩೬. ಸರಕಾರದವರಿಂದ ಸ್ಯಾಂಕ್ಷ್ಯನ್ ಆದ ಅಭ್ಯಾಸಪತ್ರಿಕೆಯು ಸಾಧಾರಣವಾಗಿ ಎಲ್ಲರಿಗೂ ಸಾಮಾನ್ಯವಾಗಿ (standard) ಇದ್ದಾಗ್ಯೂ ಮೂಲತತ್ವ ಮತ್ತು ಉದ್ದೇಶಕ್ಕೆ ಅವಿರೋಧವಾಗದಂತೆ ಅಲ್ಲಲ್ಲಿಯ ಪರಿಸ್ಥಿತಿಗೆ ಅನುಸರಿಸುವಂತೆ ಏನಾದರೂ ವಿಶಿಷ್ಟವಾದ ಹೆಚ್ಚುಕಡಿಮೆಗಳನ್ನು ಅಥವಾ ಅದಲು ಬದಲುಗಳನ್ನು ಮಾಡಿಕೊಳ್ಳಲು ಬರುವದು. ಹೀಗೆ ಮಾಡಬೇಕಾದರೆ ಶಿಕ್ಷಣಖಾತೆಯವರಿಗೆ ಸಾಲೆಯು ಆರಂಭದ ಮೊದಲು ಬರೆಹದಲ್ಲಿ ತಿಳಿಸಿ ಅವರ ಕಡೆಯಿಂದ ಅನುಮತಿ ಪಡೆಯಬೇಕು.

ತಜ್ಞರ ಸಲಹೆಗಾರ (advisory) ಬೋರ್ಡು

೩೭. ಸಾಮಾಜಿಕ ಚಟುವಟಿಕೆ, ಔದ್ಯೋಗಿಕ, ಉದ್ಯೋಗಧಂದೆ ಶಿಕ್ಷಣ ಇವುಗಳಲ್ಲಿ ಮುಂದುವರಿದ ಪ್ರಸಿದ್ಧರಾದ ಅನಧಿಕೃತ ಜನರೂ ಶಿಕ್ಷಣದ ಬೇರೆ ಬೇರೆ ಖಾತೆಗಳಲ್ಲಿಯ ತಜ್ಞ ಅಧಿಕಾರಿಗಳೂ ಇವರನ್ನೊಳಗೊಂಡ ಒಂದು ಸಲಹೆಗಾರ (advisory) ಶಿಕ್ಷಣ ಬೋರ್ಡನ್ನು ಸ್ಥಾಪಿಸಬೇಕು.

ಸಲಹೆಗಾರ ಬೋರ್ಡಿನ ಕಾರ್ಯವು ಕೆಳಗೆ ಕಾಣಿಸಿದಂತೆ ಇರಬೇಕು.

೧. ಶಿಕ್ಷಣ ನೀತಿ ಮತ್ತು ರೀತಿಗಳ ವಿಷಯವಾಗಿ ಸರಕಾರಕ್ಕೆ ಸಲಹೆ ಕೊಡಬೇಕು.

೨. ಹಿಂದುಸ್ತಾನದಲ್ಲಿಯ ಬೇರೆ ಬೇರೆ ಪ್ರಾಂತಗಳಿಂದ ಮತ್ತು ಪರದೇಶಗಳಿಂದ ಶಿಕ್ಷಣದ ವಿಷಯವಾಗಿರುವ ಚಟುವಟಿಕೆ ಮತ್ತು ಪ್ರಯೋಗ ಇವುಗಳ ಬಗ್ಗೆ ಇರುವ ಪ್ರಚಲಿತ ಸಂಗತಿಗಳನ್ನು ದೊರಕಿಸಿ ಕಲೆಹಾಕಬೇಕು.

೩. ಶಿಕ್ಷಣದಲ್ಲಿರುವ ಅಧುನಿಕ ವಿಚಾರಗಳು ಪ್ರಸಾರವಾಗುವಂತೆ 'ಬ್ಯುಲೆಟಿನ್'ಗಳನ್ನು ಹೊರಡಿಸಬೇಕು.

೪. ಸರಕಾರದ ಉಪಯುಕ್ತ ಖಾತೆಗಳಿಂದ ಮತ್ತು ಔದ್ಯೋಗಿಕ ಟ್ರೇನಿಂಗಿನ ಸಲುವಾಗಿ ವ್ಯಾಪಾರಿ ಸಂಘ ಮತ್ತು ಔದ್ಯೋಗಿಕ ಸಂಸ್ಥೆ ಇವುಗಳಿಂದ ಸಹಕಾರವನ್ನು ದೊರಕಿಸುವಂತೆ ಉಪಾಯ ಹಂಚಿಕೆಗಳನ್ನು ಸರಕಾರದವರಿಗೆ ಸೂಚಿಸಬೇಕು.

೫. ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಔದ್ಯೋಗಿಕ ವಿಷಯದಲ್ಲಿ ಮಾರ್ಗದರ್ಶಕತ್ವದ ವ್ಯವಸ್ಥೆಯ ಬಗ್ಗೆ ಸಲಹೆ ಕೊಡಬೇಕು.

೬. ಈ ಸಲಹೆಗಾರ ಮಂಡಲವು ಸಾಮಾನ್ಯ ಶಿಕ್ಷಣದ ವಿಷಯವಾಗಿ ಮತ್ತು ಔದ್ಯೋಗಿಕ ಶಿಕ್ಷಣದ ವಿಷಯವಾಗಿ ಉಪಮಂಡಲಗಳನ್ನು ನೇಮಿಸಬೇಕು. ಈ ಉಪಮಂಡಲಗಳಿಗೆ ತಜ್ಞರನ್ನು ತನ್ನ ಮಂಡಲಗಳಿಗೆ ಕೊಆಪ್ಟ ಮಾಡಿಕೊಳ್ಳುವ ಅಧಿಕಾರವಿರಬೇಕು.

ಪ್ರಕಟನಾ ಶಾಖೆಯ ಅವಶ್ಯಕತೆ

೩೮. ಈ ಹೊಸ ಯೋಜನೆಯು ಯಶಸ್ವಿಯಾಗಬೇಕಾದರೆ ಶಿಕ್ಷಕರಿಗೂ, ಪಳ್ಳಿಗಳಲ್ಲಿಯ ವಾಚನಾಲಯಗಳಿಗೂ, ಶಾಲೆಯ ಬಾಲಕರಿಗೂ, ಮತ್ತು ಪ್ರೌಢ

ಸುಶಿಕ್ಷಿತರಿಗೂ ಉಪಯೋಗವಾಗುವಂತಹ ಪುಸ್ತಕಗಳನ್ನೂ ಇನ್ನಿತರ ಉಪಯುಕ್ತ ಉಪಕರಣಗಳನ್ನೂ (appliances) ತಯಾರಿಸುವಂತಹ ಒಂದು ಪ್ರಕಟನಾ ಶಾಖೆಯನ್ನು ನಿರ್ಮಾಣಮಾಡಬೇಕು.

೬೯. ಪ್ರಾಥಮಿಕ ಸಾಲೆ ಮತ್ತು ಮಾಧ್ಯಮಿಕ ಸಾಲೆಗಳಲ್ಲಿಯ ಶಿಕ್ಷಕರಿಗೆ ಇವರಷ್ಟೇ ಜ್ಞಾನ ಮತ್ತು ಯೋಗ್ಯತೆ (attainments and qualifications) ಯನ್ನು ಹೊಂದಿ ಇನ್ನಿತರ ಸರಕಾರೀ ಖಾತೆಗಳಲ್ಲಿ ಕೆಲಸ ಮಾಡುತ್ತಿರುವವರ ಸಲುವಾಗಿ ನಿಶ್ಚಯಿಸಿದ ಪಗಾರದ ಸ್ಕೇಲನ್ನೇ ಕೊಡಬೇಕೆಂದು ನಮ್ಮ ಅಭಿಪ್ರಾಯ.

೭೦. ಖಾಸಗಿ ಸಾಲೆಗಳಲ್ಲಿ ಪ್ರಶಸ್ತಿಯನ್ನು ಪಡೆದ (qualified) ಶಿಕ್ಷಕರನ್ನು, ಅವರಿಗೆ ತಕ್ಕ ಪಗಾರದ ಸ್ಕೇಲು ಕೊಟ್ಟು ಅವರ ನೌಕರಿಯ ಸ್ಥೈರ್ಯವನ್ನು ಸಾಕಷ್ಟು ವಿಚಾರಿಸಿ ಮತ್ತು ಮುಪ್ಪಿನ ಕಾಲದ ಸಲುವಾಗಿ ಏನಾದರೊಂದು ವ್ಯವಸ್ಥೆಯನ್ನು ಮಾಡಿ, ನಿಯಮಿಸಿಕೊಳ್ಳುವದಕ್ಕೂ, ಪ್ರಾಥಮಿಕ ಮತ್ತು ಮಾಧ್ಯಮಿಕ ಸಾಲೆಗಳಲ್ಲಿ ಪ್ರಾಯೋಗಿಕ ಕಾರ್ಯದ ಸಾಮಗ್ರಿಗಳನ್ನೂ (Provision) ಒದಗಿಸಿ ಕೊಡಲಿಕ್ಕೆಂದು ಬೇಕಾಗುವ ಹೆಚ್ಚಿನ ಖರ್ಚನ್ನು ಖಾಸಗೀ ಸಾಲೆ (aided schools) ಗಳು ಹೊರಬೇಕಾಗುವದರಿಂದ ಅಂಥ ಸಾಲೆಗಳಿಗೆ ಕೊಡುವ ದ್ರವ್ಯನಿಧಿಯ ಸ್ಕೇಲನ್ನು ಪುನರ್ರಚಿಸಬೇಕು.

ಹಳ್ಳಿಗಳಲ್ಲಿಯ ವಾಚನಾಲಯಗಳು

೪೧. ಪ್ರಾಥಮಿಕ ಸಾಲೆಯ ಳನೆ ಇಯತ್ತ್ಯೆಯ ನಂತರ ಮುಂದಿನ ಅಭ್ಯಾಸವನ್ನು ಮುಂದುವರಿಸಲಿಕ್ಕಾಗದ ಬಾಲಕರ ದೆಶೆಯಿಂದ ವಾಚನಾಲಯಗಳ ಸಂಘಟನೆಯಾಗುವದು ಅವಶ್ಯ. ಇಂಥ ವಾಚನಾಲಯಗಳು ಮೊದಲು ಸಾಲೆಗಳಿದ್ದ ಹಳ್ಳಿಗಳಲ್ಲಿ ಆರಂಭವಾಗಬೇಕು.

೪೨. ವಿದ್ಯಾರ್ಥಿಗಳಿಗೆ ಅವರು ಅನುಸರಿಸಬಹುದಾದ ಮುಂದಿನ ಶಿಕ್ಷಣ ಮಾರ್ಗ (career) ನ್ನು ತಿಳಿಸುವಂತೆಯೂ ಮತ್ತು ಶಿಕ್ಷಣ ಮಾರ್ಗಕ್ಕೆ ಅವಶ್ಯ ವಿರುವ ಮೊದಲಿನ ಶಿಕ್ಷಣ (Preliminary) ವಿಷಯದ ಮೊದಲು ಕೊಡುವ ಶಿಕ್ಷಣವನ್ನೂ ಹೇಳಿಕೊಡುವಂತೆ ಸರಕಾರದವರು ಹಸ್ತಪತ್ರಿಕೆ (Pamphlet) ಗಳನ್ನೂ ಹೊರಡಿಸಿ ತಿಳಿಯ ಹೇಳಬೇಕು.

೪೩. ಹ್ಯಾಬಟ್ ಮತ್ತು ವುಡ್‌ರವರ ರಿಪೋರ್ಟಿನಲ್ಲಿ ಕಾಣಿಸಿದಂತೆ ಅವಶ್ಯ ವಿರುವ ಸ್ಥಳಗಳಲ್ಲಿ ಪೂರ್ಣ ವೇಳೆಯ ವರೆಗೂ ನಡೆಯುತ್ತಿರುವಂಥ ಸಾಲೆಗಳಲ್ಲಿ

ಶಿಕ್ಷಣದ ಲಾಭವನ್ನು ಪಡೆಯಲಾರದಂಥವರ ಸಲುವಾಗಿ ಅರ್ಧ ವೇಳೆಯ ವರೆಗೆ ನಡೆಯುವಂಥ ಮುಂದುವರಿದ ಶಿಕ್ಷಣವನ್ನಾಗಲಿ ಅಥವಾ ಔದ್ಯೋಗಿಕ ಶಿಕ್ಷಣವನ್ನಾಗಲಿ ಕೊಡುವಂಥ ಸಂಸ್ಥೆಗಳನ್ನೂ ಸಂಘಟಿಸಬೇಕು.

೪೪. ಪ್ರಾಥಮಿಕ ಮತ್ತು ಮಾಧ್ಯಮಿಕ ಸಾಲೆಗಳ ಪ್ರಾಯೋಗಿಕ ಶಿಕ್ಷಣವನ್ನು ಸಾಕಷ್ಟು (substantial) ಸೇರಿಸಿ ಒಂದು ಹೊಸ ಯೋಜನೆಯನ್ನು ತಯಾರಿಸಿದ್ದರಿಂದ ಈ ದೃಷ್ಟಿಯಿಂದ ನೋಡಲಾಗಿ ಕೆಲವು ಔದ್ಯೋಗಿಕ ವೃತ್ತಿಯ ಟೆಕ್ನಿಕಲ್ ಮತ್ತು ವಿಶಿಷ್ಟವಾದ (specialised) ಸಂಸ್ಥೆಗಳನ್ನು ಒದಗಿಸಿ ಕೊಡುವದು ಅವಶ್ಯವಾದ ಸಂಗತಿಯು. ಸರಕಾರದವರು ಇಂಥ ಸಂಸ್ಥೆಗಳನ್ನು ಆರಂಭಿಸಬೇಕಾಗಿ ಅವರಿಗೆ ನಮ್ಮ ವಿನಂತಿ.

ಅಂತರಾಳ ವ್ಯವಸ್ಥೆ (Transitional arrangement)

೪೫. ತಳಹದಿಯ ಅಥವಾ ಮೂಲ ಪ್ರಾಥಮಿಕ ಶಿಕ್ಷಣದ ಯೋಜನೆಯನ್ನು ಪ್ರಾರಂಭಿಸುವ ಹಾಗು ಅದನ್ನು ಬೆಳೆಸುವ ಕಾರ್ಯವನ್ನು ಕೈಕೊಂಡು ಸಂಘಟಿಸಲಿಕ್ಕೆ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಹುದ್ದೆಯ ಒಬ್ಬ ಸ್ಪೆಶಲ್ ಆಫೀಸರನ್ನು ಈಗಿಂದೀಗಲೇ ನೇಮಿಸಬೇಕು. ಅವನು ಈ ಕಾರ್ಯಕ್ಕೆಂದೇ ನಿಯಾಮಕವಾದ ಒಂದು ಸಣ್ಣ ಸಲಹೆಮಂಡಲದಗೂಡ ವಿಚಾರವಿನಿಮಯಮಾಡಿ ಕಾರ್ಯ ಮಾಡತಕ್ಕದ್ದು. ಅವನಿಗೆ ಅವಶ್ಯವಾದಷ್ಟು ಸಹಾಯಕರನ್ನು ಪೂರೈಸಿ ಕೊಡಬೇಕು.

೪೬. ಈ ಮೂಲ ಪ್ರಾಥಮಿಕ ಶಿಕ್ಷಣ (Basic Education) ದ ಪ್ರಯೋಗವನ್ನು ಮಾಡಿ ನೋಡಲಿಕ್ಕೆಂದು ಪ್ರತಿಯೊಂದು ಜಿಲ್ಲೆಯಲ್ಲಿ ಯೋಗ್ಯ ಅನುಕೂಲತೆಗಳುಳ್ಳ ಮಾಟಾದ (compact) ಕ್ಷೇತ್ರವನ್ನು ಆರಿಸಬೇಕು. ಅನಷ್ಟು ಮಟ್ಟಿಗೆ ಈ ಕ್ಷೇತ್ರದಲ್ಲಿರುವ ಎಲ್ಲ ಸಾಲೆಗಳನ್ನು ಈ ಹೊಸ ಶಿಕ್ಷಣ ಕೊಡುವ ಸಾಲೆಗಳಲ್ಲಿ ಪರಿವರ್ತಿಸಬೇಕು. ಈ ಕ್ಷೇತ್ರದಲ್ಲಿಯ ಪೂರ್ಣ ೭ ಇಯತ್ತ್ತಿಯ ವರೆಗಿರುವ ಈಗಿನ ಸಾಲೆಗಳನ್ನು, ೮ ಅಥವಾ ಹೆಚ್ಚು ಉತ್ಪನ್ನದಾಯಕ (productive) ವೃತ್ತಿಗಳನ್ನು ಕಲಿಸುವ ಏರ್ಪಾಡುಳ್ಳ ತಳಹದಿಯ ಅಥವಾ ಮೂಲ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಪೂರ್ಣ ೭ ವರ್ಷದ ಹೊಸ ಯೋಜನೆಯನ್ನೊಳಗೊಂಡ ಹೊಸ ಪ್ರಾಥಮಿಕ ಸಾಲೆಗಳಾಗುವಂತೆ ಸಂಘಟಿಸಬೇಕು.

೪೭. ಈ ಪ್ರಯೋಗವನ್ನು ಮೊದಲು ೧೯೩೮-೧೯೩೯ ರಲ್ಲಿ ಮಾಡಬೇಕು. ಸಾಮಾಧಾನಕರವೆಂದು ಕಂಡಲ್ಲಿ ಈ ಪ್ರಯೋಗದ ಕ್ಷೇತ್ರವನ್ನು ೧೯೩೯-೧೯೪೦

ರಲ್ಲಿ ವಿಸ್ತರಿಸಬೇಕು. ಮತ್ತು ೧೯೪೦ ರ ಕೊನೆಯೊಳಗಾಗಿ ಪೂರ್ಣವಾಗಿ ಸಿಂಹಾವಲೋಕಿಸಿ (review) ಹೊಂದಿದ ಅನುಭವದ ಮೇಲೆ ಇಡೀ ಇಲಾಖೆಯಲ್ಲಿಯ ಪ್ರಾಥಮಿಕ ಶಿಕ್ಷಣದ ಪುನರ್ಘಟನೆಯನ್ನು ೫ ವರ್ಷಗಳೊಳಗಾಗಿ ಪೂರ್ಣವಾಗುವಂತೆ ಮಾಡಬೇಕು.

ಶಿಕ್ಷಕರಿಗಾಗಿ ಯೋಜನೆ

೪೮. ಈ ಹೊಸ ಶಿಕ್ಷಣವು ಯಶಸ್ವಿಯಾಗಬೇಕಾದರೆ ಪ್ರತಿಯೊಂದು ಭಾಗದಲ್ಲಿಯ ಹಸ್ತವ್ಯವಸಾಯದ ಅಥವಾ ಏನಾದರೊಂದು ಉತ್ಪನ್ನದಾಯಕ ಕಾರ್ಯದ ಒಲುವು (Productive work) ವುಳ್ಳ ಟ್ರೇಂಡ ಶಿಕ್ಷಕರನ್ನು ಆರಿಸಿ ಅವರಿಗೆ ಪ್ರತ್ಯೇಕವಾಗಿ ಟ್ರೇನಿಂಗು ಕೊಡುವ ವ್ಯವಸ್ಥೆ ಈಗಿಂದೀಗಲೇ ಆಗತಕ್ಕದ್ದು. ಈ ಸದ್ಯದ (emergency) ಟ್ರೇನಿಂಗು ಕೊಡುವ ಯೋಜನೆಯು ಪ್ರಾರಂಭಕ್ಕೆ ೬ ತಿಂಗಳವರೆಗಿನದಿದ್ದು ಕೆಳಗೆ ಕಾಣಿಸಿದ ವಿಷಯಗಳನ್ನು ಇನ್ನಿತರ ವಿಷಯಗಳ ಗೂಡ ಕಲಿಸತಕ್ಕದ್ದು.

೧. ಶಿಕ್ಷಕರಿಗೆ ಕನಿಷ್ಟ ಎರಡು ವೃತ್ತಿ (crafts) ಗಳಲ್ಲಾದರೂ ಟ್ರೇನಿಂಗು ಕೊಡಬೇಕು.

೨. ಉದ್ದೇಶ ಪೂರ್ವಕವಾದ ಕೆಲವು ಚಟುವಟಿಕೆ (Projects) ಗಳನ್ನು ತಯಾರಿಸುವದು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರುವದು. ಇದೇ ಪ್ರಕಾರ ಬೇರೆ ಬೇರೆ ವಿಷಯಗಳನ್ನು ಒಂದಸ್ಸೊಂದು ಸಂಬಂಧಿಸಿ ಹೊಂದಿಕೊಳ್ಳುವಂತೆ (correlated studies) ಯೋಜನೆಯನ್ನು ತಯಾರಿಸಿ ಅದನ್ನು ಕಾರ್ಯರೂಪಕ್ಕೆ ತರುವದು.

೩. 'ಮಾಡಿ ಕಲಿ' ಪದ್ಧತಿ, ಶಿಕ್ಷಣವನ್ನು ಜನಜೀವನಕ್ಕನುಸರಿಸೋಣ ಸ್ವಯಂ ಪ್ರೇರಿತನಾಗಿ ಮುಂದಾಗುವದಕ್ಕೆ ಅವಕಾಶವನ್ನು ಒದಗಿಸಿಕೊಡೋಣ ಸಾಮಾಜಿಕ ಜವಾಬುದಾರಿಯ ಕಲ್ಪನೆ, ರಾಷ್ಟ್ರೀಯ ಸಹಕಾರದ ಸಂಘಟನೆಯ ಸಲುವಾಗಿ ಸಮಾಜಸೇವೆಯ ಪ್ರವೃತ್ತಿ (spirit) ಇವೇ ಮುಂತಾದ ವಿಚಾರಗಳನ್ನೊಳಗೊಂಡು ಶಿಕ್ಷಣದ ಮೂಲ ಉದ್ದೇಶ-ಗುರಿಗಳನ್ನು ಒಡಮೂಡಿಸುವದು.

೪. ಶಾರೀರಿಕ ಶಿಕ್ಷಣ, ಡ್ರಾಯಿಂಗು ಗಾಯನ ಇವುಗಳ ವಿಷಯವಾಗಿ ಪ್ರತ್ಯೇಕವಾದ ಯೋಜನೆ.

೫. ದೇಹಶಾಸ್ತ್ರ ಆರೋಗ್ಯಶಾಸ್ತ್ರ ಗ್ರಾಮ ಸ್ವಚ್ಛತೆ (sanitation) ಆಹಾರ, ಸಾಮಾಜಿಕ ವಿಷಯಗಳು ಹಿಂದುಸ್ತಾನೀ ಈ ಎಲ್ಲ ವಿಷಯಗಳನ್ನು ತುಸು ಮಟ್ಟಿಗೆ ಅಭ್ಯಾಸಿಸಬೇಕು.

೬. ಪ್ರ್ಯಾಕ್ಟೆಸಿಂಗ ಸ್ಕೂಲಿನಲ್ಲಿ ಯೋಗ್ಯ ನೇತೃತ್ವದ ಕೆಳಗೆ (under proper supervision) ಕನಿಷ್ಟ ೨೫ ಪಾಠಗಳನ್ನಾದರೂ ಕಲಿಸಬೇಕು. ಪ್ರತಿಯೊಬ್ಬ ಶಿಕ್ಷಕನಿಗೆ ಪೂರ್ಣ ಸಹಕಾರದ ವಾತಾವರಣದಲ್ಲಿ ಉತ್ಸಾಹಪೂರ್ವಕ (vigorous) ಸಾಮಾಜಿಕ ಜೀವನವನ್ನು ಸಾಗಿಸುವ ಟ್ರೇನಿಂಗು ದೊರಕುವಂತೆ ಪ್ರಸಂಗಗಳನ್ನು ಒದಗಿಸಿ ಕೊಡಲು ಈ ಟ್ರೇನಿಂಗ ಸಂಸ್ಥೆಗಳು ವಸತಿ ಗೃಹಗಳಿಂದ ಕೂಡಿದವಿರಬೇಕು.

ಚಿತ್ರಮೂಲಕ ನಿಬಂಧ ಕಲಿಸುವ ಬಗ್ಗೆ ಸಾಮಾನ್ಯ ವಿಚಾರಗಳು

ಲೇಖಕ:— ಜಿ. ಎಮ್. ಸಾತೇನಹಳ್ಳಿ ಅ. ಮಾಸ್ತರ ಪ್ರ್ಯಾಕ್ಟೆಸಿಂಗ ಸ್ಕೂಲು, ಧಾರವಾಡ.

ನಿಬಂಧ ವಿಷಯವು ಬಾಲಕರ ವರ್ಗದಿಂದಲೇ ಆರಂಭವಾಗುವದು. ಬಾಲಕರು ತಮಗೆ ಗೊತ್ತಿರುವ ಸಂಗತಿಗಳನ್ನೂ ಮನಸ್ಸಿನಲ್ಲಿ ಬಂದವಿಚಾರಗಳನ್ನೂ ಪರರಿಗೆ ತಿಳಿಯುವಂತೆ ಬಾಯಿಮಾತಿನಿಂದ ಹೇಳಲಿಕ್ಕೆ ಕಲಿಯಬೇಕಾಗುವದು. ಇದೇ, ಅವರು ಆಗ ಕಲಿಯುವ ನಿಬಂಧ ವಿಷಯದ (ಭಾಷಾಭ್ಯಾಸದ) ಮುಖ್ಯೋದ್ದೇಶವಾಗಿರುವದು. ಅವರು ತಮ್ಮ ಅನುಭವಕ್ಕೆ ಬಂದ ಸಂಗತಿಗಳನ್ನು ಮಾತಾಡಿ ತಿಳಿಸಲು ಬರುತ್ತದೆಂಬ ಭಾವನೆಯವರಾಗಬೇಕೆಂಬದೇ ಈ ಪಾಠಗಳ ಅಭಿಪ್ರಾಯವು, ಇಷ್ಟು ಕೆಲಸವನ್ನು ಮಾಡಿದರೆ ಬಾಲಕರ ವಾಚನಿಕ ನಿಬಂಧದ ಮುಖ್ಯ ಉದ್ದೇಶವು ಸಿದ್ಧವೇರಿಕೆಂದು ತಿಳಿಯಬೇಕು. ಇದರ ಮುಂದಿನ ವಿಭಾಗವು (ಬರೆಹ ಮೂಲಕ ನಿಬಂಧ) ೧ನೆಯ ಇಯತ್ತೆಯಲ್ಲಿ ಆರಂಭವಾಗುವದು.

ಬಾಲಕರ ವರ್ಗಕ್ಕೇ ಆಗಲಿ, ೧ನೆಯ ಇಯತ್ತೆಗೇ ಆಗಲಿ ಕಥೆ, ಗಣಿತ, ಸೃಷ್ಟಿಜ್ಞಾನ ಇತ್ಯಾದಿ ವಿಷಯಗಳಿರುವವು. ಈ ವಿಷಯಗಳ ಬಗ್ಗೆ ಮಕ್ಕಳು ಕೆಲ ಮಾತುಗಳನ್ನು ಕಲಿಯುವಾಗ ಮೊದಲು ಹೇಳತಕ್ಕದ್ದು ಯಾವದು? ಬಳಿಕ ಹೇಳತಕ್ಕದ್ದೇನು? ಎಂಬೀ ಕ್ರಮ ಜ್ಞಾನವು ಅವರಿಗೆ ಹೊಳೆಯುವದು. ಹೀಗೆ ಕ್ರಮಬದ್ಧವಾಗಿ ಮಾತನಾಡಲು ಕಲಿಸುವದು ಸಹ ನಿಬಂಧ ವಿಷಯದಲ್ಲಿಯೇ ಸಮಾವೇಶವಾಗುವದು. ನಿಬಂಧ ಅಥವಾ ಮಾತನಾಡುವ ಕಲೆ ಎಂಬುದು

ಪ್ರತ್ಯೇಕ ವಿಷಯವಲ್ಲ; ಮೇಲೆ ಬರೆದ ಕಥೆ, ಸೃಷ್ಟಿಜ್ಞಾನ ಇತ್ಯಾದಿ ವಿಷಯಗಳ ಮುಖ್ಯೋದ್ದೇಶಗಳು ಬೇರೆ ಬೇರೆ ಆಗಿರುವದರಿಂದ ನಿಬಂಧವೆಂಬ ವಿಷಯವನ್ನು ಪ್ರತ್ಯೇಕವಾಗಿ ಇಡಬೇಕಾಗಿದೆ; ಯಾಕಂದರೆ ಇದು ಮಿಕ್ಕ, ಮೇಲಿನ ವಿಷಯಗಳಂತೆ ವಿಷಯ ಜ್ಞಾನ ಮಾಡಿಕೊಡುವಂಥದಲ್ಲ. ಅಂದಮೇಲೆ ಬಾಲಕರ ಮಿಕ್ಕ ವಿಷಯಗಳಿಲ್ಲ (ಮೇಲೆ ವಿವರಿಸಿದುವು) ಈ ನಿಬಂಧ ವಿಷಯಕ್ಕೆ ಸಹಾಯಕಾರಿಯಾದುವೆಂದು ತಿಳಿಯಬೇಕು.

ಬಾಲಕರು ತಾವು ನೋಡುವ ಕಲಿಯುವ ಪ್ರತಿಯೊಂದು ವಿಷಯದಲ್ಲಿಯೂ ಏನಾದರೂ ಮಾತನಾಡಲಿಕ್ಕೆ ಹಂಬಲಿಸುತ್ತಿರುತ್ತಾರೆ. ಇದು ಸ್ವಾಭಾವಿಕ ಪ್ರವೃತ್ತಿಯು. ಈ ಪ್ರವೃತ್ತಿಗೆ ಶಿಕ್ಷಕನಾಗಲಿ ಪಾಲಕರಾಗಲಿ ಇಂಬುಕೊಟ್ಟು ಅದು ಬೆಳೆಯುವಂತೆ ಮಾಡಬೇಕು, ಪ್ರತಿಯಾಗಿ ಕುಗ್ಗುವಂತೆ ಮಾಡಿದರೆ ಅವರಲ್ಲಿದ್ದ ಶಕ್ತಿಗಳ ಸೂಕ್ಷ್ಮ ಅಂಕುರಗಳು ಮುದುಡಿಹೋಗುತ್ತವೆ. ಅವರು ತೀರ ಅರಿತ, ಅದರೊಳಗೂ ಅವರ ಪ್ರೀತಿಯ ವಿಷಯಗಳಾದ ಅವರ ಮನೆ, ಅಲ್ಲಿ ತೂಗ ಬಿಟ್ಟ ಪಂಜರದ ಗಿಣಿ, ಅವರ ಹಕ್ಕೆಯಲ್ಲಿದ್ದ ಮಾಟಾದ ಕರುಗಳು, ಅವರು ಕೂಡುವ ಮೂರು ಗಾಲಿಯ ಬಂಡಿ ಮುಂತಾದವುಗಳ ವಿಷಯವಾಗಿ ಸಂಭಾಷಣ ಮಾಡುವ ರೂಢಿಯಿಡಬೇಕು. ಹೀಗೆ ಅವರಿಗೆ ಮಾತನಾಡಲಿಕ್ಕೆ ಉತ್ತೇಜನ ಕೊಡುದದೇ ಬಾಲಕರ ಬಾಯಿನಿಬಂಧದ ಆರಂಭವು. ಆ ಪ್ರಸಂಗದಲ್ಲಿ ಅವರ ತೊದಲ್ನುಡಿಗಳನ್ನು ತಿದ್ದಿ ಸಹಾಯವಾಡುವೆವೆಂದು ತಿಳಿದು ಗಡಬಿಡಿ ಮಾಡಬಾರದು. ಅವರಿಗೆ ಯಥೇಚ್ಛೆ ಮಾತಾಡಲಿಕ್ಕೆ ಹುರುಪುಕೊಟ್ಟರೆ ಸಾಕು.

ಬಾಲಕರು ಸೃಷ್ಟಿಯಲ್ಲಿ ಹೊಸದಾಗಿ ಅಡಿಯಟ್ಟಿರುವದರಿಂದ ಅವರ ಅನುಭವದ ಸಂಗತಿಗಳೂ ಅಷ್ಟಕ್ಕಷ್ಟೇ ಇರುವವು. ಅವರು ಯಾವದೋ ವಿಷಯವನ್ನು ಅರಿಯುವದೇ ಆಗಿದ್ದರೆ ಅದು ಪ್ರತ್ಯಕ್ಷವಾದದ್ದೇ ಇರಬೇಕು. ಈ ಬಗೆಯ ಅನೇಕ ಸಂಗತಿಗಳು ಪ್ರತ್ಯಕ್ಷವಾಗಿ ಬೇಕುಬೇಕಾದಾಗ ದೊರೆಯುವಷ್ಟು ಬಿಗಿಯಾದ ಮಾತು. ಅಂಥ ಸಂಗತಿಗಳ ಚಿತ್ರಗಳನ್ನು ತೆಗೆದು ಜ್ಞಾನಮಾಡಿಕೊಡುವದು ತೀರ ಸುಲಭಸಾಧ್ಯವಾದದ್ದು. ವಿಶೇಷ ಭಾವನಾದಾಯಕ ಮನೋಹರ ಚಿತ್ರಗಳೆದ್ದರೆ ಅವನ್ನೇ ದೊರಕಿಸಿ ಪಾಠಸಾಗಿಸುವದು ನೆಟ್ಟಗೆ. ಇಂಥ ಚಿತ್ರಗಳಿಂದ ವರ್ಗದ ಶಿಕ್ಷಣಕ್ಕೆ ಉತ್ಸಾಹ ಉಂಟಾಗಿ ಹೊಸ ಕಳೆ ಬರುವದು ನಿಜ; ಆದರೂ ಇದು ಸಹ ಸಾಮಾನ್ಯವಲ್ಲ; ಎಲ್ಲ ಶಿಕ್ಷಕರೂ ಹೀಗೆ ಚಿತ್ರ ತೆಗೆಯುವದೂ ವಿರಳ. ಆದಕಾರಣ ಮೊದಮೊದಲು ಕ್ರಮಿಕ ಪುಸ್ತಕಗಳೊಳಗಿನ ಚಿತ್ರಗಳನ್ನೇ ಆಗಲಿ ಅವನ್ನೇ ದೊಡ್ಡವಾಗಿ ಚಿತ್ರಿಸಲಿಕ್ಕೆ ಬರುತ್ತಿದ್ದರೆ ತೆಗೆದು ಮಾದರಿಗೆ ಒಂದನ್ನಾಗಲೆ

ಪಾಠಕ್ಕಾಗಿ ಉಪಯೋಗಿಸಿಕೊಳ್ಳುವದು ಸರ್ವಸಾಮಾನ್ಯ ಸಂಗತಿಯು. ಬರ ಬರುತ್ತ ಪುಸ್ತಕ ನೋಡಿ ನೋಡಿ ಹಳೆಯವೆನಿಸಿದರೆ ಹೊಸವೂ ಮನೋಹರಗಳೂ ಆದ ಬೇರೆ ಚಿತ್ರಗಳನ್ನು ಉಪಯೋಗಿಸಬೇಕು. ಸಿನೇಮಾದ ಚಿತ್ರಗಳು ಪೌರಾಣಿಕ ವ್ಯಾವಹಾರಿಕ ವಿಷಯದವು ಒಂದೇಬಗೆಯ ಮೇಲಿನವು ಕ್ರಮಕ್ರಮವಾಗಿ ತೆಗೆದವು ಸಹ ವೆಗ್ಗಳವಾಗಿ ದೊರೆಯುತ್ತವೆ. ಅವನ್ನು ಅಚ್ಚುಹಾಕಿಸಿರುವದರಿಂದ ತೀರ ಸುಲಭ ಬೆಲೆಗೆ ದೊರೆಯುವವು. ಅವುಗಳಲ್ಲಿ ಭಾವನೆಗಳು ಅಡಗಿರುವದರಿಂದ ಚಿತ್ರ ನಿರೀಕ್ಷಣದಿಂದ ಹೊಸದಾಗಿ ಕಂಡುಹಿಡಿದೆವೆಂದು ಯತ್ನಮಾಡುತ್ತ ಬಾಲಕರು ಹಿಗ್ಗಿ ನಾಮುಂದೆ ನೀಮುಂದೆ ಎಂದು ಮಾತಾಡಲಿಕ್ಕೆ ತವಕಿಸುತ್ತಾರೆ.

ಹೀಗೆ ಚಿತ್ರಗಳ ದ್ವಾರದಿಂದ ಮಾತನಾಡಲಿಕ್ಕೆ ಆಸ್ಪದಕೊಟ್ಟಬಳಿಕ ಪಾಠವು ಕ್ರಮಬದ್ಧವಾಗಿಯೂ ಅಚ್ಚುಕಟ್ಟಾಗಿಯೂ, ಬಾಲಕರ ಆಟೋಪಿನೊಳಗಿನ ದಾಗಿಯೂ ಆಗುವಂತೆ ವ್ಯವಸ್ಥೆಮಾಡಿಕೊಳ್ಳಬೇಕು. (ಟಿಪ್ಪಣಿ, ಉಪಕರಣ ಇ.) ಆ ಮೇಲೆ ಪಾಠವನ್ನು ಆರಂಭಿಸಿ ಪ್ರಶ್ನೆಗಳನ್ನು ಮಾಡಲು ಅವರು ಚಿತ್ರಗಳನ್ನು ಲಕ್ಷ್ಯಪೂರ್ವಕವಾಗಿ ಉಲ್ಲಾಸದೊಂದಿಗೆ ನೋಡುವರು. ಬಾಲಕರಲ್ಲಿ ಏಕಾಗ್ರಾವ ಧಾನ ಶಕ್ತಿಯು ಹೆಚ್ಚಿರುವದು; ಯಾಕಂದರೆ ಹಾಳು ಚಿಂತೆಗಳ ಗೊಡವೆಯೇ ಅವರಿಗಿರುವದಿಲ್ಲ. ಆ ಶಕ್ತಿಯು ಅಂಕುರಕ್ಕೂ ಉತ್ತೇಜನ ದೊರೆದು ಅದು ಬೆಳೆಯುವದು; ಹೊಸದನ್ನು ಕಂಡು ಹಿಡಿವೆಂಬ ಅಭಿಮಾನದಿಂದ ನಿರೀಕ್ಷಣ ಸಾಮರ್ಥ್ಯವು ವೃದ್ಧಿಹೊಂದುವದು ; ಇಷ್ಟೆಲ್ಲ ಲಾಭವು ತಿಳಿಯದಲೆ ಆಗುವದು. ಆಗ್ಗೆ ಕ್ರಮವಾಗಿ ಪ್ರಶ್ನೆಗಳನ್ನು ಮಾಡುವದರಿಂದ ಚಿತ್ರನಿರೀಕ್ಷಣ ಕ್ರಮಜ್ಞಾನವು ಸಹ ಆಗುವದು. ಕೆಲ ಪಾಠಗಳು ಹೀಗೆ ಸಾಗಿದನೆಂದರೆ ಚಿಕ್ಕಗಳು ಹುಡುಗರನ್ನು ಮಾತಾಡಿಸತೊಡಗಿದಂತೆಆಗಿ ಚಿತ್ರನಿರೀಕ್ಷಣ ಕಾಲಕ್ಕೆ ಅವರ ಮುಖಚರ್ಯೆಯ ಮೇಲೆ ಬೇರೆಬೇರೆ ತರದ ಮನೋಭಾವನೆಗಳು ಒಡಮೂಡುವದನ್ನು ನೋಡ ಬಹುದು. ಆ ಮೇಲೆ ಅವರು ಆ ಚಿತ್ರಗಳ ವಿಷಯವಾಗಿ ಅಚ್ಚುಕಟ್ಟಾಗಿ ಕ್ರಮವಾಗಿ ಮಾತನಾಡತೊಡಗುವರು. ಬೇರೆ ಬೇರೆ ಹುಡುಗರಿಂದ ಕೇಳಿಕೊಳ್ಳು ವದರಿಂದ ಒಟ್ಟಿಗೆ ಪಾಠದ ಪರಿಣಾಮವು ವ್ಯವಸ್ಥಿತವಾದದ್ದಾಗುವದು. ಈ ರೀತಿಯ ಶಿಕ್ಷಣದಿಂದ ಅವರ ಸ್ಫೂರ್ತಿಯು ಚುರುಕಾದದ್ದಾಗುವದು. ಹೀಗೆ ಪಾಠಸಾಗಿಸುವ ಶಾಲೆಗಳು ತೀರ ಕಡಿಮೆ; ಅದುದರಿಂದ ಮೊದಲಿನಿಂದ ಕೊನೆಯ ವರೆಗೂ ಅಸ್ತವ್ಯಸ್ತವೂ ಪರಕುಮುರಕವೂ ಆದ ವಿಚಾರಗಳುಳ್ಳ ನಮ್ಮ ವಿದ್ಯಾರ್ಥಿ ಗಳು ಪ್ರಾಯ್ಮರಿಲೀವ್ಹಿಂಗ ಸರ್ಟಿಫಿಕೇಟ ಪರೀಕ್ಷೆಯಲ್ಲಿ ಬರೆದ ನಿಬಂಧಗಳನ್ನು ಓದಿದರೆ ಚಿತ್ರನಿರೀಕ್ಷಣ ನಿಬಂಧ ಪಾಠಗಳ ಅವಶ್ಯಕತೆಯು ಒಡೆದು ಮೂಡುವದು. ತಕ್ಕ ಪದ್ಧತಿಯ ಶಿಕ್ಷಣ ಕ್ರಮದಿಂದ ಬಾಲಕರು ಚಲೋ ಕುಮಾರರೂ ಮುಂದೆ

ಯೋಗ್ಯ ಯೌವನಸ್ಥರೂ ಬಳಿಕ ತಕ್ಕ ನಾಗರಿಕ ಗೃಹಸ್ಥರೂ ಆಗುವರೆಂಬ ಮಾತಿನ ಸತ್ಯತೆಯು ಎಲ್ಲರಿಗೂ ಹೊಳೆಯದಿರದು. ಇದರ ಲಾಭವು ಮನೆ, ಶಾಲೆಗಳಿಗಷ್ಟೇ ಅಲ್ಲ, ದೇಶಕ್ಕೂ ಆಗುವದು. ಅಂಕುರರೂಪವಿದ್ದಾಗಲೆ ದುರ್ದೈವದಿಂದ ಕಮರಿ ಹೋದ ಸಸಿಯು, ಕಬೀರಮರವಾಗಿ ದೃಷ್ಟವಮೂರ್ತಿಯಾಗುತ್ತಿತ್ತೆಂಬ ಕಲ್ಪನೆಯು ಎಲ್ಲರಿಗೆ ಸಾಮಾನ್ಯವಾಗಿ ಹೇಗೆ ತಾನೆ ಹೊಳೆಯಬೇಕು ?

ಮೇಲೆ ಬರೆದಂತೆ ಕಲಿತ ಚುರುಕು ಹುಡುಗರು ಇಂಗ್ಲಿಷ ವರ್ತಮಾನ ಪತ್ರಗಳಲ್ಲಿ ಆಗಾಗ್ಗೆ ಬರುವ ಈ ಬಗೆಯ ಚಿತ್ರಗಳನ್ನು ಒಳ್ಳೊಳ್ಳೆಯ ಹಿರಿಯರು ಸಹ ಅಚ್ಚರಿಪಡುವಂತೆ ಓದಬಲ್ಲರು. ಚಿತ್ರಗಳಲ್ಲಿಯ ಪಾತ್ರಗಳ ವೇಷಭೂಷಣಗಳಿಂದ ಅವರು ಇಂಥಿಂಥವರೆಂದೂ ಅವರು ಕುಳಿತ, ನಿಂತ ಸ್ಥಳವು ಸಹ ಇಂಥಿಂಥದೆಂದೂ ಕಂಡುಹಿಡಿಯುವರು. ಉದಾಹರಣಾರ್ಥವಾಗಿ ಇದು ವಿಶಾಲವಾದ ಮನೆ, ಇವನು ಡಾಕ್ಟರ, ಇವನು ವಕೀಲ ಇಂಥ ಇಂಥ ಸಂಗತಿಯು ಇಲ್ಲಿ ವರ್ತಿಸಿದೆ, ಅದಕ್ಕಾಗಿ ಇವರು ಬಂದಿದ್ದಾರೆ. ಇದು ಕಚೇರಿ, ಇವನು ನ್ಯಾಯಾಧೀಶ, ಇವರು ಅಪರಾಧಿಗಳು, ನ್ಯಾಯವಿಚಾರಣೆಯು ಹೀಗೆ ಹೀಗೆ ನಡೆದು ಇಂಥ ಇಂಥ ಶಾಸನಗಳನ್ನು ಜಡ್ಜಿಯು ನಿರ್ಣಯಿಸಿದನು. ಇವನು ಸೆರೆಯಾಳು, ಇದು ಸೆರೆಮನೆ ಇತ್ಯಾದಿ ಸಂಗತಿಗಳನ್ನು (ಚಿತ್ರನಿರೀಕ್ಷಣ ಮುಖದಿಂದ) ಬೇಗಬೇಗ ಬಾಲಕರು ಕಂಡುಹಿಡಿಯುವರು. ಇದರಿಂದ ವಿದ್ಯಾರ್ಥಿಗಳ ತರ್ಕಶಕ್ತಿಯೂ ವ್ಯವಹಾರಜ್ಞಾನವೂ ವಿವೇಚನಾಶಕ್ತಿಯೂ ಬೆಳೆಯುವವೆಂಬದು ಮೇಲಿನ ವಿವರಣೆಯಿಂದ ವಾಚಕರಲ್ಲಿ ಸಹಜವಾಗಿ ಮೂಡಬಹುದೆಂದು ತಿಳಿಯುತ್ತೇನೆ. ಚಿಕ್ಕಮಕ್ಕಳಲ್ಲಿ ನೋಡುವ, ನುಡಿಯುವ ಹಂಬಲವು ಬಲವತ್ತರವಾಗಿರುತ್ತದೆಂದೂ ಇಂಥ ನಿರೀಕ್ಷಣ ವಸ್ತುಗಳು ಅವರ ಸೇರಿಕೆಯವಾಗಿದ್ದರೆ ನಿರೀಕ್ಷಣ ಸಾಮರ್ಥ್ಯವು ಒಳ್ಳೆಯ ಜಾಗ್ರತವಾಗುತ್ತದೆಂದೂ ಮೊದಲೇ ಉಲ್ಲೇಖಿಸಿದೆ. ಅಪ್ಪ, ಅಪ್ಪ, ಅಣ್ಣ, ತಮ್ಮಂದಿರು, ಆಟಸೋಟ, ಹಣ್ಣು, ಫಲಾಹಾರ, ಅಡುಗೆಯ ಮನೆ, ತಮ್ಮ ಓಣಿ, ಶಾಲೆ, ಆಟಪಾಟ, ಅಂಗಡಿ, ತಿನಿಸು ಇತ್ಯಾದಿ ಸಂಬಂಧದ ಈ ತರದ ಮಾತುಕತೆಗಳು ಆರಂಭಕ್ಕೆ ಇರಬೇಕೆಂದು ಮತ್ತೊಮ್ಮೆ ನೆನಪುಮಾಡಿಕೊಳ್ಳುತ್ತೇನೆ. ಬರಬರುತ್ತ ಇದಕ್ಕೂ ವಿಚಾರಾರ್ಹವಾದ ವ್ಯಾವಹಾರಿಕ ಸಂಗತಿಗಳ ವಿಚಾರವಿರಬೇಕು. ಈ ರೀತಿ ಚಿತ್ರನಿರೀಕ್ಷಣ ಮುಖದಿಂದ ಮಾತನಾಡುವಾಗ ದಿನಾಲು ಒಂದೆರಡು ಹೊಸ ಶಬ್ದಗಳ ಜ್ಞಾನವು ಮಕ್ಕಳಿಗಾಗುವಂತೆ ಯತ್ನ ವಿರಬೇಕು. ಈ ಮೇಲೆ ಚಮತ್ಕಾರವಾಗಿ ಮಾತನಾಡೋಣ, ಪರಿಣಾಮಕರವಾಗುವಂತೆ ಮಾತನಾಡೋಣ ಇವುಗಳ ಜ್ಞಾನವಾಗುವಂತೆ ಪಾಠಸ್ಥಾಗಿಸಬೇಕು.

ಮುಂದೆ ಇದೇ ಶಕ್ತಿಯು ಬಲಿತರೆ ವ್ಯವಹಾರಕ್ಕೆ ತಕ್ಕ ಪುರುಷರು ಸಿದ್ಧರಾಗುವರು ಇಂಥ ಜ್ಞಾನವು ಅಪ್ರತ್ಯಕ್ಷವಾಗಿ ಆಗುವಂತೆ ಶಿಕ್ಷಕನ ಯತ್ನವೂ ಚಾತುರ್ಯವೂ ಇರಬೇಕು. ನಿಬಂಧ ವಿಷಯವು ಭಾಷಾಭ್ಯಾಸದ ಮುಖ್ಯ ಅಂಗವಾಗಿರುವದರಿಂದ ಈ ವಿಷಯಕ್ಕೆ ಲಕ್ಷ್ಯತಕ್ಕೊಂಡಷ್ಟು ಕಡಿಮೆಯೆಂದು ತಿಳಿಯಬೇಕು. ಇದರ ಮಹತ್ವವನ್ನರಿತು ಭಾಷಾವಿಷಯಕ್ಕೆ ಪ್ರಾಯ್ಮರಿಸ್ಕೂಲ್ ಲೀವ್ವಿಂಗ ಸರ್ಟಿಫಿಕೇಟ ಪರೀಕ್ಷೆಯಲ್ಲಿ ಈ ವಿಷಯವೊಂದರ ಪೂರ್ತಿ ಪಾಸಾಗಲಿಕ್ಕೆ ೧೦೦ಕ್ಕೆ ೪೦ ಗುಣಗಳನ್ನು ಪಡೆಯಬೇಕೆಂದು ಸರಕಾರದವರು ಹೊಸದಾಗಿ ಪ್ರಕಟಿಸಿದ್ದಾರೆ. ಈ ವಿಷಯದ ಪಾಠವು ನಡೆದಾಗ ಬಾಲಕರ ವಿಷಯವಾಗಿ ಸಹಾನುಭೂತಿ ಪ್ರೇಮಗಳು ತೀರ ಆವಶ್ಯಕ. ಹೀಗಿದ್ದರೆ ಭಾವನೆಗಳು ಜಾಗ್ರತವಾಗಿ ತಕ್ಕ ಮಾತುಗಳು ಹೊರಬೀಳುತ್ತವೆ. ಇಂಥ ಮಾತುಗಳ ಬರೆಹವು ಮುಂದಿನ ಇಯತ್ತೆಗೆ ಆರಂಭವಾಗುತ್ತದೆ. ಪೂರಾ ಅಕ್ಷರ, ಒತ್ತಕ್ಷರ, ಮಾತುಕತೆಗಳ ಜ್ಞಾನವಾದ ಹೊರತು ಭಾವನೆಗಳುಳ್ಳ ಸಣ್ಣ ಮಾತುಗಳನ್ನು ಬರೆಯುವದೂ ಕಠಿಣ. ಮೊದಲು ಮೊದಲು ವಾಚನಿಕ ನಿಬಂಧ, ಬಳಿಕ ಬರೆಹ ಮೂಲಕ ನಿಬಂಧ. ಎಂಬ ಮಾತು ಲಕ್ಷಿಸಲ್ಪಡತಕ್ಕದ್ದಾಗಿದೆ. ತಕ್ಕ ಜ್ಞಾನವಾಗಿ ಸ್ಮರಣದಲ್ಲಿಟ್ಟುಕೊಳ್ಳುವ ಮುಂಚೆಯೇ ಬರೆಯುವದು ನೆಟ್ಟಗಲ್ಲ.

ಉದಾಹರಣಾರ್ಥವಾಗಿ ಏ ರಾಮಾ, ಬೊಗರೆಗೆ ಜಾಳಿಗೆ ಸುತ್ತು; ಕೈಬೀಸು. ಈಗ ಈ ಬೊಗರೆ ಭೊಯ್ಯೊಂದು ತಿರುಗುವದು. ನೋಡಲು ಬಲು ಚಂದ. ಕೇಳಲು ಒಳ್ಳೇ ಸಂವು. ಇತ್ಯಾದಿ ಪೂರ್ಣ ವಾಕ್ಯಗಳನ್ನು ಬಾಯಿಂದ ಹೇಳುವರು. ಇದೂ ಒಂದು ಬಾಲಕರ ವರ್ಗದಲ್ಲಿ ವಾಚನಿಕ ನಿಬಂಧವನ್ನು ಸಾಗಿಸುವ ಬಗೆ ಎಂದು ಹೇಳಬಹುದು.

ಮುಂದಿನ ಇಯತ್ತೆಯಲ್ಲಿ ಕುದುರೆ ಆಕಳು ಇಂಥ ಚಿತ್ರಗಳನ್ನು ಮುಂದೆ ಇಟ್ಟು ಇವುಗಳ ವಿಷಯವಾಗಿ ತಿಳಿದ ನಾಲ್ಕು ಮಾತುಗಳನ್ನು ಆಡಲಿಕ್ಕೆ ಹೇಳಬೇಕು. ಬಳಿಕ ಕೆಲವೊಂದು ಸಂಗತಿ ವರ್ತಿಸಿದ ಚಿತ್ರವನ್ನು ಕೊಟ್ಟು ಅದರಮೇಲೆ ಸರಿಯಾಗಿ ಪ್ರಶ್ನ ಮಾಡುತ್ತ ಒಟ್ಟುಗೂಡಿಸಿ ಮಾತನಾಡಲಿಕ್ಕೆ ಉತ್ತೇಜನಕೊಡಬೇಕು. ಮೊದಲು ಹೇಳಿದ ಹೆಚ್ಚು ಅರ್ಥವುಳ್ಳ ಒಂದೆರಡು ಹೊಸ ಶಬ್ದಗಳನ್ನು ಉಪಯೋಗಿಸಿ ಮಾತನಾಡಲಿಕ್ಕೆ ಹೇಳಬೇಕು.

ಮಾತು ಪೂರಾ ಆಗಲಿಕ್ಕೆ ಅವಶ್ಯವಾದ, ಹಾಗು ಮಾತುಗಳನ್ನು ಕೂಡಿಸಲಿಕ್ಕೆ ಬೇಕಾದ ಶಬ್ದಗಳ ಜ್ಞಾನಮಾಡಿಕೊಟ್ಟು ಅವುಗಳನ್ನು ಪಯೋಗಿಸಿ ಪೂರಾ ಮಾತು ಆಡಲಿಕ್ಕೆ ಹಚ್ಚಬೇಕು. ಬಾಲಕರು ಬರೆಯಲು ಶಕ್ತರಾದಾಗ ಅಂದರೆ

೧ನೆಯ ಇಯತ್ತೆಯಲ್ಲಿ ಒಂದೊಂದು ಚಿತ್ರದ ವಿಷಯವಾಗಿ ಕ್ರಮವಾಗಿ ಕೆಲವು ಪೂರ್ಣ ವಾಕ್ಯಗಳನ್ನು ಬರೆಯುವಂತೆ ಮಾಡಬೇಕು. ೧ನೆಯ ಇಯತ್ತೆಯ ಈ ವಿಷಯದ ಅಭ್ಯಾಸಕ್ರಮವು ಅಭ್ಯಾಸಪತ್ರಿಕೆಯಲ್ಲಿ ಕೆಳಗೆ ಬರೆದ ಪ್ರಕಾರ ಇದೆ.

ಅಭ್ಯಾಸ ಪತ್ರಿಕೆ

೧ನೆಯ ಇಯತ್ತೆ—ನಿಬಂಧ ಬರೆಹ

(೧) ಮತ್ತು, ಯಾಕಂದರೆ ಈ ಶಬ್ದಗಳನ್ನು ಉಪಯೋಗಿಸಿ ಸುಲಭವಾದ ವಾಕ್ಯಗಳನ್ನು ಬರೆಯುವದು.

(೨) ಸಂಭಾಷಣೆಯ ಭಾಗದಲ್ಲಿ ಬಂದಿರುವಂಥ ವಾಕ್ಯಗಳನ್ನು ಬರೆಯುವದು.

(೩) ಚಿತ್ರಗಳ ಮತ್ತು ವಸ್ತುಗಳ ವರ್ಣನೆ ಮಾಡುವದು.

(೪) ಓದಿದ ಪುಸ್ತಕದೊಳಗಿನ ಕನಿಷ್ಠವಾಗಿ ಮೂರು ವಾಕ್ಯಗಳನ್ನು ಬರೆಯುವದು.

(೫) ಕೇಳಿದ ವಿಷಯವಾಗಿ ಕನಿಷ್ಟ ಮೂರು ವಾಕ್ಯಗಳನ್ನು ಬರೆಯುವದು

ಇದನ್ನು ಅನುಲಕ್ಷಿಸಿ ೧ನೆಯ ಇಯತ್ತೆಗಾಗಿ ಚಿತ್ರ ನಿಬಂಧವನ್ನು ಕುರಿತು ವಿ. ಜಿ. ಗೋ. ಕುಲಕರ್ಣಿಯವರು ಕಲಿಸಿ ತೋರಿಸಿದ ಒಂದು ಪಾಠದ ಟಿಪಣಿಯನ್ನು ದಿಗ್ದರ್ಶನಾರ್ಥವಾಗಿ ಮುಂದೆ ಕೊಡುತ್ತೇವೆ.

ಶಿಶುಶಾಲೆಗಳು

ಚಿಕ್ಕಮುಕ್ಕಳ ಮಾನಸಿಕ ವಿಕಾಸ

ಶಿಶುಶಾಲೆಗಳೊಳಗಿನ ಬಾಲಕರ ಮಾನಸಿಕ ವಿಕಾಸದ ಕ್ರಮದಲ್ಲಿ ಬೇರೆಬೇರೆ ತರಗತಿಗಳನ್ನು ಕಲ್ಪಿಸಬಹುದು.

೧. ಹುಟ್ಟಿದಂದಿನಿಂದ ಎರಡು ವರುಷಗಳ ವರೆಗಿನ ಕಾಲ.

೨. ಎರಡು ವರುಷಗಳಿಂದ ೫ ವರುಷಗಳ ವರೆಗಿನ ಕಾಲ.

೩. ೫ ವರುಷಗಳಿಂದ ೭ನು ವರುಷಗಳ ವರೆಗಿನ ಕಾಲ.

ಈಗೆ ಮೂರು ತರಗತಿಗಳನ್ನು ಕಲ್ಪಿಸಿ ಅವನ್ನು ಕ್ರಮದಿಂದ ವಿವರಿಸೋಣ.

೧. ಮಾನಸಶಾಸ್ತ್ರಜ್ಞರು ಕಳೆದ ಎರಡು ಶತಮಾನಗಳಿಂದಲೂ ಈ ವಿಷಯದಲ್ಲಿ ಪ್ರಯೋಗ ಪರೀಕ್ಷೆ-ನಿರೀಕ್ಷಣಗಳನ್ನು ನಡೆಯಿಸಿ ಹಲವು ಸಂಗತಿಗಳನ್ನು ಕಂಡು ಹಿಡಿಯುತ್ತ ಬಂದು ಈಗ ಕೆಲವೊಂದು ವೆಂಟ್ಟಿಗೆ ಮುಟ್ಟಿದ್ದರು. ಆದರೆ ಈಚೀಚೆಗಿನವರು ಹಿಂದಣವರ ಅಭಿಪ್ರಾಯಗಳಿಂದ ಭಿನ್ನವಾದ ಹಲವು ಸಂಗತಿಗಳನ್ನು ಅನುಭವದಿಂದ ನಿರ್ಧರಿಸಿರುವರು. ಬಾಲಕರ ಮುಂದಣ ಆಯುಷ್ಯದೊಳಗಿನ ಶೀಲಸ್ವಭಾವಗಳಿಗೆ ಅವರ ತೀರ ಬಾಲ್ಯದೊಳಗಿನ ಮಾನಸಿಕ-ವಿಕಾಸ-ವಿಕಾರಗಳೇ ಕಾರಣವಾಗುವವೆಂದು ಅವರು ಕಂಡುಹಿಡಿದಿರುವರು. ಶಿಶುಶಾಲೆಗಳೊಳಗಿನ ಬಾಲಕರ ವಯಸ್ಸು ಸಾಮಾನ್ಯವಾಗಿ ಎರಡುವರುಷಕ್ಕೆ ವಿುಕ್ಕಿರುವದರಿಂದ ನಾವು ಈ ಕಾಲದಿಂದ ಮುಂದಿನ ವಿಚಾರಗಳನ್ನಷ್ಟೇ ನಿವೇಚಿಸಬೇಕಾಗಿರುವದಷ್ಟೇ! ಆದರೂ ಅದಕ್ಕೂ ಹಿಂದಣಕಾಲದಲ್ಲಿ ಬಾಲಕರ ಮಾನಸಿಕ ವಿಕಾಸವು ಯಾವಕ್ರಮದಿಂದ ಸಾಗುವದೆಂಬದನ್ನು ತಿಳಿದಿದ್ದರೆ ಮುಂದಣವಿಚಾರಗಳು ಸುಗಮವಾಗುವವೆಂಬ ಭಾವನೆಯನ್ನು ಇಟ್ಟುಕೊಂಡು ಮಗುವು ಹುಟ್ಟಿದಾಗಿನಿಂದಲೂ ಅದರ ಮನೋವಿಕಾಸವು ಹೇಗೆ ಆಗುತ್ತ ಸಾಗುವದೆಂಬದನ್ನು ಪರ್ಯಾಲೋಚಿಸಲು ಹೊರಡಬೇಕಾಗುವದು.

ಮಗುವು ಹುಟ್ಟಿದಂದಿನಿಂದ ಅದರ ಮನಸ್ಸು ಹೇಗೆ ವಿಕಾಸವಾಗುತ್ತ ಸಾಗುವದೆಂಬದನ್ನು ಕಂಡುಹಿಡಿಯುವದು ಸುಲಭ ಸಾಧ್ಯವಲ್ಲ. ಇಷ್ಟೇ ಅಲ್ಲ, ಈ ಸಂಗತಿಯನ್ನು ಹೀಗೆಯೇ ಎಂದು ನಿರ್ಧರಿಸಿ ಹೇಳುವದು ಸದ್ಯದಲ್ಲಿ ಮಾನಸ

ಶಾಸ್ತ್ರಜ್ಞರ ಶೋಧದಮೇರೆಗೆ ಅಸಾಧ್ಯವೇ ಎಂದು ಹೇಳಬೇಕಾಗಿರುವದು. ಈ ವಿಷಯದಲ್ಲಿ ಹೆಚ್ಚಿನ ಶೋಧಗಳು ಇನ್ನು ಮುಂದೆಯೇ ಆಗಬೇಕಾಗಿವೆ. ಮಗುವಿನ ಗರ್ಭವಾಸದಲ್ಲಿದ್ದ ಒಂಬತ್ತು ತಿಂಗಳಲ್ಲಿಯೂ ಅಲ್ಲಿಂದ ಮುಂದಣ ಎರಡು ವರ್ಷಗಳ ಅವಧಿಯಲ್ಲಿಯೂ ಅದರ ಮನಸ್ಸನ್ನು ಹೇಗೆ ವಿಕಾಸವಾಗುತ್ತ ಸಾಗುವದು, ಮಗುವಿನ ಮನಸ್ಸಿನ ಯಾವಶಕ್ತಿಗಳು ಅನುವಂಶಿಕವಾಗಿ ಬೆಳವಣಿಗೆಹೊಂದುವವು ಎಂಬ ವಿಚಾರದಲ್ಲಿ ನಿರ್ದಿಷ್ಟವಾದ ವಿಚಾರಗಳು ಇನ್ನೂ ಗೊತ್ತಾಗಿಲ್ಲ. ಉಸಿರಾಡಿಸುವದು, ರಕ್ತಾಶಯದ ಹಾರುವಿಕೆ ಮೊದಲಾದ ಪ್ರಾಣಿಮಾತ್ರಕ್ಕೆ ಸಹಜವಾದ ಕಾರ್ಯಗಳನ್ನು ಮಗುವಿನ ಶರೀರದಲ್ಲಿ ಅದು ಗರ್ಭವಾಸದಿಂದ ಹೊರಗೆ ಬಂದೊಡನೆಯೇ ನಾವು ಕಾಣಬಹುದು. ಮಗುವು ಗರ್ಭವಾಸದಿಂದ ಭೂವಿಗೆ ಬಿದ್ದಕೂಡಲೆ ಅಳುವದಷ್ಟೇ! ಇದು ಮಗುವು ಕಲಿಯುವ ಶ್ವಾಸೋಚ್ಛ್ವಾಸನ ಕಾರ್ಯದ ಪ್ರಥಮ ಪಾಠವೆಂದೂ ಹೇಳುವದುಂಟು. ಸೀನುವದು, ಮಲಮೂತ್ರ ಪ್ರವೃತ್ತಿ ಇವೂ ಮಗುವು ಭೂವಿಗೆ ಬಂದ ಅಲ್ಪಾವಕಾಶದಲ್ಲಿಯೇ ಕಂಡು ಬರುವವು.

ಮಗುವಿನ ಮಾನಸಿಕ ವಿಕಾಸವನ್ನು ಶಾಸ್ತ್ರೀಯ ರೀತಿಯಿಂದ ವಿವೇಚಿಸಲು ಹೊರಟ ಶಾಸ್ತ್ರಜ್ಞರು ಅದರ ಮಾನಸಿಕ ಕ್ರಿಯೆಗಳನ್ನು, ಬಾಹ್ಯಜಗತ್ತಿನ ಸ್ಥಿತಿಗತಿಗಳನ್ನೂ ತಿಳಿದುಕೊಳ್ಳುವದು, ತನ್ನ ಭಾವನೆಗಳನ್ನು ಪ್ರದರ್ಶಿಸುವದು, ತಾನು ಗ್ರಹಿಸಿಕೊಂಡಿದ್ದನ್ನು ನೆನಪಿನಲ್ಲಿಟ್ಟುಕೊಳ್ಳುವದು, ಕಾರ್ಯಕಾರಣ ವಿವೇಚನ ಮಾಡುವದು ಇವೇ ಮೊದಲಾದ ಕ್ರಮದಿಂದ ವರ್ಗೀಕರಿಸಿಕೊಳ್ಳಬೇಕಾಗುವದು. ಆದರೆ ಇವನ್ನು ಆ ಶಾಸ್ತ್ರಜ್ಞರು ಮಗುವಿನ ಕಾರ್ಯಕಲಾಪಗಳನ್ನು ನಿರೀಕ್ಷಿಸುವದರಿಂದ ತಮಗೆ ತಿಳಿದುಬರುವ ಸಂಗತಿಗಳ ಮೇಲಿಂದ ಅನುಮಾನಿಸಿ ತೆಗೆದ ವ್ಯಾವಹಾರಿಕ ಸಂಗತಿಗಳಲ್ಲದೆ ಇವಕ್ಕೆ ಬೇರೆ ಶಾಸ್ತ್ರೀಯ ಆಧಾರವೇನೂ ಇಲ್ಲವೆಂಬದನ್ನು ಮಾತ್ರ ಮರೆಯಲಾಗದು. ಅಲ್ಲದೆ ಪ್ರತಿಯೊಂದು ಮಗುವು ತನ್ನ ಅಂತರ್ಬಾಹ್ಯ-ಪರಿಸ್ಥಿತಿಗನುಗುಣವಾಗಿ ಬೇರೆಯೇ ಆಗುವದರಿಂದ ಇಲ್ಲಿ ಹೇಳುವ ಸಾಮಾನ್ಯವಿಚಾರಗಳು ಅದರ ನಿರೀಕ್ಷಕರಿಗೆ ಕೇವಲ ಮಾರ್ಗದರ್ಶಕಗಳಾಗಬಹುದಲ್ಲದೆ ಅವು ಸಿದ್ಧಾಂತವಿಷಯಗಳೆಂದು ಮಾತ್ರ ತಿಳಿಯಕೂಡದು.

ದರ್ಶನೇಂದ್ರಿಯ ಶ್ರವಣೇಂದ್ರಿಯಗಳೇ ಮಾನವ ಪ್ರಾಣಿಯ ಬುದ್ಧಿ (ಮಾನಸಿಕ) ವಿಕಾಸಕ್ಕೆ ಪ್ರಾಮುಖ್ಯವಾದ ಸಾಧನಗಳು. ಮಾನಸಿಕ ವಿಕಾಸವ ಪ್ರಾಮುಖ್ಯಸಾಧನವಾದ ದರ್ಶನೇಂದ್ರಿಯವು ಮಗು ಹುಟ್ಟಿದ ಕೂಡಲೆ ತನ್ನ ಕಾರ್ಯವನ್ನು ಪ್ರಾರಂಭಿಸುವದು. ಮಗುವಿನ ದರ್ಶನೇಂದ್ರಿಯದ ಮುಂಪೆ ಪದಾರ್ಥಗಳು ಹಾದು ಹೋದ ಮಾತ್ರಕ್ಕೆ ಅದು ಆ ಪದಾರ್ಥಗಳ ಜ್ಞಾನ

ವನ್ನು ಗ್ರಹಿಸುವದೆಂದು ಹೇಳುವದು ಸರಿಯಾಗಲಾರದು. ಕಣ್ಣು ಮುಂದಿನ ಪದಾರ್ಥಗಳ ಚಲನವಲನದ ಬಗ್ಗೆ ಮಗುವು ಮೊದಲು ವಿಚಾರಮಾಡುವದು; ಆಕಾರ ಆಳತೆಗಳನ್ನು ಕೊನೆಗೆ ಗ್ರಹಿಸುವದು. ಸ್ಪಷ್ಟವಾದ ಇಲ್ಲವೆ ಮಂದವಾದ ಬೆಳಕು ಬಣ್ಣಗಳನ್ನು ಏಂಗಡಿಸಿ ಗ್ರಹಿಸಲು ಅದು ತೀವ್ರವೇ ಶಕ್ತವಾಗುವದು. ಮೂರು ತಿಂಗಳ ವಯಸ್ಸಾಗುವವರೆಗೂ ಮಗುವು ತನ್ನಿಂದ ೭ ಫೂಟಿಗಿಂತ ಹೆಚ್ಚು ದೂರದಲ್ಲಿರುವ ಪದಾರ್ಥಗಳನ್ನು ನೋಡಲಾರದು.

ಶ್ರವಣೇಂದ್ರಿಯ ಬೆಳೆವಣಿಗೆಯ ಬಗ್ಗೆ ಇನ್ನೂ ಸಾಕಷ್ಟು ಶೋಧವಾಗಿಲ್ಲ. ಮಗುವು ೪ ತಿಂಗಳದ್ದಾಗುವ ವರೆಗೆ ಅದಕ್ಕೆ ಇದು ತನ್ನವರ ಧ್ವನಿ, ಇದು ಹೆರವರ ಧ್ವನಿ ಎಂಬದನ್ನಾಗಲಿ ಇದು ಅಳುವ ಧ್ವನಿ, ಇದು ನಗುವ ಧ್ವನಿ ಎಂಬದನ್ನಾಗಲಿ ಗುರ್ತಿಸಲಾರದು.

ಇನ್ನುಳಿದ ಸ್ಪರ್ಶೇಂದ್ರಿಯ-ಘ್ರಾಣೇಂದ್ರಿಯ-ರಸನೇಂದ್ರಿಯಗಳ ಬೆಳೆವಣಿಗೆಯ ವಿಷಯದಲ್ಲಿಯೂ, ಇನ್ನೂ ಸಾಕಷ್ಟು ಸಂಗತಿಗಳು ತಿಳಿದಿಲ್ಲ.

ಮಗುವು ತನ್ನ ಕೈಗೆ ಸಿಕ್ಕ ಪದಾರ್ಥಗಳನ್ನು ಗೊತ್ತುಗುರಿಯಿಲ್ಲದೆ ಹಿಡಿದು ಅಲ್ಲಾಡಿಸುವದು ಅದು ಮಾಡುವ ಮೊದಲನೆಯ ಕೆಲಸವು. ಇದು ಮೂರನೆಯ ತಿಂಗಳಿಂದ ಪ್ರಾರಂಭವಾಗುವದು. ಈ ಸಂದರ್ಭದಲ್ಲಿ ಅದು ತನ್ನ ಕಾಲುಗಳನ್ನು ಕೈಗಳಂತೆ ಉಪಯೋಗಿಸಲು ಯತ್ನಿಸುವದು. ಆಗ ಅದಕ್ಕೆ ತನ್ನ ಕೈಕಾಲುಗಳಲ್ಲಿ ಭೇದವೆಣಿಸುವಷ್ಟು ಅವಧಾನವಿರುವದಿಲ್ಲ. ತನ್ನ ಕೈಯಲ್ಲಿರುವ ಪದಾರ್ಥವನ್ನು ನಿರೀಕ್ಷಿಸುವ ಇಲ್ಲವೆ ತಾನು ನೋಡುವ ಪದಾರ್ಥವು ತನ್ನ ಕೈಗೆ ನಿಲುಕಬಹುದೋ ಹೇಗೆ ಎಂಬ ವಿಚಾರವನ್ನು ತಿಳಿದುಕೊಳ್ಳುವ ಶಕ್ತಿಯು ಮಗುವಿಗೆ ೫ನೇ ತಿಂಗಳಿಗೆ ಒರುವದು. ಕಣ್ಣಿನಿಂದ ಸೋಡಿದ ಸಂಗತಿಗಳನ್ನು ಗ್ರಹಿಸಿ ಅದಕ್ಕೆ ಅನುಗುಣವಾದ ಕ್ರಿಯೆಯನ್ನು ಮಾಡುವ ಶಕ್ತಿಯು ಮಗುವಿಗೆ ಉಂಟಾಗಲು ಇನ್ನೂ ಹೆಚ್ಚು ಕಾಲವು ಬೇಕಾಗಿರುವವು.

ನಡಿಗೆಯನ್ನು ಕಲಿಯುವದು

ಮಗುವಿನ ಆಯುಷ್ಯದ ಎರಡು ವರ್ಷಗಳ ವರೆಗಿನ ಅವಧಿಯಲ್ಲಿ ಅದು ಮಾಡುವ ಕಾರ್ಯಗಳಲ್ಲಿ ನಡಿಗೆಯನ್ನು ಕಲಿಯುವದು ಅತಿ ಮಹತ್ವದ ವಿಷಯವಾಗಿದೆ. ಮಗುವು ಪ್ರಾಣಿಕೋಟಿಯೊಳಗಿನ ಇತರ ಪ್ರಾಣಿಗಳಿಂದ ಭಿನ್ನವಾಗಿ ತನ್ನ ಕಾಲುಗಳನ್ನಷ್ಟೇ ನಡಿಗೆಗೆ ಉಪಯೋಗಿಸಿಕೊಂಡು ಸರಳವಾಗಿ ನಿಂತುಕೊಳ್ಳುವದಕ್ಕೂ, ತನ್ನ ಇಚ್ಛಾನುಗುಣವಾಗಿ ಮುಂದೆಸಾಗುವದಕ್ಕೂ, ಈ ಅವಧಿಯಲ್ಲಿಯೇ ಕಲಿಯುವದು. ಈ ಮಾತನ್ನು ನಾವು ಎಷ್ಟು ಸುಲಭವೆಂದು ಭಾವಿಸು

ವೆನ್ನೋ ನಿಜವಾಗಿ ಅದು ಅಷ್ಟು ಸುಲಭವಲ್ಲ. ಈ ಸಂದರ್ಭದಲ್ಲಿ ಮಗುವು ಲಕ್ಷ
ವಧಿಸಾರಿ ಎದ್ದು-ಬಿದ್ದು ಅನುಭವಪಡೆಯಬೇಕಾಗುವದು. ಒಮ್ಮೆ ಈ ಸ
ಯನ್ನು ಸರಿಯಾಗಿ ಅಭ್ಯಾಸಮಾಡಿಕೊಂಡಿತೆಂದರೆ, ಮಗುವು ತನ್ನ ತಾಯಿಯನ್ನ
ಇಲ್ಲವೆ ದಾಯಿಯನ್ನು ಅಗಲಿ ಸ್ವತಂತ್ರವಾಗಿ ವರ್ತಿಸಲು ಅನುಕೂಲವಾಗುವ
ರಿಂದ ಇದು ಮಗುವಿನ ಆಯುಷ್ಯದೊಳಗಿನ ಅತಿ ಮಹತ್ವದ ಸಂದರ್ಭವೆಂ
ಹೇಳಿದರೆ ತಪ್ಪಾಗದು.

ತೋಟಗಳು

ಶ್ರೀ. ಕೊಪ್ಪಳ ಗುಂಡೇರಾಯರು ಬಿ. ಎ. ಧಾರವಾಡ

ಮನೆಯ ಹಿಂದಿನ ಹಿತ್ತಲಲ್ಲಿಯೂ ಮುಂದಿನ ಅಂಗಣದಲ್ಲಿಯೂ ಚಿಕ್ಕಚಿ
ತೋಟಗಳನ್ನು ಮಾಡಿಕೊಂಡು ಹೂ-ಕಾಯಿಪಲ್ಯೆ-ಹಣ್ಣುಹಂಪಲಗಳನ್ನು ಸುಲ
ವಾಗಿ ಬೆಳಿಸಬಹುದು. ಆಹಾರ ವಿಷಯದಲ್ಲಿ ಹೊಚ್ಚ ಹೊಸದಾದ ಪಲ್ಯೆಗ
ಬೆಲೆಯು ಬಹಳ ಮಹತ್ವದ್ದಿರುವದು ; ಹಣ್ಣುಗಳಾದರೂ ನಮ್ಮ ಆಹಾರಪದಾರ್ಥ
ಗಳಲ್ಲಿ ಒಂದು ಮುಖ್ಯಾಂಗವಾಗಿರಬೇಕು. ಹೂಗಳನ್ನು ಬೆಳೆಸುವದು ಆಹಾ
ಉಪಯುಕ್ತತೆಗಲ್ಲ. ಮನುಷ್ಯನ ಜೀವನದಲ್ಲಿ ವ್ಯಾವಹಾರಿಕ ಉಪಯುಕ್ತತೆಯ
ಅತಿ ಮಹತ್ವದ ಸ್ಥಾನವನ್ನು ಹೊಂದಿದರೂ ಸೌಂದರ್ಯಸೇವನೆಯು ಕಡಮೆಯ
ದಲ್ಲ. ಹೀಗಿದ್ದರೂ ನಮ್ಮ ಜನರಲ್ಲಿ ಸಾಮಾನ್ಯವಾಗಿ ಇಂಥ ತೋಟಗಳ ವಿಷಯ
ವಾಗಿ ಸಾಕಷ್ಟು ಅಭಿರುಚಿಯಿರುವದಿಲ್ಲ. ಇತ್ತೀಚೆಗೆ ದೊಡ್ಡ ದೊಡ್ಡ ಪಟ್ಟ
ಗಳಲ್ಲಿ ಜನರು ಊರುಬಿಟ್ಟು ಹೊರಗೆ ಬೆಡಗಿನ ಮನೆಗಳನ್ನು ಕಟ್ಟಿಕೊಂಡಿರುವದು
ಅಲ್ಲಿನ ನಾಗರಿಕರು ಮಾತ್ರ ಇಂಥ ತೋಟಗಳನ್ನು ಮನೆಯ ಸುತ್ತಲಿನ ಪ್ರದೇ
ದಲ್ಲಿ ಮಾಡಿಕೊಂಡು ಮನೆಗೊಂದು ಶೋಭೆಯನ್ನುಂಟುಮಾಡಿರುವರಲ್ಲದೆ ತಮ್ಮ
ಜೀವನದ ಆರೋಗ್ಯತೆಯ ಮಟ್ಟವನ್ನು ಬೆಳಿಸಿರುವರು. ಧನಿಕರಾದವರು ಕೂ
ಕೈಕೆಲಸಮಾಡಿಕೊಂಡು ಅಳುಗಳಂತೆ ದುಡಿಯುವದನ್ನು ನಾವು ಕಾಣಬಹುದು
ಈ ಜನರಲ್ಲಿ ತಾವು ಮಾಡುವ ಕೆಲಸದ ಯೋಗ್ಯತೆಯು ಎಷ್ಟು ಮಾತ್ರವು
ಹೀನವಾದದ್ದಲ್ಲೆಂಬ ಭಾವನೆಯು ನೆಲೆಯೂರಿರುವದು. ಆದರೂ ಮೇಲೆ ಹೇ
ದಂತೆ ಜನಸಾಮಾನ್ಯರಲ್ಲಿ ಈ ವಿಷಯವಾಗಿ ಅನಾದರವಿರುವದೆಂದು ಹೇಳಲು
ನಮಗೆ ವ್ಯಸನವಾಗುತ್ತದೆ. ಶಾಲೆಗೆ ಬರುವ ಮಕ್ಕಳಲ್ಲಿ ಈ ವಿಷಯದಲ್ಲಿ ಶ್ರ
ಪ್ರೀತಿಯನ್ನು ಹುಟ್ಟಿಸಬೇಕು. ಅನುಕೂಲ್ಯವಿದ್ದಲ್ಲಿ ಶಾಲೆಯ ಸುತ್ತಲು ತೋ

ಳಿದ್ದು ಶಿಕ್ಷಕರೂ, ಬಾಲಕರೂ ಸಹಕಾರದಿಂದ ತೋಟಗಳಲ್ಲಿ ಮನಮುಟ್ಟಿ
ಾವತಿಮಾಡಬೇಕು. ಆಳಾಗಿ ದುಡಿದು ಅರಸಾಗಿ, ತೋಟಗಳಿಂದಾಗುವ ಲಾಭ
ಳನ್ನು ಹೊಂದಬೇಕು. ಗಿಡಬಳ್ಳಿ ಹೂ-ಕಾಯಿಗಳನ್ನು ಬೆಳಿಸಿ ಅದರ ಸುಖವನ್ನು
ನುಭವಿಸಬೇಕು. ಶಿಕ್ಷಣಕಾರ್ಯದಲ್ಲಿ ಇದೊಂದು ಮಹತ್ವದ ಅಂಗವೆಂಬದನ್ನು
ಕ್ಷಕರು ಮರೆಯಕೂಡದೆಂದು ನಮ್ಮ ಆಗ್ರಹದ ವಿನಂತಿಯು.

ಎಂದಿನಿಂದಲೂ ಶಿಕ್ಷಣಶಾಸ್ತ್ರಜ್ಞರು ಶಾಲೆಯ ವಿಷಯಗಳಲ್ಲಿ ಇದನ್ನು
ೀರಿಸಿರುವರು. ವರ್ಧಾಶಿಕ್ಷಣದ ಯೋಜನೆಯಲ್ಲಿ ಕೇಂದ್ರಸ್ಥ ವಿಷಯವಾಗಿರುವ
ೃಕೆಲಸಗಳಲ್ಲಿ ಒಕ್ಕಲುತನವೂ ಹಣ್ಣು-ಹಂಪಲವನ್ನು ಬೆಳಿಸುವದೂ ಸೇರಿರುವವು.
ಯೋಜನೆಯಲ್ಲಿ ಹೇಳಿದ ಕೈಕೆಲಸಗಳು ಕೈಗಾರಿಕೆಯವರನ್ನು ಮಾತ್ರ
ಟ್ಟಿಸುವ ವಿಷಯಗಳಲ್ಲ; ಆದರೆ ಇವು ಶೈಕ್ಷಣಿಕ ಲಾಭಗಳನ್ನು ಮಾಡಿಕೊಡಲು
ಕ್ಕ ವಿಷಯಗಳಾಗಿವೆ. ಅಂದರೆ ಸಾಂಸ್ಕೃತಿಕ ಬೆಳವಣಿಗೆಗೆ ಇವು ಉತ್ಕೃಷ್ಟ
ಾದದ್ದರಿಂದಲೆ ಅವು ಶಾಲೆಯ ಅಭ್ಯಾಸಕ್ರಮದಲ್ಲಿ ತಕ್ಕ ಸ್ಥಾನವನ್ನು ಹೊಂದಿವೆ.
ಪಂಚದಲ್ಲಿ ಜನ್ಮವೆತ್ತಿದ ನೂತನ ಬಾಲಕನಿಗೆ ಸುತ್ತಲಿನ ಸೃಷ್ಟಿಯ ಜ್ಞಾನ
ನ್ನು ಮಾಡಿಕೊಳ್ಳುವದು ಬಲವಾದ ಅಭಿರುಚಿಯ ವಿಷಯವು. ಮನೆ ಮತ್ತು
ಾಲೆಗಳ ಸುತ್ತಲು ತರತರದ ಸಸ್ಯಗಳನ್ನು ಬೆಳಿಸುತ್ತಿದ್ದರೆ ಅಲ್ಲಿ ಸಂಚರಿಸಿ
ಾಲಕರು ತಾವಾಗಿಯೇ ಪ್ರಯತ್ನಪೂರ್ವಕವಾಗಿ ಯೋಗ್ಯವಾದ ಅರಿವು ತಿಳಿವು
ಳನ್ನುಂಟುಮಾಡಿಕೊಳ್ಳುವರು. ಬಾಲಕರು ಕ್ರೀಡಾಪ್ರೇಮಿಗಳಾದರೂ ಹಿರಿಯ
ತೆ ಕೃತಿ ಪ್ರೇಮಿಗಳೂ ಇರುವರು. ತಮ್ಮ ತಾಯ್ತಂದೆಗಳು ಮಾಡುವಂಥ
ದ್ದೇಶಪೂರ್ವಕ ಕಾರ್ಯಗಳನ್ನು ಮಾಡುವದರಲ್ಲಿಯೂ ಅಂಥ ಕಾರ್ಯ
ಿಂದಾಗುವ ಲಾಭಗಳನ್ನು ಹೊಂದುವದರಲ್ಲಿಯೂ ಅವರಿಗೆ ಆಸ್ಥೆ ಬಹಳ.
ಾಲೆಯ ತೋಟಗಳು ಬಾಲಕರಲ್ಲಿ ಕಾರ್ಯ ಪ್ರೀತಿಯನ್ನು ಹುಟ್ಟಿಸುವವು;
ಾಗ್ರತೆಯನ್ನು ತಂದು ಕೊಡುವವು; ವ್ಯವಸಾಯಾಂತರ ಆಸರಿಕೆ ಬೇಸರಿಕೆ
ಳನ್ನು ಕಳೆಯುವವು ; ಸೃಷ್ಟಿಜ್ಞಾನವನ್ನು ಮಾಡಿಕೊಡುವವು ; ಸೌಂದರ್ಯಾಭಿ
ುಚಿಯನ್ನು ಮೂಡಿಸುವವು; ಒಟ್ಟಿಗೆ ಎಲ್ಲಬಗೆಯಿಂದಲೂ ಶಾಲೇಯ ವ್ಯವ
ಯವಾಗಲು ಅತ್ಯುತ್ಕೃಷ್ಟ ಶೈಕ್ಷಣಿಕ ಸಾಧನಗಳಾಗಿವೆ.

ಆದ್ದರಿಂದ ಚಿಕ್ಕಮಕ್ಕಳ ಶಿಕ್ಷಣಾಭಿಮಾನಿಗಳು ಅನುಕೂಲ್ಯವಿದ್ದ ಮಟ್ಟಿ
ಾದರೂ ಇಂಥ ತೋಟಗಳನ್ನು ಬಾಲಕರು ಮಾಡಿಕೊಳ್ಳುವಂತೆ ಪ್ರಯತ್ನ
ಾಡಬೇಕೆಂದು ನಮ್ಮ ಸವಿನಯ ಸೂಚನೆಯು. ಕಾಯಿಪಲ್ಯೆಗಳನ್ನು ಬಿತ್ತಿದ
ಮಾಡಿದ ನೆಲದಲ್ಲಿ ತುಸ ದಿವಸಗಳಲ್ಲಿಯೇ ಫಲಗಳನ್ನಿಯುವವು. ಚಿಕ್ಕ ಚಿಕ್ಕ
ಿಗಳನ್ನು ಮಾಡಿಕೊಂಡು, ತರತರದ ಆಕೃತಿಗಳಾಗುವಂತೆ ಬೀಜಗಳನ್ನು

(ಬಾಲಕರು) ಬಿತ್ತಿ, ನೀರೆರೆದು, ಅವುಗಳು ಬೆಳೆಯುವಾಗ, ಚಿಗುರೊಡೆಯುವಾಗ, ಹೂಬಿಡುವಾಗ, ಫಲ ಕೊಡುವಾಗ ಬಾಲಕರು ಸ್ವಗೀರ್ಯ ಸುಖವನ್ನು ಅನುಭೋಗಿಸಲಿಕ್ಕಿಲ್ಲವೇ? ಅಲ್ಪ ಬೆಲೆಯುಳ್ಳದ್ದಾದ್ದರೂ ತುಸು ಕಾಯಿಪಲ್ಲೆಯನ್ನು ತಾಯ್ತಂದೆಗಳಿಗೆ ಒಯ್ದು ಕೊಡುವಾಗ ಅವರಾನಂದಕ್ಕೆ ಎಣೆಯಿಲ್ಲ. ಇದೇ ಸಮಯದಲ್ಲಿ ಶಿಕ್ಷಕರಾದವರು ಆಹಾರ ಪದಾರ್ಥಗಳಲ್ಲಿ ತರತರದ ಕಾಯಿಪಲ್ಯೆಗಳ ಮಹತ್ವವೆಷ್ಟೆಂಬುದನ್ನು ಹೇಳಿದರೆ ಅದನ್ನು ಬಾಲಕರು ತಿಳಿದು ಕೊಳ್ಳುವರಲ್ಲದೆ ಹೆಚ್ಚಿನ ಪ್ರಮಾಣದಿಂದ ಕಾಯಿಪಲ್ಯೆಗಳನ್ನು ತಂದು ತಿನ್ನಲು ಪ್ರವೃತ್ತರಾಗುವರು. ಹೀಗಾದರೆ ಶಿಕ್ಷಕರಿಂದ ಇದೊಂದು ಉತ್ತಮತಮವಾದ ಸಮಾಜಸೇವೆಯಾಗಲಿಲ್ಲವೇ?

ಕಾಯಿಪಲ್ಯೆಗಳಂತೆ ಆಹಾರ ಪದಾರ್ಥಗಳಲ್ಲಿ ಹಣ್ಣು-ಹಂಪಲುಗಳೂ ಮಹತ್ವದ ಸ್ಥಾನವನ್ನು ಪಡೆದಿವೆ. ಪೇರಲು, ಸೀತಾಪೇರಲು, ಬಾಳೆ ಈ ಮೊದಲಾದ ಹಣ್ಣಿನ ಗಿಡಗಳನ್ನು ಬೆಳಿಸುವದು ಕಷ್ಟತರ ಕೆಲಸವಲ್ಲ. ಬಾಳೆಯು ಎಂಥ ನೆಲದಲ್ಲಿಯಾದರೂ ಬೆಳೆಯುವದು; ಇಡಿಯ ವರ್ಷವೆಲ್ಲ ಫಲಕೊಡುವದು. ಹರಿ ನೀರಿನಿಂದಲೂ ಜೀವಿಸಬಲ್ಲದು. ಪೇರಲು, ಸೀತಾಪೇರಲುಗಳು ಬಹಳ ಸ್ಥಳವನ್ನಾಕ್ರಮಿಸುವದಿಲ್ಲ; ಮನೆಗೊಂದೆರಡು ಗಿಡಗಳಿದ್ದರೂ ಸಾಕಷ್ಟು ಫಲವನ್ನು ಕೊಡುವವು. ಸಸ್ಯಗಳನ್ನು ಹಚ್ಚಿದ ವೇದಲಿನ ಒಂದೆರಡು ವರ್ಷ ಹೆಚ್ಚು ಆರೈಕೆ ಮಾಡಿದರೆ ಎಷ್ಟೋ ವರ್ಷಗಳ ವರೆಗೆ ಅನೇಕ ಫಲಗಳನ್ನು ಕೊಡುವವು. ಇತ್ತೀಜೆಗೆ ತೋಟಗಳಲ್ಲಿ ಶಾಸ್ತ್ರೀಯ ರೀತಿಯಿಂದ ಕಸೆ ಮಾಡಿದ ಸಸ್ಯಗಳನ್ನು ಬೆಳೆಸಿ ಎಷ್ಟೋ ಜನರು ಮಾರುತ್ತಿರುವರು. ಇಂಥವರಿಂದ ಮಾವು, ಲಿಂಬೆ, ದಾಳಿಂಬ ಈ ಮೊದಲಾದವುಗಳ ಒಂದೆರಡು ಸಸಿಗಳನ್ನು ತಂದು ಬೆಳಿಸಿದರೆ ಕಾಲಕಾಲಕ್ಕೆ ಒಂದು ಮನೆಗೆ ಇಡಿಯ ವರ್ಷ ಸಾಕಾಗುವಷ್ಟು ಹಣ್ಣು-ಹಂಪಲುಗಳನ್ನು ಕೊಡುವವು. ಕೊಂಡು ತಂದು ಇವುಗಳನ್ನು ತಿನ್ನಬೇಕೆಂದರೆ ಬಡವರಿಗೆ ಆಗದ ಮಾತು; ಮಧ್ಯಮ ಸ್ಥಿತಿಯವರಿಗೂ ಸುಸಾಧ್ಯವಲ್ಲ. ತೋಟಗಳನ್ನು ಮಾಡಿಕೊಳ್ಳದಿದ್ದರೂ ಯಾರಾದರೂ ಕಷ್ಟಬಟ್ಟು ಒಂದೆರಡು ಗಿಡಗಳನ್ನು ಬೆಳೆಸಿದರೆ ಏನೂ ಖರ್ಚಿಲ್ಲದೆ ಇಡಿಯ ವರ್ಷವೆಲ್ಲ ಫಲಗಳನ್ನು ಸೇವಿಸುವ ಸುಖವನ್ನು ಅನುಭೋಗಿಸಬಲ್ಲರು. ಮನಸ್ಸಿದ್ದರೆ ಮಾರ್ಗವೆಂಬಂತೆ ಈ ವಿಷಯದಲ್ಲಿ ಶಿಕ್ಷಕರಾದವರು ಬಾಲಕರಿಂದ ತೋಟಗಳನ್ನು ಮಾಡಿಸಿ ಎಲ್ಲ ತರದ ಲಾಭಗಳನ್ನು ಅವರಿಗೆ ಒದಗಿಸಿಕೊಡಬೇಕು.

ಪ್ರ ಕ ಟ ನೆ

—ಂಂ೪ಂಂ—

ಸಾಮಾನ್ಯ ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳನ್ನು ಅಗ್ರಿಕಲ್ಚರಲ್ ಬಾಯಾಸ್ ಕ್ರಮದ ಅಭ್ಯಾಸಕ್ರಮಕ್ಕೆ ಸೇರಿಸಿಕೊಳ್ಳುವ ವಿಚಾರ.

ಸಾಮಾನ್ಯ ಪ್ರಾಥಮಿಕ ಶಾಲೆಗಳ ೫ನೆಯ ಮತ್ತು ೬ನೆಯ ಇಯತ್ತೆಗಳ ಪರೀಕ್ಷೆಗಳಲ್ಲಿ ಪಾಸಾಗಿರುವ ವಿದ್ಯಾರ್ಥಿಗಳು ಆ ಇಯತ್ತೆಗಳಿಗೆ ಗೊತ್ತಾಗಿರುವ ಪ್ರಾಯೋಗಿಕ ಕೆಲಸಗಳನ್ನು ಒಂದು ವರ್ಷದಲ್ಲಿ ಮುಗಿಸಿಕೊಂಡಿದ್ದರೆ ಅಂಥವರನ್ನು ಅಗ್ರಿಕಲ್ಚರಲ್ ಬಾಯಾಸ ಕ್ಲಾಸಿನ ೬ನೆಯ ಇಯತ್ತೆಗೆ ಸೇರಿಸಿಕೊಳ್ಳಬಹುದು. ಮತ್ತು ಸಾಮಾನ್ಯ ಪ್ರಾಯಮರಿ ಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆಯನ್ನು ಪಾಸಾದ ಹುಡುಗರು ಅಗ್ರಿಕಲ್ಚರಲ್ ಬಾಯಾಸ ಕ್ಲಾಸಿನಲ್ಲಿ ಒಕ್ಕಲತನದ ಅಭ್ಯಾಸಕ್ರಮವನ್ನು ಮುಗಿಸಿದ್ದರೆ, ಅಗ್ರಿಕಲ್ಚರಲ್ ಬಾಯಾಸದ ಪ್ರಾಯಮರಿ ಸ್ಕೂಲ್ ಲಿವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆಗೆ ಕೂಡ್ರಲು ಅಡ್ಡಿಯಿರುವದಿಲ್ಲ.

ಹೆಡ್‌ಮಾಸ್ತರ ಟ್ರೇನಿಂಗ ಸ್ಕೂಲ್,
ಧಾರವಾಡ.

(ಮೆ॥ ಎಜ್ಯುಕೇಶನಲ್ ಇನ್‌ಸ್ಪೇಕ್ಟರ ದಕ್ಷಿಣಭಾಗರವರ ಅಪ್ಪಣೆಯ ಮೇರಿಗೆ)

ಪತ್ರಗಳ ಸಾರಾಂಶ

೧. ಕಲಾದಗಿ ಉರ್ದು ಶಾಲೆಯ ಬಗ್ಗೆ ಅಬ್ದುಲ್‌ರಹಿಮಾನ ಕೊಲ್ಲಾಪುರ ಎಂಬವರು ಬರೆದದ್ದು—

"ತಾ॥ ೧–೮–೧೯೩೬ನೆಯ ದಿವಸ ಶ್ರೀ. ಹುಚ್ಚರಾವ ಕುಲಕರ್ಣಿ ಶಾನಿಟರಿ ಕಮೀಟಿ ಚೇರಮನ್ ಇವರ ಅಧ್ಯಕ್ಷತೆಯ ಕೆಳಗೆ ಹಿಂದೂ ಮುಸಲ್ಮಾನ ಬಾಂಧವರ ಸಭೆಕೂಡಿತ್ತು. ಶೈಕ್ಷಣಿಕ ವಿಚಾರವೇ ಸಭೆಯ ಉದ್ದೇಶವಾಗಿತ್ತು. ಕೆಳಗೆ ವಿವರಿಸಿದಂತೆ ಠರಾವುಗಳನ್ನು ಗೊತ್ತುಮಾಡಿದರು. (೧) ಉರ್ದು ಗರ್ಲ್ಸ ಶಾಲೆಯನ್ನು ತೆರೆದು, ಈಗ ಕೆಲಸಮಾಡುವ ಮಿ. ದಾಡೀವಾಲೆ ಇವರನ್ನೇ ಆ ಶಾಲೆಯ ಮಾಸ್ತರರನ್ನಾಗಿಯೂ ಮಿ. ಕಾಜಿ ಇವರನ್ನು ಅಸಿ। ಮಾ. ರನ್ನಾಗಿಯೂ ಈ ಕೆಲಸಗಳ ಬಗ್ಗೆ ವರಿಷ್ಠರಿಗೆ ವಿನಂತಿಮಾಡಿಕೊಳ್ಳಬೇಕು. (೨) ಹೊಸದಾಗಿ

ಸ್ಥಾಪಿತವಾದ ನ್ಯೂ ಇಂಗ್ಲಿಷ ಶಾಲೆಯ ದೆಸೆಯಿಂದ ಗ್ರ್ಯಾಂಟ ದೊರೆಯುವ ಬಗ್ಗೆ ಅಧಿಕಾರಸ್ಥರಿಗೆ ಬಿನ್ನಯಿಸಬೇಕು. ಉರ್ದುಶಾಲೆಯ ಉಪಯೋಗಕ್ಕಾಗಿ ಮೌ॥ ರಾಜಅಹಮ್ಮದ ಸಾಃ ಇವರು ೧೪ ರೂ. ಬೆಲೆಬೀಳುವ ಗಡಿಯಾರ ಕೊಟ್ಟರು. ಇದಲ್ಲದೆ ಊರೊಳಗಿನ ಸದ್ಗೃಹಸ್ಥರು ಹುಡುಗರಿಗಾಗಿ ಪಾಟಿ, ಅರಿವೆಗಳನ್ನು ಕೊಟ್ಟದ್ದಲ್ಲದೆ ೧೯ರೂ. ೧೫ಚಿಲ್ಲಿ. ೩ಪೈ. ವಂತಿಗೆಯಿಂದ ಕೊಟ್ಟರು. ಸ್ತುತ್ಯವ್ರ.

೨. ಭಟಕಳ ಶಾಲೆಯ ಬಗ್ಗೆ ಅಲ್ಲಿಯ ವ್ಹಿ. ಎಮ್ ಭಟಕಳ ಎಂಬವರು ಬರೆದದ್ದು. "ಈ ಶಾಲೆಯ ೧ನೆಯ ಅಸಿ. ರೂ ಮಿ. ಎ. ವ್ಹಿ. ಪ್ರಭು (೩೫ ವರ್ಷದ ಟ್ರೇಂಡ) ಎಂಬವರು ಒಳ್ಳೆಯ ಆಸ್ಥೆಯಿಂದಲೂ ಶಿಕ್ಷಣಪದ್ಧತಿಗೆ ಸರಿಯಾಗಿಯೂ ಕೆಲಸಮಾಡುತ್ತಿರುವರು. ಈ ವರ್ಷ ಮುಲ್ಕೀ ಪರೀಕ್ಷೆಗೆ ೭ ಜನ ವಿ. ಗಳು ಹೋಗಿದ್ದು ಎಲ್ಲರೂ ಪಾಸಾಗಿರುವರು."

೩. **ಶಾಳಾ ಹಂದಿಗುಂದ** (ತಾಲೂಕ ಗೋಕಾಕ) ಇಲ್ಲಿಯ ಅಸಿ. ಮಾ. ಪಂಪಪ್ಪ ಮಲ್ಲಪ್ಪ ಹೊನ್ನಬಿಂದಿಗಿ ಇವರು ಬರೆದದ್ದು. "ತಾ॥ ೩೦-೭-೩೬ನೆಯ ದಿವಸ ಈ ಶಾಲೆಯಲ್ಲಿ ಸಭೆಸೇರಿತ್ತು. ಸಭೆಯ ಕಾಲಕ್ಕೆ ಶಾಲಾ ವಿದ್ಯಾರ್ಥಿಗಳು ಭಾಗ್ಯೋದಯವೆಂಬ ನಾಟಕವನ್ನಾಡಿ ತೋರಿಸಿದರು. ಶಾಲಾಪಂಚರಲ್ಲೊಬ್ಬರಾದ ಮಿ. ಚೆನಬಸಪ್ಪ ಸಬರದ ಎಂಬವರು ಹೆ. ಮಾ. ಪಾವಟಿಯವರನ್ನು ಹೊಗಳಿದರು."

೪. **ಶಾಲಾ ಮದನವಳ್ಳಿ** ತಾಲೂಕ ಹಳ್ಳಿಯಾಳ ಇಲ್ಲಿಯ ವ್ಹಿಲೇಜ ಕಮಾಟಿ ಮೆಂಬರ ಮಿ. ಶಿವಲಿಂಗಪ್ಪನೆಂಬವನು ತಿಳಿಸುವದೇನಂದರೆ— "ಈ ಶಾಲೆಗೆ ನಾರಾಯಣ ಜೀವಾಜಿ ಕುಲಕರ್ಣಿ ಇವರು ಶಿಕ್ಷಕರಾಗಿ ಬಂದಂದಿನಿಂದ ಶಾಲಾ ಸ್ಥಿತಿಯು ಸುಧಾರಿಸಿದೆ. ಈ ಶಾಲೆಗೆ ಲೋ. ಬೋ. ಮೆಂಬರರವರು ಬಂದಾಗ್ಗೆ ೨ ರೂ. ವಿದ್ಯಾರ್ಥಿಗಳಿಗಾಗಿ ಕೊಟ್ಟಿದ್ದರು. ಅದೇ ಹಣದಿಂದ ಬಡ ವಿದ್ಯಾರ್ಥಿಗಳಿಗೆ ಪಾಟಿ ಪುಸ್ತಕಗಳನ್ನು ಕೊಟ್ಟಿದೆ."

೫. **ಶಾಳಾ ನಾಗರಮುನ್ನೊಳಿ** (ತಾಲೂಕ ಚಿಕ್ಕೋಡಿ) ಶಾಲೆಯ ಬಗ್ಗೆ ಅಲ್ಲಿಯ ಮಿ. ಕೆಲ್ಲೇದಾರ ಎಂಬ ಪ್ರೇಕ್ಷಕರು ಬರೆದದ್ದು. "ನಾಗಪಂಚಮಿ ನಿಮಿತ್ತ ಈ ಶಾಲೆಯಲ್ಲಿ ಸಭೆ ಸೇರಿತ್ತು. ಗೌಡಕುಲಕರ್ಣಿಯವರೂ, ರಾಃ ರಾಃ ಗಣಪತರಾವ ಹವಾಲದಾರರೆಂಬವರೂ ಇನ್ನೂ ಗ್ರಾಮನಿವಾಸಿಗಳೂ ನೆರದಿದ್ದರು. ಆಗ ಶಾಲಾ ವಿ. ಗಳು ಆಟನೋಟ ಸಂಭಾಷಣೆಗಳನ್ನು ಮಾಡಿ ತೋರಿಸಿದರು. ಸಭೆಯಲ್ಲಿ ಗೃಹಸ್ಥರು ೫ರೂ. ೮ಆ. ವಂತಿಗೆಯಿಂದ ಕೊಟ್ಟರು. ಈ ಹಣದಿಂದ ಕೆಲಸ ಮಾಡಿ ತೋರಿಸಿದ ವಿದ್ಯಾರ್ಥಿಗಳಿಗೆ ಖಾದಿ ಬಟ್ಟೆಗಳನ್ನೂ ಇತರ ಸಾಮಾನುಗಳನ್ನೂ ಹಂಚಿದರು.

ಪ್ರ ಕ ಟ ಣೆ

ಕನ್ನಡ ಬುಕ್ ಕಮೀಟ (ಧಾರವಾಡ) ಇವರು ಆಗಸ್ಟ (೧೯೩೪) ತಿಂಗಳಿನಲ್ಲಿ ಮಂಜೂರ ಮಾಡಿದ ಕನ್ನಡ ಪುಸ್ತಕಗಳ ಯಾದಿಯು.

ವಿದ್ಯಾರ್ಥಿಗಳು=ವಿ; ಶಿಕ್ಷಕರು=ಶಿ; ಪ್ರಾಥಮಿಕ ಶಾಲೆಗಳು=ಪ್ರಾ. ಶಾ; ಲಾಯಬ್ರರಿ ಬುಕ್ಕು=L;

ಅ.ನ.	ಪುಸ್ತಕಗಳ ಹೆಸರು.	ಗ್ರಂಥಕರ್ತರ ಹೆಸರು.	ಪ್ರಕಾಶಕರ ಹೆಸರು.	ಬೆಲೆ.	ಯಾತಕ್ಕೋಸ್ಕರ ಮಂ.	ಮಂಜೂರ ನಂ.
೧	ವಿಜಾಪುರ ಜಿಲ್ಲೆಯ ಸಾಮಾನ್ಯ ವರ್ಣನೆ ೨ನೆ ಆ. ೧೯೩೬	ಮು. ವಿ. ಆರ್. ಶಿವನಾಗಪ್ಪ ವಾಗ್ವಿಲಾಸ ಬುಕ್‌ಡಿಪೋ	ಗ್ರಂ. ಕರ್ತರು	೦-೪-೬	ಪ್ರಾ. ಶಾ. ಗಳ ಶಿ. ರ. L ಬುಕ್ಕು	6073
೨	ಹುಬ್ಬಳ್ಳಿ ತಾಲೂಕಿನ ಸಚಿತ್ರ ಭೂಗೋಲ ೧೯೩೪	ಸದರ	ಸದರ	೧-೨-೦	ಸದರ	6078
೩	ಒತ್ತಕ್ಕರ ಬೋಧಿನಿ ೧ನೆ ಆ. ೧೯೩೬	ಸದರ	ಸದರ	೦-೧-೬	ಪ್ರಾ. ಶಾ. ಗಳ ವಿ. ಗಳ L	6080
೪	ಕಥಾ ಕುಸುಮಾವಳಿ ಪುಷ್ಪ	ಮು. ಸಿ. ಎಸ್. ಕುಲಕರ್ಣಿ ಮಾಳಮಡ್ಡಿ ಧಾರವಾಡ	ಮು. ವಿ.ಆರ್. ಮುಧೋಳಕರ ಕನ್ನಡ ಸಾಹಿತ್ಯಸೇವಾ ಸಮಿತಿ ಧಾರವಾಡ	೦-೧-೬	ಪ್ರಾ. ಶಾ. ಗಳ ವಿ. ಗಳ L	6082
೫	ಬೆಲ್ಲಾಹಿಟ್ಟು ೧೯೩೪	ಮ್ಯಾನೇಜರ ಮನೋಹರ ಗ್ರಂಥಭಾಂಡಾರ ಧಾರವಾಡ	ಮು. ಡಿ.ಬಿ. ಕುಲಕರ್ಣಿ ಮನೋಹರ ಗ್ರಂಥ ಭಾಂಡಾರ ಧಾರವಾಡ	೦-೨-೦	ಪ್ರಾ. ಶಾ. ಗಳ ವಿ. ಗಳ L	6084

Reg. No. B. 369

ಓದಿರಿ ! ಶ್ವರಿವಾಡಿರಿ

ವಾಗ್ವಿಲಾಸ ಬುಕ್ ಡಿಪೋಕ್ಕೆ ಇಂದೇ ಪತ್ರ ಬರೆಯಿರಿ

ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಕ ಬಿ. ಎ., ಎಜ್ಯುಕೇಸಿಸ್ಟ್ರೇಟಿವ್ಹ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರು ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ ೬ ಆ. ಮಾತ್ರ.

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದೀಹಾಳಮಠ ಸುಪರವಾಯಿಝರು ಗ್ರಂಥಕರ್ತರು. ಬೆಲೆ ೧ ಆ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

ಏನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಹೆಸರು ಪಡೆದದೆ. ಬರೆದವರು ಕ. ರಾ. ಅಡಬಡ್ಡಿ. ಬೆಲೆ ೬ ಆ.

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ ೬ ಆ.)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು, ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರವೂರ ಕಮೀಶನ್ ಕೊಡುವೆವ್ರ. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಎ. ಆರ್. ಶಿವನಾಗಪ್ಪ,
ಪ್ರೊಪ್ರಾಯಿಟರ
ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ.

ಸೆಪ್ಟೆಂಬರ ೧೯೩೮ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ನಂ.	ವಿಷಯ.	ಪುಟ.
೧.	ಸ್ಫುಟವಿಚಾರಗಳು	೧
೨.	ಹೊಸ ಪದ್ಧತಿಯ ಗಣಿತ ಶಿಕ್ಷಣವು	೩
೩.	ಶಿಶುಶಾಲೆಗಳು	೧೧
೪.	ಭಾಷಾವಿಷಯ	೧೬
೫.	ವ್ಹ. ಫಾ. ಪರೀಕ್ಷೆ ೧೯೩೮	೨೮
೬.	ಪ್ರಕಟನೆ	೩೧

Printed by K. R. Bhise at the Karnatak Printing Works, Dharwar and Published by D. V. Kale, B. A., Head Master Training, School, Dharwar at his Office.

ಜಾಹೀರಾತು

ರಾಮಾಶ್ರಯ ಬಕ್‌ಡಿಪೊ, ಧಾರವಾಡ.

೧. **ಪುಸ್ತಕ ಶಾಖೆ.** ಕಾಯಿಪಲ್ಲೆ ಮಾರ್ಕೇಟ, ಧಾರವಾಡ.

೨. **ಸ್ಟೇಶನರಿಮತ್ತು ಇತರ ಸಾಮಾನುಗಳ ಶಾಖೆ, ಮಾರ್ಕೆಟ ರೋಡ**

ನಮ್ಮಲ್ಲಿ ಕನ್ನಡ, ಇಂಗ್ಲೀಷ, ಹಿಂದಿ, ಮರಾಠಿ, ಉರ್ದು, ಭಾಷೆಯಲ್ಲಿ ಶಾಲೆ ಕಾಲೇಜುಗಳಿಗೆ ಉಪಯುಕ್ತವಾದ ಟೆಕ್ಸ್ಟಬುಕ್ಕುಗಳೂ ಅವುಗಳ ಟಿಪ್ಪಣಿಗಳೂ, ಗಾಯಿಡ್, ಡಿಕ್ಷನರಿ, ಮ್ಯಾಪ್ಸ, (ನಕಾಶಗಳು) ಡಾಯರಿ, ಪಂಚಾಂಗ, ಕಾದಂಬರಿಗಳೂ ಚಿಲ್ಲರೆ ಹಾಗೂ ಠೋಕ ದರದಿಂದ ಯೋಗ್ಯಬೆಲೆಗೆ ದೊರೆಯುತ್ತವೆ.

ಧಾರವಾಡದಲ್ಲಿ ಪ್ರಸಿದ್ಧಿಸಲ್ಪಟ್ಟ ಎಲ್ಲ ತರದ ಪುಸ್ತಕಗಳನ್ನು ಅಂದರೆ ಕರ್ನಾಟಕದ ಇತಿಹಾಸಬೋಧಿನಿ, ಹಿಂದುಸ್ಥಾನ ಇತಿಹಾಸ ಬೋಧಿನಿ, ಸುಡಿಗನ್ನಡಿ, ಉಮಡಿಕರ ಜಮಾಖರ್ಚು, ನಿಂಬಾಳಕರ ಇವರಿಂದ ಪ್ರಸಿದ್ಧಿಸಲ್ಪಟ್ಟ ಹೊಸಪದ್ಧತಿಯ ಗಣಿತ, ಧಾರವಾಡ ಜಿಲ್ಲೆಯ ಭೂಗೋಲು ಹಾಗು ಕಟ್ಟೀಮನಿ ಕೃತ ಬಾಲಬೋಧೆ ಈ ಎಲ್ಲ ಪುಸ್ತಕಗಳು ಠೋಕ ಹಾಗೂ ಕಿರುಕಳ ದರದಿಂದ ಸಿಗುತ್ತವೆ.

ಎಕ್ಸರಸಾಯಿಜ, ನೋಟಬುಕ್ಕುಗಳು, ಖಾತೆ ಕೀರ್ದಿಬುಕ್ಕು, ಜೋಪಡಾ, ಕಾಪಿಬುಕ್ಕು, ಡ್ರಾಯಿಂಗಬುಕ್ಕು, ಇವುಗಳನ್ನು ನಾವು ಮುದ್ದಾಂ ಉತ್ತಮ ಕಾಗದ ಹಾಕಿಸಿ ಅಂದವಾಗಿ ತಯಾರಿಸಿ ಇಟ್ಟಿರುವೆವು.

ತಾಳಿಕೆಯಲ್ಲಿ ಮೇಲಾದ ಪಾರಕರ, ರಾಜಾ, ಕ್ಯಾಪ್ಟನ್, ಸೇಲರ ಮುಂತಾದ ಎಲ್ಲತರದ ಹೊಸಮಾದರಿಯ ಫೌಂಟನ್‌ಪೆನ್ಸ, ಮತ್ತು ಅವುಗಳ ಮಸಿಯನ್ನು ಗ್ಯಾರಂಟಿಯಿಂದ ಕೊಡುತ್ತೇವೆ. ಪೆನ್ನುಗಳ ಮೇಲೆ ಇಂಗ್ಲಿಷದಲ್ಲಿ ಹೆಸರು ಹಾಕುತ್ತೇವೆ. ನಾದುರಸ್ತಾದ ಪೆನ್ನುಗಳನ್ನು ದುರಸ್ತ ಮಾಡುತ್ತೇವೆ.

ಇದಲ್ಲದೆ ಫೂಲ್ಸಕೇಪ, ಕ್ರವೂನ್, ಡೆಮಿ, ರಾಯಲ್, ಬಾಂಡ, ಆನ್‌ಗ್ಲೇಜ ಹಾಗೂ ಗ್ಲೇಜಕಾಗದ ಪ ಕಾರ್ಡಬೋರ್ಡ, ಇನ್ವಿಟೇಶನ್, ಕ್ಯಾಲಿಕೊ ಮುಂತಾದ ಪ್ರಿಂಟಿಂಗ ಪ್ರೆಸ್ಸಿಗೆ ಉಪಯುಕ್ತವಾದ ಸಾಮಾನುಗಳೂ ಮತ್ತು ಎಲ್ಲ ನಮೂನೆಯ ಸ್ಟೇಶನರಿ ಸಾಮಾನುಗಳೂ ಸಿಗುತ್ತವೆ.

ಸೇಂಟ್ಸ, ಸ್ನೋ, ಹೇಅರಆಯಿಲ್ಸ, ದೇಶೀ ವಿದೇಶಿ ಸುವಾಸಿಕ ತೈಲಗಳೂ ಸಿಗುತ್ತವೆ.

ಸಾಬೆ ಬಿಸ್ಕೀಟು, ಪೇಪರಮಿಠಾಯಿ, ಮೈಸೂರ ಕಾಫೀ ಬೀಜ, ಮತ್ತು ಜಹಾದ ಪುಡಿಯ ಅನೇಕ ನಮೂನೆಯ ಬಂಡಲಗಳು ದೊರೆಯುವವು.

ತಮ್ಮ,

ಈಶ್ವರಪ್ಪಾ ರಾಮುಪ್ಪಾ ಆಕಳವಾಡಿ ಅ್ಯಂಡ ಸನ್ಸ.

ರಾಮಾಶ್ರಯ ಬುಕ್ಕಡಿಪೊ, ಮಾರ್ಕೆಟ ಧಾರವಾಡ.

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ಸಂಪುಟ ೭೭	ಅಕ್ಟೋಬರ ೧೯೩೮	ವರ್ಷ ೧೦. ಸಂ. ೭

ಸ್ಫುಟವಿಚಾರಗಳು

ಅಭ್ಯಾಸಪತ್ರಿಕೆಯು

ಪ್ರಾಥಮಿಕ ಶಾಲೆಗಳಿಗೆ ಶಾಲಾಖಾತೆಯವರು ಗೊತ್ತುಪಡಿಸಿದ ಇಂದಿನ ಅಭ್ಯಾಸ ಪತ್ರಿಕೆಯಲ್ಲಿ ಅನೇಕ ವಿಷಯಗಳು ಸಮಾವೇಶವಾಗಿರುವವು. ಮೊದ ಮೊದಲು ಓದು-ಬರೆಹ, ಲೆಕ್ಕ ಈ ವಿಷಯಗಳಷ್ಟೇ ಇದ್ದು ಕಾಲಕಾಲಕ್ಕೆ ಜನರ ಬೇಡಿಕೆಗಳಿಗನುಗುಣವಾಗಿಯೂ ವಿಷಯಗಳ ಮಹತ್ವವನ್ನನುಸರಿಸಿಯೂ ಸರಕಾರದವರು ಆಗಾಗ ಬೇರೆ ಬೇರೆ ವಿಷಯಗಳನ್ನು ಅದರಲ್ಲಿ ಸೇರಿಸಿರುವರು. ಬೇರೆಬೇರೆ ವಿಷಯಗಳ ಜ್ಞಾನದಿಂದ ಬಾಲಕರಲ್ಲಿ ಪಾತ್ರತೆ ಉಂಟಾಗಬೇಕು; ಶಿಕ್ಷಣದಿಂದ ಅವರಲ್ಲಿ ಯೋಗ್ಯವಾದ ಚಟಗಳು ನೆಲೆಗೊಳ್ಳಬೇಕು; ಕೆಲಸಮಾಡಲು ನೈಪುಣ್ಯವು ಹುಟ್ಟಬೇಕು; ಯೋಗ್ಯವಾದ ಸ್ಥಿರಮನೋವೃತ್ತಿಗಳು ಬೇರೂರ ಬೇಕು ಎಂಬಿವು ಈ ಅಭ್ಯಾಸಪತ್ರಿಕೆಯ ಮುಖ್ಯೋದ್ದೇಶ. ಆದಕಾರಣ ಈ ಪತ್ರಿಕೆಯಲ್ಲಿ ಹೇಳಿದ ಎಲ್ಲ ವಿಷಯಗಳ ಪರಿಚಯವು ಅವಶ್ಯವೆಂದು ತೋರಿದರೂ ಎಲ್ಲ ಶಾಲೆಗಳಲ್ಲಿ ಅವುಗಳನ್ನು ಸರಿಯಾಗಿಯೂ ಸಂಪೂರ್ಣವಾಗಿಯೂ ಸಾಗಿಸುವದು ಅನೇಕಕಾರಣಗಳ ಮೂಲಕ ಅಶಕ್ಯವಾದದ್ದಾಗಿದೆ; ಅಲ್ಲದೆ ಬುದ್ಧಿಯ ಬೆಳೆವಣಿಗೆಗೆ ಮಾತ್ರ ಹೆಚ್ಚು ಪ್ರಾಶಸ್ತ್ಯವನ್ನು ಕೊಡುತ್ತಿದ್ದು ಸರ್ವಾಂಗೀಣ ಸಂಸ್ಕೃತಿಯ ವೃದ್ಧಿಗೆ ಅದು ತಕ್ಕಷ್ಟು ಅನುಕೂಲವಾಗಿಲ್ಲೆಂದು ಇತ್ತೀಚೆಗೆ ಎಷ್ಟೋ ಜನರ ಅಭಿಪ್ರಾಯವಾಗಿದೆ. ಅಭ್ಯಾಸಪತ್ರಿಕೆಯು ಹಳ್ಳಿಯವರಿಗೂ ಪಟ್ಟಣದ

ವರಿಗೂ ಏಕಪ್ರಕಾರದ್ದಾದರೆ ಅದು ಸರಿಯಾದದ್ದಾಗಲಾರದೆಂದು ಅವರ ಮತ; ಇದು ಸರಿಯೇ.

ಶಾಲೆಯಲ್ಲಿಯ ಶಿಕ್ಷಣವು ಬಾಲಕರಲ್ಲಿ ಹೆಚ್ಚು ಚಟುವಟಿಕೆಯನ್ನು ಹುಟ್ಟಿಸು ವಂತಹದಿರಬೇಕು. ಅದು ಪ್ರಪಂಚದ ವ್ಯವಹಾರಕ್ಕೆ ಹೆಚ್ಚು ಸಂಬಂಧಪಟ್ಟ ದ್ದಾಗಿರಬೇಕು. ಪ್ರಪಂಚದ ವ್ಯವಹಾರವೆಲ್ಲ ಒಂದು ದಾರಿಯನ್ನು ಅನುಸರಿಸು ತ್ತಿದ್ದರೆ ಶಾಲೆಯ ಶಿಕ್ಷಣವು ಬೇರೊಂದು ದಾರಿಯನ್ನು ಅನುಸರಿಸಕೂಡದು. ಶಿಕ್ಷಕನಾದರೂ ಶಾಲೆಯ ವಿಷಯಗಳನ್ನು ಮಧ್ಯವರ್ತಿಯಾಗಿಟ್ಟುಕೊಳ್ಳದೆ ಕಾರ್ಯಮಾಡುವಾಗ ಬಾಲಕರ ಬೆಳವಣಿಗೆಯು ಅವನ ದೃಷ್ಟಿಯಲ್ಲಿ ಮಧ್ಯವರ್ತಿ ಯಾಗಿರಬೇಕು. ಈ ಬೆಳವಣಿಗೆಗೆ ಆ ವಿಷಯಜ್ಞಾನವು ಕೇವಲ ಸಾಧನಮಾತ್ರ ವೆಂಬದನ್ನು ಶಿಕ್ಷಕನು ಎಂದಿಗೂ ಮರೆಯಕೂಡದು. ಬಾಲಕರು ಆತ್ಮವಿಶ್ವಾಸ ವುಳ್ಳವರೂ ಕಾರ್ಯಕ್ಷಮರೂ ಆಗಬೇಕು; ಎಂಥ ಹೋರೆಯಾದರೂ ಯೋಗ್ಯತೆ ಯಲ್ಲಿ ಹೀನವಾದದ್ದಲ್ಲೆಂಬ ಭಾವನೆಯು ಅವರಲ್ಲಿ ಒಡಮೂಡಬೇಕು; ಬಾಲಕರು ಕೈಕೊಳ್ಳುವ ಕೈಕೆಲಸವು ಅವರಿಗೆ ಉಪಯುಕ್ತವಾದದ್ದಿರುವದೆಂಬದನ್ನು ಅವರು ಮನಗಾಣಬೇಕು; ಅಂದರೆ ಆ ಕೆಲಸದಲ್ಲಿ ಅವರಿಗೆ ಅಭಿರುಚಿಹುಟ್ಟಿ ಒಮ್ಮನಸ್ಸಿನಿಂದ ಕೆಲಸಮಾಡುವರು.

ಈ ಉದ್ದೇಶದಿಂದಲೆ **ವರ್ಧಾಶಿಕ್ಷಣದ** ಯೋಜನೆಯಲ್ಲಿ ಕೈಕೆಲಸವು ಮುಖ್ಯವಾದ ವಿಷಯವಾಗಿರುವದು. ಮುಂಬಯಿ ಸರಕಾರದವರು ಹಳ್ಳಿಗಳ ಶಾಲೆಗಳಿಗಾಗಿ ಸುಲಭವಾದ ಒಂದು ಹೊಸ ಅಭ್ಯಾಸಪತ್ರಿಕೆಯನ್ನು ಹೊರಡಿಸ ಲಿರುವರು. ಎಷ್ಟೋ ಹಳ್ಳಿಗಳಲ್ಲಿ ಕೆಲವು ದಿವಸಗಳವರೆಗೆ ಒಬ್ಬ ಶಿಕ್ಷಕನ ಶಾಲೆಗಳು ಉಳಿದೇ ಉಳಿಯುವವು; ಅಂಥ ಪರಿಸ್ಥಿತಿಯಲ್ಲಿ ಕೂಡ ಬಾಲಕರಲ್ಲಿ ಸಾರ್ವಾಂಗಿಕ ಸಂಸ್ಕೃತಿಯಾಗಿ ವ್ಯವಹಾರೋಪಯುಕ್ತವಾದ ಕೈಕೆಲಸವನ್ನು ಜೆನ್ನಾಗಿ ಅರಿತುಕೊಂಡರೆ ಅವರು ಪ್ರಪಂಚದಲ್ಲಿ ತಮ್ಮ ತಮ್ಮ ವ್ಯವಹಾರಗಳನ್ನು ಸಾಗಿಸಿಕೊಳ್ಳಬಹುದು. ಸರಕಾರದವರ ಈ ಸದುದ್ದೇಶವು ಅಭ್ಯಾಸಪತ್ರಿಕೆಯಲ್ಲಿಯ ವಿಷಯಗಳಿಗಿಂತ ಶಿಕ್ಷಕನ ವೃತ್ತಿಯನ್ನೇ ಹೆಚ್ಚು ಅವಲಂಬಿಸಿದೆ. ದೇಶದಲ್ಲಿ ಹುಟ್ಟಿದ ಅಂದೋಲನ, ಹೊಸಜಾಗೃತಿ, ಜನರ ಬೇಡಿಕೆ, ಜನರ ಸಾಮಾಜಿಕ-ರಾಜಕೀಯ ಸ್ಥಿತ್ಯಂತರ ಈ ಮೊದಲಾದ ಸಂಗತಿಗಳನ್ನು ಅನುಲಕ್ಷಿಸಿ ದೇಶೋನ್ನತಿಯ ಕಾರ್ಯ ಭಾರದಲ್ಲಿ ತನ್ನ ಕರ್ತವ್ಯವನ್ನು ನಿಸ್ವಾರ್ಥಬುದ್ಧಿಯಿಂದ ಜರುಗಿಸಲು ಮನಸ್ಸು ಮಾಡುವ ಹೊಸಶಿಕ್ಷಕನಿಗೆ ಈ ಸದುದ್ದೇಶವನ್ನು ನೆರವೇರಿಸಲು ಅಸಾಧ್ಯವಾಗಲಿಕ್ಕಿಲ್ಲೆಂದು ನಮಗೆ ತೋರುತ್ತದೆ.

ಹೊಸಪದ್ಧತಿಯ ಗಣಿತ ಶಿಕ್ಷಣವು

ಲೇಖಕರು— ಶ್ರೀ. ಎಚ್. ಬಿ. ಉಮಡಿಕರ ಎಮ್. ಎ.
ಅಧ್ಯಾಪಕ ಟ್ರೇ. ಸ್ಕೂ. ಧಾರವಾಡ

ಸಾಮಾನ್ಯ ವಿಚಾರಗಳು

೧. ಗಣಿತ ಶಿಕ್ಷಣದ ಮೂರು ಉದ್ದೇಶಗಳು:—

ಪ್ರಾಥಮಿಕ ಶಾಲೆಗಳಲ್ಲಿಯ ಗಣಿತ ಶಿಕ್ಷಣಕ್ಕೆ ಮೂರು ಮುಖ್ಯವಾದ ಉದ್ದೇಶಗಳಿರುವವು.

(೧) ಸಂಖ್ಯೆ, ವೇಳೆ ಮತ್ತು ಅವಕಾಶ ಇವುಗಳ ನಿಚ್ಚಳವಾದ ಕಲ್ಪನೆಗಳನ್ನು ಮಾಡಿಕೊಳ್ಳುವದಕ್ಕೆ ಹುಡುಗನಿಗೆ ಸಹಾಯವನ್ನು ಮಾಡುವದು.

(೨) ಈ ಕಲ್ಪನೆಗಳಲ್ಲಿ ಹೆಚ್ಚು ಉಪಯುಕ್ತವಾದವುಗಳನ್ನು ಯೋಗ್ಯವಾದ ಲೆಕ್ಕಗಳಿಂದ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಸರಿಯಾಗಿಯೂ ದೃಢವಾಗಿಯೂ ಬಿಂಬಿಸುವಂತೆ ಮಾಡುವದು.

(೩) ಹೀಗೆ ದೊರಕಿಸಿದ ಗಣಿತದ ಹಿಡಿತಗಳನ್ನು ಉಪಯೋಗಿಸಿಕೊಂಡು ಪ್ರತಿದಿನದ ಸಮಸ್ಯೆಗಳನ್ನು ಜಾಣ್ಮೆಯಿಂದ ಸರಿಯಾಗಿಯೂ ತೀವ್ರವಾಗಿಯೂ ಬಿಡಿಸಲಿಕ್ಕೆ ಅವಶ್ಯವಾದ ಯೋಗ್ಯತೆಯನ್ನು ಹುಡುಗನಲ್ಲಿ ಉಂಟುಮಾಡುವದು. ಈ ಮೂರು ಬಗೆಯಾದ ಉದ್ದೇಶಗಳನ್ನು ಅರಿತುಕೊಂಡು ಅದರಂತೆ ನಡೆಯುವದು ಜಾಣನಾದ ಶಿಕ್ಷಕನ ಕೆಲಸವು. ಮೇಲೆ ಹೇಳಿದ ಉದ್ದೇಶಗಳಲ್ಲಿ ಎರಡನೆಯದಕ್ಕೆ ಮಿತಿಮೀರಿ ಮಹತ್ವವನ್ನು ಕೊಡಬಾರದು. ತನ್ನ ವಿದ್ಯಾರ್ಥಿಯು ಗಣಿತದ ಆರಂಭದ ಮೆಟ್ಟಿ (ಮೂಲಕೃತಿ) ಗಳನ್ನು ವೇಗದಿಂದಲೂ ಸರಿಯಾಗಿಯೂ ಮಾಡತೊಡಗಿದರೆ ಯಾವ ಶಿಕ್ಷಕನು ಆನಂದಪಡಲಿಕ್ಕಿಲ್ಲ? ಹಾಗೆಯೇ ಹುಡುಗನು ತನು ಕಲಿತ ಈ ಯಾಂತ್ರಿಕ ಕೌಶಲ್ಯವನ್ನು ವ್ಯವಹಾರದಲ್ಲಿ ಉಪಯೋಗ ಮಾಡಿಕೊಳ್ಳಲಿಕ್ಕೆ ಸಮರ್ಥನಾಗದಿದ್ದರೆ ಒಳ್ಳೆಯ ಶಿಕ್ಷಕನಿಗೆ ಅಪಾರ ವಿಷಾದವೂ ಆಗದೆ ಇರದು. ಹುಡುಗರು ಪಠ್ಯಪುಸ್ತಕಗಳಿಂದ ಕಲಿತ ಗಣಿತದ ಹಿಡಿತಗಳಿಂದ ವ್ಯಾವಹಾರಿಕ ಉದಾಹರಣೆಗಳನ್ನು ಬಿಡಿಸಲು ಕಲಿತರೆ ಶಿಕ್ಷಕನು ಗಣಿತ ಶಿಕ್ಷಣದ ಮುಖ್ಯ ಉದ್ದೇಶವನ್ನು ಬಹುಮಟ್ಟಿಗೆ ಸಾಧಿಸಿದಂತಾಗುವದು. ಕೇವಲ ವೇಗದಿಂದಲೂ ತಪ್ಪಿಲ್ಲದೆಯೂ ಲೆಕ್ಕಗಳನ್ನು ಬಿಡಿಸಲಿಕ್ಕೆ ಕಲಿಸುವದೇ ಹಿಂದಿನ

ಗಣಿತ ಶಿಕ್ಷಣ ಕ್ರಮದ ಧ್ಯೇಯವಾಗಿತ್ತು. ಆದರೆ ಈ ಕ್ರಮದಿಂದ ಹುಡುಗರಿಗೆ ವಿಚಾರಶಕ್ತಿಯು ಹೆಚ್ಚಾಗುತ್ತದೆಂದು ಹೇಳಲಾಗುವದಿಲ್ಲ.

೨. ವಿದ್ಯಾರ್ಥಿಯ ಯೋಗ್ಯತೆಗೆ ತಕ್ಕಷ್ಟು ಕೆಲಸವನ್ನು ಕೊಡುವದು:—

ಗಣಿತದಲ್ಲಿಯ ಅಭ್ಯಾಸಪತ್ರಿಕೆಗಳು ಇನ್ನೂ ಹಳೆಯ ಪದ್ಧತಿಯನ್ನೇ ಅವಲಂಬಿಸಿರುವವು. ಆದರೆ ಇಂದಿನ ವಿದ್ಯಾರ್ಥಿಗಳಿಗೆ ಬೇಕಾಗುವ ಕ್ರಮವು ಇದಲ್ಲ. ಹುಡುಗರ ಸಾಮಾನ್ಯ ಒಲವಿಗೆ ಹೆಚ್ಚು ಮಹತ್ವವನ್ನು ಕೊಡಬೇಕು. ಮಗುವಿನ ಅಭಿರುಚಿಯ ಮತ್ತು ಅನುಭವದ ಉದಾಹರಣೆಗಳಿದ್ದರೆ ಮಾತ್ರ ಅವನು ಗಣಿತದ ತತ್ವಗಳನ್ನು ತಿಳಿದುಕೊಂಡು ಅವುಗಳನ್ನು ಪಯೋಗಿಸಲು ಸಮರ್ಥನಾಗುವನು. ವರ್ಗದಲ್ಲಿಯ ಜಾಣ ಹುಡುಗರು ಈ ವಿಷಯವನ್ನು ಬೇಗನೆ ತಿಳಿದುಕೊಳ್ಳುವರು. ಹುಡುಗನು ಹೆಚ್ಚು ಹೆಚ್ಚು ದಡ್ಡನಿದ್ದಂತೆ ಹೆಚ್ಚು ಹೆಚ್ಚು ವಸ್ತುಗಳ ಉಪಯೋಗದಿಂದ ಅವನಿಗೆ ಗಣಿತದ ತತ್ವಗಳನ್ನು ಕಲಿಸಬೇಕಾಗುವದು. ದಡ್ಡ ಹುಡುಗನ ಸಂಗಡ ಜಾಣ ಹುಡುಗನ ಅಭ್ಯಾಸವನ್ನು ಸಾಗಿಸಿದರೆ ಜಾಣ ಹುಡುಗನ ವೇಳೆಯು ಸುಮ್ಮನೆ ಹೋಗುವದಲ್ಲದೆ ಅವನಿಗೆ ಆ ವಿಷಯದಲ್ಲಿ ಬೇಸರು ಹುಟ್ಟಿ ಉತ್ಸಾಹವು ಕಡಿಮೆಯಾಗುವದು ಸಹಜ. ಹುಡುಗರು ಒಂದೇ ವಯಸ್ಸಿನವರಿದ್ದರೂ ಎಲ್ಲರೂ ಒಂದೇ ಯೋಗ್ಯತೆಯವರಿರುವ ಸಂಭವವಿಲ್ಲ. ಆದುದರಿಂದ ಹುಡುಗರಲ್ಲಿ ಜಾಣರು, ಮಧ್ಯಮತರಗತಿಯವರು, ದಡ್ಡರು ಎಂದು ಮೂರು ಗುಂಪುಗಳನ್ನು ಮಾಡಿ ಅವರವರ ಯೋಗ್ಯತೆಗೆ ಸರಿಯಾಗಿ ಅಭ್ಯಾಸ ಪತ್ರಿಕೆಯನ್ನು ತಯಾರಿಸಿ ಕಲಿಸಿದರೆ ಎಲ್ಲ ಹುಡುಗರೂ ಹುರುಪಿನಿಂದ ಕಲಿತು ವೇಳೆಯ ಸದುಪಯೋಗವಾಡಿಕೊಳ್ಳುವರು. ಹೀಗೆ ಎಲ್ಲ ಶಾಲೆಗಳಲ್ಲಿ ಮಾಡಲಿಕ್ಕೆ ಶಕ್ಯವಿರದಿದ್ದರೂ ಅನುಕೂಲವಿದ್ದ ಶಾಲೆಗಳಲ್ಲಿ ಈ ಕ್ರಮವನ್ನು ಅನುಸರಿಸುವದು ವಿಹಿತವು. ಇದರಂತೆ ಗಣಿತ ವಿಷಯಗಳಲ್ಲಿ ಜಾಣಹುಡುಗರಿಗೆ ಸ್ವಲ್ಪ ಬಿಗಿಯಾದ ಮತ್ತು ದಡ್ಡ ಹುಡುಗರಿಗೆ ಸುಲಭವಾದ ಉದಾಹರಣೆಗಳ ಗುಂಪು ಗಳನ್ನು ಕೊಡುವದು ಯೋಗ್ಯವು. ಹುಡುಗರ ಯೋಗ್ಯತೆಗೆ ಸರಿಯಾಗಿ ಅಭ್ಯಾಸ ಪತ್ರಿಕೆಯನ್ನು ತಯಾರ ಮಾಡುವ ಕೆಲಸವು ಉಳಿದ ವಿಷಯಗಳಿಗಿಂತ ಗಣಿತದಲ್ಲಿ ಹೆಚ್ಚಿಗೆ ಮಹತ್ವದ್ದಾದೆ. 'ಸುಲಭದಿಂದ ಕಠಿಣಕ್ಕೆ ಸಾಗು' ಎಂಬ ಶಿಕ್ಷಣದ ಸಾಮಾನ್ಯ ತತ್ವವನ್ನನುಸರಿಸಿ ಶಿಕ್ಷಕನು ಹುಡುಗರ ಪರಿಚಯದ ಸುಲಭವಾದ ಲೆಕ್ಕಗಳನ್ನು ಆರಿಸಿ ಮೊದಲು ಹೇಳಬೇಕು. ಆರಂಭದಲ್ಲಿ ಲೆಕ್ಕಗಳು ಕಠಿಣವಿದ್ದರೆ ಹುಡುಗನಲ್ಲಿ 'ನನಗೆ ಬರಲಿಲ್ಲವಲ್ಲ' ಎಂಬ ಭಾವನೆಯು ಹುಟ್ಟಿ ವಿಷಯವು ತಲೆಬೇಸರವಾಗುವದು. ಮತ್ತು ಮುಂದೆ ಅವನಿಗೆ ಗಣಿತ ಕಲಿಸುವದು ಅಸಾಧ್ಯ

ಬಾಗಬಹುದು. ಆದ್ದರಿಂದ ಶಿಕ್ಷಕನು ಹುಡುಗನ ಯೋಗ್ಯತೆಯನ್ನು ಕಂಡು ಹಿಡಿದು ಅವನಿಗೆ ತಿಳಿಯುವಂಥ ಅನುಭವದ ಸಣ್ಣ ಸಣ್ಣ ಲೆಕ್ಕಗಳನ್ನು ಮೊದಲು ಹೇಳಿ ಕ್ರಮದಿಂದ ಹೆಚ್ಚಿಗೆ ಬಿಗಿಯಾದ ಲೆಕ್ಕಗಳನ್ನು ಹೇಳಬೇಕು. ಅದರಂತೆ ಜಾಣ ಶಿಕ್ಷಕನು ಹುಡುಗರಲ್ಲಿ ಉತ್ಸಾಹವೂ ಅನುಭವವೂ ಹೆಚ್ಚಾಗುವಂತೆಯೂ ಕ್ರಮವಾಗಿ ಪ್ರಗತಿಯನ್ನು ಹೊಂದುವಂತೆಯೂ ಆರಂಭದಲ್ಲಿ ಹುಡುಗರ ವ್ಯವಹಾರಕ್ಕೆ ಸಂಬಂಧಿಸಿದ ಸುಲಭವಾದ, ಕ್ರಮದಿಂದ ಗಡಚಾಗುವ ವ್ಯವಹಾರದ ಲೆಕ್ಕಗಳನ್ನು ಆರಿಸಿ ಹೊಂದಿಸಿಕೊಂಡು ಅದರಂತೆ ವಿಷಯವನ್ನು ಸಾಗಿಸಬೇಕು.

೩. ಹುಡುಗರಿಗೆ ಆಟದಿಂದ ಗಣಿತ ವಿಷಯವನ್ನು ಕಲಿಸುವದು:—

ಹುಡುಗರ ಎಣಿಸುವ ಆಟ, ಉಪ್ಪುಹೊರಿಸುವ ಆಟ, ಕವಡಿಯ ಆಟ, ಚವಂಗದ ಆಟ ಮುಂತಾದ ಆಟಗಳಲ್ಲಿ ಸಂಖ್ಯೆಗಳು ಬೆರೆತುಕೊಂಡಿರುವವು. ಮತ್ತು ಅಂಗಡಿ ಹಾಕುವದು, ತೂಗುವದು, ಅಳೆಯುವದು ಮೊದಲಾದ ಪ್ರಾಥರ ವ್ಯವಸಾಯಗಳನ್ನೂ ಹುಡುಗರು ಆಟದರೂಪದಲ್ಲಿ ಅನುಕರಿಸುತ್ತಿರುವರು. ಇಂಥ ವ್ಯವಸಾಯಯುಕ್ತವಾದ ಆಟಗಳನ್ನು ಲಕ್ಷಪೂರ್ವಕವಾಗಿ ಆರಿಸಿ ಹೊಂದಿಸಿದರೆ ಪ್ರಾಥಮಿಕ ಶಾಲೆಯಲ್ಲಿದ್ದ ಹುಡುಗರಿಗೆ ಅದರಲ್ಲಿಯೂ ಮುಖ್ಯವಾಗಿ ಬಾಲಕರ ವರ್ಗಕ್ಕೆ ಒಳ್ಳೆಯ ಸಹಾಯವಾಗುತ್ತದೆ. ಆಟಗಳಿಂದ ಹುಡುಗರಲ್ಲಿ ಗಣಿತದ ಅಭಿರುಚಿಯನ್ನುಂಟುಮಾಡುವದಕ್ಕೂ, ಸಂಖ್ಯೆ–ಅಳತೆ ಮುಂತಾದವುಗಳನ್ನು ಸುಲಭವಾಗಿ ಕಲಿಸುವದಕ್ಕೂ ಬಹಳ ಸಹಾಯವಾಗುವದು. ಅಲ್ಲದೆ ಗಣಿತ ವಿಷಯವು ಆಟದರೂಪದಲ್ಲಿ ಪರಿಣಮಿಸಿ ಗಣಿತ ವಿಷಯವೆಂದರೆ 'ತಲೆಬೇಸರ' ಎಂಬ ತಪ್ಪುಭಾವನೆಯು ದೂರಾಗಿ ಉಳಿದ ವಿಷಯಗಳಿಗಿಂತ ಈ ವಿಷಯವನ್ನು ಕಲಿಯಲಿಕ್ಕೆ ಹುಡುಗರು ಬಹಳ ಹುರುಪಿನವರಾಗುವರು. ಉದಾಹರಣೆ:— ರಾಮನು ವರ್ಗದ ಅಂಗಡಿಯಲ್ಲಿ ಒಂದು ಪುಸ್ತಕವನ್ನು ೨ ಬಿಲ್ಲಿಗೆ ಕೊಂಡನು. ಅವನು ಅಂಗಡಿಕಾರನಿಗೆ ಒಂದು ಆಣೆ ಕೊಟ್ಟನು. ಇಲ್ಲಿ ರಾಮನಿಗೆ ಅಂಗಡಿಕಾರನಾದ ಹುಡುಗನು ತಿರುಗಿ ಎಷ್ಟು ರೊಕ್ಕ ಕೊಡಬೇಕು? ಎಂಬುವದನ್ನು ಎಲ್ಲರೂ ವಿಚಾರಿಸತೊಡಗುವರು. ಮತ್ತು ತಮ್ಮ ಶಬ್ದಗಳಿಂದ ಈ ವ್ಯವಹಾರವನ್ನು ವರ್ಣಿಸುವರು. ಇದರಿಂದ ಆ ಅಂಗಡಿಕಾರನು ಹಣವನ್ನು ತಿರುಗಿ ಕೊಡುವಾಗ ಗಣಿತದ ಯಾವ ಕೃತಿಯನ್ನು ಪಯೋಗಿಸಿಕೊಂಡಂತಾಯಿತು? ಎಂಬದನ್ನು ಹುಡುಗರು ಹೇಳಲಿಕ್ಕೆ ಶಕ್ತರಾಗಬೇಕು. ಜಾಣ ಶಿಕ್ಷಕನು ಕ್ರಮವಾಗಿ ಕಠಿಣತೆಯ ಅಂಶವು ಹೆಚ್ಚಾಗುವಂಥ ವ್ಯಾವಹಾರಿಕ ಗಣಿತದ ಉದಾಹರಣೆಗಳನ್ನು ಹೇಳುತ್ತ ಗಣಿತದ ಬೇರೀಜು ವಜಾಬಾಕಿ ಗುಣಾಕಾರ ಭಾಗಾಕಾರಗಳನ್ನು ಕಲಿಸಬೇಕು.

ಉಪಕರಣಗಳ ಸಹಾಯ :— ಆಟಗಳು ಅನೇಕತರದವಿರುವದರಿಂದ ಮುಂದೆ ಸಾಗಿದಂತೆ ಅಂಕಗಣಿತ ಜ್ಞಾನವು ಹುಡುಗರ ಯೋಗ್ಯತೆಯನ್ನು ವಿಾರಿ ಹೋಗುತ್ತದೆ. ಇವುಗಳಿಗೆ ತಳಹದಿಯು ರೂಪದಲ್ಲಿಯು ಗಣಿತದ ಆರಂಭದ ಕೃತಿಗಳನ್ನು ಗುಂಡುಗಳು, ಮಣಿಗಳು ಮುಂತಾದ ಬಾಲಕರ ಬಳಕೆಯ ಉಪಕರಣಗಳ ಸಹಾಯದಿಂದ ಕಲಿಸುವದು ಬಹಳ ಮಹತ್ವದ್ದಾಗಿದೆ. ಜಾಣ ಶಿಕ್ಷಕನು ಬಾಲಕರ ಬಳಕೆಯ ವ್ಯವಹಾರದ ಉದಾಹರಣೆಗಳಿಂದ ಪ್ರತ್ಯಕ್ಷ ವಸ್ತುಗಳನ್ನು ತೋರಿಸಿ ೧ ರಿಂದ ೯ ರ ವರೆಗೆ ಸಂಖ್ಯೆಗಳನ್ನೂ ಆರಂಭದ ನಾಲ್ಕು ಕೃತಿಗಳನ್ನೂ ಬಾಲಕರ ಮನಸ್ಸಿನ ಮೇಲೆ ಒಡಮೂಡುವಂತೆ ಕಲಿಸುವದು ಬಹಳ ಮಹತ್ವದ ಸಂಗತಿಯಾಗಿದೆ. ಬಾಲಕನ ಮುಂದಿನ ಜೀವಿತದ ವ್ಯವಹಾರಗಳ ಎಲ್ಲ ಲೆಕ್ಕಗಳಿಗೆ ಇದೇ ತಳಹದಿಯಾಗಿರುವದರಿಂದ ಈ ಮೆಟ್ಟು (ಕೃತಿ) ಗಳ ಬಗ್ಗೆ ಬಹಳ ಲಕ್ಷ್ಯಕೊಡುವದು ಶಿಕ್ಷಕನ ಕರ್ತವ್ಯವಾಗಿರುವದು. ಇಲ್ಲಿ ಬಾಲಕನು ವಸ್ತುಗಳನ್ನು ನೋಡಿ ಮಾಡಿ ಮನಗಾಣುವಂತೆ ಮಾಡಬೇಕು. ಉಪಕರಣಗಳಲ್ಲಿ ದೋಷವಿರಬಾರದು. ಸದೋಷವಾದ ಉಪಕರಣಗಳಿಂದ ಹುಡುಗರಿಗೆ ಹಾನಿತಟ್ಟುವ ಸಂಭವವದೆ. ಉದಾ -೨+೩=೫ ಎಂದು ಹೇಳಲಿಕ್ಕೆ ಕಲಿತ ಹುಡುಗನು ೨ ಹ.ಗಂ+೩ಹ.ಗಂ=೫ಹ.ಗಂ.=೫೦ ಎಂದು ಕೂಡಲೇ ಹೇಳಲಿಕ್ಕೆ ಬರಬೇಕು. ಇಲ್ಲಿ ೨ಂಕಾಳು+೩ಂಕಾಳು ಇಲ್ಲವೆ ಬೊಟ್ಟು ಮುಂತಾದವುಗಳನ್ನು ಎಣಿಸಬಾರದು. ಅಂದರೆ ಬಿಡಿಕಾಳುಗಳು-ಗುಂಪುಗಳು ಇವುಗಳ ನಿಜವಾದ ತಿಳುವಳಿಕೆಯು ಹುಡುಗರಿಗೆ ಚೆನ್ನಾಗಿ ಆಗಲಿಕ್ಕೆಬೇಕು.

ಅಂಕಗಣಿತದ ಯಾವದೇ ವಿಷಯವನ್ನು ಕಲಿಸುವಾಗ ಈ ಮೂರು ಮಹತ್ವದ ಮೆಟ್ಟಿಲುಗಳು ಕಂಡುಬರುವವು:—ಪ್ರಾಯೋಗಿಕ ಮತ್ತು ಬಾಯಿ ಲೆಕ್ಕಗಳು, ಅಂಕಗಣಿತ, ಬೀಜಗಣಿತ ಮತ್ತು **ರೇಖಾಗಣಿತ** ಇವುಗಳಲ್ಲಿ ಉದಾಹರಣೆಗಳನ್ನು ಬಿಡಿಸುವಾಗ ಕ್ರಮಬದ್ಧವಾದ ಯಾಂತ್ರಿಕ ಅಭ್ಯಾಸವು ಬೇಕೇ ಬೇಕಾಗುವದು. ಪ್ರತಿದಿನದ ಉದಾಹರಣೆಗಳನ್ನು ಬಿಡಿಸುವಾಗಲೂ ಗಣಿತದ ಮೂಲಕೃತಿಗಳ ಜ್ಞಾನದಿಂದ ಲಾಭವಾಗುವದು. ಆದ್ದರಿಂದ ಅಂಕಗಣಿತದಲ್ಲಿ ಯಾವದೇ ವಿಷಯವನ್ನು ಕಲಿಸುವ ಪದ್ಧತಿಯು ಮೂರು ಮೆಟ್ಟುಗಳಿಂದ ಸಾಗಬೇಕು.

(೧) ಮೊದಲು ಉಪೋದ್ಘಾತದ ಮುಖಾಂತರವಾಗಿ ಬಾಲಕರ ಪರಿಚಯದ ವಸ್ತುಗಳ ಸಹಾಯದಿಂದ ಅಂಕಗಣಿತದ ಹೊಸ ತತ್ವಗಳನ್ನು ಒಳಗೊಂಡ ಸುಲಭ ಬಾಯಿಲೆಕ್ಕಗಳನ್ನು ರಚಿಸಿ ಹೇಳುವದು.

(೨) ಲೆಕ್ಕಗಳಲ್ಲಿ ಬರುವ ಸಂಖ್ಯೆ ಆಳತೆಗಳ ಸರಿಯಾದ ತಿಳಿವಳಿಕೆಯನ್ನು ಮನಸ್ಸಿನಲ್ಲಿ ತಂದು ಲೆಕ್ಕಗಳನ್ನು ಬಿಡಿಸುವಷ್ಟು ಆತ್ಮವಿಶ್ವಾಸವನ್ನು ಹುಡುಗನಲ್ಲಿ ತಂದುಕೊಡುವದು.

(೩) ಆ ಮೇಲೆ ಅವುಗಳಲ್ಲಿಯ ಯಾಂತ್ರಿಕ ಕೆಲಸವನ್ನು ಪ್ರಾರಂಭಿಸುವದು. ಟೀಗೆಮಾಡುವದರಿಂದ ಅಂಕಗಣಿತದ ರೀತಿಗಳ ಜ್ಞಾನವಾಗಿ ಲೆಕ್ಕಗಳನ್ನು ವೇಗದಿಂದಲೂ ಸರಿಯಾಗಿಯೂ ಮಾಡಲು ಹುಡುಗನು ಸಮರ್ಥನಾಗುವನು. ಕೊನೆಗೆ ಅವನಿಗೆ ಹಲವು ಉದಾಹರಣೆಗಳನ್ನು ಬಿಡಿಸಲಿಕ್ಕೆ ಕೊಡಬೇಕು. ಇದರಿಂದ ನಿಜವಾದ ಕೌಶಲ್ಯವು ಪ್ರಾಪ್ತವಾಗಿ ಅವನು ವ್ಯವಹಾರದ ಉದಾಹರಣೆಗಳನ್ನು ಬಿಡಿಸಲು ಆ ಕೌಶಲ್ಯವನ್ನು ಉಪಯೋಗಿಸತೊಡಗುವನು. ಇಲ್ಲಿ ಹೇಳಿರುವ ತತ್ವಗಳನ್ನು ಅನುಸರಿಸುವಾಗ ಶಿಕ್ಷಕನು ಎಚ್ಚರದಿಂದಿರಬೇಕು. [ಒಂದು ಇಲ್ಲವೆ ಹಲವು ಪಾಠಗಳಲ್ಲಿ ಬರುವ ವಿಷಯಗಳನ್ನು ಒಂದೇ (ಸಮನಾದ) ರೀತಿಯಿಂದ ಕಲಿಸುವದನ್ನು ಬಿಡಬೇಕು] ಒಂದು ಮೆಟ್ಟಿನಿಂದ ಇನ್ನೊಂದು ಮೆಟ್ಟಿಗೆ ಸಾಗಬೇಕಾದಾಗ ಅದಕ್ಕೆ ಬೇಕಾಗುವ ವೇಳೆಯ ಕಡೆಗೆ ಶಿಕ್ಷಕನ ಲಕ್ಷವಿರಬೇಕು. ಒಮ್ಮೆ ತತ್ವಗಳ ತಿಳಿವಳಿಕೆಯಾದ ಮೇಲೆ ಕೇವಲ ಯಾಂತ್ರಿಕವಾಗಿ ಲೆಕ್ಕಗಳನ್ನು ಬಿಡಿಸುವದಕ್ಕೆ ವಿಪರೀತ ವೇಳೆಯನ್ನು ಕೊಡಬಾರದು. ಪ್ರತಿಯೊಬ್ಬ ಹುಡುಗನ ಕೊರತೆಯನ್ನು ಶಿಕ್ಷಕನು ತಿಳಿದುಕೊಳ್ಳಬೇಕು ಮತ್ತು ದಡ್ಡನಿಗೆ ತಿಳಿಯದಂತೆ ಕಠಿಣವಾಗಿಯಾಗಲಿ ಜಾಣನಿಗೆ ಬೇಸರ ಬರುವಂತೆ ಸುಲಭವಾಗಿಯಾಗಲಿ ಶಿಕ್ಷಕನು ತನ್ನ ಪಾಠದ ಕ್ರಮವನ್ನು ಇಟ್ಟುಕೊಳ್ಳಬಾರದು.

೪. ಯಾಂತ್ರಿಕ ಚತುರತೆಯನ್ನು ಬೆಳೆಸುವದು :—

ಮೊದಲು ಪ್ರಯೋಗಗಳ ಮುಖಾಂತರ ಅಭಿರುಚಿ ಹುಟ್ಟುವಂತೆ ಮಾಡಿ ಸುಲಭ ಬಾಯಿಲೆಕ್ಕಗಳನ್ನು ಹೇಳಬೇಕು. ಮತ್ತು ಸಣ್ಣ ಸಂಖ್ಯೆಗಳ ಕಲ್ಪನೆಯನ್ನೂ ಕೃತಿಗಳ ಜ್ಞಾನವನ್ನೂ ಮಾಡಿಕೊಡಬೇಕು. ಹುಡುಗನು ಕಲಿತ ರೀತಿಯನ್ನು ಚತುರತೆಯಿಂದ ಉಪಯೋಗಿಸಲಿಕ್ಕೆ ಬರುವಷ್ಟು ಅವನಿಗೆ ತಿಳವಳಿಕೆಯನ್ನು ಮಾಡಿಕೊಡಬೇಕು. ಹುಡುಗನು ಗಣಿತದಲ್ಲಿಯ ಉದಾಹರಣೆಗಳನ್ನು ಹಿಡಿಸುವದಲ್ಲದೆ ಸ್ವಂತ ಪ್ರಯತ್ನದಿಂದ ಅಂಥ ಹಲವು ಉದಾಹರಣೆಗಳನ್ನು ರಚಿಸಿ ಹೇಳುವದಕ್ಕೂ ತನ್ನ ಪ್ರಪಂಚದ ವ್ಯವಹಾರಗಳ ಉದಾಹರಣೆಗಳನ್ನು ಅದಕ್ಕೆ ಸಂಬಂಧಿಸಿದ ಗಣಿತದ ಹಿಡಿತದ ಸಹಾಯದಿಂದ ಆಯಾಸವಿಲ್ಲದೆ ಬಿಡಿಸಲಿಕ್ಕೂ ಸಮರ್ಥನಾಗಬೇಕು. ಉದಾ :—೧ ಕಾಜಿನ ದೌತಿಯ ಬೆಲೆ

೨೮. ೬ಪೈ. ಆದರೆ ಅಂಥ ೧೯೨ ದೌತಿಗಳ ಬೆಲೆ ಎಷ್ಟು? ಈ ಉದಾಹರಣೆಯನ್ನು ಮೇಲೆ ಮೇಲೆಯೇ ನೋಡಿದರೆ ಮರ್ಮವನ್ನು ತಿಳಿಯದ ಹಲವರಿಗೆ ಅದು ಬಹು ಕಠಿಣವಾಗಿ ತೋರಬಹುದು. ಆದರೆ ರೂಪಾಯಿಗೆ ೧೯೨ ಪೈಗಳಾಗು ವವರಿಂದ ೧ ದೌತಿಯ ಬೆಲೆಯಲ್ಲಿಯ ಪೈಗಳಷ್ಟೇ ರೂಪಾಯಿಗಳು ೧೯೨ ದೌತಿಗಳಿಗೆ ಆಗುವವೆಂಬ ಹಿಡಿತಕ್ಕೇ ಈ ಲೆಕ್ಕದಲ್ಲಿ ಬಹಳ ಮಹತ್ವವಿರುವದು. ೧ದೌತಿಗೆ (೨೮. ೬ಪೈ=೩೦ಪೈ) ೩೦ ಪೈ ಆದರೆ ೧೯೨ ದೌತಿಗಳಿಗೆ ೩೦ ರೂ. ಎಂಬ ಉತ್ತರವನ್ನೇ ಹುಡುಕಿ ತೆಗೆಯಲು ಹೆಚ್ಚು ಶ್ರಮವೇ ಹತ್ತದು. ಮುಗ್ಗಿಗಳೂ ಅವುಗಳ ಉಪಯೋಗವೂ ಇಂಥ ಹಿಡತಗಳಲ್ಲಿಯೇ ಸಮಾವೇಶವಾಗುವವು.

೫. ಮೊಗ್ಗಿಗಳನ್ನು ಪಾಠಮಾಡಿಸುವದರ ಆವಶ್ಯಕತೆಯು:—

ಶಾಲೆಯಲ್ಲಿಯ ಅಭ್ಯಾಸ ಪತ್ರಿಕೆಯ ಪ್ರತಿಯೊಂದು ಮೆಟ್ಟಿನ ಕೊನೆಯಲ್ಲಿ ಮುಂದೆಬರುವ ವಿಷಯದ ವಿವೇಚನೆಯ ಸಲುವಾಗಿ ತುಸು ಜ್ಞಾನವನ್ನು ಮಾಡಿಕೊಂಡಿಡುವದು ಅತಿ ಮಹತ್ವದ್ದು. ಈ ತರದ ಕೆಲವು ರೂಢಿಗಳು ಹುಡುಗನಿಗೆ ಉಂಟಾಗಬೇಕು. ಆರಂಭದಲ್ಲಿ ಹುಡುಗನು ಮಾಡಿದ ಪ್ರಯೋಗಗಳ ಮತ್ತು ಬಾಯಿಲೆಕ್ಕಗಳ ಸುವ್ಯವಸ್ಥಿತವಾದ ಪರಿಣಾಮಗಳೇ ಮುಗ್ಗಿಗಳು. ಈ ಮುಗ್ಗಿಗಳನ್ನು ಪಾಠಮಾಡಿಸಲಿಕ್ಕೆ ಬೇಕು. ಏಕೆಂದರೆ ಅವನು ಮುಂದೆ ಮಾಡಲಿರುವ ಯಾಂತ್ರಿಕ ಕೆಲಸಕ್ಕೆ ಇವೇ ಅಡಿಗಲ್ಲಾಗಿರುವವು. ಸಂಖ್ಯೆಗಳ ಬೇರೀಜು-ವಜಾಬಾಕಿಗಳಲ್ಲಿ ಸಂಖ್ಯೆಗಳನ್ನೂ, ಗುಣಾಕಾರ-ಭಾಗಾಕಾರ ಗಳಲ್ಲಿ ಮುಗ್ಗಿಗಳನ್ನೂ ತಡೆಯಿಲ್ಲದೆ ಸರಿಯಾಗಿ ಹೇಳಲಿಕ್ಕೆ ಬರುವದು ಬಹಳ ಮಹತ್ವದ ಸಂಗತಿಯಾಗಿರುವದು.

ಉದಾ:— ೧. ಒಬ್ಬನಿಗೆ ೩ ಹ. ನಂತೆ ೬ ಹು. ರಿಗೆ ಎಷ್ಟು ಹಣ್ಣು ಬೇಕಾಗುವವು?

೨. ೧೮ ಹಣ್ಣುಗಳಲ್ಲಿ ಒಬ್ಬನಿಗೆ ೩ ಹ. ನಂತೆ ಎಷ್ಟು ಹುಡುಗರಿಗೆ ಕೊಡಲಿಕ್ಕೆ ಬರುತ್ತದೆ.

೩. ಒಂದೊಂದು ಗುಂಪಿನಲ್ಲಿ ೩ ಹಣ್ಣಿನಂತೆ ೬ ಗುಂಪುಗಳಲ್ಲಿ ಒಟ್ಟು ಹಣ್ಣು ಎಷ್ಟು?

೪. ೧೮ ಹಣ್ಣುಗಳಲ್ಲಿ ೬ ಗುಂಪು ಮಾಡಿದರೆ ೧ ಗುಂಪಿನಲ್ಲಿ ಎಷ್ಟು ಹಣ್ಣು ಬರುವವು?

೫. ೩ ರಂತೆ ಎಷ್ಟು ಸಾರೆ ತಕ್ಕೊಂಡರೆ ೧೮ ಆಗುವದು?

೬. ೬ ಇದು ಹದಿನೆಂಟರ ಎಷ್ಟನೇ ಪಾಲು?

ಎಷ್ಟು ೬ ಲೆ ೧೮, ೩ ಎಷ್ಟಲೆ ೧೮, ಎಷ್ಟು × ಎಷ್ಟಲೆ=೧೮ ಇತ್ಯಾದಿ.

ಈತರದ ವ್ಯವಹಾರದ ಉದಾಹರಣೆಗಳಲ್ಲಿ ವಸ್ತುಗಳ ಪಟ್ಟುಗಳೂ ಪಾಲುಗಳೂ ಅಡಕವಾಗಿರುವವು. ಈ ಪಟ್ಟು ಪಾಲುಗಳೇ ಗುಣಾಕಾರ ಭಾಗಾಕಾರಗಳು. ಆದದರಿಂದ ಹುಡುಗನಿಗೆ ಮುಗ್ಗಿಗಳನ್ನು ಕೇಳಿದ ಕೂಡಲೆ ಹೇಳಲಿಕ್ಕೆ ಬರುವಂತೆ ಮಾಡುವದು ಶಿಕ್ಷಕನ ಆದ್ಯಕರ್ತವ್ಯವಾಗಿದೆ. ಮುಗ್ಗಿಗಳನ್ನು ಪಾಠ ಮಾಡಿಸಲಿಕ್ಕೆ ಶಿಕ್ಷಕನು ತನಗೆ ಯೋಗ್ಯವೆಂದು ತೋರುವ ಹಲವು ಉಪಾಯ ಗಳನ್ನು ಅವಲಂಬಿಸಬಹುದು. ಇವುಗಳ ಜ್ಞಾನವಿಲ್ಲದ ಹುಡುಗನಿಗೆ ಶಿಕ್ಷಣ ವನ್ನು ಕೊಡುವದೆಂದರೆ, ತಳಹದಿ ಇಲ್ಲದಲೆ ಇಮಾರತಿಯನ್ನು ಕಟ್ಟಹೋದಂತೆ ವ್ಯರ್ಥವೇ ಸರಿ. ಅರ್ಥ ತಿಳಿದರೂ ಪಾಠಬಾರದಿದ್ದರೆ ಅದು ಪುಸ್ತಕದೊಳಗಿನ ಜ್ಞಾನವಾಗಿ ವ್ಯವಹಾರಕ್ಕೆ ಉಪಯೋಗವಾಗಲಾರದ್ದರಿಂದ ನಿಷ್ಪ್ರಯೋಜಕವೆಂಬ ಮಾತು ಕೂಡ, ಅರ್ಥ ತಿಳಿಯದೆ ಪಾಠಮಾಡುವದರಿಂದ ಪ್ರಯೋಜನವಾಗಲಾರ ದೆಂಬ ಮಾತಿನಷ್ಟೇ ಸತ್ಯವಾಗಿರುವದು.

೫. ಅಂಕಗಣಿತದಲ್ಲಿಯ ರೀತಿಗಳು:—

ಬೇರೀಜು, ವಜಾಬಾಕಿ, ಗುಣಾಕಾರ, ಭಾಗಾಕಾರಗಳು ಗಣಿತದಲ್ಲಿ ಆರಂಭದ ಮೆಟ್ಟುಗಳು. ಗಣಿತದೊಳಗಿನ ಮಿಕ್ಕ ಎಲ್ಲ ಕೃತಿಗಳು ಇವುಗಳನ್ನೇ ಅವಲಂಬಿಸಿರುವವು. ಗಣಿತದ ಉದಾಹರಣೆಯನ್ನು ಬಿಡಿಸುವಾಗ ಈ ಮೂಲ ಕೃತಿಗಳ ಗುರುತಿನ ಚಿಹ್ನಗಳನ್ನು ತಪ್ಪಿಲ್ಲದೆ ಉಪಯೋಗಿಸುವದು ಮಹತ್ವದ ಸಂಗತಿ ಯಾಗಿದೆ. ಗಣಿತದ ರೀತಿಗಳಲ್ಲಿ ಬೇರೀಜು, ವಜಾಬಾಕಿ, ಗುಣಲೆ, ಭಾಗಿಲೆ ಇವುಗಳ ಚಿಹ್ನಗಳನ್ನರಿತು ಅಲ್ಲಲ್ಲಿ ಆಯಾ ಚಿಹ್ನಗಳನ್ನುಪಯೋಗಿಸುತ್ತ, ನೋಡಿದವರಿಗೆ ಲೆಕ್ಕದ ಮರ್ಮದ ತಿಳುವಳಿಕೆಯಾಗುವಂತೆ, ಸುಲಭವಾಗಿ ಬರೆಯಬೇಕು. ಹುಡುಗನು ಲೆಕ್ಕವನ್ನು ಹೇಗೆ ಬಿಡಿಸಬೇಕೆಂಬದನ್ನಂತೂ ತಿಳಿದಿರಲೇಬೇಕು. ಚಿಕ್ಕಮಕ್ಕಳ ವಿಷಯದಲ್ಲಿ ಯಾವದೊಂದು ಕೃತಿಯನ್ನು ಏಕೆ ಮಾಡಬೇಕೆಂಬ ದನ್ನೂ ತಿಳಿದಿರಲೇಬೇಕೆಂಬ ನಿರ್ಬಂಧವನ್ನಿಟ್ಟುಕೊಳ್ಳುವ ಅವಶ್ಯವಿಲ್ಲ.

೬. ಯಾಂತ್ರಿಕ ಕಾರ್ಯಗಳಲ್ಲಿ ಚಿಹ್ನಗಳ ಉಪಯೋಗ:—

ಕೆಳಗಿನ ಇಯತ್ತೆಗಳಲ್ಲಿ ವಿದ್ಯಾರ್ಥಿಗಳು ಆರಂಭದ ಕೃತಿಗಳಾದ ಬೇರೀಜು ವಜಾಬಾಕಿ ಗುಣಾಕಾರ ಭಾಗಾಕಾರಗಳ ಚಿಹ್ನಗಳನ್ನೂ ಸರಿ ಚಿನ್ನವನ್ನೂ ಅರ್ಥವನ್ನು ಅನುಸರಿಸಿ ಯೋಗ್ಯ ಸ್ಥಾನದಲ್ಲಿ ಯೋಗ್ಯ ರೀತಿಯಿಂದ ಉಪಯೋಗಿಸು ವದು ಅವಶ್ಯವಿದ್ದಂತೆಯೇ ಮೇಲಿನ ಇಯತ್ತೆಗಳಲ್ಲಿ ಪ್ರಮಾಣ ಚಿಹ್ನ, ಭೂಮಿತಿಯು

ಬರೆಹದಲ್ಲಿ ಉಪಯೋಗಿಸುವ ಚಿಹ್ನ ಇವನ್ನೂ ಸರಿಯಾದ ಕ್ರಮದಲ್ಲಿ ಉಪಯೋಗಿಸುವದು ತುಂಬ ಮಹತ್ವದ ಮಾತು.

೭. ಅಭ್ಯಾಸದ ಉದಾಹರಣೆಗಳನ್ನು ಬಿಡಿಸುವಾಗ ಗಮನಿಸಬೇಕಾದ ಮಹತ್ವದ ಸಂಗತಿಗಳು:—

(೧) ಆರಂಭದಲ್ಲಿ ಹುಡುಗರ ಪರಿಚಯದ ಸುಲಭವಾದ ಲೆಕ್ಕಗಳನ್ನು ಹೇಳಿ ಅವುಗಳನ್ನು ಬಾಯಿಂದ ಮಾಡಿಸುವದು.

(೨) ವಸ್ತುಗಳ ಸಹಾಯದಿಂದ ಹುಡುಗರು ಗಣಿತದ ರಹಸ್ಯವನ್ನು ಮನಗಾಣುವಂತೆ ಮಾಡುವದು.

(೩) ಆರಂಭದಲ್ಲಿ ಸುಲಭವೂ ಕ್ರಮದಿಂದ ಕಠಿಣವೂ ಆದ ಲೆಕ್ಕಗಳನ್ನು ತಯಾರಿಸಿ ಹೇಳುವದು.

(೪) ಲೆಕ್ಕಗಳು ವ್ಯವಹಾರಕ್ಕೆ ಸಂಬಂಧಿಸಿದವುಗಳೂ ಸುಲಭವೂ ಇದ್ದು ಅವುಗಳ ಭಾಷೆಯು ಸರಳವಾಗಿರುವದು.

(೫) ಅಂಕೆಗಳನ್ನು ಸರಿಯಾಗಿಯೂ ದುಂಡಾಗಿಯೂ ರೀತಿಯನ್ನು ಅಚ್ಚುಕಟ್ಟಾಗಿಯೂ ಬರೆಯುವದು.

(೬) ಬೊಟ್ಟು ಎಣಿಸುವ, ಗೆರೆಹೊಡೆಯುವ ಮುಂತಾದ ಚಟಗಳನ್ನು ತಪ್ಪಿಸುವದು. ಉತ್ತರವು ಸರಿಯೆಂದು ತಾಳೆ ನೋಡಿಕೊಳ್ಳುವ ಚಟವನ್ನು ಹುಟ್ಟಿಸುವದು.

(೭) +, −, ×, ÷, = ಮುಂತಾದ ಚಿಹ್ನಗಳ ಅರ್ಥವನ್ನು ತಿಳಿದುಕೊಂಡು ಅವುಗಳನ್ನು ತಕ್ಕ ಸ್ಥಳದಲ್ಲಿ ಉಪಯೋಗಿಸುತ್ತ ಲೆಕ್ಕಗಳನ್ನು ಬಿಡಿಸುವದು.

(೮) ವಸ್ತುಗಳ ಪಟ್ಟು ಮತ್ತು ಪಾಲುಗಳನ್ನು ಕಂಡು ಹಿಡಿಯುವದನ್ನು ಹೆಚ್ಚು ರೂಢಿಮಾಡಿಸುವದು.

(೯) ವರ್ಗದಲ್ಲಿ ಹುಡುಗನ ಯೋಗ್ಯತೆಯನ್ನರಿತು ಅವನಿಗೆ ತಿಳಿಯುವಂತೆ ಸುಲಭವಾದ ಶೈಲಿಯಿಂದ ವಿವರಿಸಿ ಹೇಳುವದು.

(೧೦) ಅನುಕೂಲವಿದ್ದ ಶಾಲೆಗಳಲ್ಲಿ ಹುಡುಗರ ಯೋಗ್ಯತೆಯಂತೆ ಉತ್ತಮ ಮಧ್ಯಮ, ಕನಿಷ್ಟ ತರಗತಿಗಳನ್ನು ಗೊತ್ತುಮಾಡಿಕೊಂಡು ಪಾಠಹೇಳುವದು.

(೧೧) ಲೆಕ್ಕಗಳ ಅರ್ಥವನ್ನು ತಿಳಿದುಕೊಂಡು ಅದರಲ್ಲಿ, ಕೊಟ್ಟ ಸಂಗತಿಯನ್ನೂ ಕೇಳಿದ ಸಂಗತಿಯನ್ನೂ ಹುಡುಗರು ಕಂಡುಹಿಡಿಯುವಂತೆ ಮಾಡುವದು.

ಶಿಶುಶಾಲೆಗಳು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಮಾತುಕಲಿಯುವದು— ಚಿಕ್ಕಮಕ್ಕಳ ಮನೋವಿಕಾಸದ ಮೆಟ್ಟುಗಳಲ್ಲಿ ಮಾತು ಕಲಿಯುವ ಅವಧಿಯು ಅತಿ ಮಹತ್ವದ್ದಾಗಿದೆ. ಮಗುವು ತನ್ನ ಭಾವನೆಯನ್ನು ಪರರಿಗೆ ತಿಳಿಸುವದಕ್ಕೆ ಮಾತೇ ಪ್ರಾಮುಖ್ಯವಾದ ಸಾಧನವಾಗಿದೆ. ಮಗುವು ತಾಯಿಯ ಗರ್ಭದಿಂದ ಭೂಮಿಗೆ ಬಿದ್ದಕೂಡಲೆ ಅಳುವದಕ್ಕೆ ಪ್ರಾರಂಭಿಸುವದು. ಈ ಅಳುವಿಕೆಯು ಅದು ತಾನು ಹೊಸ ಜಗತ್ತಿಗೆ ಬಂದಕೂಡಲೆ ಪ್ರಕಟಿಸುವ ಪ್ರಥಮ ಮನೋಭಾವನೆಯೆಂದು ಹೇಳುವವರೂ ಇದ್ದಾರೆ. ಆದರೆ ಶಿಶುವು ಹೊಸದಾಗಿ ಕಲಿಯುವ ಶ್ವಾಸೋಚ್ಛ್ವಾಸನ ಕ್ರಿಯೆಯು ಪ್ರಥಮ ಪಾತವೇ ಅಳುವಾಗಿ ಪರಿಣಮಿಸುವದೆಂದು ಹಿಂದೆಯೇ ಹೇಳಿದೆ. ಮಾತೇ ಮನುಷ್ಯ ಪ್ರಾಣಿಗೂ ಇತರ ಜೀವಜಂತುಗಳಿಗೂ ಇರುವ ವಿಶಿಷ್ಟ ಅಂತರವು. ವಾಗಿಂದ್ರಿಯವು ಮನುಷ್ಯನಷ್ಟು ಇನ್ನಾವ ಪ್ರಾಣಿಯಲ್ಲಿಯೂ ಪೂರ್ಣಹೊಂದಿರುವದಿಲ್ಲ.

ಮಗುವು ಹುಟ್ಟಿದ ನಾಲ್ಕು ವಾರಗಳವರೆಗೂ ಅದರ ಅಳುವಿಕೆಗೂ ಆಂತರಿಕ ಮನೋಭಾವನೆಗಳಿಗೂ ಏನೂ ಸಂಬಂಧವಿರುವದಿಲ್ಲ. ಅಲ್ಲಿಂದ ಮುಂದೆ ಅದು ತನ್ನ ಅಳುವಿಕೆಯ ಮೂಲಕ ಆಂತರಿಕ ಮಾನಸಿಕ ವಿಕಾರಗಳನ್ನು ಪ್ರಕಟಿಸ ತೊಡಗುವದು. ಮೊದಲಿನ ನಾಲ್ಕು ತಿಂಗಳುಗಳಲ್ಲಿ ಮಗುವು ತನಗಾದ ಶಾರೀರಿಕ ತೊಂದರೆಗಳನ್ನು ಮಾತ್ರ ತನ್ನ ಅಳುವಿನ ಮೂಲಕ ಪ್ರದರ್ಶಿಸುವದು. ಅಲ್ಲಿಂದ ಮುಂದೆ ತನಗಾದ ಸಂತೋಷದ ಅಥವಾ ಸಮಾಧಾನದ ಭಾವನೆಯನ್ನು ತನ್ನ ಸ್ವನಿಯಿಂದ ಪ್ರಕಟಿಸಲು ಸಮರ್ಥವಾಗುವದು. 'ಅ' 'ಆ' 'ಕ' 'ಮ' 'ಮಾ' 'ಪ' ಬ' 'ಅಮ್ಮ' 'ಅಪ್ಪ' 'ಅಕ್ಕ' ಇವೇ ಮೊದಲಾದ ಕ್ರಮದಿಂದ ಮಗುವು ವರ್ಣೋಚ್ಚಾರ-ಶಬ್ದೋಚ್ಚಾರಗಳನ್ನು ಕಲಯತೊಡಗುವದು. ಎಷ್ಟೋ ಹುಡುಗರಿಗೆ 'ರ' ಅಕ್ಷರದ ಉಚ್ಚಾರವು ಮೂರು ನಾಲ್ಕು ವರುಷ ವಯಸ್ಸಾಗುವವರೆಗೂ ಸರಳವಾಗಿ ಬರುತ್ತಿರುವದಿಲ್ಲ. ಎಷ್ಟೋ ಹುಡುಗರು ಆರು ತಿಂಗಳು ವಯಸ್ಸಾಗುವ ಸುಮಾರಕ್ಕೆ ಕೆಲವು ಅಕ್ಷರಗಳನ್ನು ಉಚ್ಚರಿಸಲು ಕಲಿತಿರುವವು. ಮಾತುಕಲಿಯುವದು ಮಗುವಿನ ಅನುಕರಣಶೀಲತೆಯ ಫಲವಲ್ಲದೆ ಬೇರೆ ಅಲ್ಲ. ಅದು ತಾನು ಕಿವಿಯಿಂದ ಕೇಳುವ ಸ್ವರಗಳನ್ನು ಅನುಕರಿಸಿ ಆ ಸ್ವರಕ್ಕೂ ಅದರಿಂದ ಧ್ವನಿತವಾಗುವ

ಅರ್ಥಕ್ಕೂ ಅನುಭವದಿಂದ ಸಂಬಂಧಗಳನ್ನು ಕಂಡುಹಿಡಿದು ಮಾತುಕಲಿಯುವದು. ಸುಮಾರು ೧೦೦ ರಲ್ಲಿ ೮೦ ಹುಡುಗರು ಒಂದು ವರುಷದವರಾದಾಗ ಐದಾರು ಶಬ್ದಗಳನ್ನು ಮಾತಾಡಲು ಕಲಿತಿರುವರು. ಒಂಟಿ ಶಬ್ದಗಳನ್ನು ಉಚ್ಚರಿಸಿ ಅದಕ್ಕೆ ತನ್ನ ಮನೋಭಾವವನ್ನು ವ್ಯಕ್ತಪಡಿಸುವಂಥ ಸ್ವರಗಳ ಬದಲಾವಣೆಯನ್ನು ಜೋಡಿಸಿ ಪರರಿಗೆ ತನ್ನ ಹೇಳಿಕೆಯನ್ನು ತಿಳಿಸಲು ಮಗುವು ಮೊದಮೊದಲು ಯತ್ನಿಸುವದು. ಎರಡು ವರುಷ ವಯಸ್ಸಾಗುವವರೆಗೂ ಎರಡು ಪದಗಳನ್ನು ಸಾರ್ಥಕವಾಗುವಂತೆ ಕೂಡಿಸಿ ಮಾತಾಡುವ ಶಕ್ತಿಯು ಮಗುವಿಗೆ ಸಾಮಾನ್ಯವಾಗಿ ಬರುತ್ತಿರುವದಿಲ್ಲ.

ಮಗುವಿನ ಮನೋವಿಕಾರಗಳ ಬೆಳವಣಿಗೆ ೭ ವರುಷಗಳವರೆಗೆ—

ಮಗುವು ಸುಮಾರು ಎರಡು ಮೂರು ವರುಷದ್ದಾಗುವ ವರೆಗೂ ಅದರ ಮನೋವಿಕಾರಗಳೆಲ್ಲ ಬಹುತರ ಸ್ವಯಂಪ್ರಗಲ್ಭವಾದವೇ ಇರುವವು. ಅಂದರೆ ಮಗುವು ತನಗೆ ತೋರಿದ್ದನ್ನೇ ಯಾವ ಸಂಕೋಚವನ್ನೂ ಪ್ರತಿಬಂಧವನ್ನೂ ಎಣಿಸದೆ ಮಾಡಿಬಿಡಲು ಹವಣಿಸುತ್ತಿರುವದು. ಪ್ರಾರಂಭದಲ್ಲಿಯಂತೂ ಆ ವಿಕಾರಗಳು ಶರೀರರಕ್ಷಣೆಯೇ ಮುಖ್ಯ ಧ್ಯೇಯವುಳ್ಳವಾಗಿರುವವು. ಮತ್ತು ತನಗೆ ಆಹಾರವನ್ನು ಕೊಡುವ ಹಾಗು ತನ್ನ ಶಾರೀರಿಕ ಸುಖಗಳನ್ನು ನೋಡುವಂಥ ತಾಯಿ ಮತ್ತು ದಾಯಿ ಇವರನ್ನಷ್ಟೇ ಅದು ಹೆಚ್ಚಾಗಿ ಪ್ರೀತಿಸುವದು. ಮತ್ತು ತನ್ನ ಶರೀರಕ್ಕೆ ತೊಂದರೆಯಾಗುವಂಥ ಸಂಗತಿಗಳಿಂದಲೇ ಅದು ಸಿಟ್ಟಿಗೇಳುವದು.

ಮಗುವು ಬೆಳೆವಣಿಗೆಹೊಂದುತ್ತ ಸಾಗಿದಂತೆ ಅನುಭವದಿಂದ ಅದರ ಮನೋವಿಕಾರಗಳೂ ಹೆಚ್ಚುತ್ತ ಹೋಗುವವು.

ಆಧುನಿಕ ಶಾಸ್ತ್ರಜ್ಞರ ಶೋಧದಮೇರೆಗೆ ಮಗುವು ಎರಡನೆಯ ವರ್ಷದಲ್ಲಿಯೇ ಹೆಚ್ಚು ತೀಕ್ಷ್ಣವೂ ಉಗ್ರವೂ ಆದ ಕೋಪವನ್ನು ತೋರ್ಪಡಿಸುವದೆಂದು ಗೊತ್ತಾಗಿದೆ. ಬಹುತರ ಹುಡುಗರು ಈ ವಯಸ್ಸಿನಲ್ಲಿ ಬಹು ತೀಕ್ಷ್ಣವಾದ ಮನೋವಿಕಾರಕ್ಕೆ ಒಳಗಾಗಿ ಹಟಮಾರಿತನವನ್ನು ತೋರಿಸುತ್ತಿರುವರು. ಪರರು ಹೇಳಿದ ಪ್ರತಿಯೊಂದು ಮಾತನ್ನೂ ನೀರಿ ನಡೆಯುವ, ತನ್ನದನ್ನೇ ಮೇಲೆ ಮಾಡಿಕೊಳ್ಳುವ, ತನ್ನ ಅಸ್ತಿತ್ವವನ್ನು ಸಾಧಿಸಿಕೊಳ್ಳುವ ಹಟಗೇಡಿ ಸ್ವಭಾವವು ಬಾಲಕರ ಈ ವಯಸ್ಸಿನ ಒಂದು ವಿಶಿಷ್ಟಲಕ್ಷಣವೆಂದು ಹೇಳಬೇಕಾಗುವದು. ಇದಕ್ಕೆ ಕಾರಣವೇನೆಂದು ಶೋಧಿಸಲು ಹೊರಟರೆ ಮಗುವು ಈಗಲೇ ತನ್ನ

ಅಸ್ತಿತ್ವವನ್ನು ಸ್ಥಾಪಿಸಿಕೊಂಡು, ತನ್ನ ಸ್ವಾತಂತ್ರ್ಯವನ್ನು ಪ್ರಕಟಿಸಿ, ತನ್ನ ಸುತ್ತಲಿನ ಪ್ರಪಂಚದಲ್ಲಿ ತನ್ನ ಶ್ರೇಷ್ಠತೆಯನ್ನು ನೆಲೆಗೊಳಿಸಲಿಕ್ಕೆ ಪ್ರಾರಂಭಿಸುವದು; ಆದ್ದರಿಂದ ಅದು ಈ ರೀತಿಯಾಗಿ ಎಲ್ಲರನ್ನೂ ಮೀರಿ ತನ್ನನ್ನೇ ಅವಲಂಬಿಸಿ ಸ್ವಾತಂತ್ರ್ಯದಿಂದ ನಡೆಯತೊಡಗುವದೆಂಬದು ಸಹಜವಾಗಿ ಕಂಡುಬರುವದು. ಮಗುವಿನ ಈ ಸ್ವಾತಂತ್ರ್ಯ ಸ್ಥಾಪನೆಯೇ ನಮಗೆ ಹಟಮಾರಿತನವೆಂದು ಭಾಸವಾಗುವದು. ಸ್ವಾತಂತ್ರ್ಯದಿಂದಲೂ ಆತ್ಮಾವಲಂಬನದಿಂದಲೂ ನಡೆಯಲು ಯತ್ನಿಸುವ ಮಗುವಿನ ಈ ವಿಚಾರವು ಮುಂದಿನ ಆಯುಷ್ಯದಲ್ಲಿ ಅದು ಕೈಕೊಳ್ಳಬೇಕಾದ ಒಂದು ಮಹತ್ಪದ ಕಾರ್ಯವನ್ನು ಸೂಚಿಸುವದು. ಚಿಕ್ಕಮಕ್ಕಳ ಈತರದ ಆತ್ಮಪ್ರತಿಷ್ಠೆಯು ಮನೋವಿಕಾರವಾಗಲಿ ಅದರ ಪರಿಣಾಮಗಳಾದ ವಿಧೇಯತೆ, ಸ್ಪರ್ಧೆ, ಮತ್ಸರಗಳೆಂಬ ಗುಣಗಳಾಗಲಿ ಆರಂಭದಿಂದಲೂ ಕ್ಷಣಿಕವಾಗಿರುವವು. ಆದರೆ ಅವುಗಳನ್ನು ಹತ್ತಿಕ್ಕುವದಕ್ಕಾಗಿ ಹಿರಿಯರು ಆ ಬಾಲಕರನ್ನು ಮಾತುಮಾತಿಗೆ ದಂಡಿಸುತ್ತಾ ಸಾಗಿದರೆ ಮಾತ್ರ ಅಡಿಗಡಿಗೆ ಈ ಕೆಲಸಗಳ ಪರಿವರ್ತನವಾಗಿ ಅವು ಬಾಲಕರಲ್ಲಿ ನೆಲೆಗೊಳ್ಳುವ ಸಂಭವವುಂಟು. ಅಥವಾ ಈ ತರದ ಆತ್ಮಾವಲಂಬನದ ಅಥವಾ ಆತ್ಮಪ್ರತಿಷ್ಠೆಯ ಸಂದರ್ಭವನ್ನೇ ತಂದುಕೊಡದೆ ಆ ಗುಣದ ಅಂಕುರವನ್ನೇ ಕಮರಿಸಿ ಬಿಟ್ಟರೆ ಅಂಥ ಬಾಲಕರು ಹೇಡಿಗಳಾಗುವ ಸಂಭವವೂ ಉಂಟು.

ಎರಡನೆಯ ವರ್ಷದಲ್ಲಿ ಬಾಲಕರ ಮನಸ್ಸಿನಲ್ಲಿ ಅಂಜಿಕೆಯೆಂಬ ಮನೋವಿಕಾರವು ತಲೆದೋರುವದು. ಕತ್ತಲೆಯ ಗುಮ್ಮ ಮುಂತಾದವುಗಳ ಮೂಲಕ ಬಾಲಕರಲ್ಲಿ ಭೀತಿಯ ಅಂಕುರವು ಈ ವಯಸ್ಸಿನಲ್ಲಿಯೇ ಮೊದಲು ಪ್ರಕಟವಾಗುವದು. ಕೆಲಕೆಲವು ಬಾಲಕರಲ್ಲಿ ಇದು ಹೆಚ್ಚಾಗಿ ಕಂಡುಬಂದು ಅವರು ಎಲ್ಲಿ ಅಂಜುಬುರುಕರಾಗುವರೋ ಎಂಬ ಸಂಶಯಕ್ಕೆ ಕಾರಣವಾಗುವದೂ ಉಂಟು. ಆದರೆ ಪಾಲಕರು ಇಂಥ ಅಂಜಿಕೆಯ ವಿಚಾರಗಳು ಅವರ ಮುಂದೆ ಬರದಂತೆ ಲಕ್ಷ್ಯಪೂರ್ವಕವಾಗಿ ನೋಡಿಕೊಂಡರೆ ಅದು ಕೆಲಕಾಲದಲ್ಲಿ ತನ್ನಷ್ಟಕ್ಕೆ ತಾನೇ ಅಡಗಿಹೋಗುವದು.

ಎರಡನೆಯ ವರ್ಷವು ಪೂರ್ಣವಾಗುವದಕ್ಕಿಂತ ಮೊದಲು ಬಾಲಕರ ಉಣಿಸು ತಿನಿಸುಗಳ ಸಂಬಂಧದಿಂದ ಕೆಲವು ತೊಂದರೆಗಳು ಉದ್ಭವಿಸುವವು. ಮಗುವಿಗೆ ಹಾಲು ಹಾಕಲಿಕ್ಕೆ ಹೋದರೆ ಇಲ್ಲವೆ ಅನ್ನವನ್ನು ಉಣ್ಣಿಸಹೋದರೆ ಅದು ಹಸಿದು ಆಹಾರವು ಬೇಕೆನ್ನುವ ಸ್ಥಿತಿಯಲ್ಲಿದ್ದರೂ ಆಹಾರವನ್ನು ತಕ್ಕೊಳ್ಳಗೆ ಹಟಮಾಡುವದುಂಟು. ಬಾಯೊಳಗೆ ಇಟ್ಟದ್ದನ್ನು ಉಗುಳಿಬಿಡುವದು; ಅದಕ್ಕೆ ಆ ಪದಾರ್ಥವು ರುಚಿಸುವದೋ ಇಲ್ಲವೋ ಎನ್ನುವ ಹಾಗೆ ತೋರಿಸಿಕೊಳ್ಳುವದು;

ಸುರಿಸಲಕ್ಕೂ ಸುಂಗಲಿಕ್ಕೂ ಒಪ್ಪದೆ ಇರುವದು. ಆದರೆ ಚಿಕ್ಕಮಕ್ಕಳ ಪೋಷಣೆಯ ಕಾರ್ಯವನ್ನು ಕೈಕೊಂಡವರು ಈ ಸಂದರ್ಭದಲ್ಲಿ ಮಗುವಿನ ಈ ಸ್ವಾಭಾವಿಕ ವೃತ್ತಿಯನ್ನು ಅರಿತುಕೊಂಡು, ಬಲಾತ್ಕಾರಮಾಡಿ ಮಗುವು ಬೇಡೆಂದರೂ ಆಹಾರವನ್ನು ಬಾಯಿಗೆ ತುರುಕಿ ಹೊಡೆದು ಬಡಿದು ಮಾಡಿ ಉಣಿಸದೆ, ಮಗುವು ಬಯಸಿದಷ್ಟೇ ಆಹಾರವನ್ನು ಹಾಕುತ್ತ ಸಾಗಿದರೆ ಕೆಲವು ದಿನಗಳಲ್ಲಿಯೇ ಈ ತೊಂದರೆಯು ತಾನಾಗಿ ಪರಿಹಾರವಾಗಿ ಹೋಗುವದು. ಮಗುವಿಗೆ ಯಾವ ಆಹಾರವು ಬೇಕೆನಿಸುವದೋ ಅದನ್ನೇ ಹಾಕುವದೂ ಎಷ್ಟು ಬೇಕೆನಿಸುವದೋ ಅಷ್ಟನ್ನೇ ಹಾಕುವದೂ ಈ ಸಂದರ್ಭದಲ್ಲಿ ತುಂಬ ಅನುಕೂಲವಾಗುವವಲ್ಲದೆ ಬಲಾತ್ಕಾರದಿಂದ ತಮಗೆ ತಿಳಿದ ಆಹಾರವನ್ನು ತಮಗೆ ತಿಳಿದಷ್ಟು ಹಾಕಲಿಕ್ಕೆ ಪ್ರಯತ್ನಿಸುವದು ಅಪಾಯಕರವಾಗಿರುವದು.

ಹೆಬ್ಬೆರಳನ್ನು ಬಾಯೊಳಗಿಡುವ ಚಟವೊಂದು ಬಾಲಕರ ಈ ವಯಸ್ಸಿನೊಳಗಿನ ವಿಶಿಷ್ಟ ಪ್ರಕಾರದ ಲಕ್ಷಣವೆಂದು ಹೇಳಬಹುದು. ಆದರೆ ಬಾಹ್ಯ ಜಗತ್ತಿನ ವಿಷಯದಲ್ಲಿ ಆಸಕ್ತಿಯೂ ತಿಳಿವಳಿಕೆಯೂ ಹೆಚ್ಚುತ್ತಹೋದಂತೆ ಮಗುವು ತೀವ್ರವಾಗಿಯೇ ಈ ಚಟವನ್ನು ಮರೆತುಬಿಡುವದು.

ಮಗುವು ಈ ಎರಡು ವರ್ಷಗಳ ಅವಧಿಯಲ್ಲಿ ತನ್ನ ಮನೋವಿಕಾರಗಳಿಗೇ ಆಧೀನವಾಗಿ ಎಲ್ಲಕೆಲಸಗಳನ್ನು ಮಾಡುತ್ತಿರುವಂತೆಯೇ ಅದು ತನ್ನ ತಾಯಿತಂದೆಗಳ ವಿಷಯವಾಗಿ ಅತಿ ಪ್ರೀತಿಯನ್ನೂ ತೋರಿಸುತ್ತಿರುವದು. ತನ್ನ ಒರಗೆಯ ಮಕ್ಕಳ ವಿಷಯದಲ್ಲಿ ಆಸ್ಥೆಯನ್ನು ತೋರಿಸುತ್ತಿರುವದಾದರೂ ಅದನ್ನು ತನ್ನ ಮೇಲಾಟದ ವಿಷಯವೆಂಬ ದೃಷ್ಟಿಯಿಂದಲೇ ಹೆಚ್ಚಾಗಿ ನೋಡುತ್ತಿರುವದು. ಎಂದರೆ ಮಗುವಿಗೆ ತನ್ನ ಪ್ರತಿಷ್ಠೆಯನ್ನು ತೋರಿಸಿಕೊಳ್ಳಲಿಕ್ಕೆ ಸರಿಕರ ಅವಶ್ಯಕತೆಯಿರುವದರಿಂದ ಮಾತ್ರ ಅದು ಅವರ ಸಂಬಂಧವನ್ನು ಹಚ್ಚಿಕೊಳ್ಳುವದು. ಅರ್ಥಾತ್ ಈ ವಯಸ್ಸಿನ ಬಾಲಕರಲ್ಲಿ ತನ್ನ ಆಟದ ಗೆಳೆಯರೊಡನೆ ಸ್ಪರ್ಧೆಯನ್ನು ತೋರಿಸುವದು, ಆಟಿಗೆಯ ಒಡವೆಗಳಲ್ಲಿ ಹೆಚ್ಚಿನವು ತನಗೆ ಬೇಕೆಂದು ಮೇಲಾಟವಾಡುವದು, ಹಿರಿಯರ ಮಾತಿನ ವಿಷಯದಲ್ಲಿ ಬೆಚ್ಚಿನ ಲಕ್ಷ್ಯ ಪೂರೈಸದೆ ತನಗೆ ತೋರಿದಂತೆ ನಡೆಯಲಿಕ್ಕೆ ಪ್ರಯತ್ನಿಸುವದು ಈ ಗುಣಗಳು ಸ್ವಾಭಾವಿಕವಾಗಿರುವವು.

ಚಿಕ್ಕಮಕ್ಕಳ ಮಾನಸಿಕ ವಿಕಾಸದ ಕ್ರಮವನ್ನು ಭಿನ್ನಭಿನ್ನ ದೃಷ್ಟಿಯನ್ನಿಟ್ಟುಕೊಂಡು ಅಭ್ಯಾಸಮಾಡಿದ ಎಲ್ಲಜನರು ಈ ಮುಂದೆಹೇಳುವ ಸಾಮಾನ್ಯ ತಾತ್ವಿಕವಿಚಾರಗಳನ್ನು ಒಪ್ಪಿಕೊಂಡಿರುವರು. ಕೇವಲ ಮನೋವಿಕಾರಗಳ

ಬಾಲ್ಯಕ್ಕೆ ಆಧೀನವಾಗಿ ನಡೆಯುವ ಮಗುವಿನ ಮನಃಪ್ರವೃತ್ತಿಯು ಮೂರನೆ ವರ್ಷದ ಕೊನೆಯವರೆಗೂ ಬೆಳೆಯುತ್ತಹೋಗಿ ಅಲ್ಲಿಗೆ ಅದು ಕೊನೆಯ ಮೆಟ್ಟಿನ್ನು ಮುಟ್ಟಿತೆಂದು ಹೇಳುವಷ್ಟು ವಿಕಾಸವಾಗುವದು. ಮತ್ತು ಈ ವಯಸ್ಸಿನಲ್ಲಿ ಈ ಮನೋವಿಕಾರಗಳು ಎಷ್ಟು ಪ್ರಬಲವೂ ಎಷ್ಟುವಿವಿಧತೆಯುಳ್ಳವೂ ಆಗಿರುವವೋ ಅಷ್ಟು ಅವರ ವಯಸ್ಸಿನ ಬೇರೆ ಯಾವ ಭಾಗದಲ್ಲಿಯೂ ಆಗಲಾರವು.

ಈ ಅವಧಿಯನ್ನು ದಾಟಿದ ತರುವಾಯ ಮಗುವು ಅವುಗಳ ತೀಕ್ಷ್ಣತೆಯನ್ನು ಪಡಿಮೆಮಾಡಲಿಕ್ಕೆ ಕಲಿಯುವದು ಮತ್ತು ತನ್ನಲ್ಲಿ ಉಂಟಾಗುವ ಮನೋವಿಕಾರಗಳನ್ನು ವಿಚಾರದಿಂದ ತಡೆದುಹಿಡಿಯಲಿಕ್ಕೂ ಅವನ್ನು ಯೋಗ್ಯದಿಶೆಯಲ್ಲಿ ಹರಿಯಿಸಿ ಭಿನ್ನ ಸ್ವರೂಪಕ್ಕೆ ತಂದುಕೊಳ್ಳಲಿಕ್ಕೂ ತಕ್ಕ ಸಾಮರ್ಥ್ಯವನ್ನು ಪಡೆಯುವದು. ಸಿಟ್ಟು, ಅಂಜಿಕೆ, ಕತ್ತಲೆಯಗುಮ್ಮ ಮುಂತಾದ ಕಾಲ್ಪನಿಕ ಭೀತಿಯ ಕಾರಣಗಳಲ್ಲಿ ನಂಬಿಕೆ, ಪ್ರೀತಿ, ತಾಯಿ ಅಥವಾ ದಾಯಿಯ ವಿಷಯದಲ್ಲಿ ಅಕೃತ್ರಿಮ ಭಕ್ತಿ ವಿಶ್ವಾಸಗಳು, ಅವರನ್ನು ಅಗಲುವದರಿಂದ ಆಗುವ ದುಃಖದ ಪರಮಾವಧಿ, ಮಿಕ್ಕ ಬಾಲಕರ ವಿಷಯವಾದ ಸ್ಪರ್ಧೆ, ಮತ್ಸರ, ಇವೆಲ್ಲ ಮನೋವಿಕಾರಗಳು ಈ ಅವಧಿಯಲ್ಲಿ ಅತಿಶಯ ತೀಕ್ಷ್ಣವಾಗಿದ್ದು ಅವುಗಳ ಪರಿಣಾಮಗಳು ಕೂಡ ಅಷ್ಟೇ ತೀಕ್ಷ್ಣವಾಗಿರುವವು. ಮತ್ತು ಇವು ತೀಕ್ಷ್ಣವಾಗಿರುವಷ್ಟೇ ಕ್ಷಣಿಕವೂ ಆಗಿರುವವೆಂಬದನ್ನು ಮರೆಯುವಂತಿಲ್ಲ. ಅಳುವನ್ನೂ ನಗೆಯನ್ನೂ ಒಂದೇ ಉಸಿರಿನಲ್ಲಿ ಬದಲಿಸಿ ತೋರಿಸಬಲ್ಲ, ತನ್ನ ಕೈಯೊಳಗಿನ ವಸ್ತುವಿನ ಬಣ್ಣವನ್ನು ನೋಡನೋಡುತ್ತ ಬದಲಿಸಿಬಿಡುವ ಮಾಟಗಾರನಂತೆ ಮಗುವಿನ ಈ ಕೃತಿಗಳಿರುವವು. ಕೋಪ ಪ್ರೀತಿ, ಮಮತೆ ಮೇಲಾಟ, ಹಟ ಸಮಾಧಾನ, ಇವುಗಳ ಬದಲಾವಣೆಯಾಗಲಿಕ್ಕೆ ತೀರ ಕ್ಷುಲ್ಲಕ ಕಾರಣವು ಸಾಕಾಗುವದು; ಒಂದೇ ಒಂದು ನಿಮಿಷದಲ್ಲಿ ಇವು ಬದಲಾಗಿ ಹೋಗುವವು. ಈ ವಯಸ್ಸಿನ ಮಗುವಿಗೆ ತನ್ನ ಮನೋವಿಕಾರಗಳಿಗೆ ಕೆಲವೊಂದು ನಿಯಮಿತವಾದ ಸ್ವರೂಪವನ್ನು ಕೊಡಲಿಕ್ಕೆ ಅದರಲ್ಲಿ ಸ್ಥಿರತೆಯನ್ನು ಹುಟ್ಟಿಸಲಿಕ್ಕೆ, ಅಥವಾ ಅದನ್ನು ಅವಲಂಬಿಸಿ ಹೆಚ್ಚಿನ ಕಾರ್ಯಮಾಡಲಿಕ್ಕೆ ಬರಲಾರದು.

ಮಗುವಿನ ಈ ಎಲ್ಲಬಗೆಯ ಮನೋವಿಕಾರಗಳು ಮನೆಯಲ್ಲಿರುವಾಗ ಅಲ್ಲಿಯ ಪರಿಚಿತ ವಸ್ತುಗಳ ಹಾಗು ತನ್ನದೇಜನರ ಸಮಾಗಮದಿಂದ ಹೆಚ್ಚು ಒಡೆದು ಕಾಣುವವು. ಆದರೆ ಅದೇ ಮಗುವು ಶಿಶುಶಾಲೆಗೆ ಹೋದರೆ ಅಲ್ಲಿ ಈ ಎಲ್ಲ ಮನೋವಿಕಾರಗಳು ಅಷ್ಟು ಉಜ್ವಲವಾಗಿಯೂ ಅಷ್ಟು ಭಿನ್ನಭಿನ್ನ ರೂಪದಿಂದಲೂ ಪ್ರಕಟವಾಗಲಾರವು. ಮನೆಯಲ್ಲಿ ತಂದೆತಾಯಿಗಳು, ದಾಯಿ, ಬಳಗ

ಕೆಲವು ಜನರು ಇಷ್ಟು ಜನರ ಕೂಡ ಮಗುವಿನ ಬಳಕೆಯಾಗುವದು. ಆದರೆ ಶಿಶುಶಾಲೆಗಳಲ್ಲಿ ಆ ಮಗುವು ಹೆಚ್ಚು ಜನರ ಸಂಗಡ ಒಡನಾಡುವದರಿಂದ ಅಲ್ಲಿ ಅದರ ಮನೋವಿಕಾರಗಳ ಪ್ರಾಬಲ್ಯವು ತಾನಾಗಿ ಕಡಿಮೆಯಾಗುವದು. ಅದಲ್ಲದೆ ಮಗುವು ತನ್ನ ತಂದೆತಾಯಿಗಳ ಸಂಗಡ ಹೇಗೆ ಮನೋವಿಕಾರಗಳಿಗೆ ಒಳಗಾಗಿ ಕಾರ್ಯಮಾಡುವದೋ ಹಾಗೆ ಪರರ ಸಂಗಡ ಒಡನಾಡುವಾಗ ಮಾಡುವದು ಸಾಧ್ಯವಾಗಲಾರದು. ಶಿಶುಶಾಲೆಯೊಳಗಿನ ಮೂರು ವರುಷದ ಎಳೆಗೂಸು ತನ್ನ ಇತರ ಒಡನಾಡಿಗಳೊಡನೆ ಮೇಲಾಟದಿಂದ ಕೆಲಸಮಾಡಲು ಮುಂದೆ ಬರುವದನ್ನೂ ಅದೇ ಮನೆಯಲ್ಲಿರುವಾಗ ಹಿರಿಯರ ಹಿಂದಿನ ಬಾಲದಂತೆ ಅವರ ಮರೆಯಲ್ಲಿಯೇ ಉಳಿಯಲಿಕ್ಕೆ ಯತ್ನಿಸುತ್ತಿರುವದನ್ನೂ ಕಾಣಬಹುದು. ನಾಲ್ಕನೆಯ ವರುಷದ ಮಧ್ಯದ ಸುಮಾರಕ್ಕೆ ಮಗುವು ತನ್ನ ಹಿರಿಯರನ್ನು ದೂರಬಿಟ್ಟು ಗೆಳೆಯರ ಸಂಗಡ ಹೆಚ್ಚು ಕೂಡಿನಡೆಯಲಿಕ್ಕೆ ಪ್ರಾರಂಭಿಸುವದು. ಈವಯಸ್ಸಿಗೆ ಬಂದ ಶಿಶುಶಾಲೆಗಳೊಳಗಿನ ಬಾಲಕರು ತಮ್ಮ ಒಡನಾಡಿಗಳೊಡನೆ ಮತ್ಸರಬುದ್ಧಿಯನ್ನು ತೊರೆದು ಹೆಚ್ಚು ಹೆಚ್ಚು ಪ್ರೀತಿಯನ್ನು ತೋರಿಸಿ ಕೂಡಿ ಆಡುವದನ್ನು ನಾವು ನೋಡಬಹುದು. ತನ್ನ ಆಟದ ಗೆಳೆಯರಲ್ಲಿ ಹೆಚ್ಚು ಹೆಚ್ಚು ಪ್ರೀತಿಯನ್ನು ತೋರಿಸಿ ಬಳಕೆ ಮಾಡುವದು ಮಗುವಿನ ಈ ವಯಸ್ಸಿನ ಒಂದು ವಿಶಿಷ್ಟ ಲಕ್ಷಣವಾಗಿ ಪರಿಣಮಿಸುವದು.

ಭಾಷಾವಿಷಯ

ಲೇಖಕರು— ಜಿ. ಎಮ್. ಸಾತೇನಹಳ್ಳಿ ಆಸಿ. ಮಾ. ಪ್ರಾಕ್ಟಿಸಿಂಗ ಸ್ಕೂಲ, ಧಾರವಾಡ.

ಈ ವರ್ಷದಿಂದ ಪ್ರಾಯ್ಮರಿಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆಯಲ್ಲಿ ಭಾಷಾವಿಷಯಕ್ಕೆ ಹೆಚ್ಚಿನ ಸ್ಥಾನವು ದೊರಕಿದೆ. ಉಮೇದವಾರರು ತೇರ್ಗಡೆ ಹೊಂದಲಿಕ್ಕೆ ವಿಷಯಗಳಲ್ಲಿ ೧೦೦ಕ್ಕೆ ೩೩ ರಷ್ಟು ಗುಣಗಳನ್ನು ದೊರಕಿಸಿದರೆ ಸಾಕು. ಆದರೆ ಭಾಷಾವಿಷಯದಲ್ಲಿ ೧೦೦ ಕ್ಕೆ ೪೦ ರಂತೆ ಗುಣಗಳನ್ನು ಪಡೆಯಬೇಕಾಗಿದೆ. ಇಷ್ಟು ದಿವಸಗಳವರೆಗೆ ಕ್ರಮಿಕ ಓದಿನೆಯ ಪುಸ್ತಕದ ಕೆಲವು ಪಾಠಗಳೇ ಗದ್ಯ, ಆದರೊಳಗಿನ ಗೊತ್ತುಪಡಿಸಿದ ಕವಿತಾ ಪಾಠಗಳೇ ಪದ್ಯ. ಹೀಗಾಗಿ ಒಂದೇ ಪುಸ್ತಕದಲ್ಲಿ ಅವೆರಡೂ ವಿಷಯಗಳೂ ಮುಗಿದುಹೋಗುತ್ತಿದ್ದವು. ವರ್ಷ

ಬಿಟ್ಟು, ವರ್ಷ ಅವೇ ಪಾಠಗಳೇ ತಿರುತಿರುಗಿ ಇರುತ್ತಿದ್ದದರಿಂದ ರೂಢಿಯಿಂದ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಆ ವಿಷಯದ ಅಭ್ಯಾಸಕ್ಕೆ ಹೆಚ್ಚು ಅನುಕೂಲ ವಿತ್ತು. ಈಗ ಹೊಸದಾಗಿ ಗದ್ಯ-ಪದ್ಯಗಳೆರಡೂ ಓದದೆ ಇದ್ದಂಥವೇ ಪರೀಕ್ಷೆಯ ವಿಷಯಗಳಾಗಿವೆ. ಹಿಂದಕ್ಕೆ ಬಾಯಿಪರೀಕ್ಷೆಗೆಂದು ಇಟ್ಟ ೫೦ ಗುಣಗಳಲ್ಲಿ ಕೆಲವು ಗುಣಗಳನ್ನು ಬೊರಕಿಸಿಬಿಟ್ಟರೆ ಒಟ್ಟಿಗೆ ೪೫ ಗುಣಗಳ ಭರತಿಗೆ ಅನುಕೂಲ ವಾಗುತ್ತಿತ್ತು. ಈಗ ಬಾಯಿ ಪರೀಕ್ಷೆಯನ್ನು ತೆಗೆದುಹಾಕಿದ್ದರಿಂದ ಗದ್ಯ-ಪದ್ಯ-ವ್ಯಾಕರಣಗಳಿಗೆ (ಕೇವಲ ಬರೆಹಕ್ಕೇ) ೧೦೦ ಗುಣಗಳು ಇಡಲ್ಪಟ್ಟಿವೆ.

ಮೊದಲು ಭಾಷಾವಿಷಯವು ಸುಲಭವಾಗಿದ್ದರೂ ೧೯೩೭ನೆಯ ಇಸವಿಯಲ್ಲಿಯ ವ್ಹ. ಫಾ. ಪರೀಕ್ಷೆಯ ಪರೀಕ್ಷಕರು ವಿದ್ಯಾರ್ಥಿಗಳ ಭಾಷಾಜ್ಞಾನಕ್ಕಾಗಿ ಕೆಳಗೆ ಬರೆದಂತೆ ಅಭಿಪ್ರಾಯಪಟ್ಟಿದ್ದಾರೆ.

ಪರೀಕ್ಷಕರ ಅಭಿಪ್ರಾಯ.

ಭಾಷಾವಿಷಯ ಪರೀಕ್ಷೆ ೧೯೩೭.

" ಸಂಕ್ಷೇಪರೂಪದ ಬರೆವಣಿಗೆಗೆ ಸಂಬಂಧಿಸಿದ ಮೊದಲನೆಯ ಪ್ರಶ್ನೆಯನ್ನು ಬಹುತರ ಎಲ್ಲ ವಿದ್ಯಾರ್ಥಿಗಳೂ ಬಿಡಿಸಲು ಯತ್ನಿಸಿದ್ದರೂ ತೀರ ಸ್ವಲ್ಪ ಜನರಿಗೆ ಮಾತ್ರ ಈ ಪ್ರಶ್ನೆಯ ನಿಜವಾದ ಸ್ವರೂಪವು ತಿಳಿದಿತ್ತೆಂದೂ ಅಷ್ಟೇ ಜನರು ಸಮರ್ಪಕ ಉತ್ತರ ಒರೆದಿರುವರೆಂದೂ ಹೇಳಬೇಕಾಗಿದೆ.

ಸಾಮಾನ್ಯವಾಗಿ ಹೇಳುವದಾದರೆ ಉಮೇದವಾರರ ಭಾಷಾವಿಷಯದ ಜ್ಞಾನವು ಸರಿಯಾಗಿ ಇಲ್ಲವೆಂದೇ ಹೇಳಬೇಕಾಗುವದು. ಅವರ ಉತ್ತರದಲ್ಲಿ ಅಶುದ್ಧರೂಪಗಳು ವಿಪುಲವಾಗಿವೆ. ವ್ಯಾಕರಣದೋಷಗಳೂ ಅಶುದ್ಧಬರೆವಣಿಗೆಯ ದೋಷಗಳೂ ತುಂಬಿವೆ. ವ್ಯಾಕರಣದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಒರೆದ ವಿದ್ಯಾರ್ಥಿಗಳ ಸಂಖ್ಯೆಯಂತೂ ತೀರ ಕಡಿಮೆ.

ಕೈಬರೆಹವು ಸಾಮಾನ್ಯವಾಗಿ ಚೆನ್ನಾಗಿರುವದಾದರೂ ಪ್ರಶ್ನೆಗೆ ಸಮರ್ಪಕ ಉತ್ತರವೇನೆಂಬದನ್ನು ತಿಳಿದು ಬರೆದವರು ತೀರ ಸ್ವಲ್ಪಜನರು; ಯಾವದೋ ಒಂದು ಪ್ರಶ್ನೆಗೆ ಏನೋ ಒಂದು ಉತ್ತರ ಒರೆದು ಪಾರಾಗಲು ಯತ್ನಿಸಿದವರೇ ಬಹು ಜನರು.

ವಿದ್ಯಾರ್ಥಿಗಳಿಗೆ ಪರೀಕ್ಷೆಯ ರೂಢಿಯಿಲ್ಲದಿರುವದೂ, ಪ್ರಶ್ನೆಯೇನು? ಉತ್ತರವೇನು ಬೇಕಾಗಿದೆ ಎಂಬುದನ್ನೂ ಈ ಉತ್ತರವು ತಾವು ಓದಿದ ಯಾವಭಾಗ ದಲ್ಲದೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿದುಕೊಳ್ಳದೆ ಉತ್ತರಬರೆಯಲಿಕ್ಕೆ ಹವಣಿಸುವದೂ ಇದಕ್ಕೆ ಕಾರಣವೆಂದು ಹೇಳಬೇಕಾಗುವದು. ಪ್ರಾಥಮಿಕ ಶಾಲೆಗಳಲ್ಲಿ ವ್ಯಾಕರಣದ ಪಾಠಗಳು ತೃಪ್ತಿಕಾರವಾಗಿ ನಡೆಯುವದಿಲ್ಲೆಂಬ ಅಕ್ಷೇಪಣೆಗೆ ವ್ಯಾಕ

ರಣದ ಪ್ರಶ್ನೆಗಳಿರುವ ೩೦ ಗುಣಗಳಲ್ಲಿ ಉಮೇದವಾರರು ಪಡೆದಿರುವ (೧, ೨, ೩) ಅತ್ಯಲ್ಪಗುಣಗಳು ಬಲವತ್ತರವಾದ ಆಧಾರವಾಗಿವೆ. ಇ."

ನಿಬಂಧ ವಿಷಯವೂ ಕೂಡ ಭಾಷಾವಿಷಯದಲ್ಲಿಯೇ ಸಮಾವೇಶವಾಗುತ್ತದೆ. ಆ ವಿಷಯದ ಪರೀಕ್ಷಕರೂ ಸ್ವತಂತ್ರ ಬರೆಹ ಅಂದರೆ ಜೀವನ ಕಥೆ ಇತ್ಯಾದಿಗಳನ್ನು ಯಾವ ಉಮೇದವಾರರೂ ಬರೆಯಲು ಯತ್ನಿಸಿಲ್ಲ, ವಿರಾಮಚಿಹ್ನಗಳಿಲ್ಲ, ಶಬ್ದಗಳ ಅಶುದ್ಧರೂಪಗಳ ಬಳಕೆ ಬಹಳ. ಇತ್ಯಾದಿ ಅಭಿಪ್ರಾಯ ಪಟ್ಟು ಉಮೇದವಾರರಿಗೆ ಶುದ್ಧಬರೆಹದ ರೂಢಿ, ಮೇಲಿಂದ ಮೇಲೆ ಬರೆಯುವ ರೂಢಿ ಮಾಡಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಈ ಬಗೆಯ ವಿದ್ಯಾರ್ಥಿಗಳಿಗೆ ಈ ವರ್ಷದ ಪರೀಕ್ಷೆಯು ಇನ್ನಿಷ್ಟು ಕಠಿಣವೆನಿಸಬಹುದು. ಕಂಠಪಾಠ ಪದ್ಧತಿಗೆ ಈಗಿನ ಪರೀಕ್ಷೆಯಲ್ಲಿ ಏನೂ ಸ್ಥಾನವಿಲ್ಲ. ಹೊಸ ಶಿಕ್ಷಣ ಪದ್ಧತಿಯನ್ನೇ ಅವಲಂಬಿಸಬೇಕಾಗಿದೆ.

ನಿಜವಾಗಿ ವಿಚಾರಿಸಿದರೆ ಗದ್ಯಪದ್ಯಗಳ ಅರ್ಥಗಳನ್ನು ಕಂಠಪಾಠ ಮಾಡಿಸುವ ಪದ್ಧತಿಯು ತಪ್ಪಾದದ್ದು. ಇದರಿಂದ ವಿದ್ಯಾರ್ಥಿಗಳ ಬುದ್ಧಿ ಬೆಳವಣಿಗೆಯು ಕುಂಠಿತವಾಗುವದು. ಪದ್ಯಪಾಠದಂಥ ಮನೋಹರವಾದ ವಿಷಯವೂ ಕೂಡ ಕಂಠಪಾಠಕ್ಕೆ ಗುರಿಯಾಗಿ ಆ ವಿಷಯವು ಕೇವಲ ನಮ್ಮ ತಪ್ಪಿನಿಂದ ಅಪಹಾಸ್ಯಕ್ಕೆ ಗುರಿಯಾಗಿದೆ. ಬೇಕಾದ ಕವಿತೆಗಳನ್ನು ಮನದಣಿ ಓದಿತಿಳಿದು ರಸಾಸ್ವಾದನ ಮಾಡಿ ಮೆತ್ತು ಆ ಕವಿತೆಗಳನ್ನು ಮನವಾರೆ ಹಾಡಿ ಹಿಗ್ಗುವದು ಕವಿತಾಪಾಠದ ಉದ್ದೇಶವಾಗಿದೆ. ಈ ಉದ್ದೇಶವು ಹಳೆಯ ಕ್ರಮದಿಂದ ಈಡೇರುವದು ಒತ್ತಟ್ಟಿಗಿರಲಿ, ಈ ಉದ್ದೇಶದ ಕಲ್ಪನೆಯು ಕೂಡ ವಿದ್ಯಾರ್ಥಿಗಳಿಗೆ ಉಂಟಾಗುತ್ತಿರಲಿಲ್ಲ. ಆದುದರಿಂದ ನೂತನ ಭಾಷಾಶಿಕ್ಷಣ ಪದ್ಧತಿಯು ಒಳ್ಳೆಯೋಗ್ಯವಾಗಿದೆ. ಪರೀಕ್ಷೆಯಲ್ಲಿ ಹೀಗೆ ಬದಲಾವಣೆ ಮಾಡಿದ್ದಕ್ಕಾಗಿ ಸರಕಾರದವರನ್ನು ಅಭಿನಂದಿಸಬೇಕಾಗಿದೆ.

ಗದ್ಯಪದ್ಯಪಾಠಗಳ ಶಿಕ್ಷಣ ಪದ್ಧತಿಗಾಗಿ ಕೆಳಗೆ ಸ್ವಲ್ಪ ಯತ್ನಿಸಿದೆ, ಅಪಲೋಕನವಾಗಬೇಕು. ಹೊಸಪದ್ಯಗಳು ಪರೀಕ್ಷೆಗೆ ಬೀಳಲು ಅವುಗಳ ಪೂರ್ವಾಪರ ಸಂಬಂಧವನ್ನು ಸಹ ವಿದ್ಯಾರ್ಥಿಗಳು ಅರಿತು ಆಮೇಲೆ ಆ ಪದ್ಯಗಳ ಅರ್ಥವನ್ನು ಸಿಳಿದು ಭಾವಾರ್ಥವನ್ನು ಬರೆಯಬೇಕಾಗುತ್ತದೆ. ಅಥವಾ ಆ ಕವಿತೆಗಳ ಭಾವವನ್ನೆಲ್ಲ ಸಂಗ್ರಹಿಸಿಕೊಂಡು ಆ ವಿಷಯದ ಜ್ಞಾನಸಮಾಡಿಕೊಂಡದ್ದರ ನಿದರ್ಶನಕ್ಕಾಗಿ ಆರಿಸಿಕೇಳಿದ ಪ್ರಶ್ನೆಗಳಿಗೆ ಹುಡುಗರು ಉತ್ತರ ಬರೆಯಬೇಕಾಗುವದು.

ಮಾದರಿಗಾಗಿ ಕೆಲವು ಕವಿತೆಗಳ ಗುಂಪುಗಳನ್ನೂ ಅವುಗಳ ಪೂರ್ವಾಪರ ಸಂಬಂಧನನ್ನೂ ಕಡೆಗೆ ಶಬ್ದಾರ್ಥ, ಭಾವಾರ್ಥಗಳನ್ನೂ ಕವಿತೆಗಳ ಛಂದಸ್ಸನ್ನೂ ಕೊಟ್ಟು ಮಾದರಿಯ ಪ್ರಶ್ನೆಗಳನ್ನೂ ಕೊಟ್ಟಿದೆ.

ಅಭಿಮನ್ಯುವಿನಕಥೆ–ಕನ್ನಡ ಮಹಾಭಾರತ— ಯುದ್ಧಪರ್ವ. ಪೂರ್ವಾಪರ ಸಂಬಂಧ— ಭಾರತಯುದ್ಧವು ಆರಂಭವಾಯಿತು, ಮೊದಲನೆಯ ಸೇನಾಪತಿ ಭೀಷ್ಮರು ೧೦ ದಿನಗಳವರೆಗೆ ತಮ್ಮ ರಣಕೌಶಲವನ್ನು ಮೆರೆಯಿಸಿ ಕಡೆಗೆ ಗಾಯ ಹೊಂದಿ ಬಾಣಗಳ ಮಂಚದಮೇಲೆ ಮಲಗಿದರು. ಬಳಿಕ ದ್ರೋಣಾಚಾರ್ಯರು ಸೇನಾಪತಿತ್ವವನ್ನು ವಹಿಸಿ ವಿರಾಟ, ದ್ರುಪದ ಮೊದಲಾದ ಪಾಂಡವರಕಡೆಯ ವೀರರನ್ನು ಯಮಸದನಕ್ಕಟ್ಟಲಾರಂಭಿಸಿದರು. ಆದರಂತೆ ಭೀಮಾರ್ಜುನರು ಕೌರವರ ಸೈನ್ಯದಲ್ಲಿ ಎಂತಿಮೀರಿ ಹಾವಳಿಗೈದರು. ಪಾಂಡವರು ಸೋಲಲಿಲ್ಲ. ಆಗ ದುರ್ಯೋಧನನು 'ನೀವು ಪಾಂಡವಪಕ್ಷಪಾತಿಗಳು, ಆದುದರಿಂದ ನಮಗೆ ಜಯಲಕ್ಷ್ಮಿಯು ಒಲಿಯಲೊಲ್ಲಳು' ಎಂದು ದ್ರೋಣರಿಗೆ ಹಂಗಿಸಿದನು. ಆಗ ದ್ರೋಣರು— ಒಳ್ಳೀದು, ರಾಜಾ ಅರ್ಜುನನೊಬ್ಬನನ್ನು ರಣಭೂಮಿಯಿಂದ ಅಗಲಿಸು, ಅಂದರೆ ನಿನಗೆ ಜಯಲಕ್ಷ್ಮಿಯಿಂದ ಮಾಲೆಯನ್ನು ಹಾಕಿಸುವೆನು ಎಂದರು. ಆ ಪ್ರಕಾರ ದುರ್ಯೋಧನನು ಸಮಸಪ್ತಕರೆಂಬ ರಾಕ್ಷಸರನ್ನು ಪ್ರೇರಿಸಿ ಪಾಂಡವರೊಡನೆ ಮತ್ತೊಂದು ಯುದ್ಧವನ್ನು ಹೂಡಿಸಿದನು, ಆಗ ಅರ್ಜುನನು ಅತ್ತ ಹೋಗಬೇಕಾಯಿತು. ಸಮಯಸಾಧಿಸಿ ದ್ರೋಣರು ಚಕ್ರವ್ಯೂಹವೆಂಬ ಅಭೇದ್ಯ ಸೇನಾರಚನೆಯ ಕಣದಿಂದ ಯುದ್ಧರಂಗವನ್ನು ಭಯಂಕರವಾಗಿ ಮಾಡಿದರು. ಅದನ್ನು ಭೇದಿಸಲಿಕ್ಕೆ ಪಾಂಡವರ ಕಡೆಯ ಏಕ್ಕ ವೀರರೆಲ್ಲರಿಗೂ ಅಸದಳವಾಯಿತು. ಪಾಂಡವರಿಗೆ ಸೋಲುಬರುವ ಸಮಯವು ಒದಗಿತು. ಆಗ ವೀರ ಅಭಿಮನ್ಯುವು ಚಿಂತಾಕ್ರಾಂತನಾದ ಧರ್ಮಜನನ್ನು ಕುರಿತು ಹೀಗೆ ಅನ್ನುತ್ತಾನೆ.—

ಜನಪ ನಂಘ್ರಿಗೆ ಮಣಿದು, ಕೈಮುಗಿ ।
ದೆನಗೆ ಬಿಸಸೈ, ಜೊಪ್ಪ! ನಾ ಬ ।
ಲ್ಲೆನು ಮಹಾಹವದೊಳಗೆ ಚಕ್ರವ್ಯೂಹಭೇದನವ ; ॥
ಅನುವರವ ಗೆಲುವೆನು. ಕೃತಾಂತನ ।
ಮನೆಗೆ ಕಳುಹುವೆನಹಿತರನು, ನೀ ।
ವಿನಿತು ಚಿಂತಿಸಲೇಕೆ? ಕಾಳಗಕೆಸ್ನಕಳುಹೆಂದ ॥ ೧ ।

ಶಬ್ದಾರ್ಥ—

ಪದ್ಯ ೧.

ಚಕ್ರವ್ಯೂಹ = ಚಕ್ರಾಕಾರದ ಸೈನ್ಯರಚನೆ (ಸೇನಾರಚನೆಯು ಅನೇಕ ಪ್ರಕಾರದ್ದಿರುತ್ತದೆ. ಉದಾ— (ಈಗಲೂ ಈ ತರದ ಸೇನಾ ರಚನೆಗಳು ಬಳಿಕೆಯಲ್ಲಿವೆ)

ಅನುವರ = ಯುದ್ಧ; ಬಿಸಸೈ = ಅಪ್ಪಣೆಕೊಡು.

ಕೃತಾಂತ = ಯಮ; ಅಹಿತರು = ವೈರಿಗಳು; ಭೇದನ = ಒಡೆಯೋಣ.

ಏಕ ನಿಮಗಿದಿರಾದ ವೈರಿಯ ।
ನೂಕುವೆನು. ವೀಳೆಯವ ಕೊಡು ನೀ ।
ಕಾಕ ಬಳಸುವ ಹಿರಿದ ಗಳಹುವರೆಮಗೆ ತಾನೆನುತ ॥
ನೂಕಿ ನೋಡುವುದೆನುತ ಕರಿ ಕಮ ।
ಲಾಕರವ ಕುಲಕುವವೊಲೀಗಳೆ ।
ಲೋಕವನು ಬೆದರಿಸುವ ಭಾಷೆಯ ಬರೆಸಿಕಳುಹೆಂದ ॥ ೨ ॥

ಬಿಡು ಮರೀಚಿಯ ತೊರೆಗೆ ಹರಿಗೋ ।
ಲಿಡುವರುಂಟೇ? ಲೆಪ್ಪ ದುರಗನ ।
ಹಿಡಿವರೇ ಕೈ ಗರುಡಮತಿ? ಮತಿಚಪಳನೆನ್ನದಿರು ; ॥
ಕೊಡನಮಗನ ಕುಮಂತ್ರದೊಡ್ಡಿನ ।
ಕಡಿತಕಾ ನಂಜುವನೆ? ವೆಗ್ಗಳ ।
ನುಡಿಯಲಮ್ಮೆನು ನನ್ನನೀಗಳೆ ಬಿಟ್ಟುನೋಡೆಂದ. ॥ ೩ ॥

ಧರ್ಮರಾಜನ ಅಪ್ಪಣೆಯನ್ನು ಪಡೆದು ವೈರಿ ಸೈನ್ಯದಲ್ಲಿ ಸೇರಿ ಚಕ್ರವ್ಯೂಹವನ್ನು ಹೊಕ್ಕು ಕೌರವ ಸೇನೆಯ ಅತಿರಥರ ಕೂಡ ಅಭಿಮನ್ಯುವು ಕಾಳಗ ಮಾಡುವಾಗ

ವಿರಥನಾದನುಕರ್ಣ ; ಅಸ್ತ್ರವ ।
ತಿರುಹಿ ತಿರುವಿಗೆ ತೊಟ್ಟನಾಗುರು ; ।
ಗುರುತನೂಜನು ತನ್ನ ಸೂತನ ಶಿರವ ಹರಿಯೆಚ್ಚ ; ॥
ಸುರಗಿಯನು ಬಿಸುಟೊರೆಯ ತಿರುಹಿದ ।
ನರಸನನುಜನು ; ಕೃಪನು ಶಲ್ಯನು ।
ಕೊರಳಲಸುವನು ಹಿಡಿದು ಹಂಗಿಗರಾದರೊಡೆಯಂಗೆ. ॥ ೪ ॥

ಪದ್ಯ ೨.

ಕಾಕ ಬಳಿಸು=ಕೆಟ್ಟಮಾತುಗಳನ್ನಾಡು; ಗಳಹು=ಬೊಗಳು; ಕಮಲಾಕರ=ಸರೋವರ.

೩. ಮರೀಚಿ = ಬಿಸಿಲ್ಗುದುರೆ; ತಿಪ್ಪದುರಗ = ಕಿಟ್ಟದಿಂದ ಮಾಡಿದ ಹಾವು; ಗರುಡಮತಿ = ಗರುಡನ ಹಾಗೆ ಕೌಶಲವುಳ್ಳವ; ಕೊಡನಮಗ = ದ್ರೋಣ; ವೆಗ್ಗಳ = ವಿಶೇಷ; ನುಡಿಯಲಮ್ಮೆನು = ಮಾತಾಡಲಾರೆನು.

೪. ವಿರಥ = ರಥವಿಲ್ಲದವ; ಸುರಗಿ = ಖಡ್ಗ; ಅರಸನನುಜ = ದುಶ್ಶಾಸನನು; ಹಂಗಿಗರು = ಹೆಂಗನ್ನು ತೀರಿಸಿದವರು; ಕೊರಳಲಿ ಅಸುನಹಿಡಿದು = ಕಂಠಗತ ಪ್ರಾಣರಾಗಿ (ಕುತಿಗೆಯಲ್ಲಿ ಜೀವ ಹಿಡಿದು)

ಚಾಪ ವೀತನ ಕೈಯೊಳಿದ್ದರೆ ।
ಆಪಿನಾಕಿಗೆ ಗೆಲವು ನೂಕದು ; ।
ವೈಪರೀತ್ಯಕೆ ಬೆದರಲಾಗದು,—ಸ್ವಾಮಿಕಾರ್ಯವಿದು ॥
ರೂಪುದೋರದೆ ಬಂದು ರಿಪು ।
ವಿನಚಾಪವನು ಖಂಡಿಸುವುದಿದು ಕುರು ।
ಭೂಪನುಳಿವೆಂದಿನಸುತನನೊಡಬಡಿಸಿದನು ದ್ರೋಣ ॥ ೫ ॥

ಉರುವ ಜಯವಧು ಒಕ್ಕತನದಲಿ ।
ಮುರಿದ ಕಡ್ಡಿಯಿದೆನಲು—ಕರದಿಂ ।
ಮುರಿದುಬಿದ್ದುದು ಚಾಪವಿಂದ್ರಕುಮಾಶನಂದನನ ।
ಬೆರಗಿನಲಿ ಮುಖತಿರುಹಿ; ಹಿಂದಣಿ ।
ಗಿರಿದ ಕರ್ಣನನೋಡಿ, ಮುಖದಲಿ ।
ಕಿರುನಗೆಯ ಕೇವಣಿಸಿ ನುಡಿದನು ಬಿರಳನೊಲಿದೊಲಿದು ॥ ೬ ॥

ಅವಶರ ಸಂಧಾನ! ಅಚ್ಚರಿ ।
ಯಾವ ಸರಳ ವಿಲಾಸ! ಭಾಪು! ಇ- ।
ದಾವಪರಿ! ಮರ್ಮುಪ್ಪೂತು! ಧಣು! ಧಣು! ದೇವಬಿಲ್ಲಾಳಿ! ॥
ಈ ವಿವೇಕವನಾರು ಬಲ್ಲರು? ।
ಭಾವನಹುದೈ, ಹಿಂದೆ ಬಂದೆಸು ।
ನೀ ವಿಗಡತನ ನಿನಗೆ ಸಲುವುದು ಕರ್ಣಕೇಳೆಂದ ॥ ೭ ॥

ಚಾಪವು ಇಲ್ಲದಾಗಲು ಅಭಿಮನ್ಯುವು ಕರ್ಣನನ್ನು ಗದೆಯಿಂದ ಜಡೆಯಲು ಕರ್ಣನು ಸಿಟ್ಟಿಗೆದ್ದು ಬಾಣಗಳಿಂದ ಅಭಿಮನ್ಯುವಿನ ಕೈಗಳನ್ನು ಕತ್ತರಿಸುತ್ತಾನೆ.

ಪದ್ಯ ೫.

ವೈಪರೀತ್ಯ = ವಿಪರೀತತನ; ರೂಪುದೋರದೆ = ಕಣ್ಣಿಗೆ ಕಾಣಿಸದಂತೆ; ಕುರುಭೂಪನ ಉಳಿವು = ದುರ್ಯೋಧನರಾಜನ ಬದುಕೋಣ; ಇನಸುತ = ಕರ್ಣ.

೬. ಉರುವ ಜಯವಧು = ಶ್ರೇಷ್ಠಳಾದ ಜಯಲಕ್ಷ್ಮಿಯು; ಒಕ್ಕತನದಲಿ = ಮೊಂಡತನದಿಂದ; ಹಿಂದಣಿಗೆ = ಹಿಂಭಾಗದಲ್ಲಿ; ಇರಿದ = ತಿವಿದನು; ಕಿರುನಗೆಯ ಕೇವಣಿಸಿ = ಮುಗುಳುನಗೆಯನ್ನು ಪ್ರಕಟಿಸಿ

೭. ಶರಸಂಧಾನ = ಬಾಣ ಹೂಡೋಣ; ಸರಳವಿಲಾಸ = ಬಾಣಬಿಡುವ ಕಾತುಕ; ವಿಗಡತನ = ಮೋಸಗೊಳಿಕತನ, ದುಷ್ಟತನ.

ಸರಳು ನಡಲುಬ್ಬಿದ್ದು, ಬೊಬ್ಬಿರಿ ।
ದುರವಣಿಸಿ ಬರೆ, ದಿವ್ಯಶರದಲಿ ।
ಕರವೆರಡ ಹರಿಯೆಚ್ಚರಾಗಲೆ ಕೆಡದುದವನಿಯಲಿ ॥
ಇರದೆ ಗಹಗಹಿಸಿದನು ಭಟನೆಲೆ ।
ಮರುಳೆ ಸೂತಜ ಕೈಮುರಿಯೆ ಸಂ ।
ಗರದ ಸಿರಿ ಹಿಂಗುವುದೆ ತನ್ನನೆನುತ್ತ ಗರ್ಜಿಸಿದ ॥ ೮ ॥

ಇಷ್ಟಾದರೂ ಅಭಿಮನ್ಯುವು ಇದ್ದ ಅವಯವಗಳಿಂದಲೆ ವೈರಿಬಲವನ್ನು ಸಂಹರಿಸುತ್ತಾನೆ.

ಸುರಿವ ರುಧಿರದ ಸರಿಯ ಸೆರಗಿನೊ ।
ಳೊರಸಿ, ರಥದಚ್ಚುಗಳನೊದೆದನು, ।
ತಿರುಹಿ ಗಾಲಿಯಕೊಂಡು ಮುಂಗೈಗೊಂಡು ನಡೆದಡೆದು ॥
ಅರಿಬಲವನಿಡೆ, ಮುಗ್ಗಿ ಕೆಡೆದುವು ; ।
ತುರಗವಿಜಿಗಿಜಿಯಾದುವಿಭರಥ ।
ಹೊರಳಿದುವು ಮುಂದರಿವ ಹೂಣೆಗರಟ್ಟಿಸಮರದಲಿ ॥ ೯ ॥

ಅಭಿಮನ್ಯುವಿನ ಅವಸಾನ

ಹಲವು ಗಜವೊಂದಾಗಿ ಸಿಂಹದ ।
ನೊಲೆಮರಿಯಕೊಂಬಂತೆ, ಹಾವಿನ ! ।
ಬಳಗ ಗರುಡನ ಮರಿಯನಿರಿದವೊಲಾಯಿತಕಟಿನುತ ॥
ಅಳಲಿದುದು ಸುರಕಟಕ ಅವನಿಗೆ ।
ಇಳಿದರಪ್ಸರ ಗಣಿಕೆಯರು ಕೋ ।
ಮಲನ ತಂದರು ವಾಸವನ ಸಿಂಹಾಸನದ ಹೊರೆಗೆ ॥ ೧೦ ॥

ಮೇಲೆ ತೋರಿಸಿದಂಥ ಪದ್ಯಗಳ ಅಂದರೆ ವಿದ್ಯಾರ್ಥಿಗಳು ಮೊದಲು ಓದದೆ ಇದ್ದ ಪದ್ಯಗಳ ಸಂಬಂಧವಾಗಿ ಪರೀಕ್ಷಕರ ಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕೆ

ಪದ್ಯ ೮.

ಸರಳು = ಬಾಣ; ಹರಿಯೆಚ್ಚರು = ಹೊಡೆದರು.

೯–೧೦. ರುಧಿರ = ರಕ್ತ; ಇಡೆ = ಹೊಡೆಯಲು; ತುರಗ = ಕುದುರೆ; ಮುಗ್ಗಿಕೆಡೆದುವು = ಮುಗ್ಗಿಬಿದ್ದುವು; ಇಭ — ಆನೆ; ವಿಜಗಿಜಿಯಾದುವು = ಗಿಜಿಗಿಜಿಯಾದುವು; ಹೂಣೆಗರು = ವೀರರು; ಸರಿ = ಪ್ರವಾಹ; ಅಪ್ಸರಗಣಿಕೆಯರು = ದೇವತೆಗಳ ಸ್ತ್ರೀಯರು (ಮೇನಕೆ, ರಂಭೆ, ಊರ್ವಸಿ ತಿಲೋತ್ತಮೆ ಇತ್ಯಾದಿಯರು); ವಾಸವ = ಇಂದ್ರ.

ಅವರು ಸಿದ್ಧರಾಗಬೇಕಾದರೆ ಕೆಳಗೆ ಏವರಿಸಿದ ಪದ್ಧತಿಯಂತೆ ಕನಿಷ್ಠಪಕ್ಷ ಕ್ಯಾದರೂ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಬೇಕಾಗುವದು.

೧. ಆರಿಸಿ ಕೊಟ್ಟ ಪದ್ಯಗಳ ಪೂರ್ವಾಪರ ಸಂಬಂಧವನ್ನು ಹುಡುಕಿ ತೆಗೆಯಲು ಅವರು ಸಮರ್ಥರಾಗಬೇಕು. ಪೂರ್ವಕಥೆಯಿರುವಲ್ಲಿ ಅದು ಗೊತ್ತಿರು ವದು ಒಳ್ಳೆಯದು.

೨. ಕವಿತೆಯೊಳಗೆ ಅಡಕವಾಗಿರುವ ವಿಷಯದ ವಿಚಾರವನ್ನು ಚೆನ್ನಾಗಿ ತಿಳಿದುಕೊಂಡು ಕೇಳಿದ ಪ್ರಶ್ನಗಳಿಗೆ ಉತ್ತರ ಕೊಡಲು ಸಮರ್ಥರಾಗಬೇಕು. ಎಂದರೆ ಕವಿತೆಯ ಅರ್ಥವನ್ನು ಮನದಟ್ಟು ಮಾಡಿಕೊಂಡಿರಬೇಕು.

ಕವಿತೆಯೊಳಗೆ ಬಂದಿರುವ ಹಳಗನ್ನಡ, ಹೊಸಗನ್ನಡ, ಸಂಸ್ಕೃತ ಶಬ್ದಗಳ ಅರ್ಥವನ್ನು ತಿಳಿದುಕೊಳ್ಳಲಿಕ್ಕೆ ತಕ್ಕಂತೆ ಅನೇಕ ಶಬ್ದಗಳ ಅರ್ಥವನ್ನು ಮೊದಲೇ ತಿಳಿದುಕೊಂಡಿರಬೇಕು.

೩. **ಭಾವಾರ್ಥ ಜ್ಞಾನ**— ಸಾಮಾನ್ಯವಾಗಿ ಒಂದು ಅರ್ಥವು ತೋರು ತ್ತಿದ್ದರೆ ವ್ಯಂಗ್ಯ ರೀತಿಯಿಂದಾಗಲಿ ಬೇರೊಂದು ರೀತಿಯಿಂದಾಗಲಿ ಕವಿಯು ಬೇರೊಂದು ಅರ್ಥವನ್ನು ಇಟ್ಟಿದ್ದರೆ ಅದನ್ನು ವಿಚಾರದಿಂದ ತಿಳಿದು ಹೇಳಬೇಕಾಗು ವದು. ಮೊದಲಿನಂತೆ ಏನಾದರೊಂದು ಗಟ್ಟಿ ಮಾಡಿ ಯಾವದೊಂದು ಉತ್ತರ ವನ್ನು ಕೊಟ್ಟು ಪಾರಾಗಲಿಕ್ಕೆ ಈಗ ಬರುವಂತೆ ಇಲ್ಲ. ಒಂದೇ ಶಬ್ದಕ್ಕೆ ಅನೇಕ ಅರ್ಥಗಳಿರುವದರಿಂದ ಸದ್ಯದ ಪ್ರಸಂಗಕ್ಕನುಸರಿಸಿ ತಕ್ಕ ಅರ್ಥವನ್ನು ಹೇಳಿಕೊಳ್ಳ ಬೇಕಾಗುತ್ತದೆ.

ಶಬ್ದಗಳ ಅರ್ಥವು ಸರಿಯಾಗಿ ಆಗಬೇಕಾದರೆ ಸಮಾಸಗಳ ಜ್ಞಾನವು ಅವಶ್ಯವಾಗಿ ಬೇಕಾಗುವದು. ಇದಲ್ಲದೆ ಪದ್ಧತಿಗೆ ಸರಿಯಾಗಿ ಕೊಟ್ಟ ಪದ್ಯಗಳ ಛಂದಸ್ಸಿನ ಜ್ಞಾನವೂ, ಸ್ವಲ್ಪಮಟ್ಟಿಗಾದರೂ ಅಲಂಕಾರಿಕ ವರ್ಣನೆಗಳ ಜ್ಞಾನವೂ ಬೇಕಾಗುವದು.

೪. ಶಬ್ದಗಳವ್ಯುತ್ಪತ್ತಿ ಜ್ಞಾನವು ಅವಶ್ಯವಾಗಿಬೇಕು. ಸಮಾಸ ಶಬ್ದವಿದ್ದರೆ ಬಿಡಿಸಿ ಸರಿಯಾದ ಅರ್ಥವನ್ನು ಗ್ರಹಿಸಲು ವಿದ್ಯಾರ್ಥಿಗಳು ತಕ್ಕವರಾಗಬೇಕು.

ಪ್ರಯೋಗಗಳ ಜ್ಞಾನವು ಬೇಕು. ಕೊಟ್ಟ ಪದ್ಯಾಂಶಗಳಲ್ಲಿ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಹುಡುಕಿ ತೆಗೆದು ಪ್ರಸಂಗವಿಶೇಷದಲ್ಲಿ ಪ್ರಯೋಗ ಪಲ್ಲಟ ಮಾಡಲಿಕ್ಕೆ ಹೇಳಿದರೆ ಅದರಂತೆ ಮಾಡಿ ತೋರಿಸಬೇಕು.

ಮುಖ್ಯವಾಕ್ಯ, ಅಂಗವಾಕ್ಯಗಳನ್ನು ಗೊತ್ತುಹಿಡಿದು ಅಂಗವಾಕ್ಯವು ಪ್ರಧಾನ ವಾಕ್ಯಕ್ಕೆ ಯಾವರೀತಿಯಿಂದ ಸಂಬಂಧಿಸಿರುವದೆಂಬದನ್ನು ತಿಳಿದು

ಕೊಳ್ಳಲಿಕ್ಕೆ ಬೇಕು. ಕಾರಕಗಳ ನಿಜವಾದ ಜ್ಞಾನವಾಗಿದ್ದರೆ ಈ ಕಾರ್ಯವು ಸುಲಭ ಸಾಧ್ಯವು.

೫. ಶಬ್ದಗಳ ಅರ್ಥಜ್ಞಾನವು ದೃಢಪಡಲಿಕ್ಕೆ ಅವುಗಳ ವಿರುದ್ಧಾರ್ಥಕ ಶಬ್ದಗಳನ್ನು ಗೊತ್ತು ಮಾಡಿಕೊಳ್ಳಬೇಕಾಗುವದು.

ಓದುವಾಗಲೇ ಮೇಲೆ ತೋರಿಸಿದಂತೆ ಎಲ್ಲ ವಿಷಯಗಳ ಬಗ್ಗೆಯೂ ಗೊತ್ತು ಮಾಡಿಕೊಂಡು ಓದುವ ರೂಢಿಯು ಇರಬೇಕು. ಒಂದುಸಾರೆ ಓದಿದರೆ ಎಲ್ಲ ಸಂಗತಿಗಳೂ ದೃಕ್‌ಪಥದಲ್ಲಿ ನಿಲ್ಲುವಂತೆ ಪದ್ಯಗಳ ಜ್ಞಾನವಾಗಲಿಕ್ಕೆ ಬೇಕು.

ಇನ್ನು ಮೇಲೆ ಹೇಳಿದ ಒಂದೊದೇ ಸಂಗತಿಗಳಬಗ್ಗೆ ಪದ್ಯಗಳ ಉದಾಹರಣ ಸಹಿತವಾಗಿ ವಿಚಾರಿಸೋಣ:—

೧. ಪೂರ್ವಾಪರ ಸಂಬಂಧ ಕಥೆ ಹಾಗು ವಿಷಯದ ವಿಚಾರ

ಉದಾ:—

ಅಭಿಮನ್ಯು— ಅವಶರಸಂಧಾನ; ಅಚ್ಚರಿ!
ಯಾವಸರಳ ವಿಲಾಸ! ಭಾಪು ಇ!
ದಾವ ಪರಿ ಮಝಭಾಪು! ಧಣು! ಧಣು! ದೇವಬಿಲ್ಲಾಳಿ ॥
ಈ ವಿವೇಕವನಾರು ಬಲ್ಲರು?
ಭಾವನಹುದೈ; ಹಿಂದೆಬಂದೆಸು!
ವೀವಿಗಡತನ ನಿನಗೆ ಸಲುವುದು ಕರ್ಣಕೇಳೆಂದ.॥

ಇದೊಂದೇ ಕವಿತೆಯನ್ನೋದಿದರೆ ಇದರ ಭಾವಾರ್ಥಜ್ಞಾನಕ್ಕಾಗಿ ಕೆಳಗೆ ಬರೆದ ಕಥಾಂಶವು ಗೊತ್ತಿದ್ದರೆ ನೆಟ್ಟಗೆ. ಬರಿಯ ಶಬ್ದಾರ್ಥಜ್ಞಾನವಿದ್ದರೆ ಸಾಲದು.

ಈ ಪದ್ಯವನ್ನು ಓದಿದಾಕ್ಷಣ ಯಾರು, ಯಾರಿಗೆ, ಏನು ಅನ್ನುತ್ತಾರೆ ಎಂಬ ವಿಚಾರವು ಮೊದಲು ಉದ್ಭವಿಸುತ್ತದೆ. ಅದಕ್ಕಾಗಿ ಅದರ ಹಿಂದಣ ಕಥೆಯು ಕೆಳಗೆ ವಿವರಿಸಿದಂತೆ ಗೊತ್ತಿರಬೇಕು.

ಅಭಿಮನ್ಯುವು ಕೌರವರ ಅಭೇದ್ಯ ಚಕ್ರವ್ಯೂಹವನ್ನು ಹೊಕ್ಕು ಅಲ್ಲಿ ಎದುರಾದ ಅತಿರಥ ಮಹಾರಥಿಕರನ್ನು ಸದೆಬಡೆಯಲು ಸೇನಾನಾಯಕರಿಗೂ ಮುಖ್ಯಸ್ಥರಿಗೂ ಚಿಂತೆ ಹುಟ್ಟಿತು. ಆಗ ದ್ರೋಣರು, ಒಂದುಕಡೆ ಅಭಿಮನ್ಯುವು ಯುದ್ಧ ಮಾಡುತ್ತಿರುವಾಗ ಹಿಂದೆ ಅಡಗಿನಿಂತು ಅವನ ಕೈಯೊಳಗಿನ ಚಾಪವನ್ನು ಒಂದೇ ಹೊಡತಕ್ಕೆ ಕತ್ತರಿಸಬೇಕೆಂಬ ಯುಕ್ತಿಯನ್ನು ಹುಡುಕಿ ಈ ಹೇಯವಾದ ಕಾರ್ಯಕ್ಕೆ ಬಿಲ್ಲುಗಾರನಾದ ಕರ್ಣನಿಗೆ ಪ್ರೇರಿಸಿದರು. ಅವನು ನಿರ್ವಾಹವಿಲ್ಲದೆ

ಒಪ್ಪಿ ಆ ಪ್ರಕಾರ ಕತ್ತರಿಸಿದಾಗ ಚಿಕ್ಕ ವೀರನಾದ ಅಭಿಮನ್ಯುವು ಹಿಂದಿರುಗಿನೋಡಿ ಕರ್ಣನನ್ನು ಒಳ್ಳೆಯ ಅರ್ಥವುಳ್ಳ ಶಬ್ದಗಳಿಂದ ನಿಂದಿಸುತ್ತಾನೆ.

೨. ಶಬ್ದಾರ್ಥವನ್ನು ಒಟ್ಟಿಗೆ ತಿಳಿದುಕೊಳ್ಳಲಿಕ್ಕೆ ಬೇರೆ ಬೇರೆ ಕವಿಗಳು ಮೇಲೆ ಮೇಲೆ ಉಪಯೋಗಿಸುವ ಅವರವರ ಶಬ್ದಗಳ ಹೊಯ್ಲೂ ಗೊತ್ತಿರಲಿಕ್ಕೆ ಬೇಕು.

ಕುಮಾರವ್ಯಾಸನು ಮೇಲಿನ ಸ್ವಲ್ಪ ಪದ್ಯಗಳಲ್ಲಿಯೇ

" ಗುರುತನೂಜನು ತನ್ನಸೂತನ ಶಿರವ ಹರಿಯೆಚ್ಚ "
ಮತ್ತೊಮ್ಮೆ " ಕರವೆರಡ ಹರಿಯೆಚ್ಚರಾಗಲೆ ಕೆಡೆದುವವನಿಯಲಿ "

ಎಂದು " ಹರಿಯೆಚ್ಚ " ಎಂಬ ಶಬ್ದವನ್ನು ಕಡಿ, ಛೇದಿಸು ಎಂಬ ಅರ್ಥದಲ್ಲಿ ಉಪಯೋಗಿಸಿರುವನು. ಇಂಥ ಅನೇಕ ಶಬ್ದಗಳ ಜ್ಞಾನವಿದ್ದರೆ ಕೊಟ್ಟಪದ್ಯಗಳ ಭಾವವು ಬಲುಬೇಗ ತಿಳಿಯುವದು. ಹೀಗಾಗಬೇಕಾದರೆ ಓದುವ ವ್ಯವಸಾಯವು ಹೆಚ್ಚಾಗಿ ಆಗಲಿಕ್ಕೆ ಬೇಕು.

ವರ್ಣನಾ ಚಮತ್ಕಾರ

ಇದೇ ಅಭಿಮನ್ಯುವಿನ ಕಥೆಯಲ್ಲಿ—

ಗಾಳಿ ಬೀರುವದುಂಟೆ ? ವಹ್ನಿ ।
ಜ್ವಾಲೆ ಹಿಮಕಂಜುವದೆ ಮುಂಜಿಗೆ ।
ಮೇಲುಕಾಳಗವುಂಟೆ ಬಲು ಬೇಸಗೆಯ ಬಿಸಿಲೊಳಗೆ ॥
ಬಾಲನಿವನೇನೆಂದವಜ್ಞೆಯ ।
ತಿಳಿಯಲಾಗದು ಬೊಪ್ಪ ನಿಮ್ಮಡಿ ।
ಯಾಲಿಗೌತಣವಿಕ್ಕಿ ತೋರುವೆನೊರಸಿಕುರುಬಲವ ॥

ಈ ಪ್ರಕಾರ ಕರ್ಣನ ಮುಂದೆ ಅಭಿಮನ್ಯುವು ಮಾತಾಡುವಾಗ ಅವನ, ಸಮಯಕ್ಕನುಸರಿಸಿ ಮಾತಾಡುವ ವಿಚಾರ, ಶೂರತನ, ಸ್ವಾಭಿಮಾನ, ಹಿರಿಯರ ವಿಷಯದ ವಿನಯ ಸ್ವಭಾವ, ಕರ್ತವ್ಯ ಜಾಗ್ರತೆ ಇವೆಲ್ಲ ಒಂದೇಕಾಲಕ್ಕೆ ಒಂದೇಪದ್ಯವಾಚನದಿಂದ ಸರಸಾಗಿ ವ್ಯಕ್ತವಾಗುವಂತೆ ಬಣ್ಣಿಸಿದ ಕವಿಯ ಜಾಣತನವನ್ನೂ ಸಮಯೋಚಿತ ಉಪಮಾನಗಳನ್ನು ಉಪಯೋಗಿಸುವ ಸಮಯೋಚಿತ ಬುದ್ಧಿಯನ್ನೂ ಎಷ್ಟು ಬಣ್ಣಿಸಿದರೂ ತೀರದು !

ಇಂಥ ಪದ್ಯಗಳಲ್ಲಿ ಬಂದ ಉಪಮಾನೋಪಮೇಯ ವಾಕ್ಯಗಳನ್ನು ಕವಿಯ ಶಬ್ದಗಳಿಂದಲೇ ವಿದ್ಯಾರ್ಥಿಗಳಿಂದ ಹೊರಡಿಸಬೇಕು.

ಈ ಬಗೆಯ ಕವಿತೆಗಳಲ್ಲಿ ಹೀಗೆ ಪ್ರಶ್ನ ಮಾಡಬಹುದು—

೧. ಈ ಕವಿತೆಯಲ್ಲಿ ಅಪ್ಪಣೆ ಬೇಡುವ ಬಾಲನು ಯಾರು? ಅವನು ಬೇಡುವದೇನು?

೨. ಅವನು ಏನು, ಯಾವ ರೀತಿಯಾಗಿ ಯಾವ ಕೆಲಸ ಮಾಡಲು ಸಿದ್ಧನಿರುವನು, ನಿಮ್ಮ ಮಾತಿನಲ್ಲಿ ಬರೆಯಿರಿ.

೩. ನಿಮ್ಮ ಡಿಯಾಲೆಗೌತಣವಿಕ್ಕಿ ತೋರುವೆನು ಎಂದರೇನು? ಹಾಗೆ ಯಾಕೆ ಅಂದಿರುವನು.

೪. ಅವಜ್ಞೆಯನ್ನು ಮಾಡುವವರು ಯಾರು? ಹಾಗೆ ಯಾಕೆ ತಿಳಿಯಲಾಗದು?

ಪದ್ಯಪಠನ ಕಾಲಕ್ಕೆ ಇಂಥ ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ಮಾಡಿದರೆ ಪದ್ಯಪಠನಕ್ರಮವು ಅವರಿಗೆ ಗೊತ್ತಾಗುವದು.

೨. ಭಾವಾರ್ಥವಿಚಾರ

ವಿರಥನಾದನು ಕರ್ಣ; ಅಸ್ತ್ರವ ।
ತಿರುಗಿತಿರುವಿಗೆ ತೊಟ್ಟನಾಗುರು ।
ಗುರುತನೂಜನು ತನ್ನ ಸೂತನ ಶಿರವ ಹರಿಯೆಚ್ಚ ॥
ಸುರಗಿಯನು ಬಿಸುಟೊರೆಯ ತಿರುವಿದ ।
ನರಪನನುಜನು; ಕೃಪನು ಶಲ್ಯನು ।
ಕೊರಳಲಸುವನು ಹಿಡಿದು ಹಂಗಿಗರಾದರೊಡೆಯಂಗೆ ॥

ಅವತರಣಿಕೆ— ಚಕ್ರವ್ಯೂಹದಲ್ಲಿ ಅಭಿಮನ್ಯುವಿನ ಕೂಡ ಕೌರವ ವೀರರ ಕಾಳಗದ ವರ್ಣನೆ–

ಅಭಿಮನ್ಯುವಿನ ಕೂಡ ಕಾಳಗ ಮಾಡುವಾಗ ಕರ್ಣನ ರಥವು ಪುಡಿಪುಡಿಯಾದ್ದರಿಂದ ಅವನು ರಥವಿಲ್ಲದವನಾದನು; ಗುರುವಾದ ದ್ರೋಣನು ಇತಿವಿುತಿ (ಕರ್ತವ್ಯ ಜ್ಞಾನವಿಮುಖ) ಯಾದ್ದರಿಂದ ಬಾಣವನ್ನು ತಿರುವಿ ಹಿಡಿದು ಬಿಲ್ಲಿಗೆ ಹೂಡಿದನು. ಅಶ್ವತ್ಥಾಮನು ಅವಸರದಲ್ಲಿ ಅರಿವುದಪ್ಪಿ ತನ್ನ ಸಾರಥಿಯ ಶಿರಸ್ಸಿಗೇ ಬಾಣಹೊಡೆದನು. ದುಶ್ಶಾಸನನು ಕತ್ತಿಯನ್ನು ಕೆಳಗೆ ಚೆಲ್ಲಿ ಬರಿಯ ಒರೆಯನ್ನು ತಿರುವಲಾರಂಭಿಸಿದನು. ಕೃಪನೂ ಶಲ್ಯನೂ ಕೊರಳಲ್ಲಿ ಜೀವವನ್ನು ಹಿಡಿದು ಹೇಗೋ ಸ್ವಾಮಿಕಾರ್ಯವನ್ನು ಮಾಡತೊಡಗಿದರು.

'ಕೊರಳಲಿ ಅಸುವನು ಹಿಡಿದು' ಎಂದು ಕವಿಯು ಏಕೆ ಅಂದಿರುವನು ? ಇದರ ಭಾವವನ್ನು ವಿದ್ಯಾರ್ಥಿಗಳನ್ನು ಕೇಳಿ ತಿಳಿಸಬೇಕು.

೪. ಸ್ಪಷ್ಟೀಕರಣ ವಿಚಾರ—

ಮೇಲಿನ ಪದ್ಯಗಳಲ್ಲಿಯೇ

(೧) ವೈಪರೀತ್ಯಕೆ ಬೆದರಲಾಗದು ಸ್ವಾಮಿಕಾರ್ಯವಿದು.

(೨) ಕರ್ಣ, ನಿನ್ನ ಈ ವಿವೇಕವನು ಯಾರು ಬಲ್ಲರು ?

ಹಿಂದೆ ಬಂದು ಎಸುವ ಈ ವಿಗಡತನ ನಿನಗೆ ಸಲುವುದು.

(೩) ಸೂತಜ, ಮರುಳೇ ? ಕೈಮುರಿಯೆ ಸಂಗರದ ಸಿರಿ ಹಿಂಗುವದೇ ?

ಇಂಥ ಕವಿತೆಗಳ ತುಣುಕುಗಳನ್ನು ಸ್ಪಷ್ಟೀಕರಿಸಲಿಕ್ಕೆ ಕೊಡಬಹುದು.

ಈ ಮೂರರಲ್ಲಿ ಕೆಳಗಿನ ಎರಡನ್ನು ಸ್ಪಷ್ಟೀಕರಿಸಿ ತೋರಿಸಿದೆ.

'ವೈಪರೀತ್ಯಕೆ .....ಸ್ವಾಮಿಕಾರ್ಯವಿದು''

ಅಭಿಮನ್ಯುವಿನ ಕೂಡ ಕಾಳಗ ಮಾಡುವಾಗ ದ್ರೋಣಾಚಾರ್ಯರು ಕರ್ಣನನ್ನು ಕುರಿತು ಆಡಿದ ಮಾತಿದು—

ಅಭಿಮನ್ಯುವು ಅಸಮವೀರನು, ಇವನ ಕೂಡ ರೀತಿಗೆ ಸರಿಯಾಗಿ ಯುದ್ಧ ಮಾಡಿದರೆ ಜಯವು ಬಾರದೆಂದು ಈಗಲೇ ನಿಮಗೆ ಗೊತ್ತಾಗಿದೆ. ಈ ವೀರನು ಚಿಕ್ಕವನು, ಒಂಟಿಗನು. ಪ್ರತಿ ಯುದ್ಧ ಮಾಡುವ ನೀವು ವೀರರು, ಪ್ರೌಢರು, ಅನೇಕರು. ಇಂಥ ಪ್ರಸಂಗದಲ್ಲಿ ಮುಂದೆ ನಾನು ಹೇಳುವ ಕಾರ್ಯವು— 'ಹಿಂದೆ ಅಡಗಿ ನಿಂತು ಚಾಪ ಕತ್ತರಿಸುವ ಕಾರ್ಯವು''– ಯುದ್ಧ ನೀತಿಗೂ ವ್ಯವಹಾರಕ್ಕೂ ವಿಪರೀತ ಕೆಲಸವು. ಆದರೂ ಒಡೆಯನ ಉಪ್ಪು ಉಂಡದ್ದಕ್ಕಾಗಿ ಹ್ಯಾಗಾದರೂ ಮಾಡಿ ಸ್ವಾಮಿಕಾರ್ಯವನ್ನು ಜರುಗಿಸಬೇಕಾಗಿದೆ. ಆದಕಾರಣ ಲೋಕನೈಪರೀತ್ಯಕ್ಕೆ ಬೆದರುವ ಕಾರಣವಿಲ್ಲ. ವೈಪರೀತ್ಯವಾದರೇನಾಯಿತು, ಸ್ವಾಮಿಕಾರ್ಯವಾದರೆ ತೀರಿತು. ಎಂದು ಧೈರ್ಯ ಹೇಳುವ ಮಾತು ಇದು.

೨. ಸೂತಜ, ಮರುಳೇ ಕೈಮುರಿಯೆ ಸಂಗರದ ಸಿರಿ ಹಿಂಗುವದೇ ?

ಅಭಿಮನ್ಯುವು ಕರ್ಣನನ್ನು ಕುರಿತು, ಛಲಿಸಿದ ಮಾತು—ಕರ್ಣನೇ, ನೀನು ಸೂತಕುಲದವನು. ಆದ ರಿಂದ ಯುದ್ಧ ನೀತಿಯನ್ನು ನೀನು ಅರಿಯೆ. ಎದುರಿಗೆ ನಿಂತು ಯುದ್ಧಮಾಡಲಾರದೆ ಹ್ಯಾಗಾದರೂ ಜಯಿಸಬೇಕೆಂದು ಹಿಂದೆ ನಿಂತು ನನ್ನ **ಚಾಪ ಕಡಿದು** ಕೈಗಳನ್ನು ಕತ್ತರಿಸಿಬಿಟ್ಟೆ. ಇಷ್ಟಾದರೆ ನನ್ನ ಯುದ್ಧದ

ಅಬ್ಬರವು ಕಡಿಮೆಯಾದೀತೆಂದು ತಿಳಿಯುವೆಯಾ? ಯುದ್ಧಕ್ಕೆ ಕೈಯೊಂದೇ ಬೇಕೇ? ಏರನು ಬೇರೆ ರೀತಿಯಿಂದಲೂ ಯುದ್ಧ ಮಾಡಬಹುದಲ್ಲವೇ? ಕೈ ಹೋಯಿತೆಂದು ಯುದ ದ ಸಂಭ್ರಮವು ಹಿಂಗಿತೆಂದು ನೀನು ತಿಳಿದದ್ದು ನಿನ್ನ ಮರುಳುತನ.

ಛಂದಸ್ಸು

ಈ ಪದ್ಯಗಳು ಮಾತ್ರಾವೃತ್ತಗಳ ವರ್ಗಕ್ಕೆ ಸೇರಿದುವು. ೬ ಪಾದಗಳು ಇರುವದರಿಂದ ಷಟ್ಪದಿಗಳ ಗುಂಪಿಗೆ ಸೇರಿವೆ. ಆ ಗುಂಪಿನಲ್ಲಿ ಈ ಷಟ್ಪದಿಗಳ 'ಭಾಮಿನಿ' ಎಂಬ ಹೆಸರು ಪಡೆದಿವೆ.

ಲಕ್ಷಣ— ೧, ೨, ೪, ೫ ಪಾದಗಳಲ್ಲಿ ಮೊದಲು ೩ ಮಾತ್ರೆಗಳ ಗಣ ಆ ಮೇಲೆ ೪ ಮಾತ್ರೆಗಳ ಒಂದು ಗಣ ಈ ಪ್ರಕಾರ ಒಟ್ಟಿಗಾದ ೪ ಗಣಗಳಿಗೆ ೧೪ ಮಾತ್ರೆಗಳಾಗುತ್ತವೆ ಇನ್ನುಳಿದ ೩ ಮತ್ತು ೬ ಈ ಪಾದಗಳಲ್ಲಿ ೩ದೇ ಪ್ರಕಾರ ೨೧ ಮಾತ್ರೆಗಳುಳ್ಳ ೬ ಗಣಗಳೂ ಕಡೆಯಲ್ಲಿ ಒಂದು ಗುರುವೂ ಇರುತ್ತದೆ

ಇದರಲ್ಲಿ V–, V- V ಈ ಗಣಗಳು ಬರಲಾಗದು.

ಪ್ರಸ್ತಾರ

೧ನೆಯ— ಕೇಳು ಜನಮೇ ಜಯದ ರಿತ್ರೀ ।

೨ನೆಯ— ಇದರಂತೆ .. ..।

೩ನೆಯ— ಪಾಳುವಿನಚರ ಣಾಗ್ರ ದಲಿಕೆಡ ಹಿದನು ಕಲಿಪಾ ರ್ಥ ॥

ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆ ೧೯೩೮

ಕಳೆದ ಏಪ್ರಿಲ ತಿಂಗಳಿನಲ್ಲಿ ನಡೆದ ವ್ಹ. ಫಾ. ಪರೀಕ್ಷೆಯ ವಿದ್ಯಾರ್ಥಿಗಳ ಉತ್ತರದ ಕಾಗದಗಳನ್ನು ನೋಡಿದ ಪರೀಕ್ಷಕರು ಸಾಮಾನ್ಯವಾಗಿ ತಮಗೆ ಕಂಡು ಬಂದ ಅಭಿಪ್ರಾಯಗಳಲ್ಲಿ ಕಳೆದವರ್ಷದಂತೆ ಈ ವರ್ಷವೂ ಆಯಾಸೆಂಟರುಗಳ ಪ್ರೆಸಿಡೆಂಟರಿಗೆ ತಿಳಿಸಿದ ಪ್ರಕಾರ ಅವರು ಆ ಅಭಿಪ್ರಾಯಗಳಲ್ಲಿಯ ಗುಣದೋಷಗಳನ್ನು ಸಂಕ್ಷೇಪವಾಗಿ ವಿವರಿಸಿರುವರು. ಪ್ರಾಥಮಿಕ ಶಿಕ್ಷಕರಿಗೆ ಇದರಿಂದ ತುಂಬಾ ಪ್ರಯೋಜನವಾಗುತ್ತಿರುವದರಿಂದ ಅವನ್ನು ಇಲ್ಲಿ ಮೆ. ಇ. ಸಾ. ರವರ ಅಪ್ಪಣೆಯ ಮೇರೆಗೆ ಅವನ್ನು ಕೊಟ್ಟಿದ್ದೇವೆ.

(ಕನ್ನಡ, ಮರಾಠಿ, ಉರ್ದು)

೧. ಭಾಷಾವಿಷಯ—ಉಮೇದವಾರರ ಕೆಲಸವು ಕಳೆದವರ್ಷಕ್ಕಿಂತ ತುಸು ಮಟ್ಟಿಗೆ ಒಳ್ಳೆಯದಾಗಿತ್ತು. ಉತ್ತರದಮೇಲಿಂದ ನೋಡಿದರೆ ಅವರಿಗೆ ತಮ್ಮ ಕಲ್ಪನೆಗಳನ್ನು ಸ್ಪಷ್ಟವಾಗಿಯೂ ಅಚ್ಚುಕಟ್ಟಾಗಿಯೂ ಹೇಳುವ ರೂಢಿಯಿಲ್ಲ ವೆಂಬದು ಕಂಡುಬರುತ್ತಿತ್ತು. ಅವರ ವ್ಯಾಕರಣ ಜ್ಞಾನವು ತೀರ ಕಡಿಮೆತರಗತಿ ಯದಾಗಿತ್ತು. ಬರೆಹದ ಭಾಷೆಯು ವ್ಯಾಕರಣ ದೋಷಗಳಿಂದ ಕೂಡಿದ್ದೂ ಅಸ್ಪಷ್ಟವಾದದ್ದೂ ಆಗಿತ್ತು. ಬಹಳ ಸಂದರ್ಭಗಳಲ್ಲಿ ಅವರ ಉತ್ತರವು ಸಂಕ್ಷೇ ಪವಾಗಿಯೂ ಮುದ್ದಿಗಳಿಗನುಸಾರವಾಗಿಯೂ ಇರಲಿಲ್ಲ. ಕವಿತಾ ವಿಭಾಗದೊಳಗಿನ ಪ್ರಶ್ನೆಗಳ ಉತ್ತರಗಳು ತಕ್ಕಮಟ್ಟಿಗೆ ಜೆನ್ನಾಗಿದ್ದವು. ಆದರೆ ಎಷ್ಟೋ ಉತ್ತರ ಗಳು ಕೇವಲ ಬಾಯಿಪಾಠವನ್ನೇ ಅವಲಂಬಿಸಿ ಬರೆದಂಥವಿದ್ದವು. ಗುಣದೋಷ ವಿಮರ್ಶೆಯೊಡನೆ ಕವಿತೆಗಳ ಗುಣಗ್ರಹಣ ಮಾಡುವದಕ್ಕೆ ವಿದ್ಯಾರ್ಥಿಗಳಿಗೆ ಕಲಿಸೇ ಇಲ್ಲವೆಂದು ಹೇಳುವಂತಿತ್ತು.

ಕೈಬರೆಹಕ್ಕೆ ಸಾಕಷ್ಟು ಲಕ್ಷ್ಯವು ಪೂರೈಸಲ್ಪಡುವದಿಲ್ಲವೆಂದು ಹೇಳಲು ವ್ಯಸನವಾಗುವದು.

೨. ನಿಬಂಧ

ಉಮೇದವಾರರಲ್ಲಿ ಬಹು ಜನರು ತಮಗೆ ಅನುಕೂಲವಾದ ವಿಷಯವನ್ನು ಆರಿಸಿಕೊಳ್ಳುವದಕ್ಕೆ ಕೊಟ್ಟಿರುವ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಂಡಿಲ್ಲ. ಕನ್ನಡ, ಮರಾಠಿ, ಉರ್ದು ಈ ಮೂರೂ ಭಾಷೆಗಳ ಪರೀಕ್ಷಕರೂ ಈ ವಿಷಯ ದಲ್ಲಿ ಇದೇ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಉಮೇದವಾರರಲ್ಲಿ ಬಹು ಜನರು 'ಪ್ರದರ್ಶನ' ಈ ನಿಬಂಧವನ್ನೇ ಆರಿಸಿಕೊಂಡಿರುವರು. ಅನೇಕ ಸಂದರ್ಭಗಳಲ್ಲಿ ವಿಷಯವು ಅವರಿಗೆ ಪರಿಚಿತವಾದದ್ದೇ ಆದರೂ ತಮಗೆ ತಿಳಿದ ಮಾತುಗಳನ್ನು ಕ್ರಮ ಹಿಡಿದು ಬರೆಯಲಿಲ್ಲ. ಉಮೇದವಾರರ ಉತ್ತರದ ಪುಸ್ತಕಗಳಲ್ಲಿ ಅಶುದ್ಧವಾದ ಭಾಷಾ ಪ್ರಯೋಗಗಳನ್ನೂ ಬರೆಹದ ದೋಷಗಳನ್ನೂ ಹೇರಳವಾಗಿ ನೋಡಬಹುದಾಗಿತ್ತು. ಇಡಿಯ ನಿಬಂಧಕ್ಕೂ ಅದರೊಳಗಿನ ಬೇರೆ ಬೇರೆ ಪ್ಯಾರಾಗಳಿಗೂ ಇರತಕ್ಕ ಪರಸ್ಪರ ಪ್ರಮಾಣದ ಜ್ಞಾನವಿಲ್ಲದೆ ಇರುವದನ್ನು ಎಲ್ಲೆಲ್ಲಿಯೂ ಕಾಣಬಹುದಾಗಿತ್ತು. ಅಪ್ರಯೋಜಕವಾಗಿ ಹೇಳಿದ್ದನ್ನೇ ತಿರುಗಿ ಹೇಳುವದನ್ನೂ ವಿರಾಮ ಚಿಹ್ನೆಗಳನ್ನು ನಿರರ್ಥಕವಾಗಿ ಉಪಯೋಗಿಸುವದನ್ನೂ ಬಹುತರ ಎಲ್ಲ ಉತ್ತರದ ಕಾಗದಗಳಲ್ಲಿ ಕಾಣಬಹುದು.

ಎಷ್ಟೋ ಉಮೇದವಾರರ ಕೈಬರೆಹವು ತೀರ ಅಸಮಾಧಾನಕರವಾಗಿತ್ತು. ಈ ವಿಷಯವು ಸಾಲೆಗಳಲ್ಲಿ ತೀರ ಕಡೆಗೆಣಿಸಿ ದುರ್ಲಕ್ಷಿಸಿದ ವಿಷಯವೆಂದು ಹೇಳಬಹುದು.

೩. ಅಂಕಗಣಿತ

ಈ ವರ್ಷ ಬಹುಜನ ಉಮೇದವಾರರು ಗಣಿತ ವಿಷಯದಲ್ಲಿ ಚೆನ್ನಾಗಿ ಕೆಲಸ ಮಾಡಿರುವರು. ಅವರಲ್ಲಿ ಹೆಚ್ಚು ಜನರು ಲಾಭ ಹಾನಿ, ಠೇವು, ಮತ್ತು ಚಕ್ರಬಡ್ಡಿಯ ಉದಾಹರಣಗಳನ್ನು ಸರಿಯಾಗಿ ಬಿಡಿಸಿದ್ದರು. ಆದರೆ ಸರಳಬಡ್ಡಿಯ ಲೆಕ್ಕವು ಸ್ವಾಭಾವಿಕ ರೀತಿಗಿಂತಲೂ ತುಸು ಭಿನ್ನವಾದದ್ದಿರುವದರಿಂದ ಬಹು ಜನರು ಅದನ್ನು ಸರಿಯಾಗಿ ಬಿಡಿಸಲಿಲ್ಲ. ಕೆಲವು ಜನರು ಕ್ಷೇತ್ರಫಲದ ಉದಾಹರಣೆಯ ಮೊದಲನೆಯ ಭಾಗವನ್ನಷ್ಟೇ ಬಿಡಿಸಿದ್ದರು. ತೂಕವನ್ನು ಪೌಂಡುಗಳಿಂದ ಹೇಳುವದರ ಬದಲು ಪೌಂಡು, ಶಿಲಿಂಗು, ಪೇನಸುಗಳೆಂಬ ಹಣದ ಕೋಷ್ಟಕದ ರೀತಿಯಿಂದ ಹೇಳಿದ್ದರು. ಕೆಲಕೆಲವು ಜನರಿಗೆ ಘನ ಇಂಚುಗಳಿಗೆ ಘನಫೂಟಿನ ರೂಪ ಕೊಡುವದು ಬಹು ಕಠಿಣವೆನಿಸಿದಂತೆ ಕಾಣುವದು. ಎಷ್ಟೋ ಉಮೇದವಾರರು ದಶಾಂಶ ಅಪೂರ್ಣಾಂಕಗಳನ್ನು ವ್ಯವಹಾರೀ ಅಪೂರ್ಣಾಂಕಗಳ ರೂಪಕ್ಕೆ ತಂದುಕೊಂಡು ಲೆಖ್ಖವನ್ನು ಬಿಡಿಸಿದ್ದರು. ಹೀಗೆ ಮಾಡಕೂಡದೆಂದು ಮೊದಲೇ ಕೊಟ್ಟ ಸೂಚನೆಯನ್ನು ಸಹ ಅವರು ಲಕ್ಷಿಸಲಿಲ್ಲ.

ಪ್ರಮಾಣದ ಸಮತೆಯ ಚಿಹ್ನಗಳನ್ನು ಉಪಯೋಗಿಸಿ ಸರಿಯಾದ ರೀತಿಯಿಂದ ಯಾರೂ ಬರೆಯಲಿಲ್ಲ.

೪. ಜಮಾಖರ್ಚು

ಉಮೇದವಾರರ ಕೆಲಸವು ತಕ್ಕಮಟ್ಟಿಗೆ ಸಮಾಧಾನಕರವಾಗಿತ್ತು. ಅವರಲ್ಲಿ ಬಹು ಜನರು ೧, ೩ ಮತ್ತು ೪ನೆಯ ಪ್ರಶ್ನಗಳನ್ನು ಸರಿಯಾಗಿ ಬಿಡಿಸಿದ್ದರು. ತೀರ ಸ್ವಲ್ಪ ಜನರು ಮಾತ್ರ ಮಿಕ್ಕಿಬೆರಡು ಪ್ರಶ್ನಗಳನ್ನು ಬಿಡಿಸಲು ಯತ್ನಿಸಿದ್ದರು. ಉತ್ತರ ಬರೆಯುವ ಸರಿಯಾದ ಕ್ರಮವೂ ಪದ್ಧತಿಯೂ ಬಹು ಜನರಿಗೆ ಗೊತ್ತಿದ್ದಿಲ್ಲ.

೫. ಭೂಮಿತಿ

ಒಟ್ಟಿನ ಮೇಲೆ ಈ ವರ್ಷದ ಉಮೇದವಾರರು ಈ ವಿಷಯದಲ್ಲಿ ಚೆನ್ನಾಗಿಯೇ ಕೆಲಸ ಮಾಡಿರುವರೆಂದು ಹೇಳಬಹುದು. ಬಹುತರ ಎಲ್ಲ ಜನರು ತಮ್ಮ ಪಾಠ

ಪುಸ್ತಕದೊಳಗಿನ ಪ್ರಮೇಯಗಳನ್ನು ಬಿಡಿಸಿಯೇ ಪಾಸಾಗಿರುವರೆಂದೇ ಹೇಳ ಬೇಕಾಗುವದು. ಮತ್ತು ಪ್ರಶ್ನಗಳನ್ನು ಬಿಡಿಸುವ ಪದ್ಧತಿಯೊಳಗಿನ ದೋಷ ಗಳಂತೂ ಹೇರಳವಾಗಿವೆ. ಕೃತ್ಯ ಭೂಮಿತಿಯ ಹಾಗು ಹೊರಗಿನ ಪ್ರಶ್ನಗಳನ್ನು ಬಿಡಿಸಲು ಬಹುಜನರು ಯತ್ನಿಸಲೇ ಇಲ್ಲ. ಉಪಕರಣಗಳನ್ನೂ ಸಂಕ್ಷೇಪ ಬರೆಹವನ್ನೂ ಉಪಯೋಗಿಸದೆ ಮನಬಂದಂತೆ ಆಕೃತಿ ತೆಗೆದು ಬರೆದದ್ದನ್ನು ಎಲ್ಲಿ ನೋಡಿದಲ್ಲಿ ಕಾಣಬಹುದಾಗಿತ್ತು. ಈ ಮಹತ್ವದ ಮಾತುಗಳನ್ನು ತುಂಬ ಲಕ್ಷದಲ್ಲಿಟ್ಟುಕೊಂಡು ಈ ವಿಷಯವನ್ನು ಕಲಿಸಲೇಬೇಕೆಂದು ಒತ್ತಿ ಹೇಳ ಬೇಕಾಗಿದೆ.

(ಮುಂದೆ ಸಾಗುವದು.)

ಪ್ರಕಟನೆ ೧.

ಪ್ರಾಯ್ಮರಿ ಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆ ಅಭ್ಯಾಸಕ್ರಮದಲ್ಲಿಯ ತಿದ್ದುಪಡಿ

ಗಂಡುಮಕ್ಕಳ ಪ್ರಾಯ್ಮರಿಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆಯ ಅಭ್ಯಾಸಕ್ರಮದ ಆರನೆಯ ಸದರಿನೊಳಗಿಂದ (ಐಚ್ಛಿಕ-ಮರಾಠಿ-ಉರ್ದು ಮರಾಠಿ ಅಭ್ಯಾಸಕ್ರಮದ ಸಲುವಾಗಿ 'ಕವಿತೆ' ಈ ಭಾಗವನ್ನು ತೆಗೆದು ಹಾಕುವ ಅವಶ್ಯಕತೆಯಿಲ್ಲ.

೨. ಮತ್ತು ಈ ಮೂಲಕ ತಿಳಿಸುವದೇನೆಂದರೆ ಹೆಣ್ಣುಮಕ್ಕಳ ಪ್ರಾಯ್ಮರಿ ಸ್ಕೂಲ್ ಲೀವ್ಹಿಂಗ್ ಸರ್ಟಿಫೀಕೇಟ ಪರೀಕ್ಷೆಯ ಹಳೆಯ ಅಭ್ಯಾಸಕ್ರಮದಲ್ಲಿ ಎರಡನೆಯ ಸದರಿನ ಬ' ವಿಭಾಗದಲ್ಲಿ ಕೈಬರೆಹವು ಸಮಾವೇಶವಾಗಿತ್ತು. ಆದರೆ ಅದಕ್ಕೆ ಬೇರೆ ಗುಣಗಳು ಕೊಡಲ್ಪಟ್ಟಿದ್ದಿಲ್ಲ. ಅದರಂತೆಯೇ ಪ್ರಶ್ನಪತ್ರಿಕೆಯಲ್ಲಾದರೂ ಕೈಬರೆಹದ ಸಲುವಾಗಿ ಬೇರೆ ಗುಣಗಳನ್ನು ಕೊಟ್ಟಿರುತ್ತಿದ್ದಿಲ್ಲ. ಅದೇ ರೀತಿಯಾಗಿ ಸದ್ಯದ ತಿದ್ದುಪಡಿ ಹೊಂದಿದ ಅಭ್ಯಾಸಕ್ರಮದಲ್ಲಿಯೂ ಸಹ ಕೈಬರೆಹದ ಸಲುವಾಗಿ ಬೇರೆ ಗುಣಗಳನ್ನು ಕಾಯ್ದಿಟ್ಟಿಲ್ಲ.

೩. ತಿದ್ದುಪಡಿ ಹೊಂದಿದ ಅಭ್ಯಾಸಕ್ರಮದಲ್ಲಿ ಬಾಯಿಪರೀಕ್ಷೆಯು ಇರುವದಿಲ್ಲವಾದ್ದರಿಂದ 'ವೋಡಿ' ಈ ವಿಷಯವನ್ನು ತೆಗೆದುಹಾಕಿದೆ. ಆದರೂ

ಎರಡನೆಯ ಸದರಿನೊಳಗಿನ ನಿಬಂಧ ವಿಷಯವನ್ನು ಉಮೇದವಾರನ ಇಚ್ಛಾನು ಸಾರವಾಗಿ ಮೋಡಿಯಲ್ಲಿ ಬರೆಯಬಹುದು.

(ಮೆ. ಎಜ್ಯುಕೇಶನ್ ಇನ್‌ಸ್ಪೆಕ್ಟರ ಸಾಹೇರವರ ಅಪ್ಪಣೆಯ ಮೇರೆಗೆ)

ಪ್ರಕಟನೆ ೨

ವಿದ್ಯಾಖಾತೆಯ ಉರ್ದು ಪುಸ್ತಕಗಳನ್ನು ತೆಗೆದುಹಾಕುವ ವಿಚಾರದಲ್ಲಿ

ಖಲಖಿ-ಎಫ್ / ೨೬-೬-೧೯೩೮ ನೇ ನಂಬರಿನ ಸರಕಾರೀ ಮೆಮೋದ ೩ನೆಯ ಪ್ಯಾರಾದಲ್ಲಿ ಹೀಗೆ ಹೇಳಿದೆ.

" ಈ ವ್ಯವಸ್ಥೆಯು ಒಂದೇ ವರ್ಷದ ಮಟ್ಟಿಗೆ ಇರುವದು. ಆ ವರ್ಷದ ಕೊನೆಗೆ ಇದರಲ್ಲಿ ಹೇಳಿದ ಉರ್ದು ಪುಸ್ತಕಗಳನ್ನು ಮಂಜೂರಾದ ಪುಸ್ತಕಗಳ ಯಾದಿಯೊಳಗಿಂದ ತೆಗೆದು ಹಾಕಲಾಗುವದು. ಮತ್ತು ಆಯಾ ಶಾಲೆಗಳ ಚಾಲಕರು ಮಂಜೂರಾದ ಪುಸ್ತಕಗಳ ಯಾದಿಯೊಳಗಿನ ತಮಗೆ ಯೋಗ್ಯ ತೋರಿದ ಪುಸ್ತಕಗಳನ್ನೇ ಆರಿಸಿಕೊಂಡು ಅವನ್ನು ದೊರಕಿಸಿಕೊಳ್ಳುವ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳಬೇಕಾಗುವದು. " ಎಂದು ಎಲ್ಲ ಸ್ಕೂಲ್‌ಬೋರ್ಡುಗಳಿಗೂ ಇಂಥ ಶಾಲೆಗಳ ಚಾಲಕರಿಗೂ ತಿಳಿಸಬೇಕೆಂದು ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ನರವರಿಗೆ ವಿನಂತಿ ಮಾಡಿಕೊಳ್ಳಲಾಗಿದೆ.

(ಮೆ॥ ಎ. ಇ. ಸಾ. ದ. ಭಾ. ರವರ ಅಪ್ಪಣೆಯ ಮೇರೆಗೆ)

D. V. Kale.
ಹೆ. ಮಾ. ಟ್ರೇ. ಸ್ಕೂಲ.
ಧಾರವಾಡ.

ಪ್ರಾಯ್ಮರಿಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟಿ

ಪರೀಕ್ಷೆಯ ಉಮೇದವಾರರಿಗಾಗಿ

೧. ಕನ್ನಡ ವಾಚನ ಪಾಠಮಾಲೆ ಬೆಲೆ ೦-೧೧-೦

೨. ಕನ್ನಡ ಕವಿತಾ ಪಾಠಮಾಲೆ ೦- ೬-೬

ಎರಡನ್ನೂ ಕೂಡಿಸಿ ಬಾಯಿಂಡ್ ಮಾಡಿದ ಪುಸ್ತಕ ೧- ೦-೦

೧೯೩೯ನೆಯ ಇಸವಿಯಿಂದ ಮೇಲೆ ಬರೆದ ಪರೀಕ್ಷೆಯಿ ಕನ್ನಡ ವಿಷಯವು ಬದಲಾಗಿದೆಯಷ್ಟೇ. ವಿದ್ಯಾರ್ಥಿಗಳು ಈ ಹೊಸ ಕ್ರಮದ ಪರೀಕ್ಷೆಯಲ್ಲಿ ಕೇಳಿದ ಸಾಮಾನ್ಯ ಪ್ರಶ್ನೆಗಳಿಗೆ ಕೇವಲ ಸ್ವಂತ ಜ್ಞಾನದ ಒಲದಿಂದಲೇ ಉತ್ತರ ಕೊಡಲು ಸಮರ್ಥರಾಗಬೇಕಾಗಿದೆ. ಆದುದರಿಂದ ಈಗಿನ ಕ್ರಮಿಕ ಒನೆಯ ಪುಸ್ತಕವು ಅವರಿಗೆ ಎಷ್ಟೂ ಪ್ರಯೋಜನಕಾರಿಯಾಗದು. ಅವರಿಗೆ ಭಾಷಾವಿಷಯದಲ್ಲಿ ಅರ್ಹತೆಯನ್ನುಂಟುಮಾಡುವ ವಾಚನ ಕವಿತಾ ಪಾಠಗಳ ಸಂಗ್ರಹವುಳ್ಳ ಪಠಾರ್ಗದರ್ಶಿಯಾದ ಹೊಸ ಪುಸ್ತಕವು ಅತ್ಯವಶ್ಯವಾಗಿದೆ. ಈ ಕೊರತೆಯನ್ನು ಹೋಗಲಾಡಿಸಿ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಸಹಾಯವಾಗಲೆಂದು ಈ ಪುಸ್ತಕಗಳು ಪ್ರಕಟಿಸಲ್ಪಟ್ಟಿವೆ. ಇವ್ರಗಳಲ್ಲ ಬೇರೆ ಬೇರೆ ವಾಚನ ಪಾಠಗಳ ಮತ್ತು ಕವಿತಾ ಪಾಠಗಳ ಸಂಗ್ರಹವಿರುವದು. ಕೊನೆಯಲ್ಲಿ ಪ್ರಾ. ಸ್ಕೂ. ಲೀ. ಪರೀಕ್ಷೆಯ ಉಮೇದವಾರರು ಗಮನಿಸಬೇಕಾದ ಹಲವು ಮಾತುಗಳನ್ನೂ ಟಿಪ್ಪಣಿಗಳನ್ನೂ ಪರೀಕ್ಷೆಯ ಪ್ರಶ್ನೆಗಳನ್ನೂ ಸೇರಿಸಿದೆ. ಆದ್ದರಿಂದ ಇದು ಪ್ರೈಮರಿ ಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆಯ ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾದ ಪುಸ್ತಕವು.

ಗ್ರಂಥಕರ್ತರು ೧. ಮು. ಪ್ರ. ಪೂಜಾರ ಕನ್ನಡ ಪಂಡಿತ ಟ್ರೇ. ಕಾ.

೨. ನಾ. ವೆ. ಕುರಡಿ ಹೆಡ್‌ಮಾಸ್ತರ, ಪ್ರಾ. ಸ್ಕೂಲ

ಪುಸ್ತಕಗಳು ಎಲ್ಲ ಬುಕ್‌ಡಿಪೋಗಳಲ್ಲಿ ದೊರೆಯುವ ಏರ್ಪಾಡು ಮಾಡಲಾಗಿದೆ.

Reg. No. B. 369

ಓದಿರಿ ! ತ್ವರೆಮಾಡಿರಿ !

ವಾಗ್ವಿಲಾಸ ಬುಕ್ ಡಿಪೋಕ್ಕೆ ಇಂದೇ ಪತ್ರ ಬರೆಯಿರಿ

ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಕ ಬಿ. ಎ.. ಎಡ್ಮಿನಿಸ್ಟ್ರೇಟಿವ್ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರ ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ ೬ ಆ. ಮಾತ್ರ.

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗ ಮಾಡ್ತಿರುವರು. ಶ್ರೀ. ಬಸವಾರ್ಯ ಬೂದೀಹಾಳಮಠ ಸುಪರವಾಯಿಝರ ಗ್ರಂಥಕರ್ತರು. ಬೆಲೆ ೧ ಆ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

೪ನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಹೆಸರು ಪಡೆದಿದೆ. ಬರೆದವರು ಕ. ರಾ. ಆಡಬಡ್ಡಿ. ಬೆಲೆ ೬ ಆ.

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ ೬ ಆ.)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು, ವಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರಪೂರ ಕಮೀಶನ್ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಎ. ಆರ್. ಶಿವನಾಗಪ್ಪ,
ಪ್ರೊಪ್ರೈಯಿಟರ
ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ.

ನವೆಂಬರ–ದಿಶಂಬರ ೧೯೩೫ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ವಿಷಯಾನುಕ್ರಮಣಿಕೆ

ನಂ.	ವಿಷಯ.	ಪುಟ.
೧.	ಮುಖ್ಯಮಂತ್ರಿವರ್ಯರ ಭಾಷಣ..	೧
೨.	ಪ್ರಾ. ಶಿಕ್ಷಕರ ಟ್ರೇನಿಂಗಿನ ವಿಷಯವಾಗಿ ಸರಕಾರದ ಕಮಿಟಿಯ ರಿಪೋರ್ಟ	೫
೩.	ಭೂಗೋಲ ಶಿಕ್ಷಣ	೧೪
೪.	ಕರಿಯ ಹಲಗೆ	೩೦
೫.	ಪ್ರಾ. ಸ್ಕೂ. ಲೀ. ಸರ್ಟಿಫಿಕೆಟ ಪರೀಕ್ಷೆ ೧೯೩೫	೩೭
೬.	ಮುಂಬಯಿ ಇಲಾಖೆಯ ಮುಖ್ಯಮಂತ್ರಿವರ್ಯರ ಆಗಮನ ..	೪೨
೭.	ಸ್ತ್ರೀಶಿಕ್ಷಣ	೪೬
೮.	ಕನ್ನಡ ವಾಚನ ಪಾಠಮಾಲೆ	೪೯
೯.	ಕಲಿಸುವ ಪಾಠಗಳ ಟಪ್ಪಣಿ	೫೩
೧೦.	ಪ್ರಕಟನೆಗಳು	೫೭
೧೧.	ಸ್ಕಾಲರಶಿಪ್ಪ ಪರೀಕ್ಷೆಯ ವೇಳಾಪತ್ರಿಕೆಗಳು	೫೯
೧೨.	ಮುಂಜೂರ ಮಾಡಿದ ಪುಸ್ತಕಗಳ ಯಾದಿ	೬೦

Printed by K. R. Bhise at the Karnatak Printing Works, Dharwar and Published by D. V. Kale, B. A., Head Master Training, School, Dharwar at his Office.

ಜಾಹೀರಾತು

ರಾಮಾಶ್ರಯ ಬಕ್‌ಡಿಪೊ, ಧಾರವಾಡ.

೧. **ಪುಸ್ತಕ ಶಾಖೆ.** ಕಾಯಿಪಲ್ಲೆ ಮಾರ್ಕೇಟ್, ಧಾರವಾಡ.

೨. **ಸ್ಟೇಶನರಿ ಮತ್ತು ಇತರ ಸಾಮಾನುಗಳ ಶಾಖೆ, ಮಾರ್ಕೆಟ ರೋಡ**

ನಮ್ಮಲ್ಲಿ ಕನ್ನಡ, ಇಂಗ್ಲೀಷ, ಹಿಂದಿ, ಮರಾಠಿ, ಉರ್ದು, ಭಾಷೆಯಲ್ಲಿ ಶಾಲೆ ಕಾಲೇಜುಗಳಿಗೆ ಉಪಯುಕ್ತವಾದ ಟೆಕ್ಸ್ಟಬುಕ್ಕುಗಳೂ ಅವುಗಳ ಟಿಪ್ಪಣಿಗಳೂ, ಗಾಯಿಡ್, ಡಿಕ್ಷನರಿ, ಮ್ಯಾಪ್ಸ, (ನಕಾಶಗಳು) ಡಾಯರಿ, ಪಂಚಾಂಗ, ಕಾದಂಬರಿಗಳೂ ಚಿಲ್ಲರೆ ಹಾಗೂ ಠೋಕ ದರದಿಂದ ಯೋಗ್ಯಬೆಲೆಗೆ ದೊರೆಯುತ್ತವೆ. ಧಾರವಾಡದಲ್ಲಿ ಪ್ರಸಿದ್ಧಿಸಲ್ಪಟ್ಟ ಎಲ್ಲತರದ ಪುಸ್ತಕಗಳನ್ನು ಅಂದರೆ ಕರ್ನಾಟಕದ ಇತಿಹಾಸಬೋಧಿನಿ, ಹಿಂದುಸ್ಥಾನ ಇತಿಹಾಸಬೋಧಿನಿ, ನುಡಿಗನ್ನಡಿ, ಉಮಡಿಕರ ಜಮಾಖರ್ಚು, ನಿಂಬಾಳಕರ ಇವರಿಂದ ಪ್ರಸಿದ್ಧಿಸಲ್ಪಟ್ಟ ಹೊಸಪದ್ಧತಿಯ ಗಣಿತ, ಧಾರವಾಡ ಜಿಲ್ಲೆಯ ಭೂಗೋಲು ಹಾಗು ಕಟ್ಟೀಮನಿ ಕೃತ ಬಾಲಬೋಧೆ ಈ ಎಲ್ಲ ಪುಸ್ತಕಗಳು ಠೋಕ ಹಾಗೂ ಕಿರುಕಳ ದರದಿಂದ ಸಿಗುತ್ತವೆ.

ಎಕ್ಸರಸಾಯಿಜ, ನೋಟಬುಕ್ಕುಗಳು, ಖಾತೆ ಕೀರ್ದಿಬುಕ್ಕು, ಜೋಪಡಾ ಕಾಪಿಬುಕ್ಕು, ಡ್ರಾಯಿಂಗಬುಕ್ಕು, ಇವುಗಳನ್ನು ನಾವು ಮುದ್ದಾಂ ಉತ್ತಮ ಕಾಗದ ಹಾಕಿಸಿ ಅಂದವಾಗಿ ತಯಾರಿಸಿ ಇಟ್ಟಿರುವೆವು.

ತಾಳಿಕೆಯಲ್ಲಿ ಮೇಲಾದ ಪಾರಕರ, ರಾಜಾ, ಕ್ಯಾಪ್ಟನ್, ಸೇಲರ ಮುಂತಾದ ಎಲ್ಲತರದ ಹೊಸಮಾದರಿಯ ಫೌಂಟನ್‌ಪೆನ್ಸ, ಮತ್ತು ಅವುಗಳ ಮಸಿಯನ್ನು ಗ್ಯಾರಂಟಿಯಿಂದ ಕೊಡುತ್ತೇವೆ. ಪೆನ್ನುಗಳ ಮೇಲೆ ಇಂಗ್ಲಿಷದಲ್ಲಿ ಹೆಸರು ಹಾಕುತ್ತೇವೆ. ನಾದುರಸ್ತಾದ ಪೆನ್ನುಗಳನ್ನು ದುರಸ್ತು ಮಾಡುತ್ತೇವೆ.

ಇದಲ್ಲದೆ ಫೂಲ್‌ಸ್ಕೇಪ, ಕ್ರೌನ್, ಡೆಮಿ, ರಾಯಲ್, ಬಾಂಡ, ಅನ್‌ಗ್ಲೇಜ ಹಾಗೂ ಗ್ಲೇಜಕಾಗದ ವ ಕಾರ್ಡಬೋರ್ಡ, ಇನಿವಿಟೇಶನ್, ಕ್ಯಾಲಿಕೊ ಮುಂತಾದ ಪ್ರಿಂಟಿಂಗ್ ಪ್ರೆಸ್ಸಿಗೆ ಉಪಯುಕ್ತವಾದ ಸಾಮಾನುಗಳೂ ಮತ್ತು ಎಲ್ಲ ನಮೂನೆಯ ಸ್ಟೇಶನರಿ ಸಾಮಾನುಗಳೂ ಸಿಗುತ್ತವೆ.

ಸೇಂಟ್ಸ, ಸ್ನೋ, ಹೇಅರಆಯಿಲ್ಸ, ದೇಶೀ ವಿದೇಶಿ ಸುವಾಸಿಕ ತೈಲಗಳೂ ಸಿಗುತ್ತವೆ.

ಸಾಬೆ ಬಿಸ್ಕೀಟು, ಪೇಪರಮಿಂಟಾಯಿ, ಮೈಸೂರ ಕಾಫೀ ಬೀಜ, ಮತ್ತು ಚಹಾದ ಪುಡಿಯ ಅನೇಕ ನಮೂನೆಯ ಬಂಡಲಗಳು ದೊರೆಯುವವು.

ಈಶ್ವರಪ್ಪ ರಾಮಪ್ಪ ಆಕಳವಾಡಿ ಆ್ಯಂಡ ಸನ್ಸ,
ರಾಮಾಶ್ರಯ ಬುಕ್ಕಡಿಪೊ, ಮಾರ್ಕೆಟ್, ಧಾರವಾಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ದತ್ತಾತ್ರಯ ವಿಶ್ವನಾಥರಾವ ಕಾಳೆ, ಬಿ. ಎ.

ಸಂಪುಟ ೭೭	ನವಂಬರ, ಡಿಶಂಬರ ೧೯೩೮	ವರ್ಷ ೧೦. ಸಂ. ೮-೯

ವ್ಯಾಖ್ಯಾನಮಾಲೆಯ ಆರಂಭದಲ್ಲಿ
ಮುಖ್ಯಮಂತ್ರಿವರ್ಯರ ಭಾಷಣ

ಆಕಾಶವಾಣಿ (ರೇಡಿಯೊ)

ಇಂದ್ರಿಯಗಳು ವಿಷಯಜ್ಞಾನವನ್ನು ಮಾಡಿಕೊಡಲು ಅಗಸೆಬಾಗಿಲು ಗಳಾಗಿರುವವು. ಬಾಲಕರು ಕೇವಲ ಕೇಳಿ ಕಲಿಯಲಾಗದು: ಕೇಳಿ ಕಲಿಯುವ ದಕ್ಕಿಂತ ನೋಡಿ ಕಲಿಯುವದು ಹೆಚ್ಚು ಪ್ರಯೋಜನಕರ; ಆದಕಾರಣ ಶಿಕ್ಷಣವೆಲ್ಲ ಏಕೇಂದ್ರಿಯ ಮುಖಾಂತರವಾಗಿ ಸಾಗದೆ ಅನೇಕೇಂದ್ರಿಯ ಮುಖಾಂತರವಾಗಿ ಸಾಗಬೇಕೆಂದು ಹೊಸ ಶಿಕ್ಷಣಶಾಸ್ತ್ರವು ಸಾರುತ್ತಿರುವದು. ಆದಕ್ಕಾಗಿಯೇ ಮ್ಯೂಜಿಕ್-ಲ್ಯಾಂಟರ್ನ, ಸಿನೇಮಾ ಮೊದಲಾದವುಗಳ ಮುಖಾಂತರವಾಗಿ ಬಾಲಕರು ಪ್ರತ್ಯಕ್ಷ ನೋಡಿ ಕಲಿಯುವಂತೆ ಆ ಸಾಧನಗಳನ್ನು ಇತ್ತೀಚೆಗೆ ಬಳಕೆಯಲ್ಲಿ ಹೆಚ್ಚಾಗಿ ತರುತ್ತಿರುವರು.

ಇವುಗಳಂತೆ ಈಗೀಗ ರೇಡಿಯೋ (ಆಕಾಶವಾಣಿ) ಮುಖಾಂತರವಾಗಿ ಏಕಕಾಲಕ್ಕೆ ಶಿಕ್ಷಣ ಮುಖಂಡರಿಂದ ವಿಷಯಜ್ಞಾನವನ್ನು ಅನೇಕ ಸ್ಥಳಗಳಲ್ಲಿದ್ದ ಬಾಲಕರಿಗೆ ಒದಗಿಸಿಕೊಡುವ ಮಾಪರ್ಾಟು ಮಾಡಲಾಗಿದೆ. ಜನ್ಮಸಿದ್ಧ ಯೋಗ್ಯ ಶಿಕ್ಷಕರ ಸಂಖ್ಯೆಯು ತೀರ ಕಡಿಮೆ. ಅಪರಿದ್ದ ಶಾಲೆಯ ಮಕ್ಕಳಿಗೆ ಮಾತ್ರ

ಅವರ ಲಾಭವು ದೊರೆಯುವದು. ಒಂದುವೇಳೆ ಇಂಥ ಶಿಕ್ಷಕರನ್ನು ಕರೆಯಿಸಿ ಕೊಂಡು ಶಾಲಾ-ಸಂಸ್ಥಾಪಕರು ಅವರ ಲಾಭವನ್ನು ತಮ್ಮ ತಮ್ಮ ಶಾಲೆಯ ಮಕ್ಕಳಿಗೆ ಆಗುವಂತೆ ಮಾಡಬೇಕೆಂದರೆ ಅದು ಅಷ್ಟು ಸಾಧ್ಯವಾದ ಸಂಗತಿಯಲ್ಲ. ಒಂದೊಂದು ವಿಷಯದಲ್ಲಿ ವಿಶಾರದರಾದ ಶಿಕ್ಷಕರಿಂದ ಅನೇಕ ಸ್ಥಳಗಳಲ್ಲಿದ್ದ ಬಾಲಕರಿಗೆ ಪ್ರಯೋಜನವಾಗುವಂತೆ ಈ ಆಕಾಶವಾಣಿಯ (ರೇಡಿಯೊ) ಉಪಯೋಗವನ್ನು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿಶೇಷವಾಗಿ ಮಾಡುತ್ತಿರುವರು. ಅಲ್ಲಿನ ಸುಧಾರಣೆಗಳು ನಮ್ಮಲ್ಲಿಯ ಶಾಲೆಗಳಲ್ಲಿಯೂ ಅದರಲ್ಲಿಯೂ ವಿಶೇಷವಾಗಿ ಮಾಧ್ಯಮಿಕ ಶಾಲೆಗಳಲ್ಲಿಯೂ ಬಳಕೆಯಲ್ಲಿ ಬರುತ್ತಿರುವವು. ಒಂದೊಂದು ಪಟ್ಟಣದಲ್ಲಿ ಅನೇಕ ಮಾಧ್ಯಮಿಕ ಶಾಲೆಗಳಿದ್ದು ಈ ವಿಷಯದಲ್ಲಿ ತಮ್ಮದೊಂದು ಸಂಘವನ್ನು ಮಾಡಿಕೊಳ್ಳುವರು. ಈ ಸಂಘದವರು ಶಿಕ್ಷಣದಲ್ಲಿ ಕುಶಲರಾದವರಿಂದ ಬೇರೆ ಬೇರೆ ವಿಷಯಗಳನ್ನು ಕುರಿತು ಅವರಿಂದ ವ್ಯಾಖ್ಯಾನಗಳನ್ನು ಕೊಡಿಸುವರು. ಇದಕ್ಕೆ ಬೇಕಾಗುವ ಧ್ವನಿಯಂತ್ರವನ್ನು ತಮ್ಮ ತಮ್ಮ ಶಾಲೆಗಳಲ್ಲಿ ಇಟ್ಟುಕೊಳ್ಳುವರು. ಈ ವ್ಯಾಖ್ಯಾನಮಾಲೆಯ ಕಾರ್ಯಕ್ರಮವನ್ನು ಮೊದಲೇ ಪ್ರಸಿದ್ಧಪಡಿಸುವರು. ಶಾಲೆಯ ಅಭ್ಯಾಸಕ್ರಮವನ್ನು ಹೊರ್ತು ಪಡಿಸಿದ ಶಿಕ್ಷಣ ವಿಷಯಗಳಲ್ಲಿ ಇದನ್ನು ಇಟ್ಟುಕೊಂಡಿರುವರು.

ಮೊನ್ನೆ ಈ ವಾಖ್ಯಾನಮಾಲೆಯ ಪ್ರಾರಂಭದ ಉಪನ್ಯಾಸವು ನಮ್ಮ ಪ್ರಾಂತ್ಯದ ನಾಮುದಾರ ಮುಖ್ಯ ಮಂತ್ರಿಗಳಾದ ಶ್ರೀಯುತ **ಖೇರ**ಸಾಹೇಬರವರಿಂದ ಆದದ್ದು ಯುಕ್ತಾಯೋಗ್ಯವೇ ಸರಿ. ಅವರು ವಿದ್ಯಾರ್ಥಿಗಳನ್ನು ಕುರಿತು ಉಪದೇಶಿಸಿದ ನಾಲ್ಕು ಮಾತುಗಳು ಮನನೀಯವಾದವುಗಳಾಗಿರುವದರಿಂದ ನಮ್ಮ ಓದುಗರಿಗಾಗಿ ಅದರ ಸಾರಾಂಶವನ್ನು ನಾವು ಇಲ್ಲಿ ಕೊಡುವೆವು.

ಇಂಥ ಆಕಾಶವಾಣಿಯ ವ್ಯಾಖ್ಯಾನಗಳು "ಇಡಿಯ ಹಿಂದುಸ್ಥಾನದ ರೇಡಿಯೊ" ಸಂಸ್ಥೆಯವರಿಂದ ಕೊಡಲ್ಪಡುವವು. ಮುಂಬಯಿ ಕೇಂದ್ರದಿಂದ ಒಂದು ವಾರದಲ್ಲಿ ಈ ವ್ಯಾಖ್ಯಾನಗಳನ್ನು ಮೂರುಸಾರೆ ಕೊಡುವ ವ್ಯವಸ್ಥೆಯು ಈಗ ಮಾಡಲಾಗಿದೆ. ಈ ಸಲಕರಣೆಯು ಪ್ರಾಥಮಿಕ ಶಾಲೆಯ ಮಕ್ಕಳಿಗೂ ಬೇಗನೆ ಬರುವ ಕಾಲವು ಬಂದಿದೆ ಎಂದು ನಮಗೆ ತೋರುತ್ತದೆ. ಅವರು ಹೇಳುವದೇನೆಂದರೆ:—

"ಈ ವ್ಯಾಖ್ಯಾನಗಳ ಮುಖ್ಯೋದ್ದೇಶವು ನಿಮ್ಮಂಥ ಚುರುಕುಬುದ್ಧಿಯ ತರುಣ ಬಾಲಕರಿಗೆ ವಿಶೇಷ ಜ್ಞಾನಸಾಧನವನ್ನು ಒದಗಿಸಿಕೊಡುವದಿರುವದು. ಬಾಲಕರೇ, ನೀವು ಘನವಂತರಾದ ಜನರ ವಿಷಯವಾಗಿ ವಿದ್ವಾಂಸರ ಮುಖದಿಂದ

ಬರುವ ಮಾತುಗಳನ್ನು ಇನ್ನು ಮೇಲೆ ಕೇಳುವಿರಿ; ವಿದ್ವಜ್ಜನರು ಯಾವ ಯಾವ ಮಹತ್ಕಾರ್ಯಗಳನ್ನು ಮಾಡಿರುವರು? ಯಾವ ಯಾವ ಗ್ರಂಥಗಳನ್ನು ಬರೆದಿರುವರು? ಯಾವ ಯಾವ ಶಾಸ್ತ್ರೀಯಶೋಧಗಳು ಅವರಿಂದ ಮಾಡಲ್ಪಟ್ಟಿವೆ? ಅವು ಮಾನವನ ಜೀವನಕ್ಕೆ ಎಷ್ಟು ಉಪಯೋಗವುಳ್ಳವುಗಳಾಗಿವೆ? ಇಡಿಯ ಜಗತ್ತಿನಲ್ಲಿ ಯಾವ ಯಾವ ಅತ್ಯದ್ಭುತ ಕಾರ್ಯಗಳು ಜರುಗಿಸಲಾಗಿವೆ? ಈ ಮೊದಲಾದ ಸಂಗತಿಗಳನ್ನು ಬಾಲಕರೇ, ನೀವು ಪಂಡಿತರ ಮುಖದಿಂದ ಇನ್ನು ಮೇಲೆ ಕೇಳುವಿರಿ.

"ಈ ಜ್ಞಾನವು ನಿಮ್ಮ ಕಲ್ಪನಾಬಲವನ್ನು ಪ್ರೋತ್ಸಾಹಗೊಳಿಸುವದು, ನಿಮ್ಮ ಕುತೂಹಲವನ್ನು ವೃದ್ಧಿಗೊಳಿಸುವದು, ಇದರಿಂದ ನಿಮ್ಮ ಜ್ಞಾನದೃಷ್ಟಿಯು ವಿಶಾಲವಾಗುವದು, ನಿಮ್ಮ ವಿಚಾರಶಕ್ತಿಯು ಚಾಲನೆಗೊಳ್ಳುವದು, ನಿಮ್ಮಲ್ಲಿ ಗುಪ್ತವಾಗಿಯೂ ಸುಪ್ತವಾಗಿಯೂ ಇದ್ದ ಬಲಗಳು ಜಾಗ್ರತವಾಗುವವು; ಹೀಗೆ ನೀವು ಹೆಚ್ಚು ಹೆಚ್ಚು ಕಾರ್ಯೋದ್ಯುಕ್ತರಾಗುವಿರಿ.

"ನಿಮ್ಮ ಜೀವಮಾನದಲ್ಲಿ ದೊಡ್ಡ ದೊಡ್ಡ ಕೆಲಸಗಳಲ್ಲಿ ನಿಮ್ಮನ್ನು ತಕ್ಕರೀತಿಯಿಂದ ಕಾರ್ಯಕ್ಷಮರನ್ನಾಗಿ ಮಾಡುವದೇ ಈ ಶಿಕ್ಷಣದ ಉದ್ದೇಶವಿರುವದು. ಮಟ್ಟಮೊದಲು ನಿಮಗೆ ವಿಷಯಜ್ಞಾನವಾಗುವದು. ಪ್ರಪಂಚದ ಬಿನ್ನಭಿನ್ನ ದಾರಿಗಳ (ಕೆಲಸಗಳ) ಪರಿಚಯವು ನಿಮಗಾಗುವದು. ಈ ಮೇರೆಗೆ ನಿಮಗುಂಟಾದ ವಿಷಯಜ್ಞಾನವನ್ನು ಕುರಿತು ನೀವು ಸ್ವತಃ ವಿಚಾರಮಾಡುವಿರಿ. ವಿಚಾರಶಕ್ತಿಯ ಮೂಲಕ ನಿಮ್ಮ ನಿರ್ಣಯಗಳನ್ನು ನಿಶ್ಚಯಿಸುವಿರಿ ಮತ್ತು ಅಭಿಪ್ರಾಯಗಳನ್ನು ಮಾಡಿಕೊಳ್ಳುವಿರಿ. ಕೊನೆಗೆ ನೀವು ಸಮಂಜಸವಾಗಿ ವಿಚಾರಿಸಿ ನೀವು ಯಾವರೀತಿಯಾಗಿ ನಡೆದುಕೊಳ್ಳಬೇಕೆಂಬದನ್ನು ಗೊತ್ತುಮಾಡಿಕೊಳ್ಳುವಿರಿ.

ಸರಿಯಾಗಿಯೂ ಸ್ವತಂತ್ರವಾಗಿಯೂ ವಿಚಾರಮಾಡುವದು; ಮತ್ತು ಸಮನಾಗಿಯೂ ಧೈರ್ಯದಿಂದಲೂ ವರ್ತಿಸುವದು ನಿಮ್ಮ ಹೆಗ್ಗುರಿಯಾಗಿರುವದು. ನಿಮ್ಮ ಕಾರ್ಯಕ್ಷೇತ್ರವು ವಿಸ್ತಾರವಾದಂತೆ ನಿಮ್ಮ ಯೋಗ್ಯತೆಯು ಹೆಚ್ಚಾಗುವದು; ಅದರಂತೆ ಪ್ರಪಂಚದಲ್ಲಿ ನೀವು ಹೆಚ್ಚು ಮಾನನೀಯರಾಗುವಿರಿ. ಸ್ವಹಿತಕ್ಕಾಗಿ, ಸ್ವಾರ್ಥಕ್ಕಾಗಿ ಬದುಕಿ ಬಾಳುವವನು ಹೀನನು. ಅವನು ಜನ್ಮ ಮಾತ್ರ ತಾಳಿರುವನು; ಕೆಲದಿನ ಬಾಳುವನು; ಬಾಳಿ ಬಂದುದಿನ ಜನ್ಮನೀಗುವನು; ಆದರೆ ಅವನ ಸಲುವಾಗಿ ಯಾರೂ ಕಳವಳಿಸುವದಿಲ್ಲ; ಅವನಿಗೆ ಯಾರಿಂದಲೂ ಮರ್ಯಾದೆಯಿಲ್ಲ; ಅವನನ್ನು ಯಾರೂ ಹೊಗಳಲಾರರು. ಪರರಿಗಾಗಿ

ಹೆಣಗುವವನ ಬಾಳೇ ಬಾಳು; ತನ್ನ ನಾಡಿನವರಿಗಾಗಿ ಅವನ ಹುಟ್ಟು; ಸಮಾಜ ಕ್ಕಾಗಿ ಅವನ ಬಾಳು ಅಲ್ಲದೆ ಬುದ್ಧ, ಕ್ರೈಸ್ತ, ಮಹಾತ್ಮಾಗಾಂಧಿಯವರಂತೆ ಇಡಿಯ ಮಾನವಕುಟುಂಬಕ್ಕಾಗಿ ಅವನ ಆಯುಷ್ಯ.

"ನಿಮಗೊಂದು ಮಾತನ್ನು ಹೇಳಿ ನಿಮ್ಮನ್ನು ಎಚ್ಚರಗೊಳಿಸಬೇಕಾಗಿದೆ. ಯಾರೊಬ್ಬರು ಹೇಳಿದ ಸಂಗತಿಯನ್ನು ಕೂಡಲೆ ನಂಬಬೇಡಿರಿ. ಆ ವಿಷಯದ ಸತ್ಯತೆಯನ್ನು ಕುರಿತು ನೀವು ಶೋಧಮಾಡಿರಿ. ಒಬ್ಬರು ಹೇಳಿದ ವಿಷಯಕ್ಕಾಗಿ ನಿಮ್ಮ ಮನಸ್ಸು ಒಪ್ಪುವದೋ ಇಲ್ಲವೋ ವಿಚಾರಿಸಿ ನೋಡಿರಿ. ಎಲ್ಲ ಬಗೆಯಿಂದಲೂ ಆ ವಿಷಯವಾಗಿ ವಿಚಾರಿಸಿರಿ; ಬೇರೆಯವರಕೂಡ ಚರ್ಚೆಗಳನ್ನು ಹೂಡಿರಿ; ಜ್ಞಾನವಾಗುವ ಎಲ್ಲ ಸಾಧನಗಳ ಮೂಲವನ್ನು ಹುಡುಕಿರಿ; ಬಳಿಕ ನಿಮ್ಮ ಅಭಿಪ್ರಾಯಗಳನ್ನು ಮಾಡಿಕೊಳ್ಳಿರಿ. ಈ ವಿಚಾರದ ಬಗೆಯು ನಿಮಗೆ ಅನಾವಶ್ಯಕವೆಂದೂ ಕಷ್ಟಕರವೆಂದೂ ತೋರಬಹುದು. ಆದರೆ ಈ ರೀತಿ ವಿಚಾರ ಮಾಡುವದರಿಂದ ನಿಮಗೆ ಪ್ರತಿಫಲವು ನಿಶ್ಚಿತವಾದದ್ದು. ಸ್ವತಂತ್ರ ರೀತಿಯಿಂದ ವಿಚಾರಮಾಡುವ ಚಟವು ನಿಮ್ಮಲ್ಲಿ ನೆಲೆಗೊಳ್ಳುವದು. ಸರ್ವರೀತಿಯಿಂದ ನೀವು ಜ್ಞಾನಸಂಪನ್ನರಾಗಿ ಬಳಿಕ ತಕ್ಕ ರೀತಿಯಿಂದ ಆಚರಣಮಾಡಲು ಸಿದ್ಧರಾಗಿರಿ. ಹೀಗೆ ಸದುದ್ದೇಶಕ್ಕಾಗಿ ಆಚರಣಮಾಡಲು ನೀವು ಕಲಿಯದಿದ್ದರೆ ನಿಮ್ಮ ಜ್ಞಾನವೆಲ್ಲ ವ್ಯರ್ಥವೇ ಸರಿ.

"ನೀವು ಬೇಗನೆ ಒಂದಿಲ್ಲೊಂದು ಪರೀಕ್ಷೆಪಾಸಾಗುವಿರಿ. ಆದರೆ ಕಾರಕೂನರಾಗಲು ಇಲ್ಲವೆ ಯಾವದಾದರೊಂದು ಕೀಳುತರದ, ಸೇವೆಯ ಕಾರ್ಯವನ್ನು ಮಾಡುವವರಾಗಲು ಅಪೇಕ್ಷಿಸಬೇಡಿರಿ. ನೀವು ಧೈರ್ಯಶಾಲಿಗಳಾದ ತರುಣರಾಗಿರಿ. ಮಹತ್ತರ ಕಾರ್ಯಕ್ಕಾಗಿ ಯಾವಾಗಲೂ ಹೆಣಗುವವರಾಗಿರಿ. ನಿಮ್ಮ ನಾಡಿನವರು ಬಡವರೂ ಅಜ್ಞಾನಿಗಳೂ ಇರುವರು. ಅವರ ಸೇವೆಗಿಂತ ಇನ್ನು ಹೆಚ್ಚಿನ ಕಾರ್ಯವು ಯಾವುದಿರುವದು? ನೀವು ಜನ್ಮತಾಳಿದ ತಾಯ್ನಾಡಿನ ಹೆಚ್ಚಳವು ಹೆಚ್ಚಿನ ಕಾರ್ಯವಲ್ಲವೇ? ಜಗತ್ತಿನ ಬೇರೆ ದೇಶಗಳೆಲ್ಲ ಅಜ್ಞಾನಾಂಧಕಾರದಲ್ಲಿ ಮುಸುಕಿ ಮುಳುಗಿ ಮುಂಗಾಣದವರಾಗಿದ್ದಾಗ ನಮ್ಮ ನಾಡಿನ ಹಿರಿಯರು ಸತ್ಯದ ಬೆಳಕನ್ನು ಶೋಧಮಾಡಿ, ಸ್ವಾರ್ಥವನ್ನು ತ್ಯಜಿಸಿ, ಪರಹಿತ ಸಾಧನದಲ್ಲಿ ತಮ್ಮ ಆಯುಷ್ಯವನ್ನು ವಿನಿಯೋಗಿಸಿದರು. ಅಂಥ ನಾಗರಿಕರ ಮಕ್ಕಳು ನೀವು!

"ಹೀಗೆ ಕಾರ್ಯಗಳನ್ನು ಜರುಗಿಸುವಾಗ ಒಂದು ವೇಳೆ ನೀವು ಧನವಂತರಾಗಲಾರಿರಿ. ಆದರೂ ನಿಶ್ಚಯವಾಗಿ ನೀವು ಸುಖಿಗಳಾಗುವಿರಿ. ನಿಮ್ಮನ್ನು ಹೆತ್ತ ತಾಯ್ನಾಡು ನಿಮ್ಮಿಂದ ಸರ್ವಸ್ವಾರ್ಪಣವನ್ನು ಅಪೇಕ್ಷಿಸುತ್ತಿರುವುದು. ನೀವು

ಉದಾರ ಹೃದಯದಿಂದ ಅದನ್ನು ಕೊಡುವಿರೋ ಇಲ್ಲವೊ? "ನಾವು ಕೊಡುವೆವು; ನಾವು ಕೊಡುವೆವು" ಎಂಬ ನಿಮ್ಮ ಕೂಗು ನನಗೆ ಕೇಳ ಬರುತ್ತದೆ. ನನ್ನಾಸೆಗಳೆಲ್ಲ ನಿಮ್ಮನ್ನು ಕೂಡಿವೆ. ಮತ್ತು ನಾನು ನಿಮ್ಮನ್ನು ಹಾಡಿ ಹರಸುತ್ತೇನೆ."

ಪ್ರಾಥಮಿಕ ಶಿಕ್ಷಕರ ಟ್ರೇನಿಂಗಿನ ವಿಷಯವಾಗಿ ಮುಂಬಯಿ ಸರಕಾರದವರು ನೇಮಿಸಿದ ಕಮಿಟಿಯ ರಿಪೋರ್ಟು

ಶ್ರೀ. ಕೆ. ಬಿ. ತೇರಗಾಂವಕರ, ಬಿ. ಎಸ್‌ಸಿ. ಬಿ. ಟಿ. ಟ್ರೇ. ಕಾ. ಧಾರವಾಡ.

ಮುಂಬಯಿ ಸರಕಾರದವರು ಪ್ರಾಥಮಿಕ ಶಾಲೆಗಳ ಶಿಕ್ಷಕರ ಟ್ರೇನಿಂಗಿನ ವಿಷಯವಾಗಿ ಇದೇ ವರುಷ ಜಾನೇವಾರಿ ತಿಂಗಳಲ್ಲಿ **ಶ್ರೀ. ಎಸ್. ಎಸ್. ಮೋರೆ** ಬಿ. ಎ. ಎಲ್. ಎಲ್. ಬಿ. ಎಮ್. ಎಲ್. ಎ. ಪುಣೆ ಜಿಲ್ಲಾ ಲೋಕಲ್ ಬೋರ್ಡ ಪ್ರೆಸಿಡೆಂಟ್ ಇವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಿಸಿದ್ದರು. ಈ ಕಮಿಟಿಯಲ್ಲಿ ನಮ್ಮ ಕರ್ನಾಟಕದ ವತಿಯಿಂದ ವಿಜಾಪುರದ ರಾವಸಾಹೇಬ ಹಳಕಟ್ಟಿಯವರೂ, ಬೆಳಗಾವಿಯಿಂದ ಲಿಂಗರಾಜ ಕಾಲೇಜಿನ ಪ್ರಿನ್ಸಿಪಾಲರಾದ ಡಾಕ್ಟರ ಎಸ್. ಸಿ. ನಂದೀಮತರೂ, ಧಾರವಾಡದಿಂದ ಶ್ರೀಮತಿ ಪಣಜೀಕರ ಕೃಷ್ಣಾಬಾಯಿಯವರೂ ಸಭಾಸದರಿದ್ದರು. ಈ ಕಮಿಟಿಯವರು ಒಂದು ಪ್ರಶ್ನಾವಳಿಯನ್ನು ತಯಾರಿಸಿ ಶೈಕ್ಷಣಿಕ ಪ್ರಪಂಚದಲ್ಲಿ ಮುಂದುವರಿದವರಿಂದ ಅಭಿಪ್ರಾಯಗಳನ್ನು ಶೇಖರಿಸಿ ತಮ್ಮ ರಿಪೋರ್ಟನ್ನು ತಯಾರಿಸಿ ಸಪ್ಟಂಬರ ತಿಂಗಳ ಮೊದಲಿನ ವಾರದಲ್ಲಿ ಪ್ರಸಿದ್ಧಿಸಿದರು. ಅವರು ತಮ್ಮ ವರದಿಯಲ್ಲಿ ಅನೇಕ ಶಿಫಾರಸುಗಳನ್ನು ಮಾಡಿ ಹೊಸ ತಳಹದಿಯ ಮೇಲೆ ಶಿಕ್ಷಕರನ್ನು ತಯಾರಿಸುವ ದಾರಿಯನ್ನು ತೋರಿಸಿ ಕೊಟ್ಟಿರುವರಲ್ಲದೆ ಸರಕಾರದವರು ಈಗಿಂದೀಗಲೆ ಕೈ ಕೊಳ್ಳಬಹುದಾದ ಮತ್ತು ಪ್ರಯೋಗಾರ್ಹವಾದ ಕೆಲವು ಸೂಚನೆಗಳನ್ನು ಮಾಡಿರುವರು. ಅವುಗಳನ್ನೇ ಕೆಳಗೆ ಕಾಣಿಸಲಾಗಿದೆ. ಮತ್ತು ಅವುಗಳನ್ನು ತುಸು ವಿವೇಚಿಸಲಾಗಿದೆ. ಇದಲ್ಲದೆ ಈಗಿದ್ದ ಶಿಕ್ಷಕರ ಟ್ರೇನಿಂಗಿನ ವಿಷಯ ವಾಗಿಯೂ ಅವರು ಹೆಚ್ಚು ಪರಿಶ್ರಮವನ್ನು ವಹಿಸಿ ಕೆಲವು ಶಿಫಾರಸುಗಳನ್ನು ಮಾಡಿರುವರು. ಅವುಗಳನ್ನು ಕೆಳಗೆ ಕೊಡಲಾಗಿದೆ.

ಈಗಿಂದ್ದಿಗೆಲೆ ವಿಚಾರ ಮಾಡತಕ್ಕ ವಿಷಯಗಳು

(೧) ಮೂರನೆಯ ವರುಷದ ಟ್ರೇನಿಂಗ್ ಸರ್ಟೀಫಿಕೆಟನ್ನು ಇನ್ನು ಮುಂದೆ ಮುಂದುವರಿಸಕೂಡದು.

(೨) ಶಿಕ್ಷಕರು ಬರಿಯ ಹೆಚ್ಚಿನ ತರಗತಿಯ ಸರ್ಟೀಫಿಕೆಟನ್ನು ಹೊಂದಿದ ಮಾತ್ರಕ್ಕೆ ಹೆಚ್ಚಿನ ಪಗಾರಕ್ಕೆ ಅರ್ಹರಾಗಲಾರರೆಂದು ಸಾರಬೇಕು.

(೩) ಮೊದಲನೆಯ ವರುಷದ ಸರ್ಟೀಫಿಕೆಟನ್ನು ಹೊಂದಿದ ಶಿಕ್ಷಕ ಶಿಕ್ಷಿಕೆಯರು ಸಾಧ್ಯವಿದ್ದಮಟ್ಟಿಗೆ ಪ್ರತಿವರುಷ ೨ನೆಯ ವರುಷದ ಟ್ರೇನಿಂಗು ಹೊಂದುವಂತೆ ಒಂದು ಯೋಜನೆಯನ್ನು ಕಾರ್ಯರೂಪದಲ್ಲಿ ತರಬೇಕು.

(೪) ಮುಲ್ಕೀಪರೀಕ್ಷೆ ಪಾಸಾದ ಶಿಕ್ಷಕರಿಗೆ ಸಾಧ್ಯವಿದ್ದ ಮಟ್ಟಿಗೆ ಪ್ರತಿ ವರುಷ ಗಂಡಸರಿಗೆ ೫ ವರುಷದ, ಹೆಂಗಸರಿಗೆ ೩ ವರುಷದ ತಡೆಯಿಲ್ಲದೆ ಟ್ರೇನಿಂಗು ಸಿಗುವಂತೆ ಒಂದು ಯೋಜನೆಯನ್ನು ಕಾರ್ಯರೂಪದಲ್ಲಿ ಬರುವಂತೆ ಮಾಡಬೇಕು.

(೫) ಬಾಲಿಕೆಯರ ಪ್ರಾಥಮಿಕ ಸಾಲೆಗಳಿಗೆ ಇನ್ನೊಂದು ವರ್ಗವನ್ನು ಸೇರಿಸಬೇಕು. ಮತ್ತು ಬಾಲಿಕೆಯರ ತರಗತಿಯು ಬಾಲಕರ ತರಗತಿಯಷ್ಟೇ ಆಗುವಂತೆ ಬಾಲಿಕೆಯರ ಸಾಲೆಯ ಅಭ್ಯಾಸ ಪತ್ರಿಕೆಯನ್ನು ಸುಧಾರಿಸಬೇಕು.

(೬) ೧೯೪೦ (೧೯೪೧) ರಲ್ಲಿ ಬಾಲಕ ಬಾಲಿಕೆಯರಿಗೆ ಸಾಮಾನ್ಯವಾದ ಒಂದೇ ಮುಲ್ಕೀಪರೀಕ್ಷೆಯಾಗುವದೆಂದು ಸಾರಬೇಕು.

(೭) ವಸತಿಗೃಹದಲ್ಲಿರದಂಥ ವಿದ್ಯಾರ್ಥಿಗಳನ್ನೂ ಟ್ರೇನಿಂಗ್ ಸಂಸ್ಥೆಗಳು ಸೇರಿಸಿಕೊಳ್ಳಬೇಕು. ಅಂದರೆ ಟ್ರೇನಿಂಗು ಸಂಸ್ಥೆಗಳಲ್ಲಿರುವ ವಿದ್ಯಾರ್ಥಿಗಳಿಗೆ ವಸತಿಗೃಹಗಳಲ್ಲಿಯೇ ಇರಬೇಕೆಂಬ ನಿರ್ಬಂಧವನ್ನು ತೆಗೆಯಬೇಕು.

(೮) ಗಂಡಸರ ಟ್ರೇನಿಂಗ ಸಂಸ್ಥೆಯಲ್ಲಿ ವಿದ್ಯಾರ್ಥಿನಿಯರಿಗೂ ಪ್ರವೇಶ ವಿರಲು ಆಸ್ಪದವಿದ್ದು ಅಲ್ಲಿ ಮಿಶ್ರ ಶಿಕ್ಷಕ ವರ್ಗವಿರಬೇಕು.

(೯) ೧೦ ಲೋಕ ಸಾಲೆಗಳನ್ನಾದರೂ ಪ್ರಾರಂಭಿಸಬೇಕು. (೩೫೦ ವಿದ್ಯಾರ್ಥಿಗಳಿಗೆ) ೨ ಗುಜರಾಥದಲ್ಲಿ, ೨ ಕರ್ನಾಟಕದಲ್ಲಿ, ೪ ಮಹಾರಾಷ್ಟ್ರದಲ್ಲಿ, ಮತ್ತು ೨ ಉರ್ದು ವಿದ್ಯಾರ್ಥಿಗಳಿಗೆ. ಮೊದಲಿನ ೮ ಸಂಸ್ಥೆಗಳು ಮಿಶ್ರ ಶಿಕ್ಷಕ ವರ್ಗಗಳಿಂದೊಡಗೂಡಿದ್ದು ಸಹಶಿಕ್ಷಣವನ್ನು ಕೊಡುವಂಥವಿರಬೇಕು.

(೧೦) ಒಬ್ಬನೇ ಶಿಕ್ಷಕನಿರುವ ಸಾಲೆಗಳಿರುವ ಹಳ್ಳಿಗಳಲ್ಲಿ ಮತ್ತು ೭೦೦ ಇಲ್ಲವೆ ಅದಕ್ಕೂ ಕಡಿಮೆ ಜನಸಂಖ್ಯೆ ಇರುವ ಹಳ್ಳಿಗಳಲ್ಲಿ ೪ ವರುಷದ ಒತ್ತಾ

ಯದ ಶಿಕ್ಷಣವನ್ನು ಪ್ರಾರಂಭಿಸಬೇಕು. ಹೀಗಾಗುವದರಿಂದ ಒಬ್ಬನೇ ಶಿಕ್ಷಕ ನಾಗಿರುವ ಸಾಲೆಗಳಾಗಿ ಉಳಿಯದೆ ಆರ್ಥಿಕ ದೃಷ್ಟಿಯಿಂದಲೂ ಶೈಕ್ಷಣಿಕ ದೃಷ್ಟಿಯಿಂದಲೂ ಹೆಚ್ಚು ಪ್ರಬಲ (efficient) ವಾಗಿ ಸಾಗುವವು.

(೧೧) ಈಗಾಗಲೇ ಬಾಲಿಕೆಯರ ಸಾಲೆಗಳಿರುವ ಹಳ್ಳಿಗಳಲ್ಲಿ ಬಾಲಿಕೆಯರಿಗೆ ಒತ್ತಾಯದ ಶಿಕ್ಷಣವನ್ನು ಆರಂಭಮಾಡಬೇಕು.

ಇವುಗಳ ಮೇಲಿಂದ ಕೆಲವು ಸಂಗತಿಗಳು ಸ್ಪಷ್ಟವಾಗಿ ಗೊತ್ತಾಗುವವು. ಈಗಿನ ಟ್ರೇನಿಂಗು ಸಂಸ್ಥೆಗಳು ತಮ್ಮ ಮೂಲ ಕ್ರಮದಲ್ಲಿ ತುಸು ಹೆಚ್ಚು ಕಡಿಮೆ ಯನ್ನು ಹೊಂದಿ ಈಗಿದ್ದ ಶಿಕ್ಷಕರಿಗೋಸ್ಕರ ಟ್ರೇನಿಂಗು ಕೊಡಲು ಸುಮಾರು ೧೨-೧೫ ವರುಷಗಳ ವರೆಗೆ ಉಳಿಯುವವು. ಇದೇ ಸಮಯದಲ್ಲಿ ಬೇರೊಂದೆಡೆಗೆ ಬೇರೆ ಅಭ್ಯಾಸ ಪತ್ರಿಕೆಯನ್ನು ಅನುಸರಿಸಿ ಹೊಸ ಮಾದರಿಯ ಟ್ರೇನಿಂಗು ಸಂಸ್ಥೆಗಳು ಹೊರಡಬಹುದು. ಮತ್ತು ಹಳೆಯ ಶಿಕ್ಷಕರೂ ಹೊಸ ಟ್ರೇನಿಂಗು ಸಂಸ್ಥೆಗಳಲ್ಲಿ ಶಿಕ್ಷಣ ಹೊಂದಬಹುದಾದ ಶಿಕ್ಷಕರೂ ಸಮಾನ ದರ್ಜೆಯವರೆಂದು ತಿಳಿದುಬಂದಾಗ್ಯೂ ನಿಜವಾಗಿ ನೋಡಲಾಗಿ ಲೋಕಸಾಲೆಯೊಳಗೆ ಸಾಮಾನ್ಯ ಶಿಕ್ಷಣವನ್ನು ಹೊಂದಿ ೨ ವರುಷದ ತಡೆಯಿಲ್ಲದ ಟ್ರೇನಿಂಗನ್ನು ಹೊಂದಿದವರು ತಮ್ಮ ಕರ್ತವ್ಯವನ್ನು ಸಾಗಿಸಲು ಹೆಚ್ಚು ಯೋಗ್ಯರಾಗುವರೆಂದು ನಮ್ಮ ಮತ.

ಈಗಿನ ೧೦ನೆಯ ವರುಷದ ಸರ್ಟಿಫಿಕೆಟಿನ ಶಿಕ್ಷಕ ಇಲ್ಲವೆ ೨೦ನೆಯ ವರುಷದವ ಹೀಗೆ ಇರುವ ಭೇದಗಳು ಹೋಗಿ ಎಲ್ಲ ಶಿಕ್ಷಕರು ಒಂದೇ ತರಗತಿಯವರಾಗ ಬೇಕೆನ್ನುವ ಕಮಿಟಿಯವರ ಶಿಫಾರಸು ಯಥಾಯೋಗ್ಯವಿರುವದು. ಯಾಕಂದರೆ ಈಗಿನ ೧೦ನೆಯ ವರುಷದ ಟ್ರೇನಿಂಗುಹೊಂದಿದ ಶಿಕ್ಷಕನು ನಿಜವಾಗಿಯೂ ತನ್ನ ಕಾರ್ಯವನ್ನು ಸಾಗಿಸಲು ಅಸಮರ್ಥನಿರುವನು. ಅನೇಕ ಸಾರೆ ಇಂಥವನೇ ಹೆಚ್ಚು ಜವಾಬುದಾರಿಯ ಕೆಲಸವನ್ನು ಮಾಡಬೇಕಾಗುತ್ತದೆ. ಆಗ ತನ್ನ ದುರ್ಬಲ ತೆಯ ಮೂಲಕ ಎಷ್ಟೇ ಕಳಕಳಿ ಇದ್ದಾಗ್ಯೂ ಅಯಶಸ್ವಿಯಾಗುತ್ತಾನೆ. ಹೀಗಾಗಿ ಪ್ರತಿಯೊಬ್ಬ ಶಿಕ್ಷಕನಿಗೆ ೨ ವರುಷಗಳವರೆಗಾದರೂ ಟ್ರೇನಿಂಗು ಸಿಕ್ಕಲ್ಲಿ ತನ್ನ ಕಾರ್ಯವನ್ನು ನಿರ್ವಹಿಸಲಿಕ್ಕೆ ಸಾಕಷ್ಟು ಶೈಕ್ಷಣಿಕ ಜ್ಞಾನವನ್ನು ಹೊಂದಿದವ ನಾಗುವನು. ಇದೇ ಉದ್ದೇಶವು ಹೆಚ್ಚು ತೀವ್ರವಾಗಿ ಸಫಲವಾಗಲೆಂದು ಈಗಿಂದೀಗಲೇ ೩ನೆಯ ವರುಷದ ವರ್ಗವನ್ನು ಕಿತ್ತಿಹಾಕಬೇಕೆಂದಿರುವ ಅವರ ಅಭಿಪ್ರಾಯವು ಅರ್ಥಪೂರ್ಣವಾದದ್ದೆಂದು ಹೇಳಬಹುದು.

ಪ್ರಾಥಮಿಕ ಸಾಲೆಯಲ್ಲಿಯ ಕೆಳಗಿನ ವರ್ಗಗಳ ಶಿಕ್ಷಣವು ಸ್ತ್ರೀಯರ ಕೈಯಲ್ಲಿಯೇ ಇರಬೇಕೆನ್ನುವದು ಪ್ರಪಂಚದಲ್ಲಿ ಪ್ರಚಲಿತವಿರುವ ವಿಚಾರಕ್ಕೂ

ಸಾಗುತ್ತಿರುವ ಕಾರ್ಯಕ್ಕೂ ಯೋಗ್ಯವಾಗಿ ಹೊಂದಿಕೊಂಡಿರುವದು. ಆದ್ದರಿಂದ ಅವರಾದರೂ ಹೆಚ್ಚು ದಕ್ಷತೆಯುಳ್ಳ ಮತ್ತು ಸಾಕಷ್ಟು ಜ್ಞಾನಾರ್ಜನೆಯನ್ನು ಹೊಂದಿದ ಶಿಕ್ಷಕೆಯರಿದ್ದರೆ ಮಾತ್ರ ಈ ಮಾತು ಶ್ರೇಯಸ್ಕರವಾಗಿ ಲಾಭದಾಯಕವಾಗಿ ನಡೆಯುವದು. ಇದೇ ಉದ್ದೇಶದಿಂದ ಬಾಲಿಕೆಯರ ಮುಲ್ಕೀಪರೀಕ್ಷೆಯ ದರ್ಜೆಯನ್ನು ತುಸು ಏರಿಸಿರುವರು. ಇಲ್ಲಿಯವರೆಗೆ ೬ನೆಯ ಇಯತ್ತೆಯ ಕೊನೆಗೆ ಅವರ ಮುಲ್ಕೀಪರೀಕ್ಷೆಯಾಗುತ್ತಿದ್ದು ಇನ್ನು ಮುಂದೆ ಇನ್ನೊಂದು ವರುಷ ಹೆಚ್ಚಿಸಿ ಬಾಲಕರ ಮುಲ್ಕೀಪರೀಕ್ಷೆಯ ದರ್ಜೆಗೆ ಸರಿಯಾಗುವಂತೆ ಮಾಡಿರುವರು. ಅಭ್ಯಾಸಪತ್ರಿಕೆಯಲ್ಲಿಯೂ ಕೂಡ ಸಮಾನತೆಯನ್ನು ಸೂಚಿಸಿರುವರು. ಇಷ್ಟೇ ಅಲ್ಲದೆ ಬಾಲಕ ಬಾಲಿಕೆಯರ ಬೇರೆ ಬೇರೆ ಮುಲ್ಕೀಪರೀಕ್ಷೆಯನ್ನು ತೆಗೆದು ಹಾಕಿ ಒಂದೇ ಸಾಮಾನ್ಯವಾದ ಪರೀಕ್ಷೆಯನ್ನು ಸೂಚಿಸಿರುವರು. ಇದರಿಂದ ಈ ಪರೀಕ್ಷೆಯನ್ನು ಪಾಸಾಗಿ ಮುಂದಿನ ಕಾರ್ಯಕ್ಕೆ ಬೇಕಾಗುವ ಸ್ತ್ರೀಯರು ಸಾಕಷ್ಟು ಸಿಕ್ಕಲಾರರೆಂಬ ಭಯ. ಆದರೆ ಅದೇ ಸಮಯದಲ್ಲಿ ಪಾಸಾದವರೆಲ್ಲರೂ ಕೆಲಸದಲ್ಲಿ ತೊಡಗಬಹುದೆಂಬ ಹೆಚ್ಚು ನಿಶ್ಚಿತವಾದ ಆಶೆ. ಹಾಗು ಈ ಭಯವನ್ನು ತಪ್ಪಿಸುವದಕ್ಕೋಸ್ಕರವಾಗಿ ಬಾಲಿಕೆಯರ ಸಾಲೆಗಳಿರುವ ಹಳ್ಳಿಗಳಲ್ಲಿ ಬಾಲಿಕೆಯರಿಗೆ ಒತ್ತಾಯದ ಶಿಕ್ಷಣವನ್ನು ಆರಂಭ ಮಾಡಬೇಕೆಂದಿರುವರು. ಇದಲ್ಲದೆ ಸ್ತ್ರೀಯರಿಗೆ ಸೌಕರ್ಯಗಳನ್ನು ಕಲ್ಪಿಸಿ ಕೊಟ್ಟು ಶಿಕ್ಷಕೆಯರ ಪ್ರಪಂಚವನ್ನು ಹೆಚ್ಚು ಆಕರ್ಷಕವನ್ನಾಗಿ ಮಾಡಿರುವರು.

ತುಸು ವೆಚ್ಚದಲ್ಲಿ ಆದಷ್ಟು ಹೆಚ್ಚು ಜನ ಶಿಕ್ಷಕರಿಗೆ ಟ್ರೇನಿಂಗ್ ದೊರೆಯಬೇಕೆಂದು ಸರಕಾರದ ಉದ್ದೇಶವಿದೆ. ಈ ಉದ್ದೇಶಕ್ಕನುಸಾರವಾಗಿಯೇ ಸರಕಾರದವರು ಟ್ರೇನಿಂಗ್ ಸಂಸ್ಥೆಗಳಲ್ಲಿ, ಸಹಶಿಕ್ಷಣಕ್ರಮ (ಗಂಡಸರು, ಹೆಂಗಸರು ಒತ್ತಟ್ಟಿಗೆ ಕಲಿಯೋಣ) ವನ್ನು ಅನುಸರಿಸಲಿಕ್ಕೆ ಸೂಚಿಸಿರುವರು. ವಸತಿಗೃಹದಲ್ಲಿಯೇ ಇದ್ದು ವಿದ್ಯಾರ್ಥಿಗಳು ಟ್ರೇನಿಂಗ್ ಹೊಂದಬೇಕೆಂದು ಈ ಕಾಲಕ್ಕೆ ನಿರ್ಬಂಧವುಂಟು. ಸುಧಾರಿಸಿದ ಅನ್ಯ ದೇಶಗಳಲ್ಲಿ ಸಹ ಬರಿ ವಿದ್ಯಾರ್ಥಿಗಳೇ ಏಕೆ, ಶಿಕ್ಷಕರೂ ಸಹ ಟ್ರೇ. ಸಂ. ಗಳ ವಸತಿಗೃಹದಲ್ಲಿಯೇ ಇರಬೇಕೆಂದು ಅಲ್ಲಿಯ ಯೋಜಕರ ಅಭಿಪ್ರಾಯವಿದೆ. ಆ ಪ್ರಕಾರ ಪ್ರಚಾರದಲ್ಲಿಯೂ ಅದೆ. ವರ್ಧಾ ಶಿಕ್ಷಣ ಸಮಿತಿಯವರೂ ಕೂಡ ವಸತಿಗೃಹದಲ್ಲಿಯೇ ಇದ್ದು ವಿದ್ಯಾರ್ಥಿಗಳು ಟ್ರೇನಿಂಗ್ ಹೊಂದಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಇವುಗಳ ಮೇಲಿಂದ ವಿಚಾರಿಸಿ ನೋಡಿದರೆ ವಸತಿಗೃಹದ ನಿರ್ಬಂಧದಿಂದ ಟ್ರೇನಿಂಗ್ ಶಿಕ್ಷಣಕ್ಕೆ ಹೆಚ್ಚು ಅನುಕೂಲತೆ ದೊರೆಯಬಹುದೆಂಬದೇನೋ ನಿಜ; ಆದರೆ ಸಮ್ಮಲ್ಲಿ ಟ್ರೇನಿಂಗ್ ಹೊಂದದೆ ಇದ್ದ ಶಿಕ್ಷಕರ ಸಂಖ್ಯೆಯು ಹೆಚ್ಚಾಗಿ ಇರುವದು.

ಈ ಬಗೆಯ ಹಳೆಯ ಶಿಕ್ಷಕರಿಗೆ ಬೇಗ ಟ್ರೇನಿಂಗ್ ದೊರೆಯುವದಕ್ಕಾಗಿ ಈ ನಿರ್ಬಂಧವನ್ನು ತೆಗೆದು ಹಾಕಿದರೆ ಸ್ವಲ್ಪ ವೆಚ್ಚದಲ್ಲಿಯೇ ಈ ದೊಡ್ಡ ಕೆಲಸವು ಕೈಗೂಡುವದು. ಆ ಬಳಿಕ ವಸತಿಗೃಹದ ನಿರ್ಬಂಧವನ್ನಿಡಬಹುದು. ಈಗಿನ ಕಮೀಟಿಯವರು ಸಹ, ಟ್ರೇನಿಂಗ್ ಹೊಂದದಿರುವ ಶಿಕ್ಷಕರಿಗೆ ಆದಷ್ಟು ಬೇಗ ಟ್ರೇನಿಂಗ್ ಕೊಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಸಹಶಿಕ್ಷಣದ ವಿಷಯವಾಗಿ ಬರೆಯುವಾಗ ಪ್ರಪಂಚದಲ್ಲಿ ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವದೆಂದು ಮಾತ್ರ ಹೇಳುವೆವು. ಅದರಲ್ಲಿಯೂ ಪ್ರಾಥಮಿಕ ಮತ್ತು ಮಾಧ್ಯಮಿಕ ಸಾಲೆಗಳಲ್ಲಿಯ, ಸಹಶಿಕ್ಷಣದ ಬಗ್ಗೆ ತೀರ ಭಿನ್ನಾಭಿಪ್ರಾಯವಿರುದು. ಅಲ್ಲಿ ತೋರಿಸಬಹುದಾದ ಕಾರಣಗಳು ಟ್ರೇನಿಂಗ ಸಂಸ್ಥೆಗಳಿಗೆ ಅಷ್ಟೊಂದು ಅನ್ವಯಿಸಲಾರವು. ಈಗ ಅನೇಕ ವರುಷಗಳಿಂದ ಉಚ್ಚ ಶಿಕ್ಷಣದ ಕಾಲೇಜುಗಳಲ್ಲಿ, ಅನೇಕ ದೇಶಗಳಲ್ಲಿ ನಮ್ಮಲ್ಲಿಯೂ ಕೂಡ ಸಹಶಿಕ್ಷಣವು ಸಾಗುತ್ತ ಬಂದಿದೆ. ಟ್ರೇನಿಂಗ್ ಸಂಸ್ಥೆಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅಲ್ಲಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಿಂತ ಹೆಚ್ಚು ವಯಸ್ಸಾದವರೂ ತಮ್ಮ ತಮ್ಮ ಜವಾಬುದಾರಿಯನ್ನು ಅರಿತವರೂ ಇರುವರಲ್ಲದೆ ಮುಂದೆ ಶಿಕ್ಷಣಕಾರ್ಯದಲ್ಲಿ ತಮ್ಮ ತಮ್ಮೊಳಗೆ ಹೆಚ್ಚು ಸಹಾಯ-ಸಹಕಾರವನ್ನು ಬೆಳೆಸಿಕೊಳ್ಳಬೇಕಾದವರೂ ಇರುವರು. ಮತ್ತು ಶಿಕ್ಷಿಕೆಯರಿಗೆ ಬೇರೆ ವಸತಿಗೃಹದ ಏರ್ಪಾಟು ಇದ್ದು ಮಿಶ್ರ ಶಿಕ್ಷಕ ವರ್ಗವು ಟ್ರೇನಿಂಗು ಸಂಸ್ಥೆಗಳಲ್ಲಿ ಇದ್ದರೆ ಅವರ ಅಡಚಣಿಗಳು ದೂರಾಗಿ ಶಿಕ್ಷಣ ಕಾರ್ಯವು ಸುಲಭವಾಗಿ ಸಾಧ್ಯವಾಗುವದು. ಇಷ್ಟೇ ಅಲ್ಲದೆ ಕಮಿಟಿಯವರು ಹೊಸ ಮಾದರಿಯ ಟ್ರೇನಿಂಗ ಸಂಸ್ಥೆಗಳನ್ನು ಹೊರಡಿಸುವ ಉದ್ದೇಶದಿಂದ ಈಗಲೇ ಲೋಕ ಸಾಲೆಗಳನ್ನು ಪ್ರಾರಂಭಿಸಲು ಸೂಚಿಸಿರುವರು. ಮತ್ತು ಅಲ್ಲಿ ಸಹಶಿಕ್ಷಣವಿರಬೇಕೆನ್ನುವರು. ಆ ಸಾಲೆಗಳಲ್ಲಿ ಮಿಶ್ರ ಶಿಕ್ಷಕ ವರ್ಗವಿರಬೇಕೆಂದು ಕಲ್ಪಿಸಿರುವರು. ಈ ಸಾಲೆಗಳಲ್ಲಿಯ ಸಹಶಿಕ್ಷಣದ ಬಗ್ಗೆ ತೀವ್ರ ಮತಭೇದವನ್ನು ಪ್ರದರ್ಶಿಸದೆ ಇರಲಾರೆವು. ಈ ಸಾಲೆಗಳಿಗೆ ಬರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ವಯಸ್ಸು ೧೪ ರಿಂದ ೧೬ ರ ವರೆಗೆ ಇರುವದು. ಈ ವಯಸ್ಸಿನ ಬಾಲಕಬಾಲಿಕೆಯರು ಕೂಡಿ ಕಲಿಯುವದು ವಿಹಿತವಲ್ಲೆಂದು ಅನೇಕರು ಅನುಭವದಿಂದ ಕಂಡು ಹಿಡಿದಿರುವರು. ಮಾಧ್ಯಮಿಕ ಸಾಲೆಗಳು ಬಾಲಬಾಲಿಕೆಯರಿಗೆ ಪ್ರತ್ಯೇಕವಿರಬೇಕೆನ್ನುವದೂ ಕೂಡ ವಿದ್ಯಾರ್ಥಿಗಳ ವಯಸ್ಸಿನ ಮೇಲೆ ಅವಲಂಬಿಸಿರುತ್ತದೆ. ಅದರಲ್ಲಿಯಂತೂ ನಾವು ಉಷ್ಣಕಟಿ ಬಂಧದ ಜನರು. ಈ ವಯಸ್ಸಿನಲ್ಲಿ ಸಹಶಿಕ್ಷಣವನ್ನು ಸಾಗಿಸುವದೆಂದರೆ ಬೆಂಕಿಯ ಕೂಡ ಆಟವೇ ಸರಿ. ಯಾವ ದೇಶದಲ್ಲಿಯೂ ಜನರು ಸಹಶಿಕ್ಷಣಕ್ಕೆ ನಿಶ್ಚಿತವಾದ

ಆಭಿಪ್ರಾಯವುಳ್ಳವರಿಲ್ಲದಿರುವಾಗ ನಮ್ಮ ಇಲಾಖೆಯಲ್ಲಿ ಪ್ರಾರಂಭ ಮಾಡುವ ಧೈರ್ಯಮಾಡುವದು, ತುಸು ತಪ್ಪು ದಾರಿಯೆಂದು ನಮಗೆ ಎನಿಸುವದು.

ಈಗಲೇ ವಿಚಾರಮಾಡುವ ವಿಷಯಗಳಲ್ಲಿ ಏನೆಂದೆಂದರೆ ಒಬ್ಬನೇ ಶಿಕ್ಷಕನಿರುವ ಸಾಲೆಗಳ ಸುಧಾರಣೆ, ಮತ್ತು ೬೦೦ ಜನಸಂಖ್ಯೆ ಇರುವ ಹಳ್ಳಿಗಳಲ್ಲಿ ಒತ್ತಾಯದ ಶಿಕ್ಷಣ. ೧೯೨೮ ನೆಯ ಇಸ್ವಿಯಲ್ಲಿ ಹರ್ಟಾಗ ಕಮೀಟಿಯವರು "ಒಬ್ಬನೇ ಶಿಕ್ಷಕನಿರುವ ಸಾಲೆಗಳಿಂದ ಯಾವ ಲಾಭವೂ ಆಗಿಲ್ಲ; ಮತ್ತು ಆಗುವ ದಿಲ್ಲೆಂ"ದು ಕಂಡುಹಿಡಿದಿರುವರು. ಆದಾಗಲೂ ಈ ತರದ ಸಾಲೆಗಳು ನಮ್ಮ ಇಲಾಖೆಯಲ್ಲಿ ಇದ್ದೇ ಇವೆ. ಇಂಥ ಹಳ್ಳಿಗಳಲ್ಲಿ ಒತ್ತಾಯದ ಶಿಕ್ಷಣವನ್ನು ಪ್ರಾರಂಭಿಸುವದರಿಂದ ಸಾಕ್ಷರತಾಪ್ರಸಾರವು ಬೇಗ ಆಗುವದು. ಮತ್ತು ಕನಿಷ್ಟಪಕ್ಷಕ್ಕೆ ಈ ತರದ ಸಾಲೆಗಳಲ್ಲಿ ಇಬ್ಬರು ಶಿಕ್ಷಕರಾದರೂ ಕೆಲಸ ಮಾಡಲು ಸಾಕಷ್ಟು ವಿದ್ಯಾರ್ಥಿಗಳು ಸಿಗಬಹುದು. ಆಗ ಅದಕ್ಕಾಗಿ ವಿನಿಯೋಗಿಸಬಹುದಾದ ಹಣದ ಯೋಗ್ಯ ಉಪಯೋಗವಾಗಬಹುದು. ಆದರೆ ಈಗಲೇ ಒತ್ತಾಯದ ಶಿಕ್ಷಣವನ್ನು ಅಲ್ಲಿ ಪ್ರಾರಂಭ ಮಾಡಿದರೆ ತಗಲಬಹುದಾದ ವೆಚ್ಚವು ಹೆಚ್ಚಾಗಬಹುದೆಂದು ನಮಗೆ ಎನಿಸುವದು.

ಒಟ್ಟಿನ ಮೇಲೆ ಸರಕಾರದವರು, ಈಗಿಂದೀಗಲೇ ಕೈ ಕೊಳ್ಳಲು ಮಾಡಿದ ಕಮಿಟಿಯವರ ಶಿಫಾರಸುಗಳಲ್ಲಿ ಅನೇಕಸೂಚನೆಗಳು ಗ್ರಾಹ್ಯವಿದ್ದು ಪ್ರಯೋಗಾರ್ಹವಿರುವವು.

ಸದ್ಯದ ಶಿಕ್ಷಕರ ವ್ಯವಸ್ಥೆ

ಇಲಾಖೆಯಲ್ಲಿ ಆಗಿರುವ ಟ್ರೇಂಡ್ ಅಂಟ್ರೇಂಡ್ ಶಿಕ್ಷಕರ ವಿಷಯವಾಗಿ ಕೆಲವು ಸೂಚನೆಗಳನ್ನು ಮಾಡಿರುವರು.

೧೯೩೬, ೧೯೩೭ನೆಯ ಸಾಲಿನ ವರೆಗೆ ಅಂಕೆಗಳಿಂದ ಟ್ರೇಂಡ್ ಮತ್ತು ಅನ್‌ಟ್ರೇಂಡರ ಸಂಖ್ಯೆಯು ಕೆಳಗಿನಂತೆ ಅದೆ.

	ಟ್ರೇಂಡ್	ಅನ್‌ಟ್ರೇಂಡ್
ಗಂಡಸರು	೧೩೭೫೦	೧೧೪೭೦
ಹೆಂಗುಸರು	೩೧೬೦	೧೭೪೦

ಅನ್‌ಟ್ರೇಂಡ್‌ರಲ್ಲಿ ೧೦೯೩೦ ಗಂಡಸರು ಮತ್ತು ೧೩೪೦ ಸ್ತ್ರೀಯರು ಮುಲ್ಕೀಪರೀಕ್ಷೆ ಪಾಸಾದವರಿರುವರು. ಉಳಿದವರು ಅನ್‌ಪಾಸ ಇರುವರು. ಹೀಗಾಗಿ ೧೩೩೧೦ ಜನರು ಮಾತ್ರ ಮುಲ್ಕೀ ಪರೀಕ್ಷೆ ಪಾಸಾದವರಿದ್ದು

ಅನ್‌ಟ್ರೇಂಡರಿರುವರು. ಇವರಲ್ಲಿ ಕೆಲವರು ತೀರವಯಸ್ಸಾದವರಿರುವರು ಎಂದರೆ ೪೦ ವರುಷಕ್ಕೆ ಮಿಕ್ಕಿದವರಿರುವದರಿಂದ ಅವರಿಗೆ ಟ್ರೇನಿಂಗಿನಿಂದ ಯಾವ ಲಾಭವೂ ಆಗಲಾರದು. ೪೦ ವರುಷದ ಒಳಗಿನವರು ಸುಮಾರು ೬೦೦೦ ಜನರಿರುವರೆಂದು ಅಂದಾಜ ಮಾಡಲಾಗಿದೆ.

ಈ ೬೦೦೦ ಅನ್‌ಟ್ರೇಂಡ ಮತ್ತು ೪೦ ವರುಷದೊಳಗಿರುವ ಶಿಕ್ಷಕರಿಗೆ ನಿಯಮಿತವಾದ ಟ್ರೇನಿಂಗಿನ ವ್ಯವಸ್ಥೆಯಾಗಬೇಕು. ಮತ್ತು ಈ ಶಿಕ್ಷಕರ ಟ್ರೇನಿಂಗು ವರುಷಕ್ಕೆ ೬೦೦ ರಂತೆ ೧೦ ವರುಷದಲ್ಲಿ ಮುಗಿಯಬೇಕು. ಈ ೬೦೦೦ ಜನ ಶಿಕ್ಷಕರಲ್ಲಿ ೨೨ರಿಂದ-೪೦ ವರುಷದವರ ಒಂದು ಗುಂಪು, ಮತ್ತೊಂದು ೨೨ ವರುಷಕ್ಕಿಂತ ಚಿಕ್ಕವರ ಗುಂಪು ಹೀಗೆ ೨ ಗುಂಪು ಮಾಡಬೇಕು. ೨೨ ವರುಷದ ಕೆಳಗಿನವರು ಹೊಸದಾಗಿ ಹೊರಡಿಸಬೇಕೆಂದಿರುವ ಲೋಕಸಾಲೆಗಳನ್ನು ಸೇರಿ ಅಲ್ಲಿ ೩ ವರುಷದ ಸಾಮಾನ್ಯ ಶಿಕ್ಷಣವನ್ನು ಹೊಂದಿ ೨ ವರುಷದ ತಡೆಯಿಲ್ಲದ ಟ್ರೇನಿಂಗ ಶಿಕ್ಷಣವನ್ನು ಹೊಸದಾಗಿ ಪ್ರಾರಂಭಿಸಬೇಕೆನ್ನುವ ಟ್ರೇನಿಂಗ ಸಂಸ್ಥೆಯಲ್ಲಿ ಹೊಂದಬೇಕು. ೨೨ ರಿಂದ ೪೦ ರ ವರೆಗಿನವರು ಈಗಿನ ಟ್ರೇನಿಂಗ ಸಂಸ್ಥೆಯಲ್ಲಿ ತುಸು ಹೆಚ್ಚು ಕಡಿಮೆ ಮಾಡಿಕೊಂಡ ಈಗಿನ ಅಭ್ಯಾಸ ಪತ್ರಿಕೆಯನ್ನು ಅನುಸರಿಸಿ ೨ ವರುಷದ ತಡೆಯಿಲ್ಲದ ಟ್ರೇನಿಂಗು ಹೊಂದಬೇಕು.

ಈ ೨೨ ರಿಂದ ೪೦ ವರುಷಗಳ ವರೆಗಿನವರು ಲೋಕ ಸಾಲೆಗೆ ಹೋಗುವ ಆವಶ್ಯಕತೆಯಿರುವದಿಲ್ಲ. ಇವರ ಸಾಮಾನ್ಯ ಶಿಕ್ಷಣವು ಅಪೇಕ್ಷಿಸಿದಕ್ಕಿಂತ ಕಡಿಮೆ ತರಗತಿಯದಾಗುವದೆಂದಾಗ್ಯೂ ಅವರು ಮಾಡಿದ ನೌಕರಿಯ ಅವಧಿ ಮತ್ತು ಪಡೆದ ಅನುಭವ ಇವುಗಳು ಅವರ ಜ್ಞಾನದ ಪ್ರಮಾಣದಲ್ಲಿಯ ನ್ಯೂನತೆಯನ್ನು ದೂರಮಾಡುವವು.

೪೦ ವರುಷದ ಮೇಲಿನವರಿಗೆ ನಿಯಮಬದ್ಧವಾದ ಟ್ರೇನಿಂಗಿನಿಂದ ಯಾವ ಲಾಭವಾಗದಿದ್ದರೂ ತುಸು ಅವಧಿಯ ೩ ತಿಂಗಳಿನ ಟ್ರೇನಿಂಗು ಅವರಿಗೆ ಸಿಗುವಂತೆ ವ್ಯವಸ್ಥೆಯಾಗಬೇಕು.

ಇನ್ನು ಟ್ರೇನಿಂಗಹೊಂದಿದ ೧೫೯೧೧೦ ಜನ ಶಿಕ್ಷಕರಲ್ಲಿ ಕೆಲವರು ಮಾತ್ರ ೨ ಅಥವಾ ೩ ವರುಷದ ಟ್ರೇನಿಂಗು ಹೊಂದಿರುವರು. ಉಳಿದವರು ೧ ವರುಷದ ಟ್ರೇನಿಂಗು ಹೊಂದಿ ಒಂದನೆಯ ವರ್ಷದ ಟ್ರೇನಿಂಗ್ ಸರ್ಟಿಫಿಕೇಟನ್ನು ದೊರಕಿಸಿರುವರು. ಇನ್ನು ಮೇಲೆ ೩ನೆಯ ವರುಷದ ವರ್ಗವನ್ನು ಬಂದುಮಾಡಬೇಕು. ಹೀಗಾಗುವದರಿಂದ ಉಳಿತಾಯವಾದ ಸ್ಥಳವನ್ನು ೧ನೆಯ ಮತ್ತು ೨ನೆಯ ವರುಷದವರ್ಗಕ್ಕೆ ಹೆಚ್ಚು ವಿದ್ಯಾರ್ಥಿಗಳು ಬರುವಂತೆ ಉಪಯೋಗಿಸಿಕೊಳ್ಳಬಹುದು.

ಈಗಿನ ಎರಡನೆಯ ವರುಷ ಟ್ರೇನಿಂಗುಹೊಂದಿದ ಶಿಕ್ಷಕರಿಗೆ ನಿಯಮ ಬದ್ಧವಾದ (Formal) ಹೆಚ್ಚಿನ ಟ್ರೇನಿಂಗಿನ ಆವಶ್ಯಕತೆ ಇರುವದಿಲ್ಲ.

೪೦ ವರುಷದೊಳಗಿರುವ ೧ನೆಯ ವರುಷದ ಟ್ರೇನಿಂಗಹೊಂದಿದವರಿಗೆ ಈಗಿನ ಟ್ರೇನಿಂಗ ಸಂಸ್ಥೆಯಲ್ಲಿ ೨ನೆಯ ವರುಷದ ಟ್ರೇನಿಂಗನ್ನು ಕೊಡಬೇಕು. ಈ ತರದವರು ಸುಮಾರು ೫೦೦ ಜನರಿರುವದರಿಂದ ಪ್ರತಿವರುಷ ೫೦ ರಂತೆ ೧೦ ವರುಷದಲ್ಲಿ ಇವರೆಲ್ಲರಿಗೂ ೨ನೆಯ ವರುಷದ ಟ್ರೇನಿಂಗು ಕೊಡಬೇಕು.

೪೦ ವರುಷದ ಮೇಲಿನ ಎಲ್ಲ ಟ್ರೇಂಡ ಶಿಕ್ಷಕರು ಅಂದರೆ ೨ನೆಯ, ಮೂರನೆಯ ಮತ್ತು ಮೊದಲನೆಯ ವರುಷದ ಟ್ರೇನಿಂಗ್ ಹೊಂದಿದವರೆಲ್ಲರೂ ಪುನಃ ಟ್ರೇನಿಂಗ ಕೊಡುವ ವರ್ಗಗಳಿಗೆ ಹೋಗಿ ರೀಟ್ರೇನಿಂಗ್ ಹೊಂದಬೇಕು.

ಈಗಿನ ಟ್ರೇನಿಂಗ ಸಂಸ್ಥೆಗಳನ್ನು ಈಗಾಗಲೇ ನೌಕರಿಯಲ್ಲಿರುವ ಶಿಕ್ಷಕರಿಗೆ ಟ್ರೇನಿಂಗಕೊಡಲು ಉಪಯೋಗಿಸಬೇಕು. ನಮ್ಮ ಇಲಾಖೆಯಲ್ಲಿ ಸರಕಾರೀ ಟ್ರೇನಿಂಗ ಸಂಸ್ಥೆಗಳಲ್ಲಿ ಪ್ರತಿವರುಷ ೧೪೦೦ ಶಿಕ್ಷಕರಿಗೆ ಟ್ರೇನಿಂಗು ಕೊಡಲು ಅನುವು ಇರುವದು. ನೌಕರಿಯಲ್ಲಿದ್ದು ಪ್ರತಿವರುಷ ಟ್ರೇನಿಂಗಿನ ಅವಶ್ಯವಿದ್ದ ೪೦೦ ಅನಟ್ರೇಂಡ ಶಿಕ್ಷಕರಿಗೆ ಎರಡು ವರ್ಷದ ಟ್ರೇನಿಂಗು ಅವಶ್ಯ. ಮತ್ತು ಒಂದು ವರ್ಷದ ಟ್ರೇನಿಂಗ ಹೊಂದಿದ ೫೦೦ ಜನ ಶಿಕ್ಷಕರಿಗೆ ಮತ್ತೆ ಒಂದು ವರ್ಷದ ಟ್ರೇನಿಂಗು ಅವಶ್ಯ.

ಈ ಟ್ರೇನಿಂಗು ಕೊಡುವದನ್ನು ಕಾರ್ಯರೂಪಿಯಾಗಿ ಮಾಡಲು ಒಂದು ವಿಸ್ತೃತವಾದ ಯೋಜನೆಯನ್ನು ಜೋಡಿಸಿರುವರು.

ಇನ್ನು ನಮ್ಮ ದಕ್ಷಿಣ ಭಾಗದಲ್ಲಿ ೧ನೆಯ ವರ್ಷದ ಟ್ರೇನಿಂಗ ಸರ್ಟೀಫಿಕೆಟನ್ನು ಮಾತ್ರ ಪಡೆದವರು ೧೧೪೩ ಶಿಕ್ಷಕರಿರುವರು. ಮತ್ತು ಬರೀ ಮುಲ್ಕೀ ಪರೀಕ್ಷೆ ಪಾಸಾದವರು, ೧೭೬೦ ಶಿಕ್ಷಕರಿರುವರು. ಇದಲ್ಲದೆ ಒಂದನೆಯ ವರ್ಷದ ಸರ್ಟೀಫಿಕೆಟನ್ನು ಮಾತ್ರ ಹೊಂದಿದವರು ೧೭೧ ಶಿಕ್ಷಕೆಯರಿರುವರು. ಮತ್ತು ೧೭೩ ಶಿಕ್ಷಕೆಯರು ಬರೀ ಮುಲ್ಕೀಪರೀಕ್ಷೆ ಪಾಸಾದವರಿರುವರು.

ಇವರಲ್ಲಿ ೨೨ ವರುಷಕ್ಕಿಂತ ಕಡಿಮೆ ವಯಸ್ಸಿನವರೂ ೨೨ ರಿಂದ ೪೦ ರ ವರೆಗಿನವರೂ ಇನ್ನೂ ಕೆಲವರು ೪೦ ರ ಆಚೆಯವರೂ ಇರುವರು. ಇವರ ಪ್ರಮಾಣವು ನಿಶ್ಚಿತವಾಗಿ ಗೊತ್ತಿಲ್ಲದಿದ್ದರೂ ೪೦ ವರ್ಷಕ್ಕಿಂತ ಕಡಿಮೆಯವರು ಹೆಚ್ಚಿದಷ್ಟು ಇರುವರೆಂದು ಕಲ್ಪಿಸಿದರೆ ಒಂದನೆಯ ವರ್ಷ ಸರ್ಟೀಫಿಕೆಟ ಪಡೆದವರು ಸುಮಾರು ೭೬೨ ಶಿಕ್ಷಕರೂ ೧೧೪ ಶಿಕ್ಷಿಕೆಯರೂ ಇರುವರಲ್ಲದೆ ಮುಲ್ಕೀಪರೀಕ್ಷೆ ಮಾತ್ರ ಪಾಸಾದವರಲ್ಲಿ ೧೧೪೬ ಶಿಕ್ಷಕರು ಮತ್ತು ಸುಮಾರು ೧೧೫ ಶಿಕ್ಷಿಕೆಯರು ಇರುವರು.

"ಕ್ವಾಲೀಫಾಯಿಡ್" ಶಿಕ್ಷಕವರ್ಗದಲ್ಲಿ ೨೨ ವರ್ಷಕ್ಕಿಂತ ಕಡಿಮೆ ಇರುವವರ ಸಂಖ್ಯೆಯು ೧೦೦ಕ್ಕೆ ೧೦ ರಂತೆ ಇರಬಹುದು ಎಂದು ತಿಳಿದರೆ ೧೧೪ ಶಿಕ್ಷಕರನ್ನೂ ೧೨ ಶಿಕ್ಷಕಿಯರನ್ನೂ ಕಮಿಟಿಯವರ ಶಿಫಾರಿಸಿನ ಪ್ರಕಾರ ಮುಂದೆ ಹೊರಡುವ ಲೋಕಸಾಲೆಗಳಿಗೆ ಕಳಿಸಬೇಕಾಗುವದು. ಇವರು ಅಲ್ಲಿಯ ಮೂರು ವರ್ಷದ ಅಭ್ಯಾಸಕ್ರಮವನ್ನು ಮುಗಿಸಿ, ಹೊಸದಾಗಿ ಹೊರಡುವ ಹೊಸ ಮಾದರಿಯ ಟ್ರೇನಿಂಗ ಸಂಸ್ಥೆಗಳಿಗೆ ಹೋಗಿ ಎರಡು ವರ್ಷದ ಟ್ರೇನಿಂಗನ್ನು ಹೊಂದಿ ಯೋಗ್ಯತರದ ಶಿಕ್ಷಕರಾಗುವರು.

ಇನ್ನುಳಿದ ೧೧೬೮ ಜನ ಮುಲ್ಕೀಪರೀಕ್ಷೆಮಾತ್ರ ಪಾಸಾದಶಿಕ್ಷಕರಿಗೂ ೧೦೩ ಶಿಕ್ಷಕಿಯರಿಗೂ ಈಗಿನ ಟ್ರೇನಿಂಗ ಸಂಸ್ಥೆಯ ಕಾಲೇಜಗಳಲ್ಲಿಯೇ ಕಮಿಟಿಯವರ ಅಭಿಪ್ರಾಯದ ಪ್ರಕಾರ ಸುಮಾರು ೧೦ ವರ್ಷದಲ್ಲಿ ಎರಡು ವರ್ಷದ ಪೂರ್ಣ ಟ್ರೇನಿಂಗ ಕೊಡಬೇಕಲ್ಲದೆ ಒಂದನೆಯ ವರ್ಷ ಸರ್ಟೀಫಿಕೇಟ ಹೊಂದಿ ೪೦ ವರ್ಷ ವಯಸ್ಸಿಗಿಂತ ಚಿಕ್ಕವರಾದ ೭೬೨ ಜನ ಶಿಕ್ಷಕರಿಗೂ ೧೧೪ ಶಿಕ್ಷಕಿಯರಿಗೂ ಈಗಿರುವ ಟ್ರೇನಿಂಗ ಸಂಸ್ಥೆಯಲ್ಲಿಯೇ ತುಸು ಹೆಚ್ಚು ಕಡಿಮೆ ಮಾಡಿ, ಒಂದು ವರ್ಷದ ವರೆಗಿನ ೩ನೆಯ ವರ್ಷದ ಟ್ರೇನಿಂಗು ಕೊಡಬೇಕು.

೧೦೬೯ ಜನ ಶಿಕ್ಷಕರಲ್ಲಿ ಪ್ರತಿವರ್ಷ ೧೧೬ ಶಿಕ್ಷಕರನ್ನು ಟ್ರೇನಿಂಗಿನ ಸಲುವಾಗಿ ಮೊದಲನೆಯ ೧ನೆಯ ವರ್ಷದ ಕ್ಲಾಸಿಗೆ ತೆಗದುಕೊಳ್ಳಬೇಕು. ಇದೇ ಕ್ರಮವಾಗಿ ೧೦೩ ಶಿಕ್ಷಕಿಯರಲ್ಲಿ ಪ್ರತಿವರ್ಷ ೧೦ ರಂತೆ ಶಿಕ್ಷಕಿಯರನ್ನು ತೆಗೆದು ಕೊಳ್ಳಬೇಕಾಗುವದು. ಸದ್ಯಕ್ಕೆ ಗಂಡುಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಒಂದನೆಯ ವರ್ಷ ಕ್ಲಾಸಿಗೆ ೬೦ ವಿದ್ಯಾರ್ಥಿಗಳನ್ನು ಮಾತ್ರ ಆರಿಸುತ್ತಾರೆ. ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ೨೫ ವಿದ್ಯಾರ್ಥಿನಿಯರನ್ನು ಆರಿಸುತ್ತಾರೆ. ಕಮಿಟಿಯವರ ಶಿಫಾರಸುಗಳು ಈಗಲೇ ಕಾರ್ಯರೂಪಗೊಳ್ಳಬೇಕಾದರೆ ಗಂಡುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ೧ನೆಯ ವರ್ಷ ವಿದ್ಯಾರ್ಥಿ ಸಂಖ್ಯೆಯನ್ನು ೪೬ ರಿಂದ ಹೆಚ್ಚಿಸಬೇಕಾಗುವದು. ಮತ್ತು ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ಈ ತರದ ತೊಂದರೆಬರುವದಿಲ್ಲ. ಕಮಿಟಿಯವರು ೩ನೆಯವರ್ಷದ ವರ್ಗವನ್ನು ತೆಗೆದುಹಾಕಬೇಕೆಂದು ಸೂಚಿಸಿರುವದರಿಂದ ತುಸುಮಟ್ಟಿಗೆ ಈ ಕಾರ್ಯಕ್ಕೆ ಸಹಾಯವಾಗುವದೇನೋ ನಿಜ. ಆದರೆ ಈ ಸೂರಾ ೨೮ (೧೦೬) ಶಿಕ್ಷಕರು ಮೊದಲನೆಯ ವರ್ಷ ಟ್ರೇನಿಂಗುಹೊಂದಿ ೩ನೆಯ ವರ್ಷಕ್ಕೂ ಹೋಗಲು ಅರ್ಹವಾಗುವರು. ಇದಲ್ಲದೆ ಈಗಾಗಲೇ ಒಂದನೆಯ ವರ್ಷ ಸರ್ಟೀಫಿಕೇಟ ಪಡೆದ ೪೦ ವರ್ಷಕ್ಕಿಂತ ಚಿಕ್ಕವರಾದ ೭೬೨ ಶಿಕ್ಷಕರೂ ಮತ್ತು ೧೧೪ ಶಿಕ್ಷಕಿ

ಯರೂ ಇನ್ನೊಂದು ವರ್ಷ ಟ್ರೇನಿಂಗಪಡೆಯಲುಬೇಕಾಗುವದು. ಎಂದರೆ ಪ್ರತಿವರ್ಷ ಎರಡನೆಯ ವರ್ಷದಲ್ಲಿ ೭೬ ಜನ ಶಿಕ್ಷಕರನ್ನೂ ಮತ್ತು ೧೧ ಜನ ಶಿಕ್ಷಿಕೆಯರನ್ನೂ ಸೇರಿಸಿಕೊಳ್ಳಬೇಕಾಗುವದು. ಎಂದರೆ ಒಟ್ಟಿನಲ್ಲಿ ೨ನೆಯ ವರ್ಷದವರಲ್ಲಿ ೧೮೨ ಶಿಕ್ಷಕರ ಪ್ರತಿವರ್ಷದ ಟ್ರೇನಿಂಗಿನ ವ್ಯವಸ್ಥೆಯನ್ನು ಮತ್ತು ೨೧ ಶಿಕ್ಷಿಕೆಯರ ಟ್ರೇನಿಂಗಿನ ವ್ಯವಸ್ಥೆಯನ್ನು ಮಾಡಬೇಕಾಗುವದು. ಶಿಕ್ಷಕರ ಟ್ರೇನಿಂಗಿನ ವ್ಯವಸ್ಥೆಯೇ ತುಸು ಕಠಿಣ ಎಂದು ಎನಿಸುತ್ತದೆ. ಆದರೂ ಬೆಳಗಾವ, ವಿಜಾಪೂರ, ಕಾರವಾರಗಳಲ್ಲಿ ಮೊದಲಿನಂತೆ ಟ್ರೇನಿಂಗ್ ಸ್ಕೂಲುಗಳನ್ನು ಸ್ಥಾಪಿಸಿ ಮೊದಲನೆಯ ವರ್ಷದ ಟ್ರೇನಿಂಗು ಅಲ್ಲಿಯೇ ಸಿಗುವಂತೆ ವ್ಯವಸ್ಥೆಯಾದರೆ, ಕವಿಓಟಿಯವರ ಇಚ್ಛೆಯು ಕೈಗೂಡುವದು. ಮತ್ತು ನಮ್ಮ ದಕ್ಷಿಣ ಭಾಗದಲ್ಲಿಯ ಈಗಿನ ಅಂಟ್ರೆಂಡರ ಸಂಖ್ಯೆಯು ಆದಷ್ಟು ಬೇಗ ಕಡಿಮೆಯಾಗುವದೆಂದು ಆಶಿಸಲಾಗಿದೆ.

ಸರಕಾರದವರು ಧೈರ್ಯದಿಂದ ಮುಂದೆಬಂದು ಈ ಕಾರ್ಯವನ್ನು ಕೈಕೊಂಡು ನಮ್ಮ ಚಿಕ್ಕ ಬಾಲಬಾಲಿಕೆಯರಿಗೆ ಯೋಗ್ಯತರದ ಶಿಕ್ಷಣವನ್ನು ಕೊಡಿಸಿ ಅವರನ್ನು ಯೋಗ್ಯ ನಾಗರಿಕರನ್ನಾಗಿ ಮಾಡುವರೆಂದು ಪ್ರಾರ್ಥಿಸುವೆವು.

ಭೂಗೋಲ ಶಿಕ್ಷಣ

ಹಿಂದಿನ ಅಭ್ಯಾಸ ಕ್ರಮದಂತೆ ಭೂಗೋಲ ವಿಷಯವನ್ನು ಪ್ರಾಥಮಿಕ ಶಾಲೆಗಳಲ್ಲಿ ಎರಡನೆಯ ಇಯತ್ತೆಯಿಂದ ಪ್ರಾರಂಭಿಸಬೇಕಾಗುತ್ತಿತ್ತು. ಮತು ಆ ಇಯತ್ತೆಯಲ್ಲಿ ಭೂಗೋಲದ ಕೆಲವು ವ್ಯಾಖ್ಯೆಗಳು ಮುಖ್ಯ ದಿಕ್ಕುಗಳು ಉಪದಿಕ್ಕುಗಳು ಇವುಗಳಿಂದ ಪ್ರಾರಂಭವಾಗಿ ತಾಲೂಕಿನೊಳಗಿನ ಗುಡ್ಡಗಳು, ನದಿಗಳು, ಸಂತೆಯಾಗುವ ಊರುಗಳು ಮುಂತಾದ ಹಲಕೆಲವು ಹೆಸರುಗಳ ಪಾಠದಲ್ಲಿ ಕೊನೆ ಮುಟ್ಟುತ್ತಿತ್ತು. ಭೂಗೋಲ ಶಿಕ್ಷಣದ ಉದ್ದೇಶವು ಈ ಬಗೆಯ ಪಾಠ ಕ್ರಮದಿಂದ ಯಾವರೀತಿಯಿಂದಲೂ ಸಾಧಿಸುತ್ತಿದ್ದಿಲ್ಲ; ಇಷ್ಟೇ ಅಲ್ಲ,

ಇದರಿಂದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಇದೊಂದು ಹಾಳುಹರಟೆ, ತಲೆ ಬೇಸರಿಡಿಸುವ ಅಪ್ರಯೋಜಕ ವಿಷಯ ಎಂಬ ಭಾವನೆಯನ್ನು ತುಂಬಲು ಕಾರಣವಾಗುತ್ತಿತ್ತು. ಪ್ರಾರಂಭದ ಇಯತ್ತೆಯಲ್ಲಿ ಪ್ರಾರಂಭವಾದ ಇದೇ ಕ್ರಮವು ಕೊನೆಯ ಏಳನೆಯ ಇಯತ್ತೆಯವರೆಗೂ ಸಾಗುತ್ತಿದ್ದಿತೆಂದರೂ ಅಡ್ಡಿಯಿಲ್ಲ. ಆದರೆ ಈ ಹೊಸ ಯುಗದಲ್ಲಿ ಈ ಮಾತು ತೀರ ಬದಲಾಗುವದು ಅತ್ಯವಶ್ಯವಾಗಿದೆ. ಜನ–ಜೀವನವನ್ನೇ ಕೇಂದ್ರವಾಗಿಟ್ಟುಕೊಂಡು ಭೂಗೋಲ, ಇತಿಹಾಸ, ಪ್ರಕೃತಿ ವಿಜ್ಞಾನ, ಶಾಸ್ತ್ರೀಯ ವಿಷಯ ಮುಂತಾದ ಎಲ್ಲ ವಿಷಯಗಳು ಕಲಿಸಲ್ಪಡಬೇಕೆಂಬದು ಈಗಿನ ವಿಚಾರ. ವ್ಯವಹಾರೋಪಯೋಗವಿಲ್ಲದ ಜ್ಞಾನವು ಅಥವಾ ಯಾವದೋಂದು ಸಂಗತಿಯ ಸ್ಮರಣೆಯು ಅನವಶ್ಯಕವೆಂಬದು ಈಗಿನ ಶಿಕ್ಷಣ ಕ್ರಮದೊಳಗಿನ ಒಂದು ಮುಖ್ಯ ಮಾತು. ಆದುದರಿಂದ ಪ್ರತಿ ವಿಷಯವನ್ನು ಜನಜೀವನಕ್ಕೆ ಸಂಬಂಧಿಸಿ ಕಲಿಸಬೇಕೆಂಬದು ತಾನಾಗಿ ಸಿದ್ಧವಾಗುವದು. ಈ ದೃಷ್ಟಿಯನ್ನಿಟ್ಟುಕೊಂಡು ಭೂಗೋಲವನ್ನು ಹೇಗೆ ಕಲಿಸಬೇಕೆಂಬದನ್ನೂ ಹೊಸ ಅಭ್ಯಾಸ ಪತ್ರಿಕೆಯಲ್ಲಿ ಈ ವಿಚಾರವು ಎಷ್ಟರಮಟ್ಟಿಗೆ ಸೇರ್ಪಡೆಯಾಗಿರುವದೆಂಬದನ್ನೂ ವಿವರಿಸುವದೇ ನಮ್ಮ ಪ್ರಕೃತ ಲೇಖನದ ಧ್ಯೇಯವಾಗಿದೆ.

ಹೊಸ ಅಭ್ಯಾಸ ಕ್ರಮದಂತೆ ಬಿನ್ ಇಯತ್ತೆಯಿಂದಲೇ ಎಂದರೆ ಬಾಲಕರು ಅಭ್ಯಾಸಕ್ಕಾಗಿ ಶಾಲೆಗೆ ಬಂದಂದಿನಿಂದಲೇ ಭೂಗೋಲ ವಿಷಯವನ್ನು ಕಲಿಸಲು ಪ್ರಾರಂಭಿಸಬೇಕಾಗಿದೆ. ಭೂಗೋಲವೆಂದರೆ ಭೂವಿವರಣೆ, ಭೂಮಿಯ ಮೇಲಿನ ನದಿ, ಪರ್ವತ, ದ್ವೀಪಕಲ್ಪ, ಖಂಡ, ರಾಜಕೀಯ ದೇಶಗಳು, ಅವುಗಳ ರಾಜಧಾನಿ ಮೊದಲಾದವುಗಳ ವಿವರಣೆ ಎಂದು ಅರ್ಥಮಾಡಿಕೊಳ್ಳುವವನಿಗೆ ಈ ಮಾತು ಬಹು ಗಹನವಾಗಿ ತೋರುವದರಲ್ಲಿ ಆಶ್ಚರ್ಯವಿಲ್ಲ. ಆದರೆ ನಮ್ಮ ಹೇಳಿಕೆ ಹೀಗಿಲ್ಲ. ಬಾಲಕರು ತಮ್ಮ ಸುತ್ತಲೂ ನೋಡುವ ಸೃಷ್ಟ ಪದಾರ್ಥಗಳು, ಸೃಷ್ಟಿಯ ಕಾರ್ಯಕ್ರಮಗಳು ಇವೇ ನಮ್ಮ ಆರಂಭದ ಭೂಗೋಲದ ಪಾಠಗಳು; 'ಆ' 'ಗೂ' ಎಂದು ತೊದಲು ನುಡಿದು ಆದೇ ಆಗ ಕಣ್ಣು ತೆರೆದು ಪ್ರಪಂಚವನ್ನು ನೋಡ ಲಾರಂಭಿಸುವ ಆರೇಳು ತಿಂಗಳುಗಳ ಹಸುಗೂಸಿನ ತಾಯಿಯು ತನ್ನ ಅಂಬೆಗಾಲಿಡುವ ಕೂಸನ್ನು ಮನೆಯ ಮುಂದಣ ಅಂಗಣದಲ್ಲಿ ಆಡಿಸುವಾಗ ಮೂಡಣದಲ್ಲಿ ಮೂಡಿಬರುವ ಚಂದಪ್ಪನನ್ನು ತೋರಿಸಿ 'ಚಂದಪ್ಪ ಚಂದಪ್ಪ ಚಾರಿಕಾಯಿ; ಬಟ್ಟಲ ತುಂಬ ಬಾರಿಕಾಯಿ'....'ಚಂದಪ್ಪ ಬಾ– ಬಾ-ಬಾ' ಎಂದು ಮುಂತಾಗಿ ಹಾಡಿ ಆಡಿಸುವದನ್ನು ಕಾಣದಿರುವವರು ಯಾರು? ರಾಮನು ಚಂದಪ್ಪನನ್ನು ತಂದು ಕೊಡೆಂದು ಹಟಮಾಡಿದ ಕಥೆಯೂ ಇದನ್ನೇ ಹೇಳುವದಿಲ್ಲವೇ? ಇದರಿಂದ ಏನು ಗೊತ್ತಾಗುವದು? ಮಗುವಿನ ದೃಷ್ಟಿಯು ಮೊದಲು ಚಂದ್ರನ ಕಡೆಗೂ ತರುವಾಯ

ನಕ್ಷತ್ರಗಳು, ಸೂರ್ಯ ಇವುಗಳ ಕಡೆಗೂ ಹೋಗುವದು. ಸೂರ್ಯನು ದಿನಾಲು ತಪ್ಪದೆ ಬರುವವನಾದರೂ ಆತನ ಅತಿ ಪರಿಚಯವೋ ಉಗ್ರತೆಯೋ ಕಾರಣವಾಗಿ ಮಗುವಿನ ದೃಷ್ಟಿಯು ಆತನ ಕಡೆಗೆ ಮೊದಲು ಸೆಳೆಯಲಾರದು. ಮಗುವು ಸೂರ್ಯನನ್ನು ಬರಿಗಣ್ಣಿನಿಂದ ನೋಡಲಾರದು. ಚಂದ್ರನ ಆಹ್ಲಾದಕರವಾದ ಬೆಳಕು ಎಂದೋ ಒಂದು ದಿನ ಪೂರ್ಣವಾಗಿ ಉದಯಿಸಿದರೂ ಅಂದಿನ ಮನೋಹರವಾದ ಆತನ ನೋಟ, ಇವು ಬಾಲಕರ ಮನಸ್ಸನ್ನು ಸಹಜವಾಗಿ ಆಕರ್ಷಿಸುವವು. 'ನೀನು ಚಿಕ್ಕೆಗಳನ್ನು ಎಣಿಸು; ನಾನು ಕಡಬು ಎಣಿಸುತ್ತೇನೆ' ಎಂಬ ಮಕ್ಕಳ ಹುಡುಗಾಟಿಕೆಯ ಮಾತು ನಕ್ಷತ್ರಗಳ ಅಸಂಖ್ಯ ಪರಿಮಾಣವನ್ನು ಸೂಚಿಸುವದು. 'ಬೆಳ್ಳನ್ನ ಬೆಳಕಾಯಿತೋ; ಬೆಳ್ಳಿ ಚಿಕ್ಕಿ ಮೂಡಿತೋ' ಎಂಬ ಹಾಡು ಶುಕ್ರೋದಯವನ್ನು ಸೂಚಿಸುವದಿಲ್ಲವೇ? ಹೀಗೆ ಶಾಲೆಗೆ ಬರುವ ಮೊದಲೇ ಬಾಲಕರು ಚಂದ್ರ, ನಕ್ಷತ್ರ, ಸೂರ್ಯ ಮೊದಲಾದುವನ್ನು ನೋಡಿರುವರು. ಸೂರ್ಯ, ಚಂದ್ರರಿಂದ ನಮಗೆ ಬೆಳಕು ದೊರೆಯುವದೆಂಬದನ್ನೂ ಅವರು ಬಲ್ಲರು. ಶಾಲೆಗೆ ಬಂದಾಗ ಶಿಕ್ಷಕರು ಅವರೊಡನೆ ಮಾತಾಡಿ ಸೂರ್ಯನು ದಿನಾಲು ಬರುವ ವೇಳೆ, ಸ್ಥಾನ, ನಮಗೆ ತೋರುವಂತೆ ಆತನು ಕ್ರಮಿಸುವ ಮಾರ್ಗ ಇವುಗಳ ಕಡೆಗೆ ಬಾಲಕರ ದೃಷ್ಟಿಯನ್ನು ಎಳೆಯಬೇಕು. ಇದರಿಂದ ಅವರಿಗೆ ಸೂರ್ಯನು ಬೆಳಗಿನಲ್ಲಿಯೂ, ಮಧ್ಯಾಹ್ನದಲ್ಲಿಯೂ, ಸಾಯಂಕಾಲದಲ್ಲಿಯೂ ಯಾವ ಸ್ಥಳದಲ್ಲಿ ಇರುವನೆಂಬ ಕಲ್ಪನೆಯು ಸಹಜವಾಗಿ ಬಂದು ಬಿಡುವದು. ಇದೇ ಹೊಸ ಅಭ್ಯಾಸ ಪತ್ರಿಕೆಯಲ್ಲಿ ಹೇಳುವ ಮೊದಲನೆಯ ಮಾತು. ಇದನ್ನೇ ಶಿಕ್ಷಕನು ಶಾಲೆಯ ಕೋಣೆಯಲ್ಲಿ ಸೂರ್ಯಾಸ್ತ —+— ಸೂರ್ಯೋದಯ ಹೀಗೆ ಗೆರೆಕೊರೆದು ತೋರಿಸಬೇಕೆಂದು ಅಭ್ಯಾಸಕ್ರಮದಲ್ಲಿ ಹೇಳಿದೆ.

ಬಾಲಕರ ವರ್ಗದಲ್ಲಿ ನಾವು ಕಲಿಸಬೇಕಾದ ಭೂಗೋಲ ವಿಷಯದೊಳಗಿನ ಎರಡನೆಯ ಮಾತೆಂದರೆ ಗಡಿಯಾಳದ ಮೇಲಿಂದ ವೇಳೆಯನ್ನು ತಿಳಿದು ಹೇಳುವದು. ಎಣಿಕೆಯ ಜ್ಞಾನ, ಅಂಕಿಗಳನ್ನು ಓದುವ ಜ್ಞಾನ (ಮೇಲಾಗಿ ಗಡಿಯಾಳಗಳಲ್ಲಿರುವದು ರೋಮನ್ ಅಂಕಿ. ಇಂಗ್ಲಿಷ ಅಂಕಿ ಎಲ್ಲಿಯೋ ವಿರಳ) ಇವಿಲ್ಲದೆ ಗಡಿಯಾಳದ ವೇಳೆಯನ್ನು ಹೇಗೆ ಕಲಿಸಬೇಕೆಂದು ಕೆಲವರ ಆಕ್ಷೇಪಣೆಯಿದೆ. ಆರಂಭದಲ್ಲಿ ಈ ಮಾತಿಗೆ ಅಷ್ಟು ನಿರ್ದಿಷ್ಟವಾಗಿ ಲಕ್ಷ್ಯಪೂರೈಸುವ ಕಾರಣವಿಲ್ಲ. ಮಧ್ಯಾಹ್ನ ಹನ್ನೆರಡು ಹೊಡೆದಾಗ ಸೂರ್ಯನು ನೆತ್ತಿಯ ಮೇಲಿರುವನು. ಆಗ ಗಡಿಯಾಳದ ಮುಳ್ಳುಗಳು ಎರಡೂ ತಲೆಯ ಮೇಲಿನ ಅಂಕಿಯ ಮೇಲಿರುವವು. ಮುಂಜಾನೆಯೂ ಸಾಯಂಕಾಲದಲ್ಲಿಯೂ ಎರಡೂ ಮುಳ್ಳುಗಳು ಒಂದೇ ಸರಳ ರೇಖೆಯಲ್ಲಿ ಬಂದು ಸಣ್ಣ ಮುಳ್ಳು ೬ರ ಮೇಲೆಯೂ ದೊಡ್ಡ ಮುಳ್ಳು ಹನ್ನೆರಡರ

ಮೇಲೆಯೂ ಇರುವವು. ಆಗ ಗಡಿಯಾಳವು ಆರು ಗಂಟೆಯನ್ನು ಬಾರಿಸುವದು. ಇತ್ಯಾದಿ ಒಂದೊಂದೇ ಮೆಟ್ಟುಗಳಿಂದ ಮುಂದೆ ಸಾಗಿದರೆ ಬಿನ್ ಇಯತ್ತೆಯನ್ನು ಮುಗಿಸುವ ಹೊತ್ತಿಗೆ ಅವರು ಈ ವಿಷಯವನ್ನು ಸಹಜವಾಗಿ ಕಲಿತುಕೊಳ್ಳುವರು. 'ನಮ್ಮ ಶಾಲೆಯಲ್ಲಿ ಗಡಿಯಾಳವೇ ಇಲ್ಲ.' ಎಂದು ಮುಂತಾಗಿ ಹೇಳುವ ಶಿಕ್ಷಕರು ಹಳ್ಳಿಯ ಹುಡುಗರೇ ತಮ್ಮ ನಿತ್ಯದ ಕಾರ್ಯಕ್ರಮದ ವೇಳೆಯಿಂದಲೂ, ಆಗಿನ ಸೂರ್ಯನ ಸ್ಥಾನದ ಮೇಲಿಂದಲೂ ಅನೇಕ ಅನುಭವದ ಮಾತುಗಳನ್ನು ಹೇಳುವ ದನ್ನು ಕೇಳಿರಬಹುದು. ದನಗಳು ಮನೆಗೆ ಬರುವದಕ್ಕಿಂತಲೂ ಮೊದಲೇ ಎಂದರೆ (ಶಾಲೆಯ ವೇಳೆಗಿಂತ ಮೊದಲೇ) ಶಿಕ್ಷಕರು ಶಾಲೆಬಿಟ್ಟಿರುವರೆಂಬ ಹಳ್ಳಿಯ ಒಕ್ಕಲಿಗರ ಹೆಣ್ಣುಮಕ್ಕಳ ತಕರಾರುಗಳನ್ನು ಇಂಥ ಶಿಕ್ಷಕರು ಕೇಳಿರಬಹುದಷ್ಟೇ!

ಚಂದ್ರನ ಸಂಬಂಧದಿಂದ ಬಿನ್ ಇಯತ್ತೆಯ ಬಾಲಕರಿಗೆ ಕಲಿಸಬೇಕಾದ ಸಂಗತಿಗಳು ಕೆಲವಿರುವವು. ಪ್ರತಿದಿನ ಚಂದ್ರನ ಆಕಾರ ಹೇಗಿರುವದು? ಅವನು ಯಾವ ದಿವಸಗಳಲ್ಲಿ ಸಾಯಂಕಾಲಕ್ಕೆ ಕಾಣಿಸುವನು? ಯಾವ ದಿವಸ ಕಾಣಿಸುವ ದಿಲ್ಲ? ಕೆಲವು ದಿವಸ ಸಾಯಂಕಾಲಕ್ಕೆ ಪೂರ್ವಕ್ಕಿರುವನು. ಕೆಲವು ದಿವಸ ಪಶ್ಚಿಮಕ್ಕಿರುವನು; ಮುಂತಾದ ಈ ಸಂಗತಿಗಳ ಕಡೆಗೆ ಬಾಲಕರ ಲಕ್ಷ್ಯವನ್ನೆಳೆಯ ಬೇಕು. ಇದರಲ್ಲಿ ಚಂದ್ರನ ಕಲೆಗಳ ವೃದ್ಧಿಕ್ಷಯದ ವಿಚಾರದಂಥ ಗಹನ ವಿಚಾರಗಳ ಚರ್ಚೆ ಕಾರಣವಿಲ್ಲ. ಚಂದ್ರನಿಗೂ ಸೂರ್ಯನಿಗೂ ಕೆಲವು ಮಾತುಗಳಲ್ಲಿ ಅಂತರವಿದೆ. ಹಗಲು ರಾತ್ರಿಗಳಲ್ಲಿ ಭೇದವೇನು? ಇವೇ ಮೊದಲಾದ ಅತಿ ಸ್ಥೂಲ ವಿಚಾರಗಳ ಕಡೆಗೆ ಬಾಲಕರ ಲಕ್ಷ್ಯವು ಹೋಗಬೇಕು; ತಮ್ಮ ಸುತ್ತಲಿನ ಸೃಷ್ಟಿಯ ಕಡೆಗೆ ಅವರು ಕಣ್ದೆರೆದು ನೋಡುವ ಚಟವನ್ನು ಕಲಯಬೇಕು, ಇದೇ ಈ ಮಾತುಗಳ ಮುಖ್ಯ ಉದ್ದೇಶ್ಯವಾಗಿದೆ.

ಇದೇಬಗೆಯಾಗಿ ಗಾಳಿ, ಮಳೆ, ಉಷ್ಣ, ಚಳಿ, ಮೋಡಮುಸುಕಿದ ಇಲ್ಲವೆ ನಿರ್ಮಲವಾದ ಆಕಾಶ ಇವುಗಳ ಕಡೆಗೂ ಬಾಲಕರೊಡನೆ ಸಂಭಾಷಣೆ ಮಾಡಿ ಅವರ ಲಕ್ಷ್ಯವನ್ನು ಎಳೆಯಬೇಕು. ಗಿಡಗಳು ಅಲ್ಲಾಡುವದು ಅಡಿಗೆಮನೆಯಿಂದ ಹೊರಟ ಹೊಗೆಯು ಗಾಳಿಗುಂಟ ಹರಿಯುವದು, ಮುಂತಾದವುಗಳಿಂದ ಗಾಳಿಯು ಬೀಸುವ ದಿಕ್ಕಿನ ಜ್ಞಾನಮಾಡಿಕೊಡಬೇಕು; ಊರ ನೆರೆಯಲ್ಲಿ ಗುಡ್ಡ ಏದ್ದರೆ ದೂರದಿಂದ ಅದರ ನೋಟವು ಹೇಗೆ ಕಾಣುವದೆಂಬದನ್ನು ಪ್ರತ್ಯಕ್ಷ ನೋಡಿದ ತರುವಾಯ ಚಿತ್ರತೆಗೆದು ಮಾದರಿ ಮಾಡಿ ಅದರ ಸಂಬಂಧದಿಂದ ಬಂದೆರಡು ಕಥೆ ಹೇಳಿ ಸಂಭಾಷಣೆಮಾಡಿಸಿ ಅವರಿಗೆ ಮನನಮಾಡಿಕೊಡಬೇಕು. ಇದೇರೀತಿಯಾಗಿ ಊರಬಳಿಯಲ್ಲಿರುವ ನದಿ, ಹಳ್ಳ, ಕೆರೆ, ಕಾಲುವೆ ಸಮುದ್ರದ

ನೆರೆಯ ಊರುಗಳಲ್ಲಿ ಸಮುದ್ರದ ನೀರಿನ ಏರಿಳಿತಗಳು, ಮಳೆಗಾಳಿಗಳ ಕಾಲದಲ್ಲಿ ಸಮುದ್ರದಲ್ಲಾಗುವ ಅಲ್ಲೋಲಕಲ್ಲೋಲಗಳು ಮುಂತಾದವುಗಳ ಕಡೆಗೆ (ಅವನ್ನು ಪ್ರತ್ಯಕ್ಷ ತೋರಿಸಿ–ಬರೇ ಮಾತಿನಿಂದಲ್ಲ) ಬಾಲಕರ ಲಕ್ಷ್ಯವನ್ನು ಎಳೆಯಬೇಕಾಗುವದು. ಪ್ರತ್ಯಕ್ಷ ನೋಡಿದಾಗ ಅವುಗಳ ಸಂಬಂಧದಿಂದ ಒಂದೆರಡುಮಾತುಗಳನ್ನು ಹುಡುಗರಿಗೆ ತಿಳಿಸಿಕೊಟ್ಟರೆ ಅವರು ಅವನ್ನು ಸಹಜವಾಗಿ ನೆನಪಿನಲ್ಲಿಟ್ಟುಕೊಳ್ಳುವರು. ಇದರಲ್ಲಿ ಅಂಥ ಗಹನ ವಿಚಾರವಾಗಲಿ, ತೊಂದರೆಯಾಗಲಿ ಏನೂ ಇರಲಾರದು. ಹೊಳೆಯಿರುವ, ಸಮುದ್ರವಿರುವ, ಸಾರ್ವಜನಿಕ ಕೆರೆಬಾವಿಗಳಿರುವ ಊರುಗಳಲ್ಲಿ ಆ ಊರ ಜನರು ಅವನ್ನು ಹೇಗೆ ಯಾವ ಯಾವ ಕೆಲಸಗಳಿಗೆ ಉಪಯೋಗಿಸಿಕೊಳ್ಳುವರೆಂಬುದನ್ನು ಕಲಿಸುವದು ಕಠಿಣವಾಗಲಾರದು. ಮಳೆಗಾಲ ಬೇಸಗೆಕಾಲಗಳಲ್ಲಿ ಈ ಜಲಾಶಯಗಳಲ್ಲಿ ಏನು ಹೆಚ್ಚುಕಡಿವೆಯಾಗುವದೆಂಬುದನ್ನು ಕಲಿಸುವದೂ ಕೂಡ ಶಿಕ್ಷಕರಿಗೆ ಯಾಕೆ ತೊಂದರೆ ಎನಿಸಬೇಕು? ನದಿ ಇದ್ದರೆ ಅದು ಹರಿಯುವ ದಿಕ್ಕನ್ನು ಬಾಲಕರು ಸಹಜವಾಗಿ ಕಂಡುಹಿಡಿಯಬಹುದು. ಮಳೆಗಾಲದಲ್ಲಿ ಮಳೆಯಿಂದ ಅವರ ಸುತ್ತಲಿನ ಪ್ರದೇಶದ ಮೇಲೆ ಏನು ಪರಿಣಾಮವಾಗುವದೆಂಬದನ್ನೂ ಮಳೆಯಿಂದ ಪೈರಿನ ಮೇಲೆ, ಗಿಡಗಳ ಮೇಲೆ, ತಮ್ಮ ಮನೆಗೆ ಹೊಂದಿದ ತೋಟದೊಳಗಿನ ಗಿಡಗಳ ಮೇಲೆ, ಏನು ಪರಿಣಾಮವಾಗುವದೆಂಬದನ್ನು ಬಾಲಕರೊಡನೆ ಮಾತಾಡಿ ಅವರಾಗಿಯೇ ಈ ಸಂಗತಿಗಳನ್ನು ಕಂಡುಹಿಡಿಯುವಂತೆ ಮಾಡುವದು ಎಷ್ಟು ಕಠಿಣವಾಗಬಹುದು ?

ನಮ್ಮ ಊರಲ್ಲಿ ನದಿಯಿಲ್ಲ, ಸಮುದ್ರವಿಲ್ಲ, ಗುಡ್ಡವೂ ಇಲ್ಲ; ಇಲ್ಲದಿದ್ದರೆ ಬಿಟ್ಟುಬಿಡಿರಿ. ನಿಮ್ಮ ಊರಿಗೆ ಬರಹೋಗುವ ಮಾರ್ಗವಾದರೂ ಇರುವದಲ್ಲವೇ? ಸಾಲೆಯ ಮುಂದಿನ ಮಾರ್ಗವು ಎಲ್ಲಿಂದ ಬಂದು ಎಲ್ಲಿಗೆ ಹೋಗುವದು? ಅದು ಯಾವದಿಕ್ಕಿನಿಂದ ಯಾವದಿಕ್ಕಿಗೆ ಹಬ್ಬಿದೆ? ಊರೊಳಗಿನ ಬೇರೆ ಬೇರೆ ಓಣಿಗಳಿಗೆ ಹೋಗುವ ಮಾರ್ಗಗಳಿಗೂ, ಮುಖ್ಯ ಮಾರ್ಗಕ್ಕೂ ಸಂಬಂಧವೇನು? ಈ ಮಾರ್ಗಗಳಲ್ಲಿ ಚಕ್ಕಡಿ, ಕುದುರೆಯಗಾಡಿ, ಮೋಟಾರಗಾಡಿ, ಮುಂತಾದ ವಾಹನಗಳು ಅಡ್ಡಾಡುವದಿಲ್ಲವೇ? ಅವುಗಳಲ್ಲಿ ಯಾವ ಯಾವ ಸಾಮಾನು ತುಂಬಿ ಊರಿಗೆ ತರುವರು. ಆ ಸಂಬಂಧದಿಂದಲೂ ಬಾಲಕರೊಡನೆ ಮಾತಾಡಿ ಅವರಿಗೆ ಈ ಮಾತುಗಳ ತಿಳವಳಿಕೆಮಾಡಿಕೊಡಬೇಕು. ಉಗಿಬಂಡಿಯ ಸ್ಟೇಶನು ಅಥವಾ ಉಗಿಹಡಗದ ಬಂದರ ಇವು ಇರುವ ದೊಡ್ಡ ಊರುಗಳಾಗಿದ್ದರೆ ಅಲ್ಲಿ ನಡೆಯುವ-ಜನರು ಹೋಗಿಬರುವ, ಸಾಮಾನುಗಳನ್ನು ಕಳಿಸುವ, ತರಿಸುವ, ಕೆಲಸಗಳ ಸಂಬಂಧದಿಂದಲೂ ಹುಡುಗರಿಗೆ ತಿಳವಳಿಕೆಮಾಡಿಕೊಡಬೇಕು. ಊರೊಳಗೆ ಹುಡುಗರು

ನೋಡಬಹುದಾದ ಬೇರೆ ಬೇರೆ ಪ್ರಕಾರದ ಜನರ ಸಂಬಂಧದಿಂದಲೂ ಅವರಿಗೆ ಹಲಕೆಲವು ಮಾತುಗಳನ್ನು ಹೇಳಬೇಕು. ಎಂದರೆ ಅವರ ವಿಶೇಷ ಪ್ರಕಾರದ ಉಡುಗೆತೊಡಿಗೆಗಳು ಮುಂತಾದವನ್ನು—ಸಾಧ್ಯವಾದರೆ ಮಾರವಾಡಿಗಳು, ಕುರಬರು, ಸಿಕ್ಕಲಗೇರರು, ಯುರೋಪಿಯನ್ನರು, ಪಠಾಣರು, ಬಡಿಗರು ಕಮ್ಮಾರರು ಉಪ್ಪಾರರು ಮುಂತಾದ ಸ್ಥಾನಿಕ ಉದ್ಯೋಗದವರು, ಮೊದಲಾದವರ ಹೆಸರುಗಳನ್ನು ಹೇಳಿ ಆಯಾ ಜನರನ್ನು ಗುರ್ತಿಸಲಿಕ್ಕೆ ಕಲಿಸಬೇಕು. ಬಾಲಕರ ವರ್ಗದ ಶಿಕ್ಷಕರು ತಾವು ನೋಡಿದ ಸಂಗತಿಗಳ ಮಾದರಿಗಳನ್ನು ರಚಿಸಲಿಕ್ಕೂ ಚಿತ್ರ ತೆಗೆಯಲಿಕ್ಕೂ ಬಲ್ಲವರಾಗಿದ್ದು ಇಂಥ ಮಾದರಿಗಳನ್ನು ರಚಿಸಲಿಕ್ಕೆ ಬಾಲಕರನ್ನು ಉತ್ತೇಜನಗೊಳಿಸಬೇಕು. ಒಂದು ಋತುಮಾನದ ಚಿತ್ರಮಯ ಕ್ಯಾಲೆಂಡರನ್ನು ಶಿಕ್ಷಕರು ತಯಾರಿಸಿ ಬಾಲಕರ ವರ್ಗದಲ್ಲಿ ಇಟ್ಟರೆ ಅದರ ನಿರೀಕ್ಷಣೆಯಿಂದ ಕೆಲಕಾಲದ ಮೇಲೆ ಬಾಲಕರು ಈ ಕ್ಯಾಲೆಂಡರಿನಲ್ಲಿ ಈಗ ಏನು ತೋರಿಸಬೇಕು ಎಂಬುದನ್ನು ಹೇಳುವಷ್ಟು ಜ್ಞಾನವನ್ನು ಪಡೆಯಬಹುದು.

ಒಟ್ಟಿಗೆ ಈ ವರ್ಗದ ಭೂಗೋಲದ ಪಾಠವು ಕೆಲವೊಂದು ವಿಷಯದ ನಿರ್ದಿಷ್ಟವಾದ ಭಾಗದ ನಿಯಮಿತ ಅಭ್ಯಾಸವಾಗಿರದೆ ಶಿಕ್ಷಕರು ಬಾಲಕರೊಡನೆ ಮಾತಾಡಿ ಅವರ ಸುತ್ತುಮುತ್ತಲಿನ ಸಂಗತಿಗಳ ಕಡೆಗೆ ಅವರ ಲಕ್ಷ್ಯವನ್ನು ಎಳೆದು, ಭೂಗೋಲಕ್ಕೂ ಪ್ರಕೃತಿವಿಮರ್ಶೆಗೂ ಸಂಬಂಧಿಸಿದ ಪ್ರಾಕೃತಿಕ ಸಂಗತಿಗಳನ್ನೂ ಜನಜೀವನಕ್ಕೆ ಸಂಬಂಧಿಸಿದ ಭೂಗೋಲದ ಮಾತುಗಳನ್ನೂ ಬಾಲಕರ ಮನವರಿಕೆಮಾಡಿಕೊಡುವದೇ ಈ ಅಭ್ಯಾಸದ ಮುಖ್ಯ ಉದ್ದೇಶ್ಯವಾಗಿರುವದೆಂಬದನ್ನು ಮರೆಯಕೂಡದು. ಭೂಗೋಲ ಪ್ರಕೃತಿವಿಮರ್ಶೆ ಇವು ಪರಸ್ಪರ ನಿಕಟಸಂಬಂಧವುಳ್ಳ ವಿಷಯಗಳು. ಮೇಲಿನ ವರ್ಗಗಳಿಗೆ ಹೋದರೆ ಶಾಸ್ತ್ರೀಯ ವಿಷಯವೂ ಇದರೊಡನೆ ಸಮಾವೇಶವಾಗುವದು.

N. V. K.

ಕರಿಯ ಹಲಗೆ

ಲೇ:— ಮೂ. ಅ. ಚಿಂತಾಮಣಿ, ೧೨ನೆಯ ವರುಷ ಏ. ಟ್ರೇ. ಕಾ. ಧಾರವಾಡ

ಕರೇಹಲಿಗೆಯು ಶಿಕ್ಷಣಕ್ಕೆ ಅತ್ಯುತ್ತಮ ಸಾಧನವು ಆದ್ದರಿಂದ ಇದು ಶಿಕ್ಷಣ ಕಾರ್ಯದಲ್ಲಿ ಶಿಕ್ಷಕನಿಗೆ ಒಬ್ಬ ಸಹಾಯಕ ಮಿತ್ರನಂತೆ ಇರುವದೆಂದರೂ ಸಲ್ಲುವದು. ಕಲಿಸುವಾಗ ಬರುವ ಮಹತ್ವದ ಸಂಗತಿಗಳನ್ನು ಕರೇಹಲಿಗೆಯ ಮೇಲೆ ತಕ್ಕ (ಯೋಗ್ಯ) ವೇಳೆಗೆ ಬರೆಯದಿದ್ದರೆ ಅವು ಬಾಲಕರ ಲಕ್ಷ್ಯದಲ್ಲಿ ಉಳಿಯಲಾರವು. ಇಂಥ ಮಹತ್ವದ ಮಾತುಗಳು ಉಳಿದ ಸಾಮಾನ್ಯ ಸಂಗತಿಗಳನ್ನಾಡುವ ಮಾತುಗಳೊಡನೆ ಕೂಡಿ– ಬೆಲೆಯಿಲ್ಲದೆ ಬೈಲಲ್ಲಿ ಒದರಿಕೊಂಡಂತೆ ಆಗುವದು. ಹುಡುಗತನದ ವಯಸ್ಸಿನಲ್ಲಿ ಚಟುವಟಿಕೆಯು ಹೆಚ್ಚಾಗಿರುವದರಿಂದ ಅವರು ಕೆಲಸವಿಲ್ಲದೆ ಎಂದೂ ಸುಮ್ಮನೆ ಇರಲಾರರು. ಆದುದರಿಂದ ಅವರ ಚಟುವಟಿಕೆಯನ್ನು ಸರಿಯಾಗಿ ಉಪಯೋಗಿಸಿಕೊಳ್ಳುವದಕ್ಕಾಗಿಯೂ ಅವರ ಲಕ್ಷ್ಯವನ್ನು ಶಿಕ್ಷಣದ ಕಡೆಗೆ ಎಳೆದುಕೊಳ್ಳುವದಕ್ಕಾಗಿಯೂ ಉಪಕರಣಗಳು, ತಕ್ಕ ಕಥೆಗಳು, ಮನೋಹರವಾದ ಮಾತುಗಾರಿಕೆ, ಇವೆಲ್ಲವುಗಳ ಅನಶ್ಯಕತೆ ಇದೆ. ಇವುಗಳಿಂದ ಅವರ ಅವಧಾನವು ಶಿಕ್ಷಣದ ಕಡೆಗೆ ಉಳಿಯುವದು. ಸರಿಯಾದ ಪದ್ಧತಿಯು ಶಿಕ್ಷಣಕಾರ್ಯದಿಂದ ಮಕ್ಕಳ ಜ್ಞಾನಾರ್ಜನೆಯ ಕೆಲಸವು ನಡೆದಾಗ ಮಹತ್ವದ ಸಂಗತಿಗಳನ್ನು ಕರೇಹಲಗೆಯ ಮೇಲೆ ಬರೆದಿಡಲು ಅವರಿಗೆ ನೆನಪಿಡಲಿಕ್ಕೂ ಪುನಃ ಪುನಃ ಆ ಮಾತುಗಳ ಕಡೆಗೆ ವಿಚಾರಮಾಡಲಿಕ್ಕೂ ಅನುಕೂಲವಾಗುವದು. ಪ್ರತ್ಯಕ್ಷ ಸಂಗತಿಗಳಿಗೆ ಶಿಕ್ಷಣದಲ್ಲಿ ಬೆಲೆಯಿರುವದು. ಅಪ್ರತ್ಯಕ್ಷವಾಗಿ ಉರುಳಿಹೋಗುವ ಶಿಕ್ಷಣದ ಬೆಲೆಯುಳ್ಳ ಮಾತುಗಳಿಗೆ ಕರೇಹಲಿಗೆಯು ಮೂರ್ತಸ್ವರೂಪಕೊಟ್ಟು ಎತ್ತಿಹಿಡಿದು ವಿದ್ಯಾರ್ಥಿಗಳೆದುರಿಗೆ ನಿಲ್ಲಿಸುವದೆಂದು ಹೇಳಬಹುದು. ನೆನಪಿಡತಕ್ಕ ಸಂಗತಿಗಳು ಬಹಳವಾದರೆ ವಿದ್ಯಾರ್ಥಿಗಳ ಬುದ್ಧಿಗೆ ಅವು ನಿಲುಕದೆ "ದ್ರಾಕ್ಷೆಯ ಗೊಂಚಲಗಳೂ, ನರಿಯೂ" ಎಂಬ ಪಾಠದ ಸಾರಾಂಶದಂತೆ ಶಿಕ್ಷಣದ ಸ್ಥಿತಿಯಾಗುವದು. ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಪಂಚೇಂದ್ರಿಯಗಳು ಸಾಧನವಾಗಿವೆ. ಶಿಕ್ಷಣಕಾರ್ಯದಲ್ಲಿ ಆದಷ್ಟು ಹೆಚ್ಚು ಇಂದ್ರಿಯಗಳ ಉಪಯೋಗವನ್ನು ಮಾಡಿಕೊಳ್ಳಬೇಕು. ಅದರಲ್ಲಿಯೂ "ಕಣ್ಣು" ಹೆಚ್ಚು ಉಪಯೋಗಕಾರಕವಾದದ್ದು. ಬಲ್ಲವರು ಜ್ಞಾನಕ್ಕೆ "ಕಣ್ಣು" ಎನ್ನುವರು. ಇದರಿಂದ ಈ ಅವಯವದ ಮಹತ್ವವು ತಾನಾಗಿ ತಿಳಿದುಬರುವದು.

ಕರೇಹಲಿಗೆಯು ಶಿಕ್ಷಣಕಾಲದಲ್ಲಿ ಕಣ್ಣಿನ ಕೆಲಸಕ್ಕೆ ಸಹಾಯಕವಾಗುವದರಿಂದ ಅದು ಕಣ್ಣಿನಂತೆ ಆಗಿರುವದೆಂದು ಹೇಳಬಹುದು. ಕರೇಹಲಿಗೆಯು ಶಿಕ್ಷಣ ಕಾರ್ಯದಲ್ಲಿ ಬೇರೆ ಬೇರೆ ವಿಷಯಗಳಿಗಾಗಿ ಹೇಗೆ ಹೇಗೆ ಉಪಯೋಗ ವಾಗುವದೆಂಬದನ್ನು ವಿಚಾರಿಸೋಣ:—

ಈ ವಿಚಾರಭರದಲ್ಲಿ ಕರೇಹಲಿಗೆಯು ಕೇವಲ ವಿದ್ಯಾರ್ಥಿಗಳಿಗೇ ಉಪಯೋಗ ವಾಗುವದೆಂದು ಮಾತ್ರ ತಿಳಿಯಬಾರದು. ಶಿಕ್ಷಕರಿಗೂ ಅವರ ಕಾರ್ಯದಲ್ಲಿ ಸರಿಯಾಗಿ ಮಿತ್ರನಂತೆ ನೆರವಾಗುವದೆಂಬ ಮಾತನ್ನು ಮರೆಯಕೂಡದು.

೧. **ಚಿತ್ರಕಲೆಯು ಪಾಠಗಳು:—** ಶಿಕ್ಷಣಕ್ಕೆ ಪ್ರತಿನಿತ್ಯ ಪ್ರತ್ಯಕ್ಷ ಸಂಗತಿಗಳು ದೊರಕಲಾರವು; ಅಂಥ ಸಂಗತಿಗಳ ಕೊರತೆಯನ್ನು ಕರೇಹಲಿಗೆಯ ಮೇಲೆ ತೆಗೆದ ಚಿತ್ರಗಳು ಪೂರ್ಣ ಮಾಡುವವು. ಚಿತ್ರಗಳು ಹುಡುಗರ ಜ್ಞಾನಾರ್ಜನೆಗೆ ಸಹಾಯಕವಾಗಿರುವದರಿಂದಲೂ ಹಸ್ತಶಿಕ್ಷಣಕ್ಕಾಗಿಯೂ ಚಿತ್ರಕಲೆಯನ್ನು ವಿದ್ಯಾರ್ಥಿಗಳ ಅಭ್ಯಾಸಕ್ರಮದಲ್ಲಿ ಸೇರಿಸಿರುವರು. ಇದನ್ನು ಸಹ ತಕ್ಕ ಪದ್ಧತಿಯಿಂದ ಕಲಿಸಬೇಕಾಗುವದು. ಮೊದಲು ಪದಾರ್ಥಗಳನ್ನು ಪ್ರತ್ಯಕ್ಷವಾಗಿ ನೋಡೋಣ, ಆ ಮೇಲೆ ಅದರ ಚಿತ್ರವನ್ನು ಕರೇಹಲಿಗೆಯ ಮೇಲೆ ತೆಗೆಯೋಣ. ಈ ಕ್ರಮದಿಂದ ವಿದ್ಯಾರ್ಥಿಗಳ ನಿರೀಕ್ಷಣಸಾಮರ್ಥ್ಯವನ್ನು ಬೆಳೆಯಿಸಿದಂತೆ ಆಗುವದು. ಚಿತ್ರತೆಗೆಯುವಾಗ ತಾನು ಮೊದಲು ಯಾವ ಸಂಗತಿಗಳನ್ನು ನೆಟ್ಟಗೆ ನೋಡಿಕೊಳ್ಳದ್ದರಿಂದ ಈಗ ಯಾವ ತೊಂದರೆಯು ಬಂದಿತೆಂಬದು ಅನುಭವಕ್ಕೆ ಬರುವದು. ಆಗ ಪದಾರ್ಥವನ್ನು ಮತ್ತೊಮ್ಮೆ ನೋಡುವ ಇಚ್ಛೆಯು ವಿದ್ಯಾರ್ಥಿಗಳಿಗೆ ಉದ್ಭವಿಸುವದು. ಈ ಕ್ರಮದಿಂದ ನೋಡಿದ ಪದಾರ್ಥವನ್ನು ಇದ್ದಂತೆಯೇ ಮತ್ತೊಮ್ಮೆ ತೆಗೆಯುವಂತೆ ಯಾವ ರೀತಿಯಾಗಿ ಹ್ಯಾಗೆ ಒಮ್ಮೆಲೆ ನಿರೀಕ್ಷಣೆಮಾಡಬೇಕೆಂಬ ಜ್ಞಾನವು ವಿದ್ಯಾರ್ಥಿ ಗಳಿಗೆ ತಿಳಿಯುವದು. ಆದುದರಿಂದ ನಿರೀಕ್ಷಣಕ್ರಮದ ಜ್ಞಾನಕ್ಕೆ ಕರೇಹಲಿಗೆಯು ಸಹಾಯಮಾಡುವದು. ಯಾವದೊಂದು ಪದಾರ್ಥದ ಚಿತ್ರತೆಗೆಯುವಾಗ ಅದರೊಳಗಿನ ಉಬ್ಬು ತೆಗ್ಗುಗಳನ್ನು ಸಹ ತೋರಿಸಬೇಕಾಗುವದು. ಅದರ ಗುರುತಿಗಾಗಿ ತೀರ ಕಪ್ಪು, ಸಾಧಾರಣ ಕಪ್ಪು ಇತ್ಯಾದಿ ಸಂಗತಿಗಳು ಭೂಮಿತಿ ಪಾಠದ ಸಜ್ಞೆಗಳಂತೆ ಚಿತ್ರಕಲಾ ಪಾಠದಲ್ಲಿ ಉಪಯೋಗಬೀಳುವವು. ಮೊದಲು ಸಾಮಾನ್ಯ ಆಕಾರಜ್ಞಾನ ಬರಬರುತ್ತ ಅದರೊಳಗಿನ ಸೂಕ್ಷ್ಮವಿಚಾರಗಳ ಜ್ಞಾನ ಇತ್ಯಾದಿಗಳಂತೆ ಪಾಠಕಲಿಸಿ ಅದನ್ನು ಪೂರ್ಣಮಾಡಬೇಕಾಗುವದು. ಚಿತ್ರಪಾಠ ಗಳಲ್ಲಿ ಮಾತುಗಾರಿಕೆಯು ಉಪಯೋಗದ್ದಲ್ಲ. ಕೇವಲ ನಿರೀಕ್ಷಣೆಯಿಂದಲೇ

ಕೈಯಿಂದ ತಾನು ಮೂಕನಂತೆ ಕೆಲಸಮಾಡಬೇಕಾಗುವದು. ಇಂಥ ಕಾಲಕ್ಕೆ ಕರೇಹಲಿಗೆಯ ಬರೆಹದಿಂದಲೇ ಜ್ಞಾನಮಾಡಿಕೊಡಬೇಕಾಗುವದು. ಆಗ ಕರೇ ಹಲಿಗೆಯೇ ವಿದ್ಯಾರ್ಥಿಗಳನ್ನು ಮಾತಾಡಿಸುವದೆಂದರೂ ಸಲ್ಲುವದು.

ಚಿತ್ರಕಲಾಪಾಠ ಶಿಕ್ಷಣ ನಡೆದಾಗ ಶಿಕ್ಷಕನು ಆಗಿಂದಾಗಲೇ ಕರೇಹಲಿಗೆಯ ಮೇಲೆ ತೆಗೆದು ತೋರಿಸುವದು ನೆಟ್ಟಗೆ. ಮೊದಲೇ ಮನೆಯಲ್ಲಿ ತೆಗೆದಿಟ್ಟ ಚಿತ್ರಪಟ ಗಳಿಗಿಂತ ಆಗಲೇ ತೆಗೆದ ಚಿತ್ರಗಳು ಹೆಚ್ಚಿಗೆ ಉಪಯೋಗಬೀಳುವವು. ಯಾಕಂದರೆ ಆಗಾಗ ಬರುವ ಮನಸ್ಸಿನೊಳಗಿನ ವಿಚಾರಗಳಿಗೂ ಕಲ್ಪನೆಗಳಿಗೂ ಅನುಸರಿಸಿ ಶಿಕ್ಷಕನ ಕೈಗಳು ಕೆಲಸಮಾಡುತ್ತಿರುವದು ವಿದ್ಯಾರ್ಥಿಗಳಿಗೆ ಆಗಾಗ ಗೊತ್ತಾಗು ತ್ತಿರುವದು. ಈ ಬಗೆಯ ಪಾಠವು ನಡೆದಾಗ ಏಕೀಕರಣ ಪೃಥಕ್ಕರಣ ರೀತಿಗಳ ಸಹಾಯವಾಗುವದು. ಮಾಸ್‌ಡ್ರಾಯಿಂಗ ಎಂಬದು ಏಕೀಕರಣ ಪದ್ಧತಿಯು. ಚಿಕ್ಕಮಕ್ಕಳಿಗೆ ಇದು ಬಲು ಉಪಯೋಗ. ಒಮ್ಮೆಲೆ ಬಣ್ಣದಿಂದ ಸ್ಥೂಲವಾದ ಆಕೃತಿ ತೆಗೆದು ಬಳಿಕ ತಮ್ಮ ಕೌಶಲ್ಯಕ್ಕೆ ತಕ್ಕಂತೆ ಅದರೊಳಗಿನ ಭಾಗಗಳನ್ನು ಬೇಕಾಬಷ್ಟು (ಇಯತ್ತೆಗಳಿಗನುಸರಿಸಿ) ಪೂರ್ಣಮಾಡಿಕೊಳ್ಳಲಿಕ್ಕೆ ಬರುತ್ತದೆ. ಆ ಮೇಲೆ ತಾವು ಪ್ರತ್ಯಕ್ಷ ವಸ್ತುವಿಗೆ ಒರೆಹಚ್ಚಿ ನೋಡಲು ಉಪಯೋಗ ವಾಗುವದು. ಒಮ್ಮೊಮ್ಮೆ ಪ್ರತ್ಯಕ್ಷ ವಸ್ತುಗಳು ದೊರೆಯದಿದ್ದಾಗ ಶಿಕ್ಷಕನು ತಾನು ಮೊದಲೇ ತೆಗೆದಿಟ್ಟ ಚಿತ್ರವನ್ನು ತೋರಿಸಿ ವರ್ಣಿಸಿ ಬಳಿಕ ತೆಗೆಯಲು ಹಚ್ಚಬೇಕಾಗುವದು. ಇದು ಪೃಥಕ್ಕರಣ ಪದ್ಧತಿಯ ಶಿಕ್ಷಣವಾಗುವದು. ಇವೆಲ್ಲ ಸಂಗತಿಗಳಿಗಾಗಿ ಕರೇ ಹಲಿಗೆಯು ಒಳ್ಳೆಯ ಉಪಯೋಗಬೀಳುವದು.

೨. **ಅಂಕಗಣಿತ:—** ಮಾದರಿಯ ಉದಾಹರಣೆಗಳನ್ನು ಬಿಡಿಸಿ ವರ್ಗಕ್ಕೆ ತೋರಿಸಲಿಕ್ಕೆ ಕರೇಹಲಿಗೆಯ ಉಪಯೋಗವು ಅಷ್ಟಿಷ್ಟೆಂದು ಹೇಳಲಾಸಲ್ಲ. ಬರಿ ಬಾಯಿಂದ ಬಿಡಿಸುವ ರೀತಿಯನ್ನು ಹೇಳಿದರೆ ಉಪಯೋಗ ಬೀಳಲಾರದು. ಕರೇಹಲಿಗೆಯ ಮೇಲಿನ ಬರೆಹವು ಬಾಯಿಂದ ಉದ್ದವಾಗಿ ಹೇಳುವದರ ಸಂಕ್ಷಿಪ್ತ ಕೃತಿಯಾಗಿರುವದು. ಅಂಕಗಣಿತ ಪಾಠಗಳಲ್ಲಿ ಕೃತಿಗೆ ಹೆಚ್ಚು ಬೆಲೆಯಿರುವದು. ಅಂಕಗಣಿತ ಬರೆಹದ ಪದ್ಧತಿಯ ತಕ್ಕ ಜ್ಞಾನವು (ತಕ್ಕ ಸಂಜ್ಞೆ ಚಿಹ್ನ ಇತ್ಯಾದಿ) ಸರಿಯಾಗಿ ಆಗಲಿಕ್ಕೆ ಬರೆದುತೋರಿಸುವಂಥ ಉತ್ತಮ ಸಾಧನವು ಬೇರೊಂದಿಲ್ಲ. ಬರೆಹದಲ್ಲಿ ಸ್ವಚ್ಛತೆಯೂ ಅಚ್ಚುಕಟ್ಟುತನವೂ ಒಡೆದುತೋರುತ್ತಿರಬೇಕು. ಕರೇ ಹಲಿಗೆಯ ಮೇಲೆ ಬರೆದ ಸಂಕ್ಷಿಪ್ತ ಕೃತಿಗಳನ್ನು ನೋಡಿ ವಿವರವಾಗಿ ಓದಲಿಕ್ಕೆ ವಿದ್ಯಾರ್ಥಿಗಳು ಶಕ್ತರಾಗುವಂತೆ ಶಿಕ್ಷಕನ ಯತ್ನವಿರಬೇಕು. ಪ್ರಾ. ಶಾ. ವಿದ್ಯಾರ್ಥಿಗಳಿಗೆ ಅಂಕಗಣಿತದ ಕೃತಿಗಳನ್ನು ಅಚ್ಚುಕಟ್ಟಾಗಿ ಬರೆಯಲಿಕ್ಕೆ ಬರುವ

ದಿಲ್ಲೆಂದು ಪರೀಕ್ಷಕರ ಆಕ್ಷೇಪವಿರುವದು. ಇದಕ್ಕೆ ಪ್ರಾ. ಶಾಲೆಗಳಲ್ಲಿ ಕರೇ ಹಲಿಗೆಯ ಉಪಯೋಗದ ಅಭಾವವೇ ಹೆಚ್ಚಾಗಿ ಕಾರಣವಾಗಿದೆಯೆಂದು ತಿಳಿದು ಬರುವದು.

೩. **ವಾಚನ ಪಾಠಗಳು:—** ವಾಚನ ಪಾಠಗಳನ್ನು ಓದುವದಕ್ಕೆ ವಿದ್ಯಾರ್ಥಿಗಳಿಗೆ ಈಗಲೂ ಚನ್ನಾಗಿ ಎಲ್ಲೆಡೆಯಲ್ಲಿಯೂ ಬರುತ್ತಿರುವದಿಲ್ಲ. ಮೊದಲು ಮೊದಲು ಕಲಿಸುವಾಗ ವಾಚನಪಾಠಗಳ ಸಂಗತಿಗಳಲ್ಲಿ ಕೆಲವು ಪ್ಯಾರಾಗಳನ್ನಾದರೂ ಕರೇಹಲಿಗೆಯಮೇಲೆ ಎದ್ದುಕಾಣುವಂತೆ ಬರೆದು ಓದಿಸ ಬೇಕು. ವಿರಾಮಚಿಹ್ನಗಳಿಗೆ ತಕ್ಕಂತೆ ನಿಲ್ಲಲು ತೋರಿಸಬೇಕು. ಆಘಾತ ಶಬ್ದಗಳಿದ್ದರೆ ಹಾಗು ಕೂಡಿಸಿ ಓದತಕ್ಕ ಶಬ್ದಗಳ ಸಾಲು ಇದ್ದರೆ ಕೆಳಗೆ ಗೆರೆ ಹೊಡೆದು ತೋರಿಸಲಿಕ್ಕೆ ಕರೇ ಹಲಿಗೆಯು ಒಳ್ಳೇ ಉಪಯೋಗಬೀಳುವದು. ವಾಚನ ಪುಸ್ತಕದಲ್ಲಿ ಈ ಅನುಕೂಲತೆಯು ಇರಲಾರದು.

ಕಠಿಣ ಶಬ್ದಗಳ ಉಚ್ಚಾರಕ್ಕಾಗಿ ಪ್ರತ್ಯೇಕವಾಗಿ ಅದನ್ನು ಕರೇಹಲಿಗೆಯ ಮೇಲೆ ಬರೆದು ತಾನು ಉಚ್ಚರಿಸಿ ಅದರಂತೆ ಉಚ್ಚರಿಸಲಿಕ್ಕೆ ಹಚ್ಚಬೇಕಾಗುವದು. ಋ,ರ,ಶ,ಷ,ಸ,ವಿಸರ್ಗ, ಅನುಸ್ವಾರ ಇಂಥ ಅಕ್ಷರಗಳು ಸಮಾವೇಶವಾದ ಶಬ್ದಗಳ ಉಚ್ಚಾರವು ಪ್ರಾ. ಶಾಲೆಗಳಲ್ಲಿ ಇಡೀ ವರ್ಗಕ್ಕೆ ಸರಿಯಾಗಿ ಬರುತ್ತಿರುವದಿಲ್ಲೆಂದು ಆಕ್ಷೇಪವಿರುವದು. ಚಿಕ್ಕವಯಸ್ಸಿನಲ್ಲಿಯೇ ಓದುವ ತಕ್ಕ ಪದ್ಧತಿಗಳೂ ಬರೆಹದ ಕ್ರಮವೂ ತಕ್ಕ ಉಚ್ಚಾರಣೆಯೂ ನೆಲೆಗೊಂಡರೆ ಮುಂದೆ ಸುಲಭವಾಗುವದು. ಮೊದಲೇ ಚಲೋ ಚಟಗಳು, (ಉಚ್ಚಾರ, ಬರೆಹ, ಚಿಹ್ನಗಳ ಸದುಪಯೋಗ) ನೆಲೆಗೊಳ್ಳದೆ ವ್ಯುತ್ಕ್ರಮ ಪದ್ಧತಿಗಳು ನೆಲೆಗೊಂಡರೆ ಮುಂದೆ ಅವನ್ನು ಬಿಡಿಸಲು ಬಲು ಶ್ರಮವಾಗುವದು. ವಿಷಯಜ್ಞಾನಕ್ಕಾಗಿ ವಾಚನಪಾಠದ ಒಟ್ಟು ವಿಷಯದ ಮುಖ್ಯ ಭಾಗಗಳನ್ನೂ ಕರೇಹಲಿಗೆಯಮೇಲೆ ಬರೆದು ಒಂದೊಂದು ಭಾಗದ ವಿಷಯವಾಗಿ ಕೇಳಿಕೊಳ್ಳಬೇಕು.

ಕಠಿಣ ಶಬ್ದಗಳನ್ನಾಗಲಿ, ವಿವರಣ ಶಬ್ದಗಳನ್ನಾಗಲಿ, ಕರೇಹಲಿಗೆಯಮೇಲೆ ಬರೆದು ಅವನ್ನು ವಾಕ್ಯಗಳಲ್ಲಿ ಉಪಯೋಗಿಸಲು ಅನುಕೂಲವಾಗುವದು. ಹೀಗೆ ವಾಚನ ಪಾಠಗಳಲ್ಲಿ ಕರೇಹಲಿಗೆಯ ಉಪಯೋಗವು ಸರಿಯಾಗಿ ಆದರೆ ವಾಚನ ಪುಸ್ತಕದಲ್ಲಿ ಗೀಟು, ಗೆರೆ, ಅರ್ಥ ಬರೆಹ, ಮುಂತಾದವುಗಳನ್ನು ಬರೆಯುವ ಕೆಟ್ಟ ಪರಿಪಾಠವು ತಪ್ಪುವದು. ಎಷ್ಟೋ ಹುಡುಗರ ಪುಸ್ತಕಗಳಲ್ಲಿ ಈ ತರದ ಬರೆಹ ಗಳು ಕಂಡುಬರುವವು. ಇದು ಕೆಟ್ಟ ಪದ್ಧತಿಯು. ಇದನ್ನು ತಪ್ಪಿಸಲಿಕ್ಕೆ ಬೇಕು.

೪. **ಭೂಗೋಲ:—** ಇತಿಹಾಸ ಪಾಠಗಳಲ್ಲಿ ಸಹ ನಕಾಶಗಳನ್ನು ಕರೇ ಹಲಿಗೆಯ ಮೇಲೆ ಪಾಠಕ್ಕೆ ತಕ್ಕಂತೆ ಅಷ್ಟಷ್ಟೇ ಮಾಹಿತಿಯುಳ್ಳ ನಕಾಶಗಳನ್ನು

ತೆಗೆಯಬೇಕಾಗುವದು. ಯಾಕಂದರೆ ವರ್ಗಕ್ಕಾಗಿ ಕೊಟ್ಟ ಅಚ್ಚುಹಾಕಿದ ನಕಾಶಗಳಲ್ಲಿ ಎಲ್ಲ ಸಂಗತಿಗಳು ಕೂಡಿ ಗಲಿಬಿಲಿಯಾಗಿರುತ್ತವೆ. ಮಹತ್ವದ ಸಂಗತಿಗಳ ಶಿರೋಲೇಖವನ್ನು ಕರೇಹಲಿಗೆಯಮೇಲೆ ಬರೆದು ವಿವರಿಸಲು ಅನುಕೂಲವಾಗುವದು. ಉದಾ:– ಪ್ರಾಕೃತಿಕ ಸ್ವರೂಪ, ಮೇರೆ, ನದಿಗಳು, ಪರ್ವತಗಳು, ಬೆಳೆಗಳ ಗುರುತಿಗಾಗಿ ಆಯಾ ಪೈರುಗಳ ಚಿತ್ರ, ಇತ್ಯಾದಿಗಳ ಉಪಯೋಗ ಮಾಡಿಕೊಳ್ಳಲು ಬರುವದು. ಪ್ರಾಣಿಗಳ ಚಿತ್ರಗಳನ್ನು ತೋರಿಸಲು ಉಪಯೋಗವಾಗುವದು. ಇದರಿಂದ ಪಾಠವು ದೃಢವಾಗುವದು. ಕರೇಹಲಿಗೆಯಮೇಲಿನ ಬರೆಹವು ಒಟ್ಟು ಪಾಠದ ಟಿಪ್ಪಣಿಯಾಗಿರಬೇಕು. ಕಲಿಸುವಾಗ ಹೀಗೆ ಸಿದ್ಧತೆ ಮಾಡಿದರೆ ಉಪಸಂಹಾರ ಕಾಲಕ್ಕೆ ಪರೀಕ್ಷೆಯ ಪ್ರಶ್ನೆಗಳನ್ನು ಕೇಳಿಕೊಳ್ಳಲು ಅನುಕೂಲವಾಗಿ ಪಾಠಜ್ಞಾನವು ದೃಢವಾಗುವದು. ಪ್ರತಿನಿತ್ಯದಲ್ಲಿ ನಡೆಯುವ ಕರೇಹಲಿಗೆಯ ಬರೆಹದಲ್ಲಿ ಮಹತ್ವವಾದವುಗಳನ್ನು ಪಟದಮೇಲೆ ಬರೆದು ವರ್ಗದಲ್ಲಿ ತೂಗಹಾಕಿದರೆ ವರ್ಷದ ಒಟ್ಟು ಅಭ್ಯಾಸವನ್ನು ದೃಢಪಡಿಸಲು ಬೇಕಾದಾಗ ಅನುಕೂಲವಾಗುವದು. ಕರೇಹಲಿಗೆಯಮೇಲಿನ ಬರೆಹದಲ್ಲಿ ಮಹತ್ವದ ವಿಷಯದ ಸೂಚನೆಗಾಗಿ ಬಣ್ಣದ ಖಡುವಿನಿಂದ ಗೆರೆಹೊಡೆಯಲು ಅನುಕೂಲವಾಗುವದು.

೫. **ಶಾಸ್ತ್ರೀಯ ವಿಷಯದ ಪಾಠಗಳು:—** ಶಾಸ್ತ್ರೀಯ ಪಾಠಗಳಲ್ಲಿ ಎಲ್ಲ ಕಡೆಯಲ್ಲಿಯೂ ಪ್ರಯೋಗಕ್ಕಾಗಿ ಉಪಕರಣ (ಮಾಡೆಲ್)ಗಳು ದೊರೆಯುವದು ವಿರಲ. ಅಂಥ ಪಾದರಿಗಳ ಚಿತ್ರಗಳನ್ನು ಶಿಕ್ಷಕನು ಕರೇಹಲಿಗೆಯ ಮೇಲೆ ಬರೆದು ವಿವರಿಸಬೇಕು. ಇದರಿಂದ ಪ್ರತ್ಯಕ್ಷ ಪ್ರಯೋಗದಿಂದ ಆದ ಜ್ಞಾನಕ್ಕೆ ಸರಿಯಾದ ತಿಳುವಳಿಕೆ ಆಗದಿದ್ದರೂ ಬರಿ ವಾಚನದಿಂದ ಇಲ್ಲವೆ ಕೇವಲ ವರ್ಣನೆಯಿಂದ ಆದ ಜ್ಞಾನಕ್ಕಿಂತ ಎಷ್ಟೋ ಹೆಚ್ಚಾಗಿ ವಿಷಯಜ್ಞಾನವಾಗುವದು ನಿಜ. ಶಿಕ್ಷಕನು ಕರೇಹಲಿಗೆಯಮೇಲೆ ಟಿಪ್ಪಣಿಯನ್ನು ಬರೆಯುವಾಗ ತಾನು ಮೊದಲು ತಕ್ಕಂತೆ ವಿಷಯ ಜ್ಞಾನಮಾಡಿಕೊಳ್ಳಬೇಕಾಗುವದು. ಹಾಗೂ ಹೆಚ್ಚು ವಿಚಾರ ಮಾಡಬೇಕಾಗುವದು. ಆದುದರಿಂದ ಕರೇಹಲಿಗೆಯ ಉಪಯೋಗವು ಶಿಕ್ಷಕನಿಗೂ ಆಗುವದು. ಕರೇಹಲಿಗೆಯಮೇಲೆ ಬರೆದ ಸಂಕ್ಷಿಪ್ತ ಟಿಪ್ಪಣಿಗಳು ಸರಪಳಿಯ ಕೊಂಡಿಗಳಂತೆ ಕ್ರಮಬದ್ಧವಾಗಿರಬೇಕು. ಮತ್ತು ವ್ಯಾಕರಣಶಾಸ್ತ್ರದ ಸೂತ್ರಗಳಂತೆ ಸಂಕ್ಷಿಪ್ತವಾಗಿರಬೇಕು.

೬. ಮೇಲೆ ಹೇಳಿದ ವಿಷಯಗಳಲ್ಲದೆ ಇನ್ನೂ ಹೆಚ್ಚಾದ ವಿಷಯಗಳಿಗೆ ಸಹ ಕರೇಹಲಿಗೆಯ ಅವಶ್ಯವಿದೆ. ಶಾಲಾಪಾಠಗಳಲ್ಲಿ ಅಡಕವಾಗಿರುವ ಪ್ರತಿಯೊಂದು ವಿಷಯದಲ್ಲಿಯೂ ಕರೇಹಲಿಗೆಯು ಉಪಯೋಗ ಬೀಳುವದು. ಕರೇಹಲಿಗೆಯಮೇಲೆ ಬಿಳೇ ಖಡುವಿನಿಂದ ಬರೆಯುವ ರೂಢಿಯು, ವರ್ಗಕ್ಕೆಲ್ಲ

ಚನ್ನಾಗಿಎದ್ದುಕಾಣುವದಕ್ಕಾಗಿ ಉಪಯೋಗಿಸುವದು ವಾಡಿಕೆಯಾಗಿದೆ. ಕೆಲಕೆಲವು ವಿಶೇಷ ಪ್ರಸಂಗಗಳಲ್ಲಿ ಬಣ್ಣದ ಖಡುಗಳ ಉಪಯೋಗವಾಗುವದೆಂದು ಮೇಲೆ ವಿವರಿಸಿದೆ. ಕೇವಲ ಚೆಂದಕ್ಕಾಗಿ ಅಕ್ಷರಗಳನ್ನು ಬೇರೆ ಬೇರೆ ಬಣ್ಣಗಳಿಂದ ಬರೆದರೆ ಹುಡುಗರು ನೋಡುತ್ತ ನಿಲ್ಲುವರು. ಕಣ್ಣಿಗೂ ತೊಡಕು ತೊಡಕು ಆಗುವದು. ಹೀಗೆ ಮಾತ್ರ ದಯವಾಡಿ ಬರೆಯಬಾರದು. ಕರೇ ಹಲಿಗೆಯನ್ನು ಒರಿಸಲಿಕ್ಕೆ ಶುಭ್ರವಾದ ಅರಿವೆಯೂ ಇರಬೇಕು. ಅದನ್ನು ತಕ್ಕಪದ್ಧತಿಯಿಂದ ಅಲ್ಲಿ ಕಟ್ಟಿರಬೇಕು.

ಕರೇಹಲಿಗೆಯ ಬಗ್ಗೆ ನೆನಪಿಡತಕ್ಕ ಕೆಲವು ಸಂಗತಿಗಳು

೧. ವರ್ಗಕ್ಕೆಲ್ಲ ಕರೇಹಲಿಗೆಯ ಮೇಲಿನ ಬರೆಹವು ಒಡೆದುಕಾಣುವಂತೆ ಅದು ತಕ್ಕಷ್ಟು ಎತ್ತರವಾಗಿರಬೇಕು.

೨. ಕರೇಹಲಿಗೆಯ ಮೇಲೆ ಜಿನಗು ಅಕ್ಷರಗಳನ್ನು ಬರೆಯಬಾರದು. ಅದರಿಂದ ಹುಡುಗರ ಕಣ್ಣಿಗೆ ತೊಂದರೆಯಾಗುವದು. ಹುಡುಗರ ಕಣ್ಣಿಗೆ ಆಯಾಸ ವಾಗದಂತೆ ತಕ್ಕಷ್ಟು ಕಪ್ಪು ಸವರಿದ ಹಲಿಗೆಯಮೇಲೆ ತಕ್ಕಷ್ಟು ಗಾತ್ರವುಳ್ಳ ಅಕ್ಷರಗಳನ್ನು ಬಿಳಿಯ ಖಡುವಿನಿಂದ ಬರೆದಿರಬೇಕು.

೩. ಕೇವಲ ಮಹತ್ವದ ಸಂಗತಿಗಳನ್ನಷ್ಟೇ ಬರೆದಿರಬೇಕು. ಅಂದರೆ ನೆನಪಿಡಲು ವಿದ್ಯಾರ್ಥಿಗಳಿಗೆ ಅನುಕೂಲವಾಗುವದು.

೪. ಕರೇಹಲಿಗೆಯಮೇಲೆ ಏನನ್ನಾದರೂ ಬರೆಯುವಾಗ ಶಿಕ್ಷಕನು ವರ್ಗದ ಕಡೆಗೆ ಬೆನ್ನುಮಾಡಿ ಸುಮ್ಮನೆ ಉದ್ದಕ್ಕೆ ಬರೆಯುತ್ತ ನಿಂತರೆ ವರ್ಗದ ವಿದ್ಯಾರ್ಥಿಗಳ ಅವಧಾನವು ಬೇರೆಕಡೆಗೆ ಹೋಗಿ ವರ್ಗದಲ್ಲಿ ಗೊಂದಲವೇಳುವದು. ಇಂಥ ಪ್ರಸಂಗಗಳಲ್ಲಿ ಆ ಬರೆಹಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ಕೇಳುತ್ತ ಚಟುವಟಿಕೆಯಿಂದ ಬರೆಯುತ್ತಿರಬೇಕು.

೫. ಅಶುದ್ಧ ಬರೆವಣಿಗೆಯನ್ನಾಗಲಿ, ಅಶುದ್ಧ ವಾಕ್ಯಗಳನ್ನಾಗಲಿ, ಕರೇಹಲಿಗೆಯ ಮೇಲೆ ಬರೆಯಬಾರದು. ಯಾಕಂದರೆ- ಅಲ್ಲಿ ಬರೆದದ್ದು ವಿದ್ಯಾರ್ಥಿಗಳ ದೃಷ್ಟಿಪಥದಲ್ಲಿ ದೃಢವಾಗುವದು. ಶುದ್ಧರೂಪದ ಶಬ್ದಗಳೂ ಶುದ್ಧ ವಾಕ್ಯಗಳೂ ಮಾತ್ರ ಅಲ್ಲಿ ಬರೆಯಲ್ಪಡಬೇಕು.

ಉದಾಹರಣಾರ್ಥವಾಗಿ:—ಲೆಕ್ಕಣಿಕೆಯಿಂದ, ದೃಷ್ಟಿ, ಅಂತಃಕರಣ, ಇಂಥ ತಪ್ಪು ಶಬ್ದಗಳನ್ನು ತಿದ್ದತಕ್ಕದ್ದಿದ್ದರೆ ದೃಷ್ಟಿ, ಅಂತಃಕರಣ ಇಷ್ಟೇ ಶಬ್ದಗಳನ್ನು ಬರೆದರೆ ಸಾಕು. ಹುಡುಗರು ಬರೆದ ತಪ್ಪು ಶಬ್ದಗಳ ಪುನರಾವರ್ತನ ಮಾಡಿ ಬರೆಯುವ ಕಾರಣವಿಲ್ಲ.

೬. ಕರೇಹಲಿಗೆಯ ಮೇಲಿನ ಬರೆಹವು ತುಸು ವೇಳೆಯಲ್ಲಿ ಬರೆಯುತಕ್ಕ ವ್ಯಾಗಿರುವದರಿಂದ ನಕಾಶವಾಗಲಿ, ಬರೆಹವಾಗಲಿ ಅಂದಗೇಡಿಯಾಗಬಾರದು. ಇಲ್ಲವೆ ತಿಳಿಯಲಿಕ್ಕೆ ತೊಂದರೆಯಾಗುವಂತೆ ಗಿಜಿಬಿಜಿಯಾಗಿರಬಾರದು.

೭. ವರ್ಗದಲ್ಲಿ ಕೆಲವು ಹುಡುಗರಿಗೆ ದೃಷ್ಟಿದೋಷವಿರುವದು. ಅಂಥವರನ್ನು ವರ್ಷದ ಆರಂಭದಲ್ಲಿ ಕಂಡುಹಿಡಿದು ಅಂಥವರನ್ನು ಕರೇಹಲಿಗೆಯ ಹತ್ತರ ಕುಳ್ಳಿರಿಸುವಂತೆ ವ್ಯವಸ್ಥೆಮಾಡಬೇಕು. ಸಮೀಪ ದೃಷ್ಟಿಯಿದ್ದವರನ್ನು ಹತ್ತಿರದಲ್ಲಿಯೂ ದೂರದೃಷ್ಟಿಯಿದ್ದವರನ್ನು ದೂರದಲ್ಲಿಯೂ ಕುಳ್ಳಿರಿಸಬೇಕು. ಕೆಲವು ಹುಡುಗರ ಕಣ್ಣುಗಳಲ್ಲಿ ದೂರದಲ್ಲಿದ್ದದ್ದನ್ನು ಓದುವಾಗ ಕಣ್ಣಿನಿಂದ ನೀರು ಸುರಿಯುತ್ತಿರುತ್ತವೆ. ಅಂಥವರಿದ್ದರೆ ಅವರ ಪಾಲಕರಿಗೆ ತಿಳಿಸಿ ತಕ್ಕ ಔಷಧ ಉಪಚಾರ ಮಾಡಿಸಬೇಕು.

೮. ಕೆಲಕೆಲವು ಶಾಲೆಗಳಲ್ಲಿ ಬಿಸಿಲು ಒಳಗೆ ಬರುತ್ತಿರುತ್ತದೆ. ಕರೇಹಲಿಗೆಯ ಮೇಲೆ ನಿಚ್ಚಳವಾದ ಬೆಳಕು ಮಾತ್ರ ಬೀಳಬೇಕೇ ಹೊರತು ಬಿಸಿಲು ಬೀಳಬಾರದು. ಹಾಗೆ ಬಿಸಿಲು ಬಿದ್ದರೆ ವಿದ್ಯಾರ್ಥಿಗಳ ಕಣ್ಣು ಕುಕ್ಕುತ್ತವೆ. ಅದರಿಂದ ಕಣ್ಣಿಗೆ ತೊಂದರೆಯು ಆಗುವದು.

ಕೆಲಕೆಲವು ಸಣ್ಣ ಶಾಲೆಗಳಲ್ಲಿ ಕರೇಹಲಿಗೆಯ ಮೇಲೆ ಆತು ಕೂಡುವದರಿಂದಾಗಲಿ ಅಥವಾ ನೆಲದ ಮೇಲಿಟ್ಟು ಮೇಲೆ ಕೂಡುವದರಿಂದಾಗಲಿ ಅದು ಸಾಪಾಗಿ ವಿುಂಜುತ್ತಿರುತ್ತದೆ. ಅಂಥ ಕರೇಹಲಿಗೆಗಳ ಮೇಲೆ ಖಡುವಿನಿಂದ ಒತ್ತಿ ಬರೆದರೂ ಮೂಡುವದಿಲ್ಲ.

ಅಂಥ ಶಾಲೆಗಳ ವಿದ್ಯಾರ್ಥಿಗಳಿಗೆ ಬರೆಹದ ರೂಢಿ ಇಲ್ಲದ್ದರಿಂದಲೇ ಸಣ್ಣ ಅಕ್ಷರಗಳನ್ನು ಕರೇಹಲಿಗೆಯ ಮೇಲೆ ಬರೆಯುವರು. ಶಿಕ್ಷಣವು ಸುಧಾರಿಸುತ್ತ ನಡೆದಿರುವ ಈ ಕಾಲದಲ್ಲಿ ಬರೆಹಕ್ಕಾಗಲಿ ನಕಾಶ ಚಿತ್ರಗಳನ್ನು ತೆಗೆಯುವದಕ್ಕಾಗಲಿ ಕರೇಹಲಿಗೆಗಳೂ ಕಪ್ಪುಕಟ್ಟಿನ ಬೋರ್ಡುಗಳೂ ಶಾಲೆಯಲ್ಲಿ ಹೇರಳವಾಗಿ ಬೇಕು. ಶಾಲೆಯ ಗೋಡೆಗಳಿಗೆ ತಿಳಿಯಗಚ್ಚು ಹಚ್ಚಿ ಕಪ್ಪುಬಣ್ಣ ಸವರಿದರೆ ಇಡೀ ವರ್ಗಕ್ಕೆ ಚಿತ್ರತೆಗೆಯುವದಕ್ಕಾಗಲಿ, ಬರೆಯುವದಕ್ಕಾಗಲಿ, ಅನಕೂಲವಾಗುವದು. ಇಂಥ ಹೆಚ್ಚಿನ ವೆಚ್ಚಕ್ಕೆ ಶಿಕ್ಷಕನು ಗ್ರಾಮನಿವಾಸಿಗಳ ಸಂಬುಗೆ ಪಡೆದು ಅವರಿಂದ ಶಾಲೆಗೆ ದ್ರವ್ಯಸಹಾಯವನ್ನು ದೊರಕಿಸಿಕೊಳ್ಳಬೇಕು.

ಪ್ರಾಯ್ಮರಿಸ್ಕೂಲ ಲೀವ್ವಿಂಗ್ ಸರ್ಟಿಫೀಕೇಟಪರೀಕ್ಷೆ ೧೯೩೯

ಲೇ—ಜಿ. ಎಮ್. ಸಾತೇನಹಳ್ಳಿ ಅಸಿ. ಮೂ. ಪ್ರಾ. ಸ್ಕೂ. ಧಾರವಾಡ.

ಕಳೆದ ಸಂಚಿಕೆಯಲ್ಲಿ ೧೯೩೯ನೆಯ ಇಸವಿಯಲ್ಲಿ ಆಗುವ ಪ್ರಾ. ಸ್ಕೂ. ಲಿ. ಸರ್ಟಿಫಿಕೇಟ ಪರೀಕ್ಷೆಯ ಭಾಷಾವಿಷಯದೊಳಗಿನ ಪದ್ಯಭಾಗದ ವಿಷಯವಾಗಿ ಆಲೋಚಿಸಿ ಅದರಲ್ಲಿ ಒನೆಯ ಇಯತ್ತೆಯ ವಿದ್ಯಾರ್ಥಿಗಳು ಕವಿತಾಪಾಠಗಳನ್ನು ಹ್ಯಾಗೆ ಅಭ್ಯಾಸಮಾಡಿಕೊಳ್ಳಬೇಕೆಂಬದನ್ನು ವಿವರಿಸಿದೆ. ಈ ಸಾರೆ ಗದ್ಯಭಾಗದ ವಿಷಯವಾಗಿ ಬರೆದಿದೆ.

ಗದ್ಯಭಾಗಕ್ಕಾಗಿ ಅಭ್ಯಾಸಪತ್ರಿಕೆಯಲ್ಲಿ ಏನು ಹೇಳಿರುವರೆಂಬದನ್ನು ನೋಡೋಣ.

ಗದ್ಯ :— (ಅ) ವಿದ್ಯಾರ್ಥಿಗಳು ಓದದೆ ಇರುವ ಗದ್ಯಭಾಗವನ್ನು ತಿರುಗಿ ತಮ್ಮ ಭಾಷೆಯಲ್ಲಿ ಹೇಳುವದು, ವಿಸ್ತರಿಸಿ ಹೇಳುವದು. ಸಂಕ್ಷೇಪಿಸಿ ಹೇಳುವದು ಮುಂತಾದವು. ಶಬ್ದಗಳ ಅರ್ಥವನ್ನು ಹೇಳುವದು. (ಕ್ರಮಿಕ ಒನೆಯ ಪುಸ್ತಕದ ಯೋಗ್ಯತೆಯಷ್ಟು) ಗದ್ಯ ಪದ್ಯ—ಗುಣಗಳು—೭೫

(ಬ) **ವ್ಯಾಕರಣ**— (ವ್ಯಾಕರಣದ ಜ್ಞಾನವನ್ನು ಉಪಯೋಗಿಸುವದು ಮತ್ತು ಕಂಡು ಹಿಡಿಯುವದು. ಮತ್ತು ಸಾಮಾನ್ಯ ವ್ಯಾಕರಣ ಜ್ಞಾನ) ಶಬ್ದಗಳ ವ್ಯುತ್ಪತ್ತಿ ಮು. ಗುಣಗಳು ೨೫.

ಒಟ್ಟಿಗೆ ಭಾಷಾ ವಿಷಯದ ಪ್ರಶ್ನ ಕಾಗದಕ್ಕೆ ೧೦೦ ಗುಣಗಳಿದ್ದು ಸಾಸಾಗಲಿಕ್ಕೆ ಕನಿಷ್ಠ ಪಕ್ಷಕ್ಕೆ ೪೦ ಗುಣಗಳನ್ನು ದೊರಕಿಸಲಿಕ್ಕೆಬೇಕು.

ಗದ್ಯಭಾಗವನ್ನು ಓದಿದೊಡನೆಯೆ ಮೊದಲಿಗೆ ಅದರಲ್ಲಿ ಅಡಕವಾದ ವಿಷಯದ ಜ್ಞಾನವಾಗಲಿಕ್ಕೆಬೇಕು. ಗದ್ಯಭಾಗವನ್ನು ಕೊಟ್ಟು ತಿರುಗಿ ಸ್ವಭಾಷೆಯಲ್ಲಿ ಬರೆಯಲಿಕ್ಕೆ ಹೇಳುವರು. ಇಲ್ಲವೆ ವಿಷಯಜ್ಞಾನದ ಪರೀಕ್ಷೆಗಾಗಿ ಆ ಗದ್ಯದ ಭಾಗದ ಬಗ್ಗೆ ತಕ್ಕ ಪ್ರಶ್ನಗಳನ್ನು ಕೇಳುವರು. ಆದುದರಿಂದ ಗದ್ಯದ ಭಾಗಗಳನ್ನು ಓದುವಾಗ ವಿಷಯಜ್ಞಾನಮಾಡಿಕೊಳ್ಳುವದು ಮೊದಲನೆಯ ಭಾಗವೆಂದು ತಿಳಿದಿರುವೆವು. ಅದಕ್ಕಾಗಿ ಪ್ರಶ್ನಗಳನ್ನೂ ಉತ್ತರಗಳನ್ನೂ ಕೇವಲ ದಿಗ್ದರ್ಶನಕ್ಕಾಗಿ ಮಾತ್ರ ಇಲ್ಲಿ ಕೊಡುವೆವು.

ಪ್ರಶ್ನ ೧. ಕೆಳಗಿನ ಗದ್ಯ ಭಾಗವನ್ನು ಓದಿ ಸ್ವಭಾಷೆಯಲ್ಲಿ ಬರೆಯಿರಿ.

ಈ ಲಕ್ಷ್ಮಿಯ ಕುಟಿಲತನವನ್ನು ಎಷ್ಟು ವರ್ಣಿಸಿದರೂ ತೀರದು. ಸ್ವಾಮಿ, ಇಂದು ಐಶ್ವರ್ಯದ ಶಿಖರಕ್ಕೆ ಏರಿಸಿದ ಮನುಷ್ಯನನ್ನು ನಾಳಿಗೆ ತೊಲಗಿ ಆತನನ್ನು ಮಣ್ಣು ಪಾಲು ಮಾಡುತ್ತಾಳೆ. ಇಂಥ ದುಷ್ಟ ಲಕ್ಷ್ಮಿಯ ಗಾಳಿ ಒಮ್ಮೆ ಮೈ ಸೋಂಕಿತೆಂದರೆ, ಸಾಕು; ಆ ಮನುಷ್ಯನು ವಿದ್ವಾಂಸನಿರಲಿ, ಜಾಣನಿರಲಿ, ಪರಾಕ್ರಮಿ ಇರಲಿ, ಕುಲೀನನಿರಲಿ, ಸುಶೀಲನಿರಲಿ, ಎಂಥವನಿದ್ದಾಗ್ಯೂ ಅವನ ಗುಣಗಳನ್ನು ಲೋಪಮಾಡಿ ಅವನಿಗೆ ವಿಪರೀತಬುದ್ಧಿಯನ್ನು ಹುಟ್ಟಿಸಿ, ಅವನನ್ನು ನಿಜವಾದ ಸುಖಕ್ಕೆ ಎರವು ಮಾಡುತ್ತಾಳೆ. ಈ ರಾಜ್ಯಲಕ್ಷ್ಮಿಯ ಅಭಿಷೇಕ ದಿಂದಲೇ ಅರಸರ ಸೌಜನ್ಯವು ತೊಳೆದುಹೋಗುವದು. ಆಗಿನ ಹೋಮಾಗ್ನಿಯ ಹೊಗೆಯಿಂದ ಅವರ ನಿರ್ಮಲವಾದ ಹೃದಯವು ಮಲಿನವಾಗುವದು. ಪುರೋ ಹಿತನು ದರ್ಭೆಯಿಂದ ಸಂಪ್ರೋಕ್ಷಣ ಮಾಡಿದ ಕೂಡಲೆ ಅರಸರ ಕ್ಷಮಾಗುಣವು ಲಯವಾಗುವದು. ತಲೆಯ ಮೇಲೆ ಕಿರೀಟ ಬಂದ ಕೂಡಲೆ ಮುಪ್ಪಿನಿಂದ ತಲೆ ಬೆಳ್ಳಗಾಗುವದನ್ನು ಮರೆಯುತ್ತಾರೆ. ಛತ್ರ ಹಿಡಿಸಿಕೊಂಡಾಗಲೆ ಅವರಿಗೆ ಪರಲೋಕವು ಮರೆಯಾಗುವದು. ಚಾಮರದಗಾಳಿಗೆ ಅವರ ಸತ್ಯಶೀಲತ್ವವು ಹಾರಿಹೋಗುವದು. ಜೋಪದಾರರ ಕೈಯೊಳಗಿನ ವೇತ್ರದಂಡದಿಂದ ಅರಸರ ಔದಾರ್ಯಾದಿ ಗುಣಗಳು ಅಡಗುವವು. ಭಟ್ಟಂಗಿಗಳ ಜಯಜಯಕಾರ ಶಬ್ದ ಗಳೊಳಗೆ ಅವರು ಸಾಧು ಜನರ ಕಥೆಗಳಿಗೆ ಕಿವಿಗೊಡುವದಿಲ್ಲ. ಇಷ್ಟೇ ಅಲ್ಲ, ಅವರು ಎಲ್ಲ ದುರ್ಗುಣಗಳಿಗೆ ತವರುನೆಲೆಯಾಗುವರು. ಜೂಜಾಡುವದೇ ವಿನೋದವೆಂದೂ ವ್ಯಭಿಚಾರುಮಾಡುವದೇ ಚತುರತನವೆಂದೂ ಬೇಟೆಯಾಡು ವದೇ ಶರೀರಕ್ಕೆ ಪರಿಶ್ರಮವೆಂದೂ ಮದ್ಯಪಾನವೇ ತಕ್ಕ ವಿಲಾಸವೆಂದೂ ಗುರು ಹಿರಿಯರ ಉಪದೇಶವನ್ನು ಅಲ್ಲಗಳೆಯುವದೇ ಸ್ವಾತಂತ್ರ್ಯವೆಂದೂ ಅರಸರು ತಿಳಿಯುವರು.

ಗ್ರಂಥಪರಿಚಯ— ಇದು ಕಾದಂಬರಿ ಕಥೆಯಲ್ಲಿ ಶುಕನಾಸಮಂತ್ರಿಯು ರಾಜಕುಮಾರ ಚಂದ್ರಾಪೀಡನಿಗೆ ಮಾಡಿದ ಉಪದೇಶವು—

ಲಕ್ಷ್ಮಿಯ ಚಂಚಲತನದ ವರ್ಣನೆ—

ಅರಸರ ಹತ್ತಿರ ಲಕ್ಷ್ಮಿಯು ನೆಲಸಿರುವಳು. ಆದುದರಿಂದ ಸಹವಾಸ ಬಲದಿಂದ ಲಕ್ಷ್ಮಿಯ ದುರ್ಗುಣಗಳೆಲ್ಲ ಅರಸರನ್ನು ಅಂಟಿಕೊಳ್ಳುತ್ತವೆ. ಅವುಗಳ ಯೋಗದಿಂದ ಅರಸರು ಎಚ್ಚರದಪ್ಪಿ ನಡೆದು ಹೀನದಶೆ ಹೊಂದಿ ಮಣ್ಣುಪಾಲಾಗು ವರು. ಮನುಷ್ಯರಿಗೆ ಐಶ್ವರ್ಯವು ದೊರಕುತ್ತಲೆ ಉನ್ಮತ್ತರಾಗಲು ಚಲೋ

ಗುಣಗಳೆಲ್ಲ ಲಯಹೊಂದಿ ಕೆಟ್ಟ ಕೆಲಸಗಳನ್ನು ಮಾಡಿ ದುಷ್ಕರ್ಮಗಳ ಯೋಗದಿಂದ ದುಃಖಕ್ಕೆ ಪಾತ್ರರಾಗುವರು. ರಾಜ್ಯಾಭಿಷೇಕವಾಗುವಾಗಲೆ ಆ ಜಲದಿಂದ ಅವರ ಸೌಜನ್ಯವು ತೊಳೆದು ಹೋಯಿತೋ ಏನೋ ಎನ್ನುವಂತೆ ದುಷ್ಟರಾಗಿ ಬಿಡುವರು. ಹೋಮಧೂಮದಿಂದ ಅವರ ಸ್ವಚ್ಛವಾದ ಮನವು ಕಪ್ಪಾಯಿತೋ ಏನೋ ಎನ್ನುವಂತೆ ಅವರು ಕಲುಷಿತ (ಪಾಪಮಯ) ಮನಸ್ಸಿನವರಾಗುವರು. ಆ ಕಾಲದಲ್ಲಿ ಪುರೋಹಿತರು ಮಂತ್ರಜಲದಿಂದ ಚಿಮುಕಿಸಿದ ಕೂಡಲೆ ಕ್ಷವಾಗುಣವು ಮಾಯವಾಗಿ ಹೋಗುವದು. ಕಿರೀಟವು ತಲೆಯನ್ನಲಂಕರಿಸಿದ ಕೂಡಲೆ ನಾನು ಇದ್ದಂತೆಯೇ ಇರುವೆನೆಂದು ಭಾವಿಸಿ ದೂರದರ್ಶಿತ್ವವನ್ನು ಮರೆತು ಹುಡುಗತನದಿಂದ ಕಡೆಗೂ ನಡೆಯುತ್ತಾರೆ. ಛತ್ರವು ಮೇಲೆ ಬಂದೊಡನೆಯೇ ಪಾಪ-ಪುಣ್ಯಗಳ ಮೀರವಾಗಿ ಕಾರ್ಯಾಕಾರ್ಯಗಳ ವಿಚಾರವು ತಪ್ಪಿಹೋಗುವದು. ಚಾಮರದ ಗಾಳಿಯಿಂದ ಅವರ ಸತ್ವ ಶೀಲಗಳು ಹಾರಿ ಹೋಗುವವು. ಭಟ್ಟಂಗಿಗಳ ಸ್ತುತಿ ಶ್ರವಣದಿಂದ ಅಹಂಕಾರ ಮಮಕಾರಗಳು ಕಿವಿಯಲ್ಲಿ ಗಡಚಿಕ್ಕಲು ಗುರುಹಿರಿಯರ ಹಿತದ ಮಾತುಗಳು ಕೇಳಿಸದಂತಾಗುವವು. ಅರಸೊತ್ತಿಗೆಯ ಆರಂಭದ ಸಂಸ್ಕಾರಗಳಾದ ಅಭಿಷೇಕ, ಹೋಮಸಂಸ್ಕಾರ, ಛತ್ರ, ಚಾಮರ, ಭಟ್ಟಂಗಿಗಳ ಹೊಗಳೋಣ ಇತ್ಯಾದಿಗಳಿಂದ ಕ್ರಮವಾಗಿ ಎಲ್ಲ ಗುಣಗಳು ಇಲ್ಲದಂತಾಗಿ ಕಡೆಗೆ ಅವರು ದುರ್ಗುಣಗಳ ಆಗರವಾಗುತ್ತಾರೆ. ವಿನೋದಗಳ ವೇಳೆಯಲ್ಲಿ ಜೂಜಾಡುವದು, ವ್ಯಭಿಚಾರ, ಬೇಟೆಯಾಡೋಣ, ಮದ್ಯಪಾನ ಮಾಡೋಣ ಇತ್ಯಾದಿಗಳೇ ತಮ್ಮ ಕೆಲಸಗಳೆಂದು ಭಾವಿಸುವದರಿಂದ ಲೋಕೋಪದ್ರವಿಗಳಾಗುವರು. ಸ್ವೈರವೃತ್ತಿಯೇ ಸ್ವಾತಂತ್ರ್ಯವೆಂದು ಭಾವಿಸುವರು.

ಮೇಲಿನ ೧ನೆಯ ಪ್ರಶ್ನೆಯ ಗದ್ಯಭಾಗವನ್ನು ಚೆನ್ನಾಗಿ ಓದಿರಿ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕೊಡಿರಿ.

೧. ರಾಜ್ಯಾಭಿಷೇಕದ ಅಂಗಗಳು ಯಾವವು?

೨. ಅಧಿಕಾರ, ಧನ ಇವುಗಳ ಯೋಗದಿಂದ ಮನುಷ್ಯನ ಸ್ಥಿತಿಯು ಹೇಗಾಗುವದು.

೩. ಔದಾರ್ಯ, ಸೌಜನ್ಯ, ಚತುರತನ, ಪರಿಶ್ರಮ ಇವುಗಳ ವ್ಯುತ್ಪತ್ತಿಯನ್ನು ಬರೆಯಿರಿ—

೪. ಕೆಳಗಿನ ವಾಕ್ಯಗಳನ್ನು ಯೋಗ್ಯ ಶಬ್ದಗಳಿಂದ ಪೂರ್ತಿಗೊಳಿಸಿರಿ

ಅರಸರಿಗೆ ಜೂಜಾಡುವದೇ .....ಆಗಿರುವದು.

ಅರಸರು.....ಸ್ವಾತಂತ್ರ್ಯವೆಂದು ತಿಳಿಯುವರು.

ಚಾಮರದ ಗಾಳಿಯು ಅರಸರ ..... ಹಾರಿಸಿ ಬಿಡುವದು.

೫. ಮೇಲಿನ ಗದ್ಯಭಾಗದಲ್ಲಿ ಬಂದ ಪರಿಶ್ರಮ, ವಿಲಾಸ, ಅಭಿಷೇಕ, ಸ್ವಾತಂತ್ರ್ಯ, ಸಂಪ್ರೋಕ್ಷಣ ಈ ಶಬ್ದಗಳನ್ನು ಉಪಯೋಗಿಸಿ ಬೇರೆ ವಾಕ್ಯಗಳನ್ನು ರಚಿಸಿರಿ.

ವಿದ್ಯಾರ್ಥಿಗಳಿಗೆ ದಿಗ್ದರ್ಶನಾರ್ಥವಾಗಿ ಇವುಗಳಿಗೆ ಕ್ರಮವಾಗಿ ಉತ್ತರ ಬರೆದು ತೋರಿಸಿರುವೆವು.

೧. ಸಮುದ್ರೋದಕದಿಂದಲೂ ಗಂಗಾನದಿಯ ಮಹಾಜಲದಿಂದಲೂ ಅಖಿಲೌಷಧಿ ರಸಗಳಿಂದಲೂ ಕ್ರಮವಾಗಿ ವೇದಘೋಷದೊಂದಿಗೆ ಸಶಾಸ್ತ್ರವಾಗಿ ಅರಸರಿಗೆ ಅಭಿಷೇಕ ಮಾಡುವರು. ಆ ಮೇಲೆ ಕುಲಪುರೋಹಿತರು ಕಿರೀಟವನ್ನು ಇಡಿಸುವರು. ಅರಸರು ಧರಿಸತಕ್ಕ ದಂಡಾದಿಗಳಿಂದಲೂ ಛತ್ರ ಚಾಮರಾದಿ ಗಳಿಂದಲೂ ತಕ್ಕ ಆಭರಣಗಳಿಂದಲೂ ಅವರನ್ನು ಅಲಂಕರಿಸುವರು. ಗಾಯನ ನರ್ತನಗಳಿಂದ ಅರಸರನ್ನು ಸಂತೋಷಗೊಳಿಸುವರು. ಆಮೇಲೆ ಮಿತ್ರರಾಜರಿಗೂ ಅಧಿಕಾರಿಗಳಿಗೂ ಅಖಿಲ ಪ್ರಜೆಗಳಿಗೂ ಯಾಚಕರಿಗೂ ಭೋಜನ, ಬಿರುದು, ದಾನಗಳಿಂದ ತೃಪ್ತಿಪಡಿಸುವರು. ಇತ್ಯಾದಿ.

೨. ಮನುಷ್ಯರಿಗೆ ಅಧಿಕಾರ, ಧನ ಇವು ಪ್ರಾಪ್ತವಾದೊಡನೆಯೆ ಉನ್ಮತ್ತರಾಗುವರು. ಎಚ್ಚರದಪ್ಪಿ ನಡೆಯುವದರಿಂದ ಅವರ ನಡೆ-ನುಡಿಗಳಲ್ಲಿ ದುಷ್ಟತನವು ತೋರಿಬರುವದು. ಧನವು ಇಂದ್ರಿಯಸುಖಗಳಿಗೆ ಮೂಲಕಾರಣ ವಾಗುವದರಿಂದ ಭೋಗಗಳನ್ನು ಮನಬಂದಂತೆ ಸೇವಿಸಲು ಕಾರ್ಯಾಕಾರ್ಯಗಳ ವಿಚಾರವು ತಪ್ಪಿ ಪಾಪದ ಕೆಲಸಗಳನ್ನು ಸಹಜವಾಗಿ ಮಾಡುವರು. ಪರಂಪರೆ ಯಿಂದ ಪ್ರಾಪ್ತವಾದ ಧರ್ಮಬೋಧಕವಾದ ಪುರಾಣ-ಪುಣ್ಯಕಥೆಗಳನ್ನು ಅಲ್ಲಗಳೆಯುವರು. ಜೂಜು, ಮದ್ಯಪಾನ, ವ್ಯಭಿಚಾರ, ಇತ್ಯಾದಿಗಳಿಗೆ ಇಂಬು ಗೊಡುವರು. ಒಟ್ಟಿಗೆ ಲೋಕೋಪದ್ರವಿಗಳಾಗಿ ಹೀನದಶೆ ಹೊಂದುವರು.

೩. ಉದಾರ+ಯ (ಭಾವಪ್ರತ್ಯಯ) ತದ್ಧಿತ ಭಾವನಾಮ. ಅರ್ಥ ದಾನವಾಡುವ ಗುಣ. ಚತುರ (ನಾಮ) + ತನ ತದ್ಧಿತಪ್ರತ್ಯಯ ಚತುರತನ (ತದ್ಧಿತನಾಮ) ಅರ್ಥ ಜಾಣನಲ್ಲಿರತಕ್ಕ ಗುಣ, ಪರಿಶ್ರಮ ಪರಿ (ಉಪಸರ್ಗ)+ ಶ್ರಮ್ (ಧಾ.)

೪. (ಅ) ಅರಸರಿಗೆ ಜೂಜಾಡುವದೇ ವಿನೋದವಾಗಿರುವದು.

(ಬ) ಅರಸರು ತಮ್ಮ ಮನಬಂದಂತೆ ನಡೆಯುವದನ್ನೇ ಸ್ವಾತಂತ್ರ್ಯ ವೆಂದು ತಿಳಿಯುವದು.

(ಕ) ಚಾಮರದ ಗಾಳಿಗೆ ಅರಸರ ಸತ್ಯಶೀಲವು ಹಾರಿಹೋಗುವದು.

೫. (ಅ) ವಿದ್ಯಾರ್ಥಿಗಳು ಶಾಲಾವಿಷಯಗಳಲ್ಲಿ ತಕ್ಕ ಪರಿಶ್ರಮ ಮಾಡಬೇಕು.

(ಬ) ಶೂದ್ರಕನು ಪ್ರಜಾಹಿತದ ಕಾರ್ಯಗಳಲ್ಲಿ ಮುಗ್ನನಾದ್ದರಿಂದ ವಿಲಾಸಗಳನ್ನು ಮರೆತಿದ್ದನು.

(ಕ) ಅರ್ಚಕರು ಪ್ರತಿದಿನ ಕರ್ಪೂರಾಗರುಯುಕ್ತ ಜಲಗಳಿಂದ ದೇವರನ್ನು ಅಭಿಷೇಕಮಾಡುವರು.

(ಡ) ಮನಸ್ಸಿಗೆ ಬಂದಂತೆ ನಡೆಯೋಣವು ಸ್ವಾತಂತ್ರ್ಯವೆನಿಸದು.

(ಇ) ದಿವ್ಯ ತೀರ್ಥಗಳ ಜಲಗಳ ಸಂಪ್ರೋಕ್ಷಣದಿಂದ ಮನುಷ್ಯರ ಪಾಪಗಳೂ ಪೀಡೆಗಳೂ ಅಡಗುವವು.

ವಿಸ್ತರಿಸಿ ಹೇಳುವದು— 'ಸತ್ಯಕಥಾಲಾಪ' ದಿಂದ ಉದ್ಧೃತವಾದದ್ದು.

ಸಿಕಂದರ ಬಾದಶಹನಿಗೆ ಒಬ್ಬ ಸನ್ಯಾಸಿಯು "ನೀನು ಯಾವದನ್ನು ಕೊಡಲಾರೆಯೋ ಅದನ್ನು ಅಪಹರಿಸಬೇಡ." ಎಂದು ಉಪದೇಶಿಸಿದನು.

ಈ ವಾಕ್ಯವನ್ನು ಅರ್ಥವಾಗುವಂತೆ ವಿವರಿಸಿ ಬರೆಯಿರಿ.

ಉತ್ತರ— ಅರಸನೇ ನೀನು ಪ್ರಾಣಿಗಳಿಗೆ ಪ್ರಾಣವನ್ನು ಕೊಡಲಾರೆ. ಆದುದರಿಂದ ಪ್ರಾಣಿಗಳ–ಮನುಷ್ಯರ–ಪ್ರಾಣವನ್ನು ಅಪಹರಿಸಬೇಡ. ಕೊಲೆ ಮಾಡುವದರಲ್ಲಿ ಪೌರುಷವಿಲ್ಲ. ಆದುದರಿಂದ ಇನ್ನುಮುಂದೆ ಹೀಗೆ ಮಾಡಬೇಡ. ನೀನು ಯುದ್ಧಗಳಲ್ಲಿ ಲಕ್ಷಾವಧಿ ಜನರ ಪ್ರಾಣಗಳನ್ನು ಅಪಹರಿಸಬೇಡ, ಎಂದು ಉಪದೇಶಿಸಿ ಕಳುಹಿದನು.

ರೂಢಿಗಾಗಿ ಈ ಮಾದರಿಯ ಕೆಳಗೆ ತೋರಿಸಿದ ವಾಕ್ಯಗಳನ್ನು ಭಾವವು ತಿಳಿಯುವಂತೆ ವಿವರಿಸಿ ಬರೆಯಿರಿ.

ಶ್ರೀ. ಪಂಡಿತ ಪೂಜಾರರು ೭ನೆಯ ಇ. ಯ ವಿ. ಗಳಿಗಾಗಿ ಹೊಸದಾಗಿ ಪ್ರಕಟವಾದ ವಾಚನಪಾಠಮಾಲೆಯೊಳಗಿನ 'ವೇಣೀಸಂಹಾರ' ಈ ಪಾಠದೊಳಗಿನವು.

೧. **ಕರ್ಣ—** (ನಕ್ಕು) ದ್ರೋಣಪುತ್ರನೇ, ಆಡುವದು ಸುಲಭ; ಮಾಡುವದು ಕಷ್ಟ ಕಂಡೆಯಾ?

೨. (ಒಂದೇ ಗತಿ ಎಂಬ ಪಾಠ) ಹಂಸ— ಎಲೈ ನೂರೊಂದು ಗತಿಯು ಮುಂದಮತಿಯೇ ಎಲೈ ಎಂಜಲ ಆಗುಳಿಗೆ ಲಾಗ ಹಾಕುವ ಬಾಯ್ಬಡಕಾ, ಎಲೈ

ಪಿಂಡದಕೂಳಿಗೆ ಅಂಡಲೆಯುವ ಹೇಡೀ ಯಾಕೆ ನನಗಿಂತ ಹಿಂದುಳಿದೆ? ಎಂದು ಕಾಗೆಗೆ ಹಂಗಿಸಿತು.

೩. (ಜಗತ್ತಿನೊಳಗಣ ಎಲ್ಲಕ್ಕೂ ಹೆಚ್ಚಿನ ಆಶ್ಚರ್ಯವು ಎಂಬ ಪಾಠ) ಶರೀರವೆಂಬ ಪ್ರತ್ಯಕ್ಷ ದೇವಾಲಯದ ರಕ್ಷಣೆಯ ಕಡೆಗೆ ಲಕ್ಷ್ಯಗೊಡದಿರುವದು ಅತ್ಯಂತ ದುಃಖದ ಸಂಗತಿಯು.

೪. ಸಂಕ್ಷೇಪಿಸಿ ಬರೆಯುವದು—(ಅದೇ ಪುಸ್ತಕ- ಪದ್ಮಿನಿ- ಪಾಠ ೫)

ಜೋಹಾರವು ರಜಪೂತರ ಕೊನೆಯ ವ್ರತವು. ಅವರು ಹಗೆಗಳಿಂದ ಪರಾಜಿತರಾಗಿ, ಅವರ ಸ್ತ್ರೀಯರ ಶೀಲಧರ್ಮಮರ್ಯಾದೆಗಳು ಶತ್ರುಗಳ ಸ್ವಾಧೀನವಾಗಿ ಹೋಗುವ ಪ್ರಸಂಗವು ಒದಗಿದರೆ ಅವರು ಈ ವ್ರತವನ್ನು ಸ್ವೀಕರಿಸುವರು. ವ್ರತಸಮಾಪ್ತಿಯ ದಿವಸ ರಜಪೂತ ಸೈನಿಕರು ಕೇಶರವರ್ಣದ ವಸ್ತ್ರಗಳನ್ನು ಧರಿಸಿ ಅಫೀಮು ಮುಂತಾದ ಮಾದಕದ್ರವ್ಯಗಳನ್ನು ಯಥೇಚ್ಛವಾಗಿ ಸೇವಿಸಿ ಉನ್ಮತ್ತರಾಗಿ ಒರೆಗಳೆದ ಖಡ್ಗಗಳನ್ನೂ ಭಾಲೆ ಬರ್ಚಿ ಮುಂತಾದ ಆಯುಧಗಳನ್ನೂ ಧರಿಸಿ ಒಮ್ಮಿಂದೊಮ್ಮೆ ದುರ್ಗದ ಬಾಗಿಲನ್ನು ತೆರೆದು ಶತ್ರುಗಳ ಮೇಲೆ ಬಿದ್ದು ಮೈಯಲ್ಲಿ ಪ್ರಾಣವಿರುವವರೆಗೂ ಶತ್ರುಗಳನ್ನು ತುಂಡುಗಡಿದು ಕೊನೆಗೆ ಆ ರಣರಂಗದಲ್ಲಿಯೇ ತಾವೂ ಹತರಾಗುವರು. ಅದೇಕಾಲಕ್ಕೆ ದುರ್ಗದ ಒಳಗಡೆಗೆ ಶ್ರೀಗಂಧ ಚಂದನ ಮುಂತಾದ ಸುಗಂಧದ ಕಟ್ಟಿಗೆಗಳನ್ನು ರಾಶಿರಾಶಿಯಾಗಿ ಒಟ್ಟಿ ಅದರ ಮೇಲೆ ಧೂಪ ಕರ್ಪೂರ ಮೊದಲಾದ ಸುಗಂಧದ್ರವ್ಯಗಳನ್ನು ಹರಿವಿ ಉರಿಯನ್ನು ಹೊತ್ತಿಸುವರು. ಬಳಿಕ ರಾಜಕುಲವಧುಗಳೂ ಇತರ ಸ್ತ್ರೀಯರೂ ಸ್ನಾನಮಾಡಿ ಕೆಂಪುಬಟ್ಟೆಗಳನ್ನುಟ್ಟುಕೊಂಡು ಮುಡಿಯನ್ನು ಬಿಚ್ಚಿ ಅರಿಸಿನ ಕುಂಕುಮಗಳು ಮೊದಲಾದ ಸೌಭಾಗ್ಯದ್ರವ್ಯಗಳನ್ನೂ ಹೂವಿನ ಮಾಲೆಗಳನ್ನೂ ಧರಿಸಿ ದಾನಧರ್ಮಗಳನ್ನು ಯಥೇಚ್ಛವಾಗಿ ಸೂರೆ ಮಾಡಿ ಆಪ್ತೇಷ್ಟರ ಅನುಜ್ಞೆಯನ್ನು ಪಡೆದು ಮಂಗಲವಾದ್ಯಗಳು ಭೋರ್ಗರೆಯುತ್ತಿರಲು ಆ ಅಗ್ನಿಕುಂಡಕ್ಕೆ ಮೂರು ಪ್ರದಕ್ಷಿಣೆ ಮಾಡುವರು. ಆಗ ಬ್ರಾಹ್ಮಣರು ವೇದಘೋಷ ಮಾಡುತ್ತ ಅಗ್ನಿಸಂಸ್ಕಾರವನ್ನು ಮಾಡುತ್ತಿರುವರು. ಕೊನೆಗೆ ಸತೀ ಧರ್ಮದಲ್ಲಿ ಅತ್ಯಂತ ಅಭಿಮಾನಿನಿಯರಾದ ರಜಪೂತ ರಮಣಿಯರು ಅತ್ಯಸಂತೋಷದಿಂದ ದಗದಗ ಉರಿಯುವ ಚಿತೆಯೊಳಗೆ ಹಾರಿಕೊಂಡು ಇಹಲೋಕದ ಸಕಲ ಸಂಬಂಧಗಳನ್ನು ಹರಿದೊಗೆದು ನಶ್ವರವಾದೀ ನರದೇಹವನ್ನು ಅಗ್ನಿನಾರಾಯಣನಿಗೆ ಸಮರ್ಪಿಸಿ ರಣರಂಗದಲ್ಲಿ ಮಡಿದು ವೀರಸ್ವರ್ಗವನ್ನೈದುವ ತಮ್ಮ ಪತಿಗಳ ಮಾರ್ಗವನ್ನು ಅನುಸರಿಸಿ ಹೋಗಿಬಿಡುವರು.

ಸಮರ್ಪಿಸಿ ರಣರಂಗದಲ್ಲಿ ಮಡಿದು ವೀರಸ್ವರ್ಗವನ್ನೈದುವ ತಮ್ಮ ಪತಿಗಳ ಮಾರ್ಗವನ್ನು ಅನುಸರಿಸಿ ಹೋಗಿಬಿಡುವರು.

ಯಾವದೊಂದು ಗದ್ಯಭಾಗವನ್ನು ಓದಿ ಸಂಕ್ಷೇಪವಾಗಿ ಮಾಡಬೇಕಾದರೆ ಅದರೊಳಗಿನ ಸಂಗತಿಗಳ ಮುದ್ದೆಗಳನ್ನು ಬರೆದುಕೊಂಡು ಒಂದೊಂದು ಭಾಗಕ್ಕೆ ಕೆಲ ಪಂಙ್ತಿಗಳಂತೆ ಮನಸ್ಸಿನಲ್ಲಿ ಗೊತ್ತುಮಾಡಿಕೊಂಡು ಹೇಳಿದಷ್ಟು ಪಂಙ್ತಿಗಳಲ್ಲಿ ಇಡಿಯ ಭಾಗವನ್ನು ಬರೆಯಬಹುದು. ಮೇಲಿನ ಗದ್ಯಭಾಗದಲ್ಲಿ ಕೆಳಗೆ ಬರೆದಂತೆ ಮುದ್ದೆಗಳನ್ನು ಮಾಡಿದೆ.

೧. ಜೋಹಾರವೆಂದರೇನು? ಅದನ್ನು ಯಾವಾಗ್ಗೆ ಯಾರು ಮಾಡುವರು ಇತ್ಯಾದಿ.

೨. ಸ್ತ್ರೀಯರ ಕರ್ತವ್ಯ.

ರಜಪೂತರು ಮುಸಲ್ಮಾನರೊಡನೆ ಕಾದಿ ಕೋಟೆಯು ಶತ್ರುಗಳ ಕೈಸೇರುವದೆಂದು ತಿಳಿದಕೂಡಲೆ ತಮ್ಮ ಕುಲಶೀಲವನ್ನು ಕಾದುಕೊಳ್ಳುವದಕ್ಕಾಗಿ ಸ್ತ್ರೀಯರನ್ನೆಲ್ಲ ಪದ್ಧತಿಗೆ ಸರಿಯಾಗಿ ಅಗ್ನಿನಾರಾಯಣನಿಗೆ ಅರ್ಪಿಸುತ್ತಿದ್ದರು. ಈ ಭಯಂಕರ ವ್ರತವೇ ಜೋಹಾರವು.

ಆಗ ಗಂಡಸರೆಲ್ಲ ಕೇಸರೀಯಾ ವ್ರತಕ್ಕನುಸರಿಸಿ ವಸ್ತ್ರಗಳನ್ನು ಧರಿಸಿ ಖಡ್ಗ ಪಾಣಿಗಳಾಗಿ ಕೋಟೆಯಿಂದ ಹೊರಬೀಳುವ ಸಿದ್ಧತೆಯಲ್ಲಿರುವರು.

ಆಗ ಸ್ತ್ರೀಯರು ಮುಡಿಯನ್ನು ಬಿಚ್ಚಿಕೊಂಡು ಕೆಂಪು ಬಟ್ಟೆಗಳನ್ನು ಧರಿಸಿ ವಿಪುಲ ದ್ರವ್ಯವನ್ನು ದಾನಮಾಡಿ ವಿಧ್ಯುಕ್ತವಾಗಿ ವೇದಘೋಷವು ನಡೆದಿರುವಾಗ ಅಗ್ನಿಗೆ ಸಂತೋಷದಿಂದ ಆಹುತಿಯಾಗುತ್ತಿದ್ದರು. ಒಳಿಕ ಪುರುಷರು ಹೊರಬಿದ್ದು ವೈರಿಗಳೊಡನೆ ಹೋರಾಡಿ ಪೌರುಷಕ್ಕೆ ಸರಿಯಾಗಿ ವೈರಿಗಳಿಂದ ಹತರಾಗುತ್ತಿದ್ದರು.

ಅಭ್ಯಸನಕ್ಕಾಗಿ ಉದಾಹರಣಗಳು

ವಾಚನ ಪಾಠವಾಲೆ ಪಾಠ ೧೨ ಭಾರತಕಥೆ– ಭೀಮನು ದುರ್ಯೋಧನನನ್ನು ಗದಾಯುದ್ಧದಲ್ಲಿ ಕೊಂದಾಗ ಬಲರಾಮನು ಭೀಮನಮೇಲೆ ಆರೋಪಿಸಿದ ಅನ್ಯಾಯವನ್ನು ಸಂಕ್ಷೇಪವಾಗಿ ಬರೆಯಿರಿ.

ಪಾಠ ೧೫ ಮಹಾತ್ಮಾಜಿಯವರು ಆಫ್ರಿಕೆಯಲ್ಲಿ ಮಾಡಿದ ಮಹತ್ಕಾರ್ಯವನ್ನು ಸಂಕ್ಷೇಪವಾಗಿ ಬರೆಯಿರಿ.

ವಾಕ್ಯದಲ್ಲಿ ಪದಗಳ ಪರಸ್ಪರ ಸಂಬಂಧ ತಿಳಿಯುವದು:— ನಿಜವಾಗಿ ಈ ಭಾಗವು ವ್ಯಾಕರಣವಿಷಯಕ್ಕೆ ಒಳಪಟ್ಟಿದ್ದರೂ ಗದ್ಯಭಾಗಕ್ಕೆ ವಿಶೇಷವಾಗಿ

ಸಂಬಂಧಿಸಿರುವದೆಂದು ತಿಳಿದಿದ್ದೇವೆ. ವ್ಯಾಕರಣದಲ್ಲಿ ಹೇಳಿದ ಈ ವಿಷಯದ ವಿಚಾರಗಳನ್ನು ವಿದ್ಯಾರ್ಥಿಗಳು ಚೆನ್ನಾಗಿ ತಿಳಿದುಕೊಂಡಿರಬೇಕು. ಬೇರೆ ಕೆಲವು ಸಂಗತಿಗಳನ್ನು ಇಲ್ಲಿ ಹೇಳಿದ್ದೇವೆ. ನಮ್ಮ ವಿದ್ಯಾರ್ಥಿಗಳು ಕೆಲವರು ಗದ್ಯಭಾಗಗಳನ್ನು ಓದುವಾಗ ಕಂಡಕಂಡಲ್ಲಿ ನಿಂತು ಓದುವರು. ಅಂದರೆ ಬಿಡಿಸಿ ಓದತಕ್ಕವುಗಳನ್ನು ಕೂಡಿಸಿ, ಕೂಡಿಸಿ ಓದತಕ್ಕವುಗಳನ್ನು ಬಿಡಿಸಿ ಓದುವರು. ಹೀಗಾಗುವದರಿಂದ ವಾಕ್ಯಗಳ ಅರ್ಥವು ಅವರಿಗೆ ತಿಳಿಯಲಾರದು. ಪದಗಳ ಪರಸ್ಪರ ಸಂಬಂಧವು ತಿಳಿಯದೆ ಇರುವದೇ ಇದಕ್ಕೆ ಕಾರಣವು. ಓದಿದ ಗದ್ಯ ಭಾಗದ ಸಾರಾಂಶದ ವಿಷಯವಾಗಿ ಕೇಳಿದಶೆ ಗದ್ಯಭಾಗದ ಆರಂಭದ ೧-೨ ಸಾಲು ಗಳನ್ನು ಇದ್ದಕ್ಕಿದ್ದಂತೆಯೇ ಹೇಳಲಿಕ್ಕೆ ಯತ್ನಿಸುವರು. ಇದರಂತೆಯೇ ಶಬ್ದಗಳ ಉಚ್ಚಾರವೂ ಸ್ಪಷ್ಟವಾಗಿ ಅವರಿಂದ ಆಗುವದಿಲ್ಲ. ಅದನ್ನು ಕೇಳುವವರಿಗೆ ಸಹ ಅರ್ಥವಾಗುವದು ಒತ್ತಟ್ಟಿಗಿರಲಿ, ಬೇಸರು ಎನಿಸಬಹುದು. ಈ ಸಂಗತಿಯ ಮೇಲಿಂದ ಗದ್ಯದಲ್ಲಿ ಸ್ಪಷ್ಟೋಚ್ಚಾರ, ಪದಗಳ ಪರಸ್ಪರ ಸಂಬಂಧವನ್ನು ತಿಳಿಯೋಣ, ಅರ್ಥವತ್ತಾದ ಶಬ್ದಗಳ ಮೇಲೆ ಆಘಾತ ಕೊಟ್ಟು ಓದೋಣ, ವಿಚಾರವು ಸರಳವಾಗುವಂತೆ ಕೆಲವು ಶಬ್ದಗಳನ್ನು ಬಿಡಿಸಿ ಇಲ್ಲವೆ ಕೂಡಿಸಿ ಓದೋಣ ಇವುಗಳ ಮಹತ್ವವು ಎಷ್ಟಿರುತ್ತದೆಂಬದು ಗೊತ್ತಾಗುತ್ತದೆ. ತಕ್ಕ ಸ್ವರದಿಂದ, ಪದ್ಧತಿಯಿಂದ ಓದಿದರೆ ಗ್ರಂಥಕರ್ತನ ಶೈಲಿಯು ಕೇಳುವವರಿಗೆ ಗೊತ್ತಾಗುವದು. ಗ್ರಂಥಕರ್ತನು ಎಷ್ಟು ಸರಸ ಶೈಲಿಯಿಂದ ಬರೆದಿದ್ದರೂ ಅವನ ಶ್ರಮದ ಸಾಫಲ್ಯವು ತಕ್ಕ ಓದುಗನನ್ನು ಅವಲಂಬಿಸಿರುತ್ತದೆಂದು ಹೇಳ ಬಹುದು. ಓದುವವನು ಸರಸಾಗಿ ಓದಿದರೆ ಸಂದರ್ಭದ ಮೇಲಿಂದ, ಇಲ್ಲವೆ ಭಾವದಮೇಲಿಂದ ಒಂದೆರಡು ಕಠಿಣ ಶಬ್ದಗಳಿದ್ದರೂ ಅವುಗಳ ಅರ್ಥವು ಕೇಳು ವವರಿಗೆ ಆಗುತ್ತದೆ. ಅದರಂತೆಯೇ ಓದುಗನು ಸಹ ಗದ್ಯದ ಭಾವದಲ್ಲಿಯೇ ತಲ್ಲೀನ ನಾಗಿ ಹಾವ ಭಾವದೊಡನೆ ಓದುವದು ಕಂಡುಬರುತ್ತದೆ.

ಉದಾಹರಣಾರ್ಥವಾಗಿ ಮೇಲೆ ತೋರಿಸಿದ ವಾಚನ ಪಾಠಮಾಲೆಯ 'ಪದ್ಮಿನಿ' ಎಂಬ ಪಾಠದ ಳಂನೆಯ ಪುಟದಲ್ಲಿದ್ದ "ಅಲ್ಲಾಉದ್ದೀನನು ಸುರಕ್ಷಿತ ವಾಗಿ ಚಿತ್ತೂರಿನಿಂದ ತಿರುಗಿ ಬರಬಾರದೆಂಬ ಉದ್ದೇಶದಿಂದಲೇ ಇಂದು ಮುಂದಾಗಿ ಈ ವಿಚಾರವನ್ನು ನಿನಗೆ ತಿಳಿಸಿರುವೆನು" ಈ ವಾಕ್ಯದಲ್ಲಿ ಗುಪ್ತ ವಿರಾಮ, ಆಘಾತ ಶಬ್ದಗಳನ್ನು ತಿಳಿದು ಓದುವ ವಿದ್ಯಾರ್ಥಿಗಳು ನಿರಲ. ಇಂದು ಮುಂದಾಗಿ ಈ ಶಬ್ದಗಳನ್ನು ಕೂಡಿಸಿ ಓದುವರೋ ಇಲ್ಲವೋ ಎಂಬದಕ್ಕಾಗಿ ವಿದ್ಯಾರ್ಥಿಗಳನ್ನು ಈಗಲೂ ವಾಚಕರು ಪರೀಕ್ಷಿಸಿ ನೋಡಬಹುದು. ಒಬ್ಬನು ತನ್ನ ಜಾಣತನದಿಂದ ಇಂದುಮುಂದಾಗಿ ಎಂಬದಾಗಿ ತಿದ್ದಿ ಓದಿದ್ದು ಕಂಡುಬಂದಿದೆ. ಇಂದು ಎಂಬ

ಶಬ್ದವು ಯಾವ ಪದಕ್ಕೆ, ಮುಂದಾಗಿ ಎಂಬ ಶಬ್ದವು ಯಾವ ಪದಕ್ಕೆ ಸಂಬಂಧಿಸಿರುವ ದೆಂಬದನ್ನು, ಇಡಿಯ ವಾಕ್ಯವನ್ನು ಕರಿಯ ಹಲಿಗೆಯ ಮೇಲೆ ಬರೆದು ಸ್ಪಷ್ಟವಾಗಿ ತಿಳಿಸಬೇಕು. ಇವು ಬೇರೆ ಪದಕ್ಕೆ ಸಂಬಂಧಿಸಿರುವದರಿಂದ ಅಂದರೆ ಪರಸ್ಪರಾವ ಲಂಬನವು ಈ ಪದಗಳಲ್ಲಿ ಇಲ್ಲದ್ದರಿಂದ ಪ್ರತ್ಯೇಕ ಪ್ರತ್ಯೇಕವಾಗಿ ಓದಬೇಕು. ಇದೂ ಅಲ್ಲದೆ ಏನೋ ಒಂದು ಉದ್ದೇಶ ತೋರಿಸಿ ಅದಕ್ಕಾಗಿಯೇ ' ಮುಂದಾಗಿ ತಿಳಿಸಿರುವೆನು ' ಎಂಬದಾಗಿ ಹೇಳಿರುವರು. ಆ ಉದ್ದೇಶವು ಇರದಿದ್ದರೆ ಸಾವಕಾಶ ವಾಗಿ ತಿಳಿಸಬಹುದಾಗಿತ್ತು. ಈ ಮಹತ್ವದ ಅರ್ಥಜ್ಞಾನಕ್ಕಾಗಿ **ಮುಂದಾಗಿ** ಎಂಬ ಶಬ್ದದನೇಲೆ ಆಘಾತಕೊಟ್ಟು ಓದಬೇಕು. ಇದರ ದೆಶೆಯಿಂದಲೇ ಇಂದು ಎಂಬಲ್ಲಿ ಅಲ್ಪವಿರಾಮವನ್ನು ಗ್ರಂಥಕರ್ತರು ಕೊಟ್ಟಿದ್ದಾರೆಂದು ವಿದ್ಯಾರ್ಥಿಯು ತಾನೇ ಸ್ವಾವಲಂಬನದಿಂದ ತಿಳಿದುಕೊಳ್ಳಬೇಕು. ಎಲ್ಲೆಡೆಗಳಲ್ಲಿಯೂ ಎಲ್ಲ ಗ್ರಂಥಕರ್ತರೂ ಹೀಗೆ ಕೊಟ್ಟಿರಲಾರರು. ಅಂಥ ಸಂದರ್ಭಗಳಲ್ಲಿ ತಾನೇ ತಿಳಿದು ಓದಬೇಕಾಗುವದು. ಹಾಗು ಆ ಒಳಗಣ ಉದ್ದೇಶವನ್ನು ಸ್ಪಷ್ಟಪಡಿಸಿ ತೋರಿಸುವದಕ್ಕಾಗಿ **ಸುರಕ್ಷಿತವಾಗಿ ತಿರುಗಿಬರಬಾರದೆಂಬ ಉದ್ದೇಶದಿಂದ** ಎಂಬ ಪದಸಮೂಹವನ್ನು ಗಟ್ಟಿಯಾಗಿ ಓದಬೇಕು. ಹೀಗೆ ಬೇರೆಬೇರೆ ವಾಕ್ಯ ಗಳಲ್ಲೆಲ್ಲ ಪರಸ್ಪರ ಸಂಬಂಧವನ್ನು ತಿಳಿದು ಪದಗಳನ್ನು ಕೂಡಿಸಿ ಇಲ್ಲವೆ ಬಿಡಿಸಿ ಗುಂಪು-ಗುಂಪಾಗಿ ಇಲ್ಲವೆ ಪ್ರತ್ಯೇಕವಾಗಿ ಓದಲಿಕ್ಕೂ ಅವಶ್ಯ ಕಂಡಲ್ಲಿ ಆಘಾತ ಕೊಟ್ಟು ಓದಲಿಕ್ಕೂ ರೂಢಿ ಮಾಡಿಸಬೇಕು.

ಇದೇ ಮಾದರಿಯ ಇನ್ನೊಂದು ವಾಕ್ಯ— ಕ್ರಮಿಕ ೭ನೆಯ ಪುಸ್ತಕ ಪಾಠ ೨೯ ಪುಟ ೭೨ ಇದರೊಳಗಿನ ಒಂದು ವಾಕ್ಯವನ್ನು ಉದಾಹರಣೆಗಾಗಿ ತೆಗೆದು ಕೊಂಡು ನಿಂತು ಓದುವ, ಕೂಡಿಸಿ ಓದುವ, ಪ್ರತ್ಯೇಕ ಒಂದನ್ನಾಗಿ ಓದುವ ಗಟ್ಟಿಸಿ ಓದುವ ಪದಗಳನ್ನು ಗುರುತುಮಾಡಿ ತೋರಿಸಿದೆ.

" ಒಂದು ವೇಳೆ । ಒಬ್ಬ ಮನುಷ್ಯನು । ತನಗೂ ತನ್ನ ಕುಟುಂಬಕ್ಕೂ ಅವಶ್ಯವಾದ ಪದಾರ್ಥಗಳನ್ನು ಪೂರೈಸಿಕೊಂಡು । ಸೆರೆ ಕೊಳ್ಳುವದಕ್ಕೆ ಸಾಕಷ್ಟು ಹಣವುಳ್ಳವನಿದ್ದರೂ ಅವನು ಕೂಡ । ಅದಕ್ಕಾಗಿ ಮಾಡುವ ವೆಚ್ಚವು । ಕೇವಲ ದುಂದುಗಾರಿಕೆಯೇ ಸರಿ.

ಹೀಗೆ ಬಿಡಿಸಿಕೊಂಡು ಓದಬೇಕಾಗುವದು. ಕೆಳಗೆ ಗುರುತು ಮಾಡಿದಲ್ಲಿ ಸ್ವಲ್ಪ ಗಟ್ಟಿಯಾಗಿ ಓದಬೇಕಾಗುವದು.

ಇದು ಅಲ್ಲದೆ ವಾಕ್ಯದಲ್ಲಿ ಸೇರಿಸಿದ ಪದಗಳು ಸುಮ್ಮನೆ ಸೇರಿಸಿರದೆ ಅರ್ಥಬಾಹುಲ್ಯಕ್ಕಾಗಿ ಸೇರಿಸಲ್ಪಟ್ಟಿರುವವು. ಆದುದರಿಂದ ಹೆಚ್ಚಾಗಿ ಸೇರಿಸಿದ

ಪದಗಳ ಸಾರ್ಥಕತೆಯಿನ್ನು ವಿದ್ಯಾರ್ಥಿಗಳು ತಿಳಿದು ಓದಿದರೆ ಭಾವವು ಸರಿಯಾಗಿ ತಿಳಿಯುವದು. ವಿದ್ಯಾರ್ಥಿಯು ತಾನೂ ವಾಕ್ಯರಚನೆ ಮಾಡುವಾಗ ಅನುಕರಣ ಮಾಡಲು ಅನುಕೂಲವಾಗುವದು. ವರಕವಿಗಳು ಬರೆದ ಗದ್ಯಗಳಲ್ಲಿಯೇ ಆಗಲಿ ಪದ್ಯಗಳಲ್ಲಿಯೇ ಆಗಲಿ ಸೇರಿಸಿದ ಇಂಥ ಪದಗಳ ಸಾರ್ಥಕತೆಯನ್ನು ತಿಳಿದು ಅಂಥ ಪದಗಳುಳ್ಳ ವಾಕ್ಯಗಳ ಟಿಪ್ಪಣಿಯನ್ನು ಬರೆದಿಟ್ಟುಕೊಳ್ಳಬೇಕು. ಕೊನೆಗೆ ಶಿಕ್ಷಕರಾದರೂ ಭಾಷೆಯ ಟಿಪ್ಪಣಿ ಪುಸ್ತಕಗಳಲ್ಲಿ ಪದಗಳ ಪರಸ್ಪರ ಸಂಬಂಧ ಅಂದರೆ ಕೆಳಗೆ ಗೆರೆ ಹೊಡೆದ ಪದವು ಯಾವ ಪದಕ್ಕೆ ಸಂಬಂಧಿಸಿದೆ, ಯಾವ ಪದಗಳನ್ನು ಕೂಡಿಸಿ ಇಲ್ಲವೆ ಬಿಡಿಸಿ ಓದುವದಕ್ಕಾಗಿ ಮೇಲೆ ತೋರಿಸಿದಂತೆ ಗುರುತು ಮಾಡಿದ್ದು, ಸೇರಿಸಿದ ಪದಗಳ ಸಾರ್ಥಕತೆ, ಇತ್ಯಾದಿಗಳ ಒಂದೊಂದು ಮಾದರಿಯನ್ನು ಬರೆಯಿಸಿ ಇಡಬೇಕು.

ವಾಕ್ಯದಲ್ಲಿಯ ಪದಗಳ ಸಾರ್ಥಕತೆ—ಹೆಚ್ಚು ಅರ್ಥಕ್ಕಾಗಿಯೂ, ಅರ್ಥ ಸ್ಪಷ್ಟೀಕರಣಕ್ಕಾಗಿಯೂ ವಾಕ್ಯದಲ್ಲಿ ಕೆಲ ಶಬ್ದಗಳನ್ನು ಹೆಚ್ಚಾಗಿ ಸೇರಿಸಬೇಕಾಗುವದು. ಅಂಥ ಪದಗಳನ್ನು ಗೊತ್ತುಹಿಡಿದು ಅವುಗಳ ಹೆಚ್ಚಿನ ಅರ್ಥಕ್ಕಾಗಿ ವಿಚಾರಿಸುವದೇ ಪದಗಳ ಸಾರ್ಥಕತೆ ಎಂದು ಹೇಳಲ್ಪಡುವದು. ಅಂಥ ಪದಗಳ ಸಾರ್ಥಕತೆ ಗೊತಾ್ತದ ಬಳಿಕ ದೃಢೀಕರಣಕ್ಕಾಗಿ ವಿದ್ಯಾರ್ಥಿಗಳಿಂದ ಆ ಪದಗಳನ್ನು ಉಪಯೋಗಿಸಿದ ಹೊಸ ವಾಕ್ಯಗಳನ್ನು ರಚಿಸಿಸಬೇಕಾಗುವದು.

ಮೇಲೆ ಬರೆದ ವಾಚನ ಪಾಠಮಾಲೆ

(ಅ) ಆದರೆ ದುರ್ದೈವವು ಪ್ರವಾಹರೂಪದಿಂದ ಅಲ್ಲಿಯೂ ಆಕೆಯ ಬೆನ್ನಟ್ಟಿ ಬಂದಿತು. (ಪುಟ ೮೯)

(ಬ) ಅಂತಹ ಪ್ರೀತಿಯ ತಂದೆಯನ್ನು ನಾನು ಆಗಲೇ ಮುರಿತು ಬಿಟ್ಟಿನಲ್ಲಾ. ನನ್ನಂತಹ ಕೃತಘ್ನನೂ ಚಂಡಾಲನೂ ನಾನೇ ಸರಿ. (ಪುಟ ೯೬)

(ಕ) ಹೀಗೆ ಬಳಲುತ್ತಿರುವಾಗ ದೂರದಿಂದ ಹಂಸಪಕ್ಷಿಗಳ ಇಂಚರವು ಅಸ್ಪಷ್ಟವಾಗಿ ಕೇಳಬರಲು ನೆರೆಯಲ್ಲಿ ಸರೋವರವಿರಬಹುದೆಂದು ಊಹಿಸಿದೆನು. (ಪುಟ ೯೬)

(ಡ) ಜಿಂಕೆಗಳು ಕಾಡಾಕಳುಗಳು ಆಶ್ರಮದೊಳಗೆಲ್ಲ ನಿರ್ಭಯವಾಗಿ ಸಂಚರಿಸುವವು. (ಪುಟ ೯೮)

ಮೇಲೆ, ಗೆರೆ ಹೊಡೆದ ಪದಗಳಲ್ಲಿ ಸಾರ್ಥಕ್ಯವಿದೆ. ಅಂದರೆ ಅವುಗಳಿಂದ ವಾಕ್ಯಗಳಿಗೆ ಹೆಚ್ಚಿಗೆ ಅರ್ಥವು ಉಂಟಾಗಿದೆ. ಕೆಲವು ಹೃದ್ಗತವನ್ನು ತೋರಿಸುತ್ತವೆ. ಇತ್ಯಾದಿ ವಿಶೇಷಾರ್ಥಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಬೇಕು.

(ಡ) ವಾಕ್ಯದಲ್ಲಿದ್ದ ನಿರ್ಭಯವಾಗಿ ಎಂಬ ಸ್ಥಳದಲ್ಲಿ ಸುಖವಾಗಿ, ಚಂದದಿಂದ ಎಂಬ ಪದಗಳಲ್ಲಿ ಯಾವುದೊಂದನ್ನಾದರೂ ಇಟ್ಟರೆ ಸಾಗೀತೆ? ಇಲ್ಲದಿದ್ದರೆ ಯಾಕೆ? ಎಂದು ಕೇಳಬೇಕು. ಹೀಗೆ ವಿಮರ್ಶಾತ್ಮಕವಾಗಿ ವಿದ್ಯಾರ್ಥಿಗಳು ಗದ್ಯಭಾಗಗಳನ್ನು ಇನ್ನುಮುಂದೆ ಓದಿಕೊಳ್ಳಬೇಕಾಗಿದೆ.

ಮಾದರಿಯ ಗದ್ಯಭಾಗಗಳು— ತನ್ನ ಭಾಷೆ ಉತ್ತಮವಾಗುವದಕ್ಕಾಗಿ ಇತರರ ಭಾಷೆಯನ್ನು ತಿಳಿದುಕೊಂಡು ಅನುಕರಣಮಾಡುವದರ ಸಲುವಾಗಿ ಆರಿಸಿದ ಚಲೋ ಗದ್ಯಭಾಗಗಳನ್ನು ಗಟ್ಟಿಮಾಡಬೇಕು. ಕನಿಷ್ಠಪಕ್ಷ ಕೆಲ ಲಕ್ಷ್ಯದಲ್ಲಿಯಾದರೂ ಇಟ್ಟುಕೊಳ್ಳಬೇಕು. ಯಾವ ಶಬ್ದಗಳನ್ನು ಎಲ್ಲಿ ಉಪಯೋಗಿಸಿದರೆ ಹೆಚ್ಚು ಅರ್ಥವೂ ಇಲ್ಲವೆ ಸ್ವಾರಸ್ಯವೂ ಉಂಟಾಗುವದೆಂಬದರ ಜ್ಞಾನಕ್ಕೆ ಅನುಕರಣ ಹಾಗು ಹೋಲಿಸಿನೋಡೋಣ ಇವುಗಳಂಥ ಸಾಧನಗಳು ಬೇರೊಂದಿಲ್ಲ. ಹೀಗೆ ಓದುವದರಿಂದ ತಜ್ಞರ ಬೇರೆ ಬೇರೆ ಶೈಲಿಗಳು ವಿದ್ಯಾರ್ಥಿಗಳ ಲಕ್ಷ್ಯದಲ್ಲಿ ಉಳಿಯುವವು. ಅವರ ಶಬ್ದಭಾಂಡಾರವೂ ಬೆಳೆಯುವದು. ವರ್ಣನೆ ಮಾಡುವ ಬೇರೆ ಬೇರೆ ತರಹಗಳೂ ಗೊತ್ತಾಗುವವು. ಒಟ್ಟಿಗೆ ಭಾಷಾಸ್ವಾರಸ್ಯಕ್ಕೆ ಆವಶ್ಯಕವಾದ ಸಂಗತಿಗಳೆಲ್ಲ ಗೊತ್ತಾಗುವವು. ಶಬ್ದಗಳ ಶುದ್ಧರೂಪಗಳು ಗೊತ್ತಾಗುವವು. ಮೇಲೆ ವಿವರಿಸಿದ ಇಷ್ಟೆಲ್ಲ ಅನುಕೂಲತೆಗಳು ಮಾದರಿಯ ಗದ್ಯಭಾಗಗಳ ಪಠನ-ವಿಚಾರಾದಿಗಳಿಂದ ಆಗುವವು.

ಆರಿಸಿದ ಒಂದೆರಡು ಗದ್ಯಭಾಗಗಳು— ಶುದ್ಧ ಶಬ್ದರೂಪಗಳುಳ್ಳ ಬರಹದ ತಕ್ಕ ಮಾದರಿಯುಳ್ಳ ಒಂದು ವಾಕ್ಯವೃಂದವು ವಾಚನಪಾಠಮಾಲೆಯ ಹದಿನೈದನೆಯ ಪಾಠದಲ್ಲಿ ಬಂದಿದೆ. ಬಿನುಪುಳ್ಳ ಬರೆಹದ ಮಾದರಿಯನ್ನು ಇಲ್ಲಿ ಕಾಣಬಹುದು. ಇದರೊಳಗಿನ ಒಂದೊಂದು ಮಾತುಗಳು ಎಷ್ಟು ಭಾವಗರ್ಭಿತವಾಗಿದ್ದು ಒಂದೊಂದು ಸ್ವತಂತ್ರ ಪ್ರಬಂಧದ ವಿಷಯವಾಗಿರುವದನ್ನು ಲಕ್ಷಿಸಿರಿ. ಈ ವಾಕ್ಯವೃಂದವನ್ನು ಅರ್ಥವಿವರಣೆಗಾಗಿ ಉಪಯೋಗಿಸಿಕೊಳ್ಳಿರಿ. ವಿಸ್ತರಿಸಿ ಬರೆಯಲು ಆರಿಸುವ ಒಂದು ಒಳ್ಳೆಯ ಗದ್ಯಭಾಗವಿದಲ್ಲವೇ? ನೋಡಿರಿ.

೧. ಜನಾಂಗದ ಅವನತಿಯ ಪರಮಕಾಷ್ಠೆಯಕಾಲದಲ್ಲಿ ಅದನ್ನುದ್ಧರಿಸಲು ದೈವಿಕಶಕ್ತಿಯು ಒಂದು ಅಸಾಮಾನ್ಯ ವ್ಯಕ್ತಿಯು ಬೇಕು. ಮಹಾತ್ಮಾಜಿಯು ಇಂತಹ ವ್ಯಕ್ತಿ.

ಮಹಾತ್ಮಾಜಿಯು ಭಾರತಕ್ಕೆ ಇಂದಿನ ರಾಜಕೀಯ ಆಂದೋಲನದ ಮುಂದಾಳು, ಮಂತ್ರದ್ರಷ್ಟಾರನಾದ ಋಷಿ, ನೀತಿಯ ಆದರ್ಶ, ಮನೋಬಲದ ಮೂರ್ತಿ, ಶಾಂತಿಯುಸದನ. ಅಖಿಲಭಾರತವರ್ಷದ ರಾಜಕಾರಣದ ಭಿನ್ನಭಿನ್ನವಾದ ಬಣಗಳು, ಭಿನ್ನಭಿನ್ನ ಧರ್ಮಜಾತಿಮತಗಳು—ಶ್ರೀಮಂತರು ದರಿದ್ರರು, ಪಂಡಿತರು ಪಾಮರರು, ಸ್ತ್ರೀಯರು ಪುರುಷರು ಇವರಿಗೆಲ್ಲ ಏಕಮತ್ಯವಾಗಿ ಸಂಮಾನ್ಯ ವ್ಯಕ್ತಿಯೆಂದರೆ ಇದೊಂದೇ ಸರಿ. ಭರತಖಂಡದಲ್ಲಷ್ಟೇ ಏಕೆ, ಜಗತ್ತಿನೊಳಗಿನ ಎಲ್ಲ ದೇಶಗಳಲ್ಲಿ ಮಹಾತ್ಮರ ಕೀರ್ತಿ ನೆಲಸಿದೆ ಎಂಬುದೂ, ಮಹಾತ್ಮನು ನಮ್ಮ ದೇಶದವನೆಂಬುದೂ ನಮ್ಮ ಹೆಮ್ಮೆಯು.

೨. ವ್ಯಾಕರಣ ಶುದ್ಧ ಶಬ್ದರೂಪಗಳು, ಸಹಜವಾದ ಶಬ್ದಗಳು, ಸ್ವಾಭಾವಿಕ ವರ್ಣನೆ ಇತ್ಯಾದಿಗಳಿಂದ ಮೇಲಿನಂಥ ಗದ್ಯಭಾಗಗಳು ಅನುಕರಣೀಯಗಳಾಗಿವೆ. ಇಂಥ ತುಣುಕುಗಳನ್ನು ಆರಿಸಿ ಬೇರೆಬೇರೆ ತರದ ವರ್ಣನೆಗಳನ್ನು ಅಂದರೆ ಪರ್ವತ, ನದಿ, ಋತು, ಸಮುದ್ರ ಇತ್ಯಾದಿ ಸೃಷ್ಟಿಸೌಂದರ್ಯಗಳ, ಬೇರೆಬೇರೆ ಕಾಲಗಳ, ಬೇರೆಬೇರೆ ವ್ಯಕ್ತಿಗಳ ವರ್ಣನೆಯನ್ನು ಆರಿಸಿ ವಿದ್ಯಾರ್ಥಿಗಳು ತಮ್ಮ ಸಂಗ್ರಹದಲ್ಲಿಟ್ಟುಕೊಂಡು ನೋಡಿಕೊಂಡು ಅನುಕರಣಕ್ಕಾಗಿ ಯತ್ನಿಸುತ್ತಿರಬೇಕು.

ಪ್ರಾಕ್ಟಿಸಿಂಗ್‌ಸ್ಕೂಲ್ ಟ್ರೇನಿಂಗ್‌ಸ್ಕೂಲ್ ಧಾರವಾಡ

ಷಾಣ್ಮಾಸಿಕ ಪರೀಕ್ಷೆ

೧೦ನೆಯ ಅಕ್ಟೋಬರ್ ೧೯೩೮

೭ನೆಯ ಇಯತ್ತೆ

ಕನ್ನಡ

ಕೆಳಗಿನ ಪದ್ಯಗಳನ್ನು ಓದಿರಿ.

೧. ಗಿಳಿವಿಂಡು ಚುಂಚುವಿಂದೊಡೆದ ಮಾವಿನ ಹಣ್ಣು। ಗಳ ಸರಸಧಾರೆಯಿಂ ನೆನೆದು ತಂಪಾಗಿರುವ ! ನೆಲದ ಮೇಲ್ಮುಳಿತು ತಣ್ಣೆಳಲಿಂದೆ ನೇಸರಿನ ಕಿರಣಗಳ ಝರಿಯ ಮಾಡಿ ॥ ಬಳಸಿರ್ದ ಪಥಿರುಗಳ ನಲವಿನಾಟವ ನೋಡಿ । ಗಿಳಿ, ನವಿಲು,

ಕೋಗಿಲೆಗಳುಲಿಗಳಿಗೆ ಕಿವಿಗೊಟ್ಟು । ಅಳಿಯು ಹಾಡನು ಕೇಳಿ ನಲಿಯುತಿಹ ಮಾನವನ ಸೊಗವೆನಗೆ ಸಿಗಬಾರದೇ ? ॥ ೧ ॥ "ಜುಳುಜುಳಿ"ಂದುಲಿಯುತ್ತ ಸಾಗಿರುವ ಹಳ್ಳದಾ । ಜಲದ ಮಾಧುರ್ಯಕ್ಕೆ ಮನಸೋತು ಇಬ್ಬದಿಗ। ಳಲಿ ಬೆಳೆದ ವೃಕ್ಷಗಳು ಬೇರಿನಿಂ ನೀರನ್ನು ಕುಡಿಕುಡಿದು ಮನದಣಿಯದೆ ॥ ತಲೆಯಿಂದ ಕುಡಿವಂತೆ ಬಾಗಿ ನೀರನು ಮುಟ್ಟಿ । ಸಲೆ ಸೋಲವನು ಬೀರ್ವುದನು ಕಂಡು ಮೈಮರೆದು । ಅಲೆಯುತಲಿ ಹರುಷದಿಂ ಹಾಡುತಿಹ ಮಾನವನ ಸೊಗಸೆನಗೆ ಸಿಗಬಾರದೇ ? ॥ ೨ ॥

೧. ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ—

(ಅ) ಈ ಕವಿತೆಗಳಲ್ಲಿರುವ ಮಾತುಗಳನ್ನು ಆಡುವವನು ಎಲ್ಲಿ ಇರುವನು ?

(ಬ) ಯಾವ ಯಾವ ಇಂದ್ರಿಯಗಳ ಸೌಖ್ಯವನ್ನು ಬಯಸಿರುವನು?

(ಕ) ಬಿಸಿಲು ಬಡಿಯದಂತೆ ಯಾವ ಅನಕೂಲತೆ ಇರಬೇಕೆನ್ನುವನು?

(ಡ) ಹಳ್ಳದ ನೀರು ಬಹಳ ಸೀ ಎಂಬುದನ್ನು ಹೇಗೆ ತೋರಿಸುವನು?

(ಈ) ಈ ಎರಡು ಸುಖಗಳಲ್ಲಿ ಹೆಚ್ಚಿನದು ಯಾವದಂತೆ? ಏತರ ಮೇಲಿಂದ ಹಾಗೆ ಹೇಳುವಿರಿ ?

ಕೆಳಗಿನ ವಾಕ್ಯವೃಂದವನ್ನು ಓದಿರಿ—

ಒಂದು ದಿವಸ ಯುದ್ಧವು ಮುಗಿದ ಬಳಿಕ ಪೈಗಂಬರರು ಪಾಳಯದಿಂದ ಸ್ವಲ್ಪ ದೂರದಲ್ಲಿ ಒಂದು ಮರದಡಿಯಲ್ಲಿ ಒಬ್ಬರೇ ವಿಶ್ರಮಿಸಿದ್ದರು. ಆಗ ದುರಿಸೂರ್ ಎಂಬ ಒಬ್ಬ ಕ್ರೂರ ಕುರೇಶನು (ಕುರೇಶ್–ಅರಬರಲ್ಲಿ ಒಂದು ಪಂಗಡದವ) ಅವರ ಮೈಮೇಲೆ ಏರಿಬಂದನು. ಮತ್ತು ಅವರನ್ನು ಕೊಲ್ಲಬೇಕೆಂದು ಕತ್ತಿಯನ್ನು ಒರೆಯಿಂದ ಹಿರಿದು ಎಲ್ಲೆ ಮಹಮ್ಮದನೇ, ಈಗ ನಿನ್ನನ್ನು ಯಾರು ಕಾಪಾಡುವರು ? ಎಂದು ಕೇಳಿದನು. ಪೈಗಂಬರರು ಉಚ್ಚ ಸ್ವರದಿಂದ 'ಈಶ್ವರನು' ಎಂದು ಕೂಗಿದರು. ಆ ಉತ್ತರದಿಂದ ದುರಿಸೂರನ ಹೃದಯವು ಕಂಪಿಸಿತು. ಕತ್ತಿಯು ಕೈಯಲ್ಲಿ ನಿಲ್ಲಲಿಲ್ಲ. ಆಗ ಪೈಗಂಬರರು ತಟ್ಟನೆ ಆ ಕತ್ತಿಯನ್ನು ತೆಗೆದುಕೊಂಡು ದುರಿಸೂರನ ಮೇಲೆ ಎತ್ತಿ ಆತನಿಗೆ– ಎಲೋ, ಈಗ ನಿನ್ನನ್ನು ಕಾಪಾಡುವವರು ಯಾರು ? ಎಂದು ಕೇಳಿದರು. ದುರಿಸೂರನು ಅಳುತ್ತ 'ನೀವು ನನ್ನನ್ನು ಕಾಪಾಡುವವರು' ಎಂದು ಬೇಡಿಕೊಂಡನು. ಪೈಗಂಬರರು ಅವನ ಕತ್ತಿಯನ್ನು ಅವನಿಗೆ ಮರಳಿ ಕೊಟ್ಟರು. ದುರಿಸೂರನು ಸುಮ್ಮನೆ ಹೊರಟು ಹೋದನು.

೨. ಕೆಳಗಿನ ಪ್ರಶ್ನೆಗಳ ಉತ್ತರವನ್ನು ಹೇಳಿರಿ.

(ಕ) ಈ ವಾಕ್ಯವೃಂದದಲ್ಲಿ ಬಂದ ಪೈಗಂಬರರ ನಾಲ್ಕು, ಐದು ಗುಣಗಳನ್ನು, ದುರಿಸೂರನ ೨-೩ ಗುಣಗಳನ್ನು ಹೇಳಿರಿ. ಅವನ್ನು ಯಾವ ಯಾವ ಭಾಗಗಳಿಂದ ಕಂಡುಹಿಡಿದಿರಿ? ಪೈಗಂಬರರ ಗುಣಗಳಲ್ಲಿ ಯಾವದು ವಿಶೇಷ ಪ್ರಕಾರದ್ದು?

(ಬ) ಈ ವಾಕ್ಯದಲ್ಲಿ ಬಂದಷ್ಟು ಪೈಗಂಬರರು, ದುರಿಸೂರ್ ಇವರ ಸಂಭಾಷಣವನ್ನು ರಚಿಸಿರಿ.

(ಗ) ಇಲ್ಲಿ ಬಂದ ಪೈಗಂಬರರ ಗುಣಗಳಿಗೆ ಹೊಂದಿಕೆಯಾಗುವಂತೆ ಒಂದೊಂದು ವಿಶೇಷಣವನ್ನು ಬರೆಯಿರಿ.

(ಘ) ಈ ವಾಕ್ಯವೃಂದವನ್ನು ಅನುಸರಿಸಿ ಪಯಗಂಬರರನ್ನು ಹೊಗಳುವ, ದುರಿಸೂರನನ್ನು ನಿಂದಿಸುವ ಒಂದೊಂದು ವಾಕ್ಯವೃಂದ (ಪ್ಯಾರಾ) ವನ್ನು ಬರೆಯಿರಿ.

ವ್ಯಾಕರಣ

೩. ಕೆಳಗಿನ ೧-೨ ಮಾತುಗಳಲ್ಲಿರುವ ಹೆಚ್ಚುಕಡಿಮೆಯನ್ನು ಹೇಳಿರಿ.

೧ ಸಂಗನಿಗೆ ದಯ ಹುಟ್ಟಿತು.	೨ ಸಂಗನಿಗೂ ದಯೆ ಹುಟ್ಟಿತು.
೧ ನೋಡಿದ್ದು ಬಂದಿತು.	೨ ನೋಡಿದ್ದೂ ಬಂದಿತು.
೧ ರಾಮನು ಬಂದನೇ?	೨ ರಾಮನು ಬಂದನೆ.
೧ ದೌತಿಯಿಂದ ಮಸಿ ಬಿದ್ದಿತು.	೨ ದೌತಿಯಲ್ಲಿ ಮಸಿ ಬಿದ್ದಿತು.
೧ ನೋಡಿ ಮಲಗಿದ ಕಲ್ಲನು	೨ ಮಲಗಿ ನೋಡಿದ ಕಲ್ಲನು.
೧ ನಿನಗೆ ಸುಖವುಂಟಾಗಲಿ	೨ ನಿನಗೆ ಸುಖವುಂಟಾಗುತ್ತಿರಲಿ.
೧ ನೋಡಿದ ಮನುಷ್ಯನು	೨ ನೋಡಲ್ಪಟ್ಟ ಮನುಷ್ಯನು
೧ ಮುಂಬಯಿಯಿಂದ ಬಂದ.	೨ ಮುಂಬಯಿಯಿಂದ ಬಂದ

ಕೆಳಗಿನ ಮಾತುಗಳಲ್ಲಿ ತಪ್ಪುಗಳಿದ್ದರೆ ತಿದ್ದಿ ಬರೆಯಿರಿ.

(ಅ) ಒಂದು ಊರಲ್ಲಿ ಕಲ್ಲನೂ ಮಲ್ಲನು ಎಂಬ ಯಿಬ್ಬರು ಗೆಳೆಯರು ಯಿದ್ದರು.

(ಬ) ವಾಖ್ಯದಲ್ಲಿ ಕರ್ತೃ ಕ್ರಿಯಾಪದಗಳನ್ನೂ ತೃತಿಯಾ ಸಪ್ಟೀ ವಿಭಕ್ತಿಗಳನ್ನು ಹುಡಿಕುವದು ಸುಲಭ.

೫. ದೇವರು ಭೂಲೋಕಕ್ಕೆ ಬಂದದ್ದನ್ನು ಯಾರೂ ನೋಡಿಲ್ಲ." ಈ ವಾಕ್ಯದಲ್ಲಿ

(ಅ) ಆಖ್ಯೇ ಯಾಖ್ಯಾತಗಳನ್ನು ವಿಭಾಗಿಸಿರಿ. (ಬೇರೆ ಬೇರೆ ಮಾಡಿರಿ)

(ಬ) ಕರ್ತೃ ಮೊದಲಾದವನ್ನು ತೋರಿಸಿ ಪ್ರಯೋಗವನ್ನು ಹೇಳಿರಿ.

(ಕ) ಈ ವಾಕ್ಯವನ್ನು ಬೇರೆ ಪ್ರಯೋಗದಲ್ಲಿ ಬರೆಯಿರಿ.

(ಡ) ಈ ವಾಕ್ಯವನ್ನು ವಿಭಜಿಸಿರಿ.

೬. ನಿಮ್ಮ ೭ನೆಯ ಪುಸ್ತಕದಲ್ಲಿ ಬಾರದ ಒಂದು ಕವಿತೆಯನ್ನು ಬರೆಯಿರಿ. ಇಲ್ಲವೆ (ನಿಮ್ಮ ಪ್ರಾರ್ಥನೆಯ ಪದಗಳನ್ನು ಬಿಟ್ಟು) ಬೇರೆ ಯಾವ ದೊಂದು ಪದ, ಲಾವಣಿ ಹಾಡು ಇವುಗಳಲ್ಲಿ ಒಂದನ್ನು ಬರೆಯಿರಿ.

೭. ಕಾಗೆ, ಹದ್ದು, ಗಿಳಿ, ಗುಬ್ಬಿ, ಪಾರಿವಾಳ ಇವುಗಳನ್ನು ಬಿಟ್ಟು ನಿಮಗೆ ಗೊತ್ತಿದ್ದ ಹಕ್ಕಿಗಳು, ಮತ್ತು ಜಾಲಿ, ಮಾವು, ಹುಣಸೆ, ಬೇವು, ಆಲ ಇವುಗಳನ್ನು ಬಿಟ್ಟು ನಿಮಗೆ ಗೊತ್ತಿದ್ದ ಗಿಡಗಳು ಇವುಗಳ ಹೆಸರುಗಳನ್ನು ಹೇಳಿರಿ. (ಹೆಚ್ಚು ಹೇಳಿದಂತೆ ಹೆಚ್ಚು ಗುಣ)

೮. ಊಟ, ಸತ್ಕಾರ, ದಟ್ಟ, ಪ್ರೀತಿ, ಸುಂದರ ಈ ಶಬ್ದಗಳ ವಿರುದ್ಧಾರ್ಥಕ ಶಬ್ದಗಳನ್ನು ಒಂದೊಂದನ್ನು ಬರೆಯಿರಿ.

ಧಾರವಾಡ ಶಿಕ್ಷಕ ಶಿಕ್ಷಣಾಲಯಕ್ಕೆ ಮುಂಬಯಿ ಇಲಾಖೆಯ ಸರಕಾರದ ಮುಖ್ಯ ಮಂತ್ರಿಗಳಾದ ನಾಮದಾರ

ಬಾಳಾಸಾಹೇಬ ಗಂಗಾಧರರಾವ ಖೇರ

ಮಹಾಶಯರ ಶುಭ ಆಗಮನ.

ಮೊದಲೇ ಗೊತ್ತುಪಡಿಸಿದ ಧಾರವಾಡ ನಗರದ ಕಾರ್ಯಕ್ರಮದ ಮೇರೆಗೆ ತಾ. ೬-೧೨-೧೯೩೮ ನೆಯ ದಿವಸದ ಸಾಯಂಕಾಲಕ್ಕೆ ಮುಂಬಯಿ ಸರಕಾರದ ವಿದ್ಯಾಖಾತೆಯ ಮಂತ್ರಿಗಳೂ ಮುಖ್ಯ ಮಂತ್ರಿಗಳೂ ಆದ ನಾಮದಾರ ಬಿ. ಜಿ. ಖೇರರವರು ದೇ. ಭ. ಶ್ರೀಯುತ ಗಂಗಾಧರರಾವ ದೇಶಪಾಂಡೆ,

ನಾ. ಬಿ. ಜಿ. ಖೇರರವರು.

ಶ್ರೀ. ರಾಮರಾವ ಹುಕ್ಕೇರಿಕರ ಇವರೆಲ್ಲರೊಡನೆ ಧಾರವಾಡ ಟ್ರೇನಿಂಗ ಕಾಲೇಜಿಗೆ ಬಿಜಯಮಾಡಿಸಿದರು. ಧಾರವಾಡದ ಮೆ॥ ಕಲೆಕ್ಟರ ಸಾಹೇಬರೂ ಮೆ॥ ಎಜ್ಯುಕೇಶನಲ್ ಇನಸ್ಪೆಕ್ಟರ ಸಾ॥ ದಕ್ಷಿಣಭಾಗರವರೂ ಧಾರವಾಡ ಟ್ರೇನಿಂಗ್

ಕಾಲೇಜಿನ ಹೆಡ್‌ಮಾಸ್ತರರವರೂ ತಳಿರುತೋರಣಗಳಿಂದಲೂ ಧ್ವಜನಿಶಾನೆ ಮುಂತಾದವುಗಳಿಂದಲೂ ಸುಶೋಭಿತ ಮಾಡಿದ ಟ್ರೇನಿಂಗ್ ಕಾಲೇಜಿನ ಟಾವರ ಗೇಟಿನಲ್ಲಿ ಮಂತ್ರಿವರ್ಯರ ಸ್ವಾಗತವನ್ನು ಮಾಡಿದರು. ಅಲ್ಲಿಯೇ ಪ್ರ್ಯಾಕ್ಟಿಸಿಂಗ ಸ್ಕೂಲಿನ ಚಿಕ್ಕ ಬಾಲಕರು 'ನಮಸ್ತೆ' 'ವಂದೆಮಾತರಮ್' ಜಯಘೋಷ ಗಳಿಂದ ಮಂತ್ರಿವರ್ಯರ ಸ್ವಾಗತವನ್ನು ಮಾಡಿದರು. ಕಟ್ಟಡದಲ್ಲಿ ಪ್ರವೇಶಿಸಿದ ಕೂಡಲೆ ಪ್ರ್ಯಾಕ್ಟಿಸಿಂಗಸ್ಕೂಲಿನ ೫-೬ ವರ್ಷ ವಯದ ಚಿಕ್ಕ ಬಾಲಕರು ಮಧುರ ಸ್ವಾಗತಗಾಯನದಿಂದ ಮಂತ್ರಿವರ್ಯರ ಮತ್ತು ಅವರೊಡನೆ ಬಂದ ಸಭ್ಯಗೃಹಸ್ಥರ ಸ್ವಾಗತ ಸನ್ಮಾನವನ್ನು ಮಾಡಿದರು.

ತರುವಾಯ ಮಂತ್ರಿವರ್ಯರು ಟ್ರೇನಿಂಗ್ ಕಾಲೇಜಿನ ಹೊಸ ಕಟ್ಟಡದ ಡ್ರಾಯಿಂಗ್ ಹಾಲಿನಲ್ಲಿ ಪ್ರವೇಶಿಸಿ ಅಲ್ಲಿ ತರತರದ ಬಣ್ಣಗಳ ಮಣ್ಣುಗಳನ್ನು ಹರಡಿ ತಾಜಮಹಾಲು, ಭಾರತಮಾತೆ, ಮಹಾತ್ಮಾ ಗಾಂಧೀಜಿಯವರು ಇವರ ಚಿತ್ರಗಳನ್ನೂ ತರತರದ ಸುಂದರವಾದ ಡಿಝಾಯಿನಗಳನ್ನೂ ಹಾಕಿ ಮಾಡಿದ ಜಮಖಾನೆಗಳ ಆಸ್ತರಣಗಳನ್ನು ನೋಡಿದರು. ಬಳಿಕ ಇದೇ ನವ್ಹಂಬರ ತಿಂಗಳಿ ನಿಂದ ಟ್ರೇನಿಂಗ್ ಸ್ಕೂಲಿನಲ್ಲಿ ಆರಂಭವಾದ ಹಿಂದುಸ್ತಾನಿ ಶಿಕ್ಷಣ ವರ್ಗದಲ್ಲಿ ನಡೆದ ಮಿ. ನಾಗರಾಜ ಬಿ. ಎ. ಅವರ ಹಿಂದುಸ್ತಾನಿ ಶಿಕ್ಷಣವನ್ನು ನೋಡಿ ಸಮೀಪದ ಕೋಣೆಯಲ್ಲಿ ಪ್ರ್ಯಾಕ್ಟಿಸಿಂಗ್ ಸ್ಕೂಲಿನಲ್ಲಿ ಬಾಲಕರ ವರ್ಗಕ್ಕೆ ಪ್ರಯೋಗಕ್ಕಾಗಿ ಸ್ತ್ರೀಶಿಕ್ಷಿಕೆಯ ಯೋಜನೆ ಮಾಡಿದ್ದನ್ನು ನೋಡಿದರು.

ತರುವಾಯ ಟ್ರೇನಿಂಗ್ ಕಾಲೇಜಿನ ಹೊಸ ಕಟ್ಟಡದ ಪಟಾಂಗಣದಲ್ಲಿ ಪ್ರ್ಯಾಕ್ಟಿಸಿಂಗ್ ಸ್ಕೂಲಿನ ೩ನೆಯ ಇಯತ್ತೆಯ ಬಾಲಕರ ಹೊಸ ಪದ್ಧತಿಯ ಬಂಡ್‌ಡ್ರಿಲ್; ೪ನೆಯ ಇಯತ್ತೆಯ ಬಾಲಕರ ಲೇಝಿಮ್ ಡ್ರಿಲ್; ೫-೬ ಇಯತ್ತೆಗಳ ಬಾಲಕರ ಲಾಠಿ ಡ್ರಿಲ್ ಇವುಗಳನ್ನು ನೋಡಿಕೊಂಡು ಮುಂದೆ ಟ್ರೇನಿಂಗ್ ಕಾಲೇಜಿನ ಜನರಲ್ ಹಾಲಿನ ಹಿಂದುಗಡೆಯ ತೋಟದಲ್ಲಿ ನೆಲದ ಮೇಲೆ ತರತರದ ಬಣ್ಣಗಳ ಮಣ್ಣುಗಳಿಂದ ರಚಿಸಿದ ನಕಾಶ ಮುಂತಾದ ಶಿಕ್ಷಣ ಸಹಾಯಕ ಸಂಗತಿಗಳನ್ನು ನೋಡಲು ಹೊರಟರು. ತೋಟದ ಬಾಗಿಲ ಬಳಿಯಲ್ಲಿ ಪ್ರ್ಯಾಕ್ಟಿಸಿಂಗ್ ಸ್ಕೂಲಿನ ಮತ್ತು ಟ್ರೇನಿಂಗ್ ಸ್ಕೂಲಿನ ವಿದ್ಯಾರ್ಥಿಗಳು 'ಕರ್ನಾಟಕ ಮಾತಾಕಿ ಜಯ' 'ವಂದೇಮಾತರಂ' ಇತ್ಯಾದಿ ಘೋಷಗಳಿಂದ ಮಂತ್ರಿವರ್ಯರನ್ನು ಸನ್ಮಾನಿಸಿದರು.

ಜನರಲ್ ಹಾಲಿನ ಹಿಂದಿನ ತೋಟದಲ್ಲಿ ನೆಲದ ಮೇಲೆ ಬಣ್ಣ ಬಣ್ಣದ ಮಣ್ಣುಗಳಿಂದ ಟ್ರೇನಿಂಗ್ ಸ್ಕೂಲಿನ ವಿದ್ಯಾರ್ಥಿಗಳು ತಯಾರಿಸಿದ ಬಗೆಬಗೆಯ

ನಕಾಶ ಮುಂತಾದವು ಬಹು ಮನೋಹರವಾಗಿ ಕಂಗೊಳಿಸುತ್ತಿದ್ದವು. ಅವುಗಳಲ್ಲಿ ಸಂಯುಕ್ತಕರ್ನಾಟಕ, ವಿಜಯನಗರ ವಿಜಾಪುರ ಪಟ್ಟಣಗಳು, ಕರ್ನಾಟಕದ ಉದ್ಯೋಗ ಕೈಗಾರಿಕೆಗಳು, ಹಿಂದುಸ್ಥಾನದ ಔದ್ಯೋಗಿಕ ಪಟ್ಟಣಗಳು, ಆಫ್ರಿಕದ ಬೆಳೆ ಪ್ರಾಣಿ ಜನಗಳು ಅಲ್ಲಿಯ ರೇಲ್ವೆ ಮುಂತಾದುವು, ಮಾದರಿಯ ಹಳ್ಳಿ, ಜ್ವಾಲಾಮುಖಿ, ಹಿಮಾಲಯವೂ ಅಲ್ಲಿ ಹುಟ್ಟಿ ಬರುವ ನದಿಗಳೂ, ಪೃಥ್ವಿಯ ನಕಾಶ ಅದರಲ್ಲಿಯ ಲ್ಯಾಪಲ್ಯಾಂಡ, ಎಸ್ಕಿಮೋ ಇತ್ಯಾದಿ ಭೌಗೋಲಿಕ ಎಲ್ಲ ಸಂಗತಿಗಳು ಇವೇ ಮೊದಲಾದವುಗಳಿಂದೊಡಗೂಡಿದ ನೆಲದ ಮೇಲಿನ ಮಾದರಿ ಮುಂತಾದ ಸಂಗತಿಗಳನ್ನು ಒಂದೊಂದನ್ನಾಗಿ ಟ್ರೇನಿಂಗ ಕಾಲೇಜಿನ ಹೆಡ್‌ಮಾಸ್ತರರವರು ತೋರಿಸುತ್ತ ಅವುಗಳ ಪರಿಚಯವನ್ನೂ ಶಿಕ್ಷಣಕಾರ್ಯದಲ್ಲಿ ಅವುಗಳ ಉಪಯುಕ್ತತೆಯನ್ನೂ ಹೇಳುತ್ತಿದ್ದರು. ಕೆಲವೆಡೆಯಲ್ಲಿ ದ. ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ರಾ. ಬ. ಶಾಸ್ತ್ರಿಯವರು ಎಮ್. ಎ. ಅವರು ಈ ತರದ ನಕಾಶ ಭೂಭಾಗ ಮಾದರಿಗಳ ಉಪಯುಕ್ತತೆಯನ್ನು ಹೇಳುತ್ತಿದ್ದರು. ಮಣ್ಣಿನಿಂದ ಮಾಡಿದ ಕೃತ್ರಿಮ ಜ್ವಾಲಾಮುಖಿಯ ಬಳಿಗೆ ಬಂದಾಗ ಜ್ವಾಲಾಮುಖಿಯ ಸ್ಫೋಟವೂ ಜ್ವಾಲೆಯೂ ಲಾವಾರಸವು ಹೊರಬೀಳುವ ಬಗೆಯೂ ತೋರಿಸಲ್ಪಟ್ಟವು. ಮಂತ್ರಿವರ್ಯರು ತಮ್ಮ ಸಹಜ ಮಂದಹಾಸಯುಕ್ತ ಮುಖಮುದ್ರೆಯಿಂದ ತಮ್ಮ ಆನಂದವನ್ನು ಆಗಾಗ ತೋರ್ಪಡಿಸುತ್ತಿದ್ದರಲ್ಲದೆ ನಡುನಡುವೆ ಅವುಗಳ ವಿಷಯವಾಗಿ ತಮಗೆ ಬೇಕಾದ ಸಂಗತಿಗಳನ್ನು ಕೇಳಿಕೊಳ್ಳುತ್ತಿದ್ದರು. ಆ ಬಳಿಕ ಟ್ರೇನಿಂಗ್ ಸ್ಕೂಲಿನ ಹೆಡ್‌ಮಾಸ್ತರರು ಮಂತ್ರಿವರ್ಯರನ್ನೂ ಅವರೊಡನೆ ಬಂದ ಸದ್ಗೃಹಸ್ಥರನ್ನೂ ಟ್ರೇನಿಂಗ್ ಸ್ಕೂಲಿನ ವಿದ್ಯಾರ್ಥಿಗಳ ಕೈಕೆಲಸದ ಮಾದರಿಗಳು ಗ್ಲೋಬುಗಳು ಮುಂತಾದ ಶಿಕ್ಷಣೋಪಕರಣಗಳು ಇವೆಲ್ಲವುಗಳಿಂದ ತುಂಬಿದ ಜನರಲ್ ಹಾಲಿನೆದುರಿಗಿರುವ ಕೋಣೆಗಳಿಗೆ ಕರಕೊಂಡು ಹೋಗಿ ಅವೆಲ್ಲವನ್ನು ತೋರಿಸಿದರು. ಮಂತ್ರಿವರ್ಯರು ನೋಡಿದ ಎಲ್ಲ ಭಾಗಗಳೂ ನಕಾಶಗಳು, ಚಿತ್ರಗಳು, ಕೈಕೆಲಸಗಳ ಮಾದರಿಗಳು, ಇವುಗಳಿಂದ ಕಿಕ್ಕಿರಿದುಹೋಗಿದ್ದುವು.

ಈ ಮೇರೆಗೆ ಟ್ರೇನಿಂಗ್‌ಸ್ಕೂಲಿನಲ್ಲಿ ಮಂತ್ರಿವರ್ಯರು ನೋಡುವದಕ್ಕಾಗಿ ಹಲವು ಸಂಗತಿಗಳು ಏರ್ಪಡಿಸಲ್ಪಟ್ಟಿದ್ದವು. 'ಪಾತ್ರಗಳು ಬಹಳ, ರಾತ್ರಿ ಸ್ವಲ್ಪ' ಎಂಬಂತೆ ಅದುದರಲ್ಲಿ ಆಶ್ಚರ್ಯವಿಲ್ಲ. ಮಂತ್ರಿವರ್ಯರು ಮುಖ್ಯ ಮಂತ್ರಿಗಳಾಗಿದ್ದರೂ ಶಿಕ್ಷಣಖಾತೆಯು ಅವರ ಕೈಯಲ್ಲಿದ್ದುದರಿಂದ ಟ್ರೇನಿಂಗಸ್ಕೂಲಿನ ವಿದ್ಯಾರ್ಥಿಗಳು ಅವರ ಕಣ್ಣಿದಿರಿಗೆ ಶಿಕ್ಷಣೋಪಕರಣಗಳನ್ನು ರಚಿಸಿಕೊಳ್ಳುವ ದರಲ್ಲಿರುವ ತಮ್ಮ ಕೌಶಲ್ಯವನ್ನು ತೋರ್ಪಡಿಸಬೇಕೆಂಬ ಕುತೂಹಲದಿಂದ

ಅನೇಕಾನೇಕ ಸಂಗತಿಗಳನ್ನು ಒಂದೇಸವನೆ ಸಜ್ಜುಗೊಳಿಸಿದ್ದರು. ಶಿಕ್ಷಣ ಕಾರ್ಯಕ್ಕೆ ಇಂಥ ಉಪಕರಣ ಮಾದರಿಗಳ ಉಪಯೋಗವು ಎಲ್ಲೆಡೆಯಲ್ಲಿಯೂ ಅವಶ್ಯಕ. ಮಂತ್ರಿವರ್ಯರು ಒಂದೊಂದು ಸಂಗತಿಯನ್ನು ನೋಡುವಲ್ಲಿ ಆತುರ ಪಡದೆ ಮನಸ್ಸುಕೊಟ್ಟು ಹೆಚ್ಚುವೇಳೆ ಕಳೆಯುತ್ತಿರುವದನ್ನು ನೋಡಿ ವೇಳೆ ವಿೀರುವದೆಂದು ಆಗಾಗ ಪ್ರೋಗ್ರ್ಯಾಮಿನ ಅಧಿಕಾರಿಗಳು ಮಂತ್ರಿವರ್ಯರಿಗೆ ಸೂಚಿಸುತ್ತಿದ್ದರು. ಆದರೂ ಮಂತ್ರಿವರ್ಯರು ಯಾವುದನ್ನು ನೋಡುವಲ್ಲಿಯೂ ಅವಸರವನ್ನು ಮಾಡದೆ ಜಿಜ್ಞಾಸಾ ದೃಷ್ಟಿಯಿಂದ ಎಲ್ಲವನ್ನು ಕೇಳಿ ತಿಳಿದುಕೊಂಡು ತಮ್ಮ ಮನಸ್ಸಂತೃಪ್ತಿಯನ್ನು ಆಗಾಗ ವ್ಯಕ್ತಗೊಳಿಸುತ್ತಿದ್ದರು. ಅವರ ಸಹಜವಾದ ಉಲ್ಲಾಸವೃತ್ತಿ, ಮಂದಹಾಸದ ಆನಂದ ಪ್ರದರ್ಶನ ಇವುಗಳಿಂದ ಟ್ರೇನಿಂಗ್ ಸ್ಕೂಲಿನ ವಿದ್ಯಾರ್ಥಿ ವರ್ಗವೂ ಆ ವಿದ್ಯಾರ್ಥಿವರ್ಗಕ್ಕೆ ಉತ್ತೇಜನಕೊಟ್ಟು ಈ ಎಲ್ಲ ಶಿಕ್ಷಣೋಪಕರಣಗಳನ್ನೂ ಡ್ರಿಲ್ಲು ಮೊದಲಾದವುಗಳ ಯೋಜನೆಯನ್ನೂ ಮಾಡಿಸುವದರಲ್ಲಿ ಬಹುವಿಧವಾಗಿ ಪರಿಶ್ರಮವನ್ನು ಮಾಡಿದ ಟ್ರೇ. ಸ್ಕೂ. ಹೆಡ್‌ಮಾಸ್ಟರರವರೂ ತಮಗಾದ ಶ್ರಮವನ್ನು ಮರೆತರೆಂದು ಹೇಳಬಹುದು. ಮಂತ್ರಿವರ್ಯರೊಡನೆ ಬಂದ ವಿದ್ಯಾಖಾತೆಯ ಅಧಿಕಾರಿಗಳೂ ಪ್ರೇಕ್ಷಕರೂ ಈ ಎಲ್ಲ ಕೆಲಸಗಳನ್ನು ನೋಡಿ ಸಂತೋಷವನ್ನು ಹೊಂದಿದರೆಂಬ ವಿಷಯದಲ್ಲಿ ಸಂಶಯವಿಲ್ಲ, ಈ ದಿನ ನಡೆದ ಟ್ರೇನಿಂಗಸ್ಕೂಲಿನ ಮತ್ತು ಪ್ರಾಕ್ಟೀಸಿಂಗ್‌ಸ್ಕೂಲಿನ ವಿದ್ಯಾರ್ಥಿಗಳ ಎಲ್ಲ ಕೆಲಸಗಳಲ್ಲಿ ಶಿಸ್ತು, ಆಚ್ಚುಕಟ್ಟುತನ ಮುಂತಾದುವು ಒಡೆದು ಕಾಣಿಸುತ್ತಿದ್ದುದರಿಂದ ಮಂತ್ರಿವರ್ಯರೂ ಅವರೊಡನೆ ಬಂದ ಕರ್ನಾಟಕದ ಮುಂದಾಳುಗಳೂ ತೃಪ್ತಿಯನ್ನೂ ಸಂತೋಷವನ್ನೂ ಹೊಂದಿದರೆಂದು ನಾವು ಅಭಿಮಾನ ಪೂರ್ವಕವಾಗಿ ಹೇಳುತ್ತೇವೆ.

ಟ್ರೇನಿಂಗ್‌ಸ್ಕೂಲಿನ ಸಂದರ್ಶನವನ್ನು ಮುಗಿಸಿದ ಬಳಿಕ ಮಂತ್ರಿವರ್ಯರು ಮೆ॥ ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬರವರ ಮತ್ತು ಮತ್ತು ಮೆ॥ ಹೆಡ್ ಮಾಸ್ತರರು ಟ್ರೇ. ಸ್ಕೂ. ಧಾರವಾಡರವರ ನಿರೋಪ ತೆಗೆದುಕೊಂಡು ಟ್ರೇ. ಕಾಲೇಜಿನ ಜನರಲ್‌ಹಾಲಿನಲ್ಲಿ ಧಾರವಾಡದ ಆರ್ಟಸರ್ಕಲ್ಲಿನವರು ಏರ್ಪಡಿಸಿದ ಗಾಯನ ಮೇಲಾಟದಲ್ಲಿ ಮೇಲೆ ಬಂದವರಿಗೆ ಮಂತ್ರಿವರ್ಯರ ಹಸ್ತದಿಂದ ಪಾರಿತೋಷಿಕಗಳನ್ನು ಕೊಡಿಸಬೇಕೆಂದು ಸಜ್ಜುಗೊಳಿಸಿದ ಸಮಾರಂಭಕ್ಕೆ ತಮ್ಮ ಸಂಗಡಿಗರೊಡನೆ ವಿಜಯಮಾಡಿಸಿದರು.

ಸ್ತ್ರೀ ಶಿಕ್ಷಣ

ಕವಿ : ಚ. ಸಿ. ನವಾತಿ ಮಾಸ್ತರ ಕುಪ್ಪೇಲೂರು

[ಭಾ. ಷ.]

ಪುರುಷ ನಾರಿಯರೆಂಬ ಗಾಲಿಗ- ।
ಳೆರಡಿಹವು ಸಂಸಾರ ರಥಕೆಯು ।
ಹಿರಿಕಿರಿಯ ಗಾಲಿಗಳ ಯೋಗದಿ ರಥವು ನಡೆಯುದವೋಲ್ ॥
ಪುರುಷ ಶಿಕ್ಷಿತನಾಗಿ ನಾರಿಯ- ।
ಳರಿಯದಿರೆ ಶಿಕ್ಷಣವ ನಡೆಯದು ।
ಸರಸದಿಂ ಸಂಸಾರರಥವದು ಸರುವರನುಭವವು ॥ ೧ ॥

ತಂದೆ ತಾಯಿಗೆ ಮೇಣ್ ಮಗಗೆ ಸಂ- ।
ಬಂಧ ನೋಡಲು ತಾಯಿಯಧಿಕವು ।
ತಂದೆ ನೆವಮಾತ್ರದಲಿ ತೋರುವನ್ಯೆದುವರುಷವಧಿ ॥
ಕಂದ ಕಲಿವನು ತಾಯಿ ಗುಣಗಳ ।
ವ್ಯಂದವದರಿಂ ಸ್ತ್ರೀಗೆ ಶಿಕ್ಷಣ ।
ಚಂದದಿಂ ಕೊಡಲಾಗುವದು ಜಲ ಬೇರಿಗೆರೆದಂತೆ ॥ ೨ ॥

ಕೆಲವು ಸ್ತ್ರೀಯರು ಸದ್ಯಕಾಲದಿ ।
ಕಲಿತು ಹಸಿಬಿಸಿ ವಿದ್ಯೆಯನು ತಾವ್ ।
ಕುಲಕೆ ಹಚ್ಚಿ ಕಲಂಕವನು ಸ್ವಾತಂತ್ರ್ಯದಿಂದಿರುತ ॥
ಒಲಿದು ಚಹ- ಡ್ರೆಸ್- ಆಟ್- ನೋಟದ ।
ಬಲಿಗೆ ಬೀಳುತ ತಮ್ಮ ಮುಖದಲಿ ।
ತಿಲಕ ಹಚ್ಚದಲಹಹ !! ಹಚ್ಚುವರ್ಯೆ ಕಲಂಕವನು ॥ ೩ ॥

ಶಿಕ್ಷಣದ ಸಂಸ್ಕೃತಿಯು ದೊರಕದ- ।
ಶಿಕ್ಷಿತದ ನಾರಿಯರು ಸರುವರ ।
ಲಕ್ಷ್ಯವನು ಮಾಡದಲೆ ಸ್ವೇಚ್ಛೆಯ ನಡೆನುಡಿಗಳಿಂದಾ ॥
ಈ ಕ್ಷಿತಿಗೆ ತಾವ್ ಭಾರವೆನಿಪರು ।

ತ್ರ್ಯಕ್ಷನಂಜಿಕೆ ತೊರೆದದೊಬ್ಬಳ ।
ರಾಕ್ಷಸೀ ನಾರಿಯಳ ಚತುರತೆ ಕೇಳಿರೈ ನೀವು ॥ ೪ ॥

ಅತ್ತಿ ಮರದೊಳು ಬಿಟ್ಟ ಹೂವನು, ।
ಮತ್ತೆ ಬೆಳಿ ಕಾಗೆಯನು, ಜಲದೊಳು ।
ಸುತ್ತುವರಿಯುವ ವಿಾನುಗಳ ಪಾದಂಗಳಂ ನೋಡಲ್ ॥
ಯತ್ನಮಾಡಿದೊಡಾಗ ಬಹುದು ಪ್ರ- ।
ಯತ್ನಮಾಡಲಸಾಧ್ಯ ದುಸ್-ಚಾ- ।
ರಿತ್ರ ನಾರಿಯ ಹೃದಯವೆಂದರು ನೀತಿಶಾಸ್ತ್ರಜ್ಞರ್ ॥ ೫ ॥

ಮೊದಲು ಕರವನು, ಬಳಿಕ ಟೊಂಕವ ।
ಮುದದಿ ಪಿಡಿಯಲು, ನಖದ ಮುಖದಿಂ ।
ಮುದವದಾಯ್ತೆನುತಿರಲು ಪಿಂದಿಹ ಪತಿಯ ಕಾಣುತಲಿ ॥
ಚದುರೆ ಗೌಪ್ಯವ ಮುಚ್ಚುತಲಿ ಸಖಿ- ।
ಯೆದುರಿನಲಿ ಹೇಳಿದಳು ಬೇಗದಿ ।
ಸುದತಿ ವಿಟನಲ್ಲಿಂತು ಮಾಳ್ಪುದು ಹುರುಕುತಾನೆಂದು ॥ ೬ ॥

ನರನು ತನ್ನಯ ನೆರಳತುದಿಯನು ।
ಭರದಿ ಪಿಡಿಯುನೆನೆಂದು ಪೋಗಲು ।
ಕರಕೆ ಸಿಗುವದೆ ಮುಂದೆ ಪೋಪುದು ನೆರಳು, ನರನಾಗ ॥
ತಿರುಗಿ ನಡೆಯಲು ತನ್ನ ಬೆನ್ನನು ।
ಭರದಿ ಪತ್ತುವ ನೆರಳಿನಂದದಿ ।
ತರುಣಿಯರ ಗುಣವಿಹುದು ತರುಣರು ನೋಡಿ ನಡೆಯುವದು ॥ ೭ ॥

ಎಲ್ಲ ನಾರಿಯರಿಂತು ನಡೆಯುವ- ।
ದಿಲ್ಲ ಸುಗುಣೆಗಳಿರ್ಪರೆನಿಬರು ।
ಕಲ್ಲ ಮಗಳೊಲ್ಲಭನ ಭಜಿಸುತಲವರು ಪತಿಭಕ್ತ ॥
ಸಲ್ಲಿಪರು ತಮ್ಮಗಳ ಚರಿತೆಯ- ।
ನೆಲ್ಲರುಂ ಕೊಂಡಾಡೆ ಮುದದೊಳ- ।
ಹಲ್ಯೆ,-ದ್ರೌಪದಿ,- ಸೀತೆ,- ಮಂಡೋದರಿಯು-ತಾರೆಯರೋಲ್ ॥೮॥
ನಿತ್ಯದಲಿ ಪತಿಯನ್ನು ಭೈಯುತ-।
ಲತ್ತೆ ಮಾವಂದಿರನು ಸೇವಿಸ- ।

ದತ್ತಿಗೆಯ, ಮೈದುನನ, ಭಾವನ, ಹಳಿವ ಮುದನಾರಿ ||
ಚಿತ್ತಶುದ್ಧಿಯ ಪಡೆಯುತಾ ದುಷ್–।
ಕೃತ್ಯಗಳ ಪಾಪಕ್ಕೆ ಪ್ರಾಯ–।
ಶ್ಚಿತ್ತವನು ಪಡೆಯಲ್ಕೆಯೊಲಿವನು ಬೇಗಮುದನಾರಿ ||೯||

ಇಲ್ಲಿ ೧ನೇ ಮದನಾರಿ= ಸೊಕ್ಕುಳ್ಳ ಸ್ತ್ರಿ; ೨ನೇ ಮುದನ + ಅರಿ= ಶಿವನೆಂದು ಅರ್ಥ

ಕೆಲಸದೊಳು ತಾ ಮಂತ್ರಿಯೆನಿಪಳು।
ಲಲನೆ ಕರುಣಾ ಗುಣದಿ ದಾಸಿಯು।
ಒಲಿದು ಭೋಜನಕಿಕ್ಕುವಡೆ ತಾ ಮಾತೆಯೆನಿಸುವಳು ||
ಮಲಗೆ ರಂಭೆಯು ಸರುವ ಕೆಲಸದೊ–।
ಳೊಲುಮೆಯಿಂದಿರೆ ಕ್ಷಮದಿ ಭೂಮಿಯ–।
ವೊಲು ನಡೆಯೆ ಷಡ್ಗುಣದಿ ಹೆಂಡತಿ ಕುಲಕೆ ದೀಪಕಳು ||೧೦||

ಆರಯಲ್ ಶಿಕ್ಷಣದ ವಿಷಯದಿ।
ಮೂರು ತೆರನಿದೆ ಪ್ರಾಥಮಿಕ ಮೇಣ್।
ಚಾರುತರ ಮಾಧ್ಯಮಿಕ ಮುಚ್ಚತವೆಂಬ ನಾಮದಲಿ ||
ಮೂರರೊಳ್ ಪ್ರಾಥಮಿಕವದೆ ತಾಯ್–।
ಬೇರಿನಂದದಲಿರುವದದರಿಂ।
ನಾರಿಪೊಂದಲು ಬೇಕು ತಾ ಪ್ರಾಥಮಿಕ ಶಿಕ್ಷಣವ ||೧೧||

ಮಾಸಿಕದ ರೂಪದಲಿ ಮೇಣ್ ಸುಖ–।
ಲಾಸ ನವಚೈತನ್ಯ ವಾಂತಿಹ।
ಲೇಸು ಲೇಖದಿ ಹೊರಡುತಿಹ ಪ್ರಾಥಮಿಕ ಶಿಕ್ಷಣವ ||
ಹೌಸಿನಿಂದಲಿ ತೆಗೆದು ಶಿಕ್ಷಕ–।
ರಾಸೆ ಪೂರೈಸುವರು ಲಕ್ಷ್ಮೀ–।
ವಾಸ ಮೇಣ್ ಸುಖವಾಗುತಿರಲ್ಕೆ ಕಾಳೆರಾಯರಿಗೆ ||೧೨||

ಕನ್ನಡ ವಾಚನ ಪಾಠಮಾಲೆ

ಮತ್ತು

ಕವಿತಾ ಪಾಠಮಾಲೆ

ಸಂಪಾದಕರು: ಮು. ಪ್ರ. ಪೂಜಾರ, ಕನ್ನಡ ಪಂಡಿತ
ನಾ. ವೆಂ. ಕುರಡಿ, ಹೆ|| ಮಾ. ಪ್ರಾ. ಸ್ಕೂ. ಟ್ರೇ. ಸ್ಕೂ. ಧಾರವಾಡ

ಪುಟ ಕ್ರೌನ್ ೨೪೬ ಮುದ್ರಣಾದಿಗಳು ಒಳ್ಳೆಯವು ಬೆಲೆ ೧–೧–೦

ಇದು ಕನ್ನಡ ಭಾಷಾಭ್ಯಾಸಿಗಳಿಗಾಗಿ ಉತ್ತಮ ಗ್ರಂಥಗಳೊಳಗಿನ ಒಳ್ಳೆಯ ಭಾಗಗಳನ್ನು ಆರಿಸಿ, ಬೇರೆ ಒಳ್ಳೆಯ ಲೇಖಗಳನ್ನು ಸೇರಿಸಿ ರಚಿಸಿದ ೧೫ ವಾಚನ ಪಾಠ ೨೪ ಕವಿತಾಪಾಠಗಳ ಸಂಗ್ರಹ ಪುಸ್ತಕವು. ಈ ವಾಚನ ಪಾಠಗಳ ಮತ್ತು ಕವಿತಾಪಾಠಗಳ ಅಭ್ಯಾಸಕ್ಕೆ ಅನುಕೂಲವಾಗುವಂತೆ ಗ್ರಂಥಪರಿಚಯ, ಶಬ್ದಕೋಶ, ಟಿಪ್ಪಣಿಗಳು, ಮಾದರಿಯ ಪ್ರಶ್ನೆಗಳು ಎಂಬ ಭಾಗಗಳನ್ನೊಳಗೊಂಡ ವಿಸ್ತೃತ ಅನುಬಂಧಗಳೆರಡು ಕೊನೆಗೆ ಜೋಡಿಸಲ್ಪಟ್ಟಿವೆ. ಈ ಅನುಬಂಧಗಳಿಂದ ಪಠ್ಯಭಾಗಗಳ–ವಾಚನ ಮತ್ತು ಕವಿತಾಪಾಠಗಳ–ಅರ್ಥ, ಕಠಿಣ ಶಬ್ದಗಳ ನಿವರಣೆ ಮುಂತಾದ ತಿಳಿಯಬೇಕಾದ ಅಂಶಗಳೆಲ್ಲ ತಿಳಿದುಬರುವವು.

ಬರುವ (೧೯೩೯ ರ) ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಪ್ರಾ. ಸ್ಕೂ. ಲೇ. ಸ. ಪರೀಕ್ಷೆಗೆ ಗದ್ಯಪದ್ಯ ವಿಷಯಗಳಿಗೆ ಪಠ್ಯಪುಸ್ತಕಗಳು ಇಲ್ಲ. ಜನರಲ್ (ಸಾಮಾನ್ಯ) ವಿಷಯಗಳಲ್ಲಿ ಪ್ರಶ್ನೆಗಳು ಬರುವವು. ಈ ಪರೀಕ್ಷೆಯ ವಿದ್ಯಾರ್ಥಿಗಳ ಭಾಷಾಭ್ಯಾಸಕ್ಕೆ ಯೋಗ್ಯವಾದ ಒಂದು ಪುಸ್ತಕವು ಬೇಕಾಗಿತ್ತು. ಈ ಯೋಗ್ಯ ಸಮಯದಲ್ಲಿ ಈ ಪುಸ್ತಕವನ್ನು ಪ್ರಕಟಿಸಿದ ಸಂಪಾದಕರನ್ನು ನಾವು ಅಭಿನಂದಿಸದೆ ಇರಲಾರೆವು.

ಭಾಷಾಭ್ಯಾಸವೆಂದರೆ ಭಾಷೆಯನ್ನು ತಿಳಿಯುವದು; ಮತ್ತು ಭಾಷೆಯನ್ನು ಉಪಯೋಗಿಸುವದು. ಭಾಷಾಜ್ಞಾನಕ್ಕೆ ಭಿನ್ನಭಿನ್ನ ಪ್ರಕಾರದ ಸರಳವಾದ, ಗಡಚಾದ, ಭಾಷೆಯುಳ್ಳ ಬೇರೆ ಬೇರೆ ಗ್ರಂಥಗಳನ್ನು ಇಲ್ಲವೆ ಅಂಥ ಗ್ರಂಥ ಭಾಗಗಳನ್ನು ಬಾಲಕರು ಓದಿ ತಿಳಿದುಕೊಳ್ಳಬೇಕು. ಇದರಿಂದ ಅವರ ಶಬ್ದ ಭಾಂಡಾರವು ಬೆಳೆಯಬೇಕು. ತಾವು ಕಲಿತ ವ್ಯಾಕರಣದ ಸಹಾಯದಿಂದ ಭಾಷೆಯ ಸರಿಯಾದ ಮತ್ತು ಮಾರ್ಮಿಕವಾದ ಎಲ್ಲ ಅರ್ಥವನ್ನು ಮಾಡುವ ವ್ಯಾಸಂಗವು

ಅವರಿಗೆ ಬೇಕು. ಈ ತರದ ಅಭ್ಯಾಸದ ಅನುಕೂಲತೆಗಾಗಿ ಈ ವಾಚನ ಪಾಠಮಾಲೆಯಲ್ಲಿ ಸರಳವಾದ, ಗಡಚಾದ, ವ್ಯಾಕರಣಶುದ್ಧವಾದ, ಪ್ರೌಢವಾದ, ವ್ಯಂಗ್ಯಾರ್ಥ (ತೋರಿ ಬರುವ ಅರ್ಥ)ಯುಕ್ತವಾದ, ಭಾಷೆಗಳನ್ನೊಳಗೊಂಡ ಪಾಠಗಳು ಬಂದಿವೆ. ಭಾಷಾಭ್ಯಾಸದ ೭ನೆಯ ಅಂಗಕ್ಕೆ ಅಂದರೆ ಭಾಷೆಯನ್ನು ಉಪಯೋಗಿಸುವದಕ್ಕೆ ಭಿನ್ನ ಭಿನ್ನ ಶೈಲಿಗಳ ಹಲವು ಗ್ರಂಥಗಳನ್ನು ಇಲ್ಲವೆ ಗ್ರಂಥಭಾಗಗಳನ್ನು ಚೆನ್ನಾಗಿ ಓದಬೇಕು. ಇದಕ್ಕಾಗಿ ಈ ಪುಸ್ತಕದಲ್ಲಿ ಸರಳ ಶೈಲಿ, ಮಧುರ ಶೈಲಿ, ಕ್ಲಿಷ್ಟಶೈಲಿ, ಕಾದಂಬರಿ ಶೈಲಿ, ಶಾಸ್ತ್ರೀಯಶೈಲಿ, ವ್ಯಂಗ್ಯಾರ್ಥಯುಕ್ತ ಶೈಲಿ, ಮುಂತಾದ ಎಲ್ಲ ಬಗೆಯ ಶೈಲಿಗಳುಳ್ಳ ಗ್ರಂಥ ಭಾಗಗಳು ಬಂದಿವೆ; ಎಂದರೆ ಚರಿತ್ರೆ ನೀಳ್ಗತೆ, ಚಿಕ್ಕ ಕಥೆ, ಕಾದಂಬರಿ, ನಾಟಕ, ಪ್ರೌಢ ಗದ್ಯ–ಪ್ರಬಂಧ, ಸಂಭಾಷಣ, ವಿನೋದಾತ್ಮಕ ಭಾಷೆ, ಶಾಸ್ತ್ರೀಯ ವಿಷಯ ಮುಂತಾದ ಎಲ್ಲತರದ ಗದ್ಯಭಾಗಗಳು ಸೇರಿವೆ. ಗ್ರಂಥದ ಶೈಲಿಯ ಸಂಬಂಧದಿಂದ ಸಂಪಾದಕರು ಮುನ್ನುಡಿಯಲ್ಲಿ ಹೀಗೆ ಹೇಳಿರುವರು:—

" ಶೈಲಿಯ ಅಭ್ಯಾಸವು ಎರಡು ತೆರನಾಗಿದೆ. ಬೇರೆ ಬೇರೆ ಪ್ರದೇಶಗಳ ಭಿನ್ನ ಭಿನ್ನ ಗ್ರಂಥಕರ್ತರ ಗ್ರಂಥಗಳನ್ನೋದಿ ಅವರ ಭಾಷೆಗಳಲ್ಲಿರುವ ಗ್ರಾಹ್ಯಾಂಶಗಳನ್ನು ಗ್ರಹಿಸಿಕೊಂಡು ಅವನ್ನು ತನ್ನಲ್ಲಿ ಜೀರ್ಣಿಸಿಕೊಂಡು ತನ್ನದೊಂದು ಭಾಷೆಯನ್ನು ಸಿದ್ಧಪಡಿಸಿಕೊಳ್ಳುವದು ಒಂದುತೆರ; ಇಂಥ ಎಲ್ಲ ಗ್ರಾಹ್ಯಭಾಗಗಳನ್ನೊಳಗೊಂಡ ಮಾದರಿಯ ಭಾಷೆಯನ್ನೋದಿ ಅದನ್ನೇ– ಅತರದ ಭಾಷೆಯನ್ನೇ- ಜೀರ್ಣಿಸಿಕೊಂಡು ತನ್ನ ಭಾಷೆಯನ್ನು ಸಿದ್ಧಪಡಿಸಿಕೊಳ್ಳುವದು, ಎರಡನೆಯ ತೆರ. ಪ್ರೌಢ ವಿದ್ಯಾಲಯಗಳ ಇಲ್ಲವೆ ಕಾಲೇಜಿನ ವಿದ್ಯಾರ್ಥಿಗಳು ಒಂದನೆಯ ತೆರದಿಂದ ತಮ್ಮ ಭಾಷೆಯನ್ನು ಸಿದ್ಧಪಡಿಸಿಕೊಳ್ಳಲಾಪರು. ಸಾಮಾನ್ಯ ಬಾಲಕರು ಇಲ್ಲವೆ ಪ್ರಾ. ಸ್ಕೂ. ಲೀ. ಸ. ಪರೀಕ್ಷೆಯ ವಿದ್ಯಾರ್ಥಿಗಳಂಥ ಚಿಕ್ಕ ಬಾಲಕರು ಎರಡನೆಯ ತೆರದಿಂದ ತಮ್ಮ ಭಾಷೆಯನ್ನು ಸಿದ್ಧಪಡಿಸಿಕೊಳ್ಳಲಾಪರು. ಈ ಎರಡೂ ತೆರಗಳಿಂದ ತಮ್ಮ ಭಾಷೆಯನ್ನು ಸಿದ್ಧಪಡಿಸಿಕೊಳ್ಳಲು ಈ ಪುಸ್ತಕವು ಹೆಚ್ಚು ಪ್ರಯೋಜನಕರವಾಗಿರುವುದೆಂದು ಹೇಳಬಹುದು.

ಕನ್ನಡ ನಾಡಿನಲ್ಲಿ ಭಿನ್ನ ಭಿನ್ನ ಪ್ರದೇಶಗಳ ಭಾಷೆಗಳಲ್ಲಿ ಕೆಲಕೆಲವು ವ್ಯತ್ಯಾಸಗಳು ಕಾಣಬರುವವು. ಎಂದರೆ ಪ್ರಾದೇಶಿಕತೆ ತೋರಿಬರುವದು. ಈ ಪ್ರಾದೇಶಿಕತೆಯನ್ನು ಬದಿಗಿರಿಸಿ ಗ್ರಾಂಥಿಕ ಭಾಷೆಯ ಏಕೀಕರಣ ಮಾಡುವದಕ್ಕಾಗಿ ಕನ್ನಡ ನಾಡಿನ ಮುಂದಾಳುಗಳು ಪ್ರಯತ್ನಿಸುತ್ತಿರುವರು. ಭಾಷಾ ವಿಶಾರದರ ಭಾಷೆಯು ಅವರು ಯಾವ ಪ್ರದೇಶದವರಾಗಿದ್ದರೂ– ಮುಂಬಯಿ

ಕರ್ನಾಟಕದವರಿರಲಿ, ಮಂಗಳೂರಿನವರಿರಲಿ, ಮೈಸೂರಿನವರಿರಲಿ ಅವರ ಭಾಷೆಯು ಒಂದೇವಿಧವಾಗಿರುವದೆಂದು ಹೇಳಬಹುದು : ಅವರಲ್ಲಿ ಪ್ರಾದೇಶಿಕತೆ ಹೆಚ್ಚಾಗಿ ಕಾಣಬರುವದಿಲ್ಲ. ಸಾಮಾನ್ಯರ ಭಾಷೆ ಪ್ರಾದೇಶಿಕತೆಯಿಂದ ಆಕ್ರಮಿಸಲ್ಪಟ್ಟು ಭಿನ್ನ ಭಿನ್ನ ಭಾಷೆಗಳಂತೆ ತೋರುವದು. ಈ ವಾಚನಪಾಠಮಾಲೆಯ ಭಾಷೆಯು ಎಲ್ಲಿಯೂ ಪ್ರಾದೇಶಿಕತೆಯಿಂದ ಆಕ್ರಮಿಸಲ್ಪಡದೆ ಕನ್ನಡ ನಾಡಿನ ಎಲ್ಲ ಭಾಗಗಳಿಗೆ ಮಾದರಿಯದಾಗಿರುವುದೆಂದರೆ ಹೆಚ್ಚಿಗೆ ಹೇಳಿದಂತಾಯಿತೆಂದು ನಮಗೆ ಎನಿಸುವದಿಲ್ಲ. ಈ ವಾಚನಪಾಠಮಾಲೆಯೊಳಗಿನ ಸು. ೬೦ ಪುಟಗಳ ಮೂರು ಪಾಠಗಳು ಮುಂಬಯಿ, ಮದ್ರಾಸ, ಮೈಸೂರು ಈ ಮೂರು ಪ್ರಾಂತಗಳ ಸರ್ಕಾರಗಳಲ್ಲಿಯೂ ಪಠ್ಯಪುಸ್ತಕ (ಟಿಕ್ಸ್ಟ್) ಗಳಾಗಿರುವ ಗ್ರಂಥಗಳೊಳಗಿನವೇ ಇರುತ್ತವೆಂಬುದರಿಂದ ನಾವು ಹೇಳಿದ್ದು ಯೋಗ್ಯವಾಗಿರುವದೆಂಬಲ್ಲಿ ಸಂಶಯವಿಲ್ಲ.

ಪದ್ಯಪಾಠಗಳು ಸುಪ್ರಸಿದ್ಧವಾದ ಕನ್ನಡಭಾರತ, ಚೆನ್ನಬಸವ ಪುರಾಣ, ತೊರವೆರಾಮಾಯಣ ಮೊದಲಾದ ಎಲ್ಲ ಮಹತ್ಪದ ಷಟ್ಪದೀ ಕಾವ್ಯಗಳಿಂದ ಆಯ್ದುಕೊಂಡವಾಗಿವೆ. ಶ್ರೀ. ಬೇಂದ್ರೆಯವರು ಶ್ರೀ. ಸಾಲಿ ರಾಮಚಂದ್ರ ರಾಯರು ಮೊದಲಾದ ಆಧುನಿಕ ಕವಿವರ್ಯರ ಕವನಗಳೂ ಪದ್ಯಪಾಠಗಳಲ್ಲಿ ಸೇರಿವೆ. ಈ ಪುಸ್ತಕದಲ್ಲಿರುವ ಸುಮಾರು ೧೬೦೦ ಸಾಲು ಪದ್ಯಗಳನ್ನು ಅರ್ಥಮಾಡಿ ಕೊಂಡು ಕಲಿತ ವಿದ್ಯಾರ್ಥಿಯು ಪದ್ಯಭಾಷೆಯಲ್ಲಿ ವ್ಯುತ್ಪತ್ತಿಯನ್ನು ಪಡೆಯುವನು. ಹೊಸ ಯಾವ ಪದ್ಯದ ಅರ್ಥವನ್ನಾದರೂ ಮಾಡಲು ಆತನು ಶಕ್ತನಾಗುವನು."

ಈ ಪುಸ್ತಕವನ್ನು ಉಪಯೋಗಿಸಿಕೊಳ್ಳುವದು ವಿದ್ಯಾರ್ಥಿಗಳನ್ನೂ ಶಿಕ್ಷಕರನ್ನೂ ಅವಲಂಬಿಸಿರುವದು. ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳುವದು, ಕಠಿಣ ಭಾಗಗಳನ್ನು ವಿಸ್ತರಿಸುವುದು, ವಿಸ್ತೃತವಾದ ಸುಲಭ ಭಾಗಗಳ ಸಾರಾಂಶವನ್ನು ಸಂಗ್ರಹಿಸುವದು, ವಿಶಿಷ್ಟಶಬ್ದಗಳ ಅರ್ಥವನ್ನು ವ್ಯುತ್ಪತ್ತಿಪೂರ್ವಕವಾಗಿ ಸರಿಯಾಗಿ ತಿಳಿದುಕೊಳ್ಳುವದು, ರಸಭಾವಗಳಿಗನುಚಿತವಾಗಿರುವ ಅಲ್ಲಲ್ಲಿಯ ಶೈಲಿಗಳನ್ನು ವಿಮರ್ಶಿಸುವದು, ಒಳ್ಳೆಯ ಶೈಲಿಯ ಭಾಗಗಳನ್ನು ಅನುಕರಿಸುವದು ಸಂಭಾಷಣಗಳ ಔಚಿತ್ಯವನ್ನು ಕಂಡುಹಿಡಿಯುವದು ಅಲ್ಲಲ್ಲಿಯ ವ್ಯಂಗ್ಯಾರ್ಥ (ತೋರಿ ಬರುವ ಅರ್ಥ) ಗಳನ್ನು ಗಮನಿಸುವದು, ಇದಲ್ಲದೆ ಈ ಪುಸ್ತಕದಲ್ಲಿ ಕೊಟ್ಟ ಮಾದರಿ ಪ್ರಶ್ನೆಗಳಿಗೂ ಇಂತಹ ಬೇರೆ ಪ್ರಶ್ನೆಗಳಿಗೂ ಉತ್ತರಗಳನ್ನು ಹೇಳುವದು, ಬರೆಯುವದು, ಅವನ್ನು ಬಲ್ಲವರಿಂದ ಸರಿಪಡಿಸಿಕೊಳ್ಳುವದು, ತಾವು ಕಲಿತ ವ್ಯಾಕರಣ ವಿಚಾರಗಳನ್ನು ಇದರಲ್ಲಿ ಅನ್ವಯಿಸುವದು, ಕಂಡುಹಿಡಿಯುವದು, ಮುಂತಾದ ಮಾರ್ಗಗಳಿಂದ ಈ ಪುಸ್ತಕವೊಂದನ್ನು ಅಭ್ಯಾಸಿಸಿದರೆ ವಿದ್ಯಾರ್ಥಿ

ಗಳು ಭಾಷೆಯಲ್ಲಿ ವ್ಯುತ್ಪತ್ತಿಯನ್ನೂ ಭಾಷಾ ಸ್ವಾರಸ್ಯ ಗ್ರಹಣ ಸಾಮರ್ಥ್ಯವನ್ನೂ ಒಳ್ಳೆಯ ಭಾಷೆಯ ಶೈಲಿಯನ್ನೂ ಹೊಂದುವರೆಂದು ನಿಸ್ಸಂಶಯವಾಗಿ ಹೇಳುತ್ತೇವೆ.

ಈ ಸಾರೆಯ ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಪ್ರಾ. ಸ್ಕೂ. ಲೀ. ಸ. ಪರೀಕ್ಷೆಯ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಕೈಯಲ್ಲಿ ಈ ಪುಸ್ತಕವನ್ನು ಕೊಟ್ಟು ಇಲ್ಲಿ ಹೇಳಿದ ರೀತಿಯಿಂದ ಅಭ್ಯಾಸಮಾಡಿಸಿ ವಿದ್ಯಾರ್ಥಿ ವಿದ್ಯಾರ್ಥಿನಿಯರ ಕಲ್ಯಾಣವನ್ನು ಮಾಡುವದು ನಮ್ಮ ಬಂಧುಗಳಾದ ಶಿಕ್ಷಕರ ಮತ್ತು ಭಗಿನಿಯರಾದ ಶಿಕ್ಷಿಕೆಯರ ಕರ್ತವ್ಯವಾಗಿರುವದರಿಂದ ಅವರು ಹಾಗೆ ಮಾಡುವರೆಂದು ಹಾರೈಸಿದ್ದೇವೆ.

ಇಂತಹ ಪುಸ್ತಕದ ಅತಿಶಯ ಗರಜು ಇರುವ ಈ ಸಮಯದಲ್ಲಿ ಪ್ರಾಥಮಿಕ ಶಾಲೆಗಳ ಶಿಕ್ಷಕರೂ ಶಿಕ್ಷಿಕೆಯರೂ ಯಾವ ಪುಸ್ತಕದ ಅಭ್ಯಾಸ ಮಾಡಿಸಬೇಕೆಂಬ ವಿಚಾರದಲ್ಲಿ ಮುಂದುಗಾಣದೆ ಕುಳಿತ ಸಮಯದಲ್ಲಿ ಕನ್ನಡ ಭಾಷೆಯಲ್ಲಿ ಬಲ್ಲಿದರೂ ಅನುಭವಿಕರೂ ಆದ ಈ ಗ್ರಂಥದ ಸಂಪಾದಕರಿಬ್ಬರು ನಮ್ಮ ನಾಡಿನ ವಿದ್ಯಾರ್ಥಿ ವಿದ್ಯಾರ್ಥಿನಿಯರ ಕಲ್ಯಾಣದೃಷ್ಟಿಯಿಂದ ಈ ಪುಸ್ತಕವನ್ನು ಪ್ರಕಟಿಸಿದ್ದಕ್ಕಾಗಿ ನಾವು ಅವರನ್ನು ಇನ್ನೊಮ್ಮೆ ಅಭಿನಂದಿಸುವೆವು. ಈ ಪುಸ್ತಕಗಳು ಬೆಳಗಾಂಪಯ ಶ್ರೀಮಹಾವೀರ ಮುದ್ರಣಾಲಯದಲ್ಲಿಯೂ ಎಲ್ಲ ಬುಕ್‌ಡಿಪೋಗಳಲ್ಲಿಯೂ ಸಿಗುವವು.

G. M. S.

೧ನೆಯ ಇಯತ್ತೆ

ವಿಷಯ— ನಿಬಂಧ (೧ನೆಯ ಪು. ದ ಪಾಠ ೧೧ ರಲ್ಲಿಯ ಚಿತ್ರದ ಸಹಾಯದಿಂದ)

ವೇಳೆ : ೩೦ ನಿ.

ಉದ್ದೇಶ : ಬರೆಹದಲ್ಲಿ ಸುಧಾರಣೆ ಹಾಗು ನಿರೀಕ್ಷಣಶಕ್ತಿಯ ಬೆಳವಣಿಗೆ.

ಉಪಕರಣ : ಶಿಕ್ಷಕನು ಕರೆ ಹಲಿಗೆಯ ಮೇಲೆ ತೆಗೆದ ಪಂತಿಯ ಚಿತ್ರ, ರೂಲ ಹಾಕಿದ ಪುಸ್ತಕಗಳು, ಸೀಸಕಡ್ಡಿಗಳು

ಶಿಕ್ಷಕ : ಜೆ. ಜಿ. ಕುಲಕರ್ಣಿ ಅ. ಸಿ. ಮಾ. ಪ್ರ್ಯಾಕ್ಟಿಸಿಂಗಸ್ಕೂಲ, ಧಾರವಾಡ.

ಉಪೋ—ಚಿತ್ರತೋರಿಸಿ, ಇವರು ಯಾರು ? ಏನು ಮಾಡುತ್ತಿರುವರು ? ಪ್ರತಿಯೊಬ್ಬ ಹುಡುಗನು ಏನು ಮಾಡುತ್ತಿರುವನು ? ಚೆನ್ನಾಗಿ ನಿರೀಕ್ಷಿಸಿ ಹೇಳಿರಿ. ಎಂದು ಅವರಿಗೆ ಮಾತಾಡಲಿಕ್ಕೆ ಉತ್ತೇಜನಕೊಟ್ಟು ವಿಷಯಾರಂಭಿಸುವದು.

ಮೆಟ್ಟು.	ವಿಷಯ.	ಕಲಿಸುವ ಕ್ರಮ.	ಕ. ಹ. ಬರೆಹ.
೧ ವಿಷಯ ಪರಿಚಯ	ಪಂತಿಯ ಚಿತ್ರದ ನಿರೀಕ್ಷಣ	ಚಿತ್ರದೊಳಗಿನ ಎಲ್ಲ ಸಂಗತಿಗಳನ್ನು ಲಕ್ಷಗೊಟ್ಟು ನೋಡಿರಿ, ಗಿಡವನ್ನು ತೋರಿಸಿ ಇದು ಏನು ? ಹೂವಿನ ಗಿಡಗಳನ್ನು ತೋರಿಸಿ ಇವು ಏನು ? ತಂಬಿಗೆ, ಪುಸ್ತಕಗಳು ಅಂಗಿಟೊಪ್ಪಿಗೆಗಳು ಇವನ್ನೆಲ್ಲ ಇದೇ ರೀತಿ ತೋರಿಸಿ ನಿರೀಕ್ಷಣಕ್ಕೆ ಉತ್ತೇಜನಕೊಡುವದು. ತರುವಾಯ ಇಲ್ಲಿ ಹುಡುಗರು ಏನು ಮಾಡುತ್ತಾರೆ? ಹೀಗೆ ಮಾಡಿ ಊಟ ಮಾಡುವದಕ್ಕೆ 'ಪಂತಿ' ಅನ್ನುತ್ತಾರೆ. ಪಂತಿಯ ವಿಷಯವಾಗಿ ಎಲ್ಲರನ್ನು ಕೇಳಿಕೊಳ್ಳುವದು.	

ಗಳು ಭಾಷೆಯಲ್ಲ ವ್ಯುತ್ಪತ್ತಿಯನ್ನೂ ಭಾಷಾ ಸ್ವಾರಸ್ಯ ಗ್ರಹಣ ಸಾಮರ್ಥ್ಯವನ್ನೂ ಒಳ್ಳೆಯ ಭಾಷೆಯ ಶೈಲಿಯನ್ನೂ ಹೊಂದುವರೆಂದು ನಿಸ್ಸಂಶಯವಾಗಿ ಹೇಳುತ್ತೇವೆ.

ಈ ಸಾರೆಯ ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಪ್ರಾ. ಸ್ಕೂ. ಲೀ. ಸ. ಪರೀಕ್ಷೆಯ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಕೈಯಲ್ಲಿ ಈ ಪುಸ್ತಕವನ್ನು ಕೊಟ್ಟು ಇಲ್ಲಿ ಹೇಳಿದ ರೀತಿಯಿಂದ ಅಭ್ಯಾಸಮಾಡಿಸಿ ವಿದ್ಯಾರ್ಥಿ ವಿದ್ಯಾರ್ಥಿನಿಯರ ಕಲ್ಯಾಣವನ್ನು ಮಾಡುವದು ನಮ್ಮ ಬಂಧುಗಳಾದ ಶಿಕ್ಷಕರ ಮತ್ತು ಭಗಿನಿಯರಾದ ಶಿಕ್ಷಿಕೆಯರ ಕರ್ತವ್ಯವಾಗಿರುವದರಿಂದ ಅವರು ಹಾಗೆ ಮಾಡುವರೆಂದು ಹಾರೈಸಿದ್ದೇವೆ.

ಇಂತಹ ಪುಸ್ತಕದ ಅತಿಶಯ ಗರಜು ಇರುವ ಈ ಸಮಯದಲ್ಲಿ ಪ್ರಾಥಮಿಕ ಶಾಲೆಗಳ ಶಿಕ್ಷಕರೂ ಶಿಕ್ಷಿಕೆಯರೂ ಯಾವ ಪುಸ್ತಕದ ಅಭ್ಯಾಸ ಮಾಡಿಸಬೇಕೆಂಬ ವಿಚಾರದಲ್ಲಿ ಮುಂದುಗಾಣದೆ ಕುಳಿತ ಸಮಯದಲ್ಲಿ ಕನ್ನಡ ಭಾಷೆಯಲ್ಲಿ ಬಲ್ಲಿದರೂ ಅನುಭವಿಕರೂ ಆದ ಈ ಗ್ರಂಥದ ಸಂಪಾದಕರಿಬ್ಬರು ನಮ್ಮ ನಾಡಿನ ವಿದ್ಯಾರ್ಥಿ ವಿದ್ಯಾರ್ಥಿನಿಯರ ಕಲ್ಯಾಣದೃಷ್ಟಿಯಿಂದ ಈ ಪುಸ್ತಕವನ್ನು ಪ್ರಕಟಿಸಿದ್ದಕ್ಕಾಗಿ ನಾವು ಅವರನ್ನು ಇನ್ನೊಮ್ಮೆ ಅಭಿನಂದಿಸುವೆವು. ಈ ಪುಸ್ತಕಗಳು ಬೆಳಗಾಂವಿಯ ಶ್ರೀಮಹಾವೀರ ಮುದ್ರಣಾಲಯದಲ್ಲಿಯೂ ಎಲ್ಲ ಬುಕ್‌ಡಿಪೋಗಳಲ್ಲಿಯೂ ಸಿಗುವವು.

G. M. S.

೧ನೆಯ ಇಯತ್ತೆ

ವಿಷಯ— ನಿಬಂಧ (೧ನೆಯ ಪು. ದ ಪಾಠ ೧೧ ರಲ್ಲಿಯ ಚಿತ್ರದ ಸಹಾಯದಿಂದ)

ವೇಳೆ : ೩೦ ಮಿ.

ಉದ್ದೇಶ : ಬರೆಹದಲ್ಲಿ ಸುಧಾರಣೆ ಹಾಗು ನಿರೀಕ್ಷಣಶಕ್ತಿಯ ಬೆಳವಣಿಗೆ.

ಉಪಕರಣ : ಶಿಕ್ಷಕನು ಕರೆ ಹಲಿಗೆಯ ಮೇಲೆ ತೆಗೆದ ಪಂತಿಯ ಚಿತ್ರ, ರೂಲ ಹಾಕಿದ ಪುಸ್ತಕಗಳು, ಸೀಸಕಡ್ಡಿಗಳು

ಶಿಕ್ಷಕ : ಜೆ. ಜಿ. ಕುಲಕರ್ಣಿ ಅ. ಸಿ. ಮಾ. ಪ್ರ್ಯಾಕ್ಟಿಸಿಂಗಸ್ಕೂಲ, ಧಾರವಾಡ.

ಉಪೋ—ಚಿತ್ರತೋರಿಸಿ, ಇವರು ಯಾರು? ಏನು ಮಾಡುತ್ತಿರುವರು? ಪ್ರತಿಯೊಬ್ಬ ಹುಡುಗನು ಏನು ಮಾಡುತ್ತಿರುವನು? ಚೆನ್ನಾಗಿ ನಿರೀಕ್ಷಿಸಿ ಹೇಳಿರಿ. ಎಂದು ಅವರಿಗೆ ಮಾತಾಡಲಿಕ್ಕೆ ಉತ್ತೇಜನಕೊಟ್ಟು ವಿಷಯಾರಂಭಿಸುವದು.

ಮೆಟ್ಟು.	ವಿಷಯ.	ಕಲಿಸುವ ಕ್ರಮ.	ಕ. ಹ. ಬರೆಹ.
೧ ವಿಷಯ ಪರಿಚಯ	ಪಂತಿಯ ಚಿತ್ರದ ನಿರೀಕ್ಷಣ	ಚಿತ್ರದೊಳಗಿನ ಎಲ್ಲ ಸಂಗತಿಗಳನ್ನು ಲಕ್ಷಗೊಟ್ಟು ನೋಡಿರಿ, ಗಿಡವನ್ನು ತೋರಿಸಿ ಇದು ಏನು? ಹೂವಿನ ಗಿಡಗಳನ್ನು ತೋರಿಸಿ ಇವು ಏನು? ತಂಬಿಗೆ, ಪುಸ್ತಕಗಳು ಅಂಗಿಟೊಪ್ಪಿಗೆಗಳು ಇವನ್ನೆಲ್ಲ ಇದೇ ರೀತಿ ತೋರಿಸಿ ನಿರೀಕ್ಷಣಕ್ಕೆ ಉತ್ತೇಜನಕೊಡುವದು. ತರುವಾಯ ಇಲ್ಲಿ ಹುಡುಗರು ಏನು ಮಾಡುತ್ತಾರೆ? ಹೀಗೆ ಮಾಡಿ ಊಟ ಮಾಡುವದಕ್ಕೆ 'ಪಂತಿ' ಅನ್ನುತ್ತಾರೆ. ಪಂತಿಯ ವಿಷಯವಾಗಿ ಎಲ್ಲರನ್ನು ಕೇಳಿಕೊಳ್ಳುವದು.	

ಮೆಟ್ಟು.	ವಿಷಯ.	ಕಲಿಸುವ ಕ್ರಮ.	ಕ. ಹ. ಬರೆಹ.
೨ ವಾಚನಿಕ ನಿಬಂಧ (ಅ)	ಬಾಲಕರ ಮಾತುಗಳು (ಒಂದೊಗದು ಮಾತು) ಈ ಪಂತಿಯು ಚಿತ್ರದಲ್ಲಿ ಇಲ್ಲಿ ೧೧ ಏಳು ಜನ ಹುಡುಗರು ಊಟಕ್ಕೆ ಕುಳಿತಿರುವರು.	ಈ ಒಂದೊಂದು ಮಾತಿನ ವಿಷಯವಾಗಿ ಚಿತ್ರ ತೋರಿಸಿ ಪ್ರಶ್ನ ಮಾಡುತ್ತ ಒಬ್ಬೊಬ್ಬನಿಂದ ಒಂದೊಂದು ಮಾತಿನ ಉತ್ತರ ತೆಗೆದು ಕೊಳ್ಳುತ್ತ ಮಹತ್ವದ ಮಾತಿನ ಬಗ್ಗೆ ಸಾಮೂಹಿಕವಾಗಿ ಪ್ರಶ್ನ ಮಾಡಿ ಉತ್ತರ ತೆಗೆದುಕೊಳ್ಳುತ್ತ ಸಾಗುವದು.	
	೧. ಮುಂದೆ ತಾಟುಗಳು ಅವೆ.	ಬಾಲಕರ ಅಪೂರ್ಣ ವಾಕ್ಯಗಳನ್ನು ಪ್ರಶ್ನಮಾಡಿ ಪೂರ್ತಿ ಮಾಡಿಸಬೇಕು.	
	೩. ತಾಟುಗಳಲ್ಲಿ ಉಂಡಿ ಗಳು ಅವೆ. ೪. ಕಡಬುಗಳು ಅವೆ.	ಆಗಾಗ್ಗೆ ಈ ಪ್ರತಿಯೊಂದು ಮಾತಿನ ವಿಷಯಕ್ಕೆ ಚಿತ್ರದಲ್ಲಿ ತೋರಿಸಲಿಕ್ಕೆ ಹೇಳಬೇಕು. (ಚಿತ್ರಕ್ಕೂ ಮಾತಿಗೂ ಸಂಬಂಧವು ಉಳಿಯುವದಕ್ಕಾಗಿ)	
	೫. ಕುಡಿಯುವದಕ್ಕಾಗಿ ನೀರು ತುಂಬಿದ ತಂಬಿಗೆ ಅದೆ.	ಮಾತಾಡುವ ಪದ್ಧತಿಗೆ ಸರಿಯಾಗಿ ವಾಕ್ಯ ಪೂರ್ತಿಗಾಗಿ ಕಡೆಗೆ ಕ್ರಿಯಾಪದವನ್ನು ಇಡುವಂತೆ ಲಕ್ಷ ವಿಟ್ಟಿರಬೇಕು. (ಬೇಸರ ಬರಬಾರದೆಂದು ಡ್ರಿಲ್ ಮಾಡಿಸುವದು.)	

ಮೆಟ್ಟು.	ವಿಷಯ.	ಕಲಿಸುವ ಕ್ರಮ.	ಕ. ಹ. ಬರೆಹ.
೩ (ಬ)	ಒಂದಕ್ಕಿಂತ ಹೆಚ್ಚು ಮಾತುಗಳು.	ಈವರೆಗೆ ನೀವು ಪಂತಿಯ ವಿಷಯವಾಗಿ ಒಂದೊಂದೇ ಮಾತು ಹೇಳಿದಿರಿ ಇನ್ನು ಇದರ ಬಗ್ಗೆ ಒಟ್ಟಿಗೆ ಕೆಲವು ಮಾತಾಡಲಿಕ್ಕೆ ಯತ್ನಿಸಿರಿ. ಹಾಗೆ ಹೇಳುವಾಗ 'ಮತ್ತು' ಆ ಮಾತುಗಳ ನಡುವೆ ಉಪಯೋಗಿಸುವ ರೂಢಿ ಹಚ್ಚುವದು. (ಉದಾ:—ಹುಡುಗರು ಕುಳಿತಿದ್ದಾರೆ. ಅವರ ಮುಂದೆ ತಾಟು ಅವೆ ಮತ್ತು ತಾಟಿನಲ್ಲಿ ಕಡಬು ಅವೆ ಹಾಗು ಉಂಡಿ ಅವೆ ಇ.) ಡ್ರಿಲ್ ಮಾಡಿಸುವರು.	
೪ ಬರೆಹ	ಲಕ್ಷ್ಯದಲ್ಲಿಡತಕ್ಕ ಮಾತುಗಳು. (ಅ) ರೂಲ ತುಂಬ (ಬ) ಶಬ್ದಗಳನ್ನು ಏಂಗಡಿಸಿ (ಕ) ಪೂರ್ಣವಿರಾಮ (ಡ) ದೇಹದ ಬಗ್ಗೆ ಎಚ್ಚರಿಕೆ	ಪದ್ಧತಿಗೆ ಸರಿಯಾಗಿ ಬರೆಹದ ಉಪಕರಣಗಳನ್ನು ಕೊಟ್ಟು ಈ ಪಂತಿ ಚಿತ್ರಕ್ಕೆ ಏನು ಹೆಸರು ಕೊಡಬೇಕು? ಕೇಳಿ ಮೊದಲು ತಾನು ಹುಡುಗರು ಕ. ಹ. ಮೇಲೆ ಬರೆದು ನಿರೀಕ್ಷಿಸಹೇಳಿ (ಅಕ್ಷರ ಬರೆಹಗಳ ಬಗ್ಗೆ) ಊಟಕ್ಕೆ ಅಲ್ಲಲ್ಲಿ ಸ್ಥಳ ಬಿಟ್ಟು ಬರೆಯಹಚ್ಚಬೇಕು. ಮತ್ತು ಮಾತು ಕೂತಿರುವರು ಮುಗಿದಲ್ಲಿ ಅದರ ಗುರುತಿಗಾಗಿ ಹೀಗೆ ಚುಕ್ಕೆ ಕೊಡಿರಿ. ಎಂದು ಇತ್ಯಾದಿ ಇತ್ಯಾದಿ ತೋರಿಸಬೇಕು.	
೫ ತಿದ್ದುವದು	ಪಂತಿಯ ನಿಬಂಧ	ಬರೆಯುವಾಗ ಆರೋಗ್ಯಪದ್ಧತಿಗೆ ಸರಿಯಾಗಿ ಕೂಡುವ, ಬರೆಯುವ, ಪೆನಶಿಲು ಹಿಡಿಯುವ ಶಿಸ್ತನ್ನು ತೋರಿಸಿ ತಪ್ಪಿದರೆ ತಿದ್ದುವದು. ಬರೆಯುವಾಗ ಅವರ ಹಿಂದೆ ಓಡಾಡುತ್ತ ಬರೆಹದ ಕಡೆಗೆ ಲಕ್ಷ ಗೊಡಬೇಕು. ಅಪೂರ್ಣ ಮಾತು ಬರೆದರೆ ಮೆಲ್ಲಗೆ ಹೇಳಿ ಬರೆಯಹಚ್ಚುವದು, ತಿದ್ದುವದು. ನೀನು ಬರೆದಿರುವದನ್ನು ಓದು. (ಸಾವಕಾಶ, ಸ್ಪಷ್ಟ, ಇವುಗಳ ಕಡೆಗೆ ಲಕ್ಷ ವಿರಲಿ) ಹೀಗೆ ಕೆಲವರಿಂದ ಓದಿಸಿ ಚೆನ್ನಾಗಿ ಬರೆದವರ ಪುಸ್ತಕಗಳನ್ನು ತೆಗೆದಿಡುವದು.	

ಟಿಪ್ಪಣಿ:—ಎಲ್ಲ ಪುಸ್ತಕಗಳನ್ನು ತಪಾಸಿಸಲಿಕ್ಕೆ ಪ್ರತ್ಯೇಕ ನೋಡಿ ಕಾದಿಡಬೇಕು.

ಉಪಸಂಹಾರ:—

೧. ಚೆನ್ನಾಗಿ ಬರೆದವರ ಗುರುತನ್ನು ವರ್ಗಕ್ಕೆ ಮಾಡಿ ಕೊಡುವದು.

೨. (ಚಿತ್ರದೊಳಗಿನ ಸಂಗತಿಗಳ ಬಗ್ಗೆ ಪ್ರಶ್ನೆ) ಬಾಯೊಳಗೆ ಕೈಹಾಕಿದವರನ್ನು ತೋರಿಸಿರಿ.

೩. ಮನೆಯ ಕಡೆ ಮೋರೆ ಮಾಡಿ ನಿಂತರೆ ಗಿಡವು ನನ್ನ ಯಾವ ಕಡೆಗೆ ಆಗುವದು (ಬಲಕ್ಕೆ, ಎಡಕ್ಕೆ ಇ.)

೪. ನಾಳೆ ನೀವು ಈ ಪಾಠದ ಬಗ್ಗೆ ಚಿತ್ರ ನೋಡಿ ಬರೆದು ಕೊಂಡು ಬರ್ರಿ.

ಪ್ರಕಟನೆ

ಪ್ರೈಮ್ಮರಿ ಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆ ೧೯೬೯

ಮೆ॥ ಡಾಯರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ನರವರ ಟಿ.ಐ (ಟಿ)-೧೧೮೮-ಡಿ ೧೨-೧-೧೧-೧೯೬೮ ನೇ ನಂಬರಿನ ಅಪ್ಪಣೆಯ ಮೇರೆಗೆ ಧಾರವಾಡ ಜಿಲ್ಲೆಯೊಳಗಿನ ಹಾವೇರಿಯಲ್ಲಿ ಇನ್ನೊಂದು ಪ್ರೈಮರಿಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆಯ ಸೆಂಟರ (ಕೇಂದ್ರ) ನ್ನು ಈ ವರ್ಷದಿಂದ ಪ್ರಾರಂಭಿಸಬೇಕೆಂದು ಗೊತ್ತಾಗಿರುವದು.

ಈ ಕೆಳಗೆ ಬರೆದಂತೆ ಆಯಾ ತಾಲೂಕುಗಳ ಉಮೇದವಾರರು ಆಯಾ ಸೆಂಟರುಗಳಲ್ಲಿ ಪರೀಕ್ಷೆಗೆ ಕೂಡ್ರತಕ್ಕದ್ದು.

(೧) ಧಾರವಾಡ, ಹುಬ್ಬಳ್ಳಿ- ಕಲಘಟಗಿ ಮತ್ತು ಬಂಕಾಪೂರ ತಾಲೂಕುಗಳ ಉಮೇದವಾರರು ಧಾರವಾಡ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರತಕ್ಕದ್ದು.

(೨) ರೋಣ, ನವಲಗುಂದ, ಮತ್ತು ಗದಗ ತಾಲೂಕಿನ ಉಮೇದವಾರರು ಗದಗ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರತಕ್ಕದ್ದು.

(೩) ಕರ್ಜಗಿ, ಕೋಡ, ರಾಣಿಬಿನ್ನೂರ ಮತ್ತು ಹಾನಗಲ್ ತಾಲೂಕುಗಳ ಉಮೇದವಾರರು ಹಾವೇರಿ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರತಕ್ಕದ್ದು.

(೪) ಅಗ್ರಿಕಲ್ಚರಲ್ ಬಾಯಾಸದ ಅಭ್ಯಾಸ ಕ್ರಮವನ್ನು ತೆಗೆದುಕೊಂಡ ಎಲ್ಲ ಉಮೇದವಾರರು ಧಾರವಾಡ ಸೆಂಟರಿನಲ್ಲಿಯೇ ಪರೀಕ್ಷೆಗೆ ಕೂಡ್ರತಕ್ಕದ್ದು.

(೫) ಧಾರವಾಡ ಜಿಲ್ಲೆಯೊಳಗಿನ ಎಲ್ಲ ಉರ್ದು ಉಮೇದವಾರರು ಹುಬ್ಬಳ್ಳಿ (ಡಿವಿಜನಲ್ ಸೆಂಟರ) ನಲ್ಲಿಯೇ ಕೂಡ್ರತಕ್ಕದ್ದು.

(ಮೆ॥ ಎಜ್ಯುಕೇಶನಲ್ ಇನ್ಸಪೆಕ್ಟರ್ ದಕ್ಷಿಣಭಾಗರವರ ಅಪ್ಪಣೆಯ ಮೇರೆಗೆ)

D. V. Kale,
ಹೆಡ್‌ಮಾಸ್ತರ್ ಟ್ರೇನಿಂಗ್‌ಸ್ಕೂಲ್ ಧಾರವಾಡ

ಪ್ರಕಟನೆ

ಮಿಡಲ್‌ಸ್ಕೂಲ್ ಸ್ಕಾಲರ್‌ಶಿಪ್ಪುಗಳನ್ನು ಪಡೆಯಲು ತಕ್ಕವರಾದ ಉಮೇದವಾರರನ್ನು ಗೊತ್ತುಪಡಿಸುವ ಈ ವರ್ಷದ ಪರೀಕ್ಷೆಗಳು (ಓಪನ್ ಮತ್ತು ಸ್ಪೇಶಲ್) ೧೯೩೯ನೆಯ ಇಸ್ವಿಯ ಫೆಬ್ರುವರಿ ತಿಂಗಳ ೯ ಮತ್ತು ೧೦ನೆಯ ತಾರೀಖು ಗುರುವಾರ ಮತ್ತು ಶುಕ್ರವಾರ ದಿವಸಗಳಲ್ಲಿ ನಡೆಯತಕ್ಕದ್ದೆಂದು ಗೊತ್ತಾಗಿದೆ. ಧಾರವಾಡ ಜಿಲ್ಲೆಯಲ್ಲಿ ನಡೆಯಬೇಕಾದ ವಿಶೇಷ ಪರೀಕ್ಷೆಗಳಾದ ವೆಂಕಾಸಾನಿ ಮತ್ತು ಮಹಮ್ಮಡನ್ ಬರ್ಸರಿಫಂಡ ಸ್ಕಾಲರ್‌ಶಿಪ್ ಪರೀಕ್ಷೆಗಳೂ ಈ ದಿವಸಗಳಲ್ಲಿಯೇ ನಡೆಯುವವು.

ಪರೀಕ್ಷೆಗೆ ಕೂಡ್ರಲಿಕ್ಕೆ ಅಪ್ಪಣೆಯನ್ನು ಬೇಡುವ ಅರ್ಜಿಯನ್ನು ಒಂದು ರೂಪಾಯಿ ಫೀ ಸಹಿತ ಆಯಾ ಪರೀಕ್ಷೆಯ ಕಮಿಟಿಯ ಪ್ರೆಸಿಡೆಂಟರಿಗೆ ೧೯೩೯ನೆ ಇಸ್ವಿ ಜನವರಿ ತಿಂಗಳ ೩೧ನೆಯ ತಾರೀಖಿನೊಳಗಾಗಿ ಮುಟ್ಟುವಂತೆ ಕಳುಹಿಸಿ ಕೊಡತಕ್ಕದ್ದು. ವೆಂಕಾಸಾನಿ ಮತ್ತು ಮಹಮ್ಮಡನ್ ಬರ್ಸರಿಫಂಡ ಸ್ಕಾಲರ ಶಿಪ್ಪುಗಳ ಪರೀಕ್ಷೆಗೆ ಕೂಡ್ರುವದಕ್ಕೆ ಫೀ ಕೊಡಬೇಕಾಗಿಲ್ಲ.

ಓಪನ್ ಮತ್ತು ಸ್ಪೇಶಲ್ ಸ್ಕಾಲರಶಿಪ್ಪುಗಳ ನಿಯಮಗಳಲ್ಲಿಯು ೩ನೆಯ ನಿಯಮದ ಕಡೆಗೆ ಎಲ್ಲ ಪ್ರಾಥಮಿಕ ಶಿಕ್ಷಕರು ಲಕ್ಷ್ಯಕೊಟ್ಟಿರಬೇಕು. ಮತ್ತು ಅವರು (೧) ಪರೀಕ್ಷೆಯ ಪೂರ್ವದಲ್ಲಿ ಒಂದು ವರ್ಷದವರೆಗೆ ಒಂದೇಸವನೆ ಹಾಜರಿಲ್ಲದೆ ಇರುವ ಹುಡುಗರ ವಿಷಯದಲ್ಲಿಯೂ (೨) ಸಾಲೆಯನ್ನು ಬದಲಿಸಿದ ವಿದ್ಯಾರ್ಥಿಗಳ ಸಂಬಂಧದಿಂದಲೂ ಮೆ॥ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರವರ ವಿಶೇಷ ಅಪ್ಪಣೆಯನ್ನು ಮೊದಲೇ ದೊರಕಿಸಿಕೊಂಡು ಆ ಅಪ್ಪಣೆಯ ಮೂಲ ಪ್ರತಿಯನ್ನೇ ಆ ವಿದ್ಯಾರ್ಥಿಗಳ ಅರ್ಜಿಯ ಸಂಗಡಲೇ ಆಯಾ ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡೆಗೆ ಕಳುಹಿಸಿ ಕೊಡತಕ್ಕದ್ದು. ಯಾವದೇ ವಿಷಯದಲ್ಲಿ ಅಪೂರ್ಣವಾಗಿರುವ ಇಲ್ಲವೆ ಸಂಗಡ ಫೀ ಬಾರದಿರುವ ಅರ್ಜಿಗಳನ್ನು ಪ್ರೆಸಿಡೆಂಟರು ಯಾವ ತಕರಾರುಗಳನ್ನೂ ಕೇಳದೆ ನಿರಾಕರಿಸುವರು.

ಈ ಸಂಬಂಧದ ಸರ್ವಸಾಧಾರಣವಾದ ನೋಟೀಸು ಸದ್ಯದಲ್ಲಿಯೇ ಮುಂಬಯಿ ಸರಕಾರದ ಗ್ಯಾಜೀಟಿನಲ್ಲಿ ಪ್ರಕಟವಾಗುವದು.

(ಮೆ॥ ಎಜ್ಯುಕೇಶನಲ್ ಇನ್ಸಪೆಕ್ಟರ್ ದಕ್ಷಿಣಭಾಗರವರ ಅಪ್ಪಣೆಯ ಮೇರೆಗೆ)

D. V. Kale,

ಹೆಡ್‌ಮಾಸ್ತರ್ ಟ್ರೇನಿಂಗ್‌ಸ್ಕೂಲ್ ಧಾರವಾಡ

ಸ್ಕಾಲರಶಿಪ್ ಪರೀಕ್ಷೆಯ ಕಾರ್ಯಕ್ರಮ ೧೯೩೯.

ಹಾಯ್‌ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆ ೧೯೩೯.

ವಾರ ಮತ್ತು ತಾರೀಖು	ವೇಳೆ	ವಿಷಯ	ಗುಣಗಳು
೬–೨–೧೯೩೯ ಸೋಮವಾರ	೧೧ ರಿಂದ ೧೧–೧೫	ಪರೀಕ್ಷೆಗೆ ಕೂಡುವ ಉಮೇದವಾರರ ಹಾಜರಿ ತೆಗೆದುಕೊಳ್ಳುವದು.	..
	೧೧–೩೦ ರಿಂದ ೧೨–೩೦	ಅಂಕಗಣಿತ	೧೦೦
	೧–೩೦ ರಿಂದ ೨–೩೦	ಸಾಮಾನ್ಯಜ್ಞಾನ; ಇತಿಹಾಸ ಭೂಗೋಲ (ರಾಜಕೀಯ) ಗಳು ಮೊದಲನೆಯ ಕಾಗದ.	೫೦
೭–೨–೧೯೩೯ ಮಂಗಳವಾರ	೧೧–೩೦ ರಿಂದ ೧೨–೩೦	ಇಂಗ್ಲಿಷ ೧ನೆಯ ಕಾಗದ. ಮೌನವಾಚನ.	೫೦
	೧–೩೦ ರಿಂದ ೨–೩೦	ಇಂಗ್ಲಿಷ ಎರಡನೆಯ ಕಾಗದ ಓದುವದು ಅರ್ಥ ತಿಳಿದುಕೊಳ್ಳುವದು ಮು.	೫೦
	೩–೩೦ ರಿಂದ ೪–೩೦	ಸಾಮಾನ್ಯಜ್ಞಾನ; ಎರಡನೆಯ ಕಾಗದ; ಭೂಗೋಲ (ಪ್ರಾಕೃತಿಕ) ಮತ್ತು ಶಾ. ವಿಷಯಗಳು.	೫೦
೮–೨–೧೯೩೯ ಬುಧವಾರ	೧೧–೩೦ ರಿಂದ ೧೨–೩೦	ಪ್ರದೇಶದ ಭಾಷೆ; ಮೊದಲನೆಯ ಕಾಗದ; ಮೌನವಾಚನ ತಿರುಗಿ ಸ್ವಭಾಷೆಯಲ್ಲಿ ಬರೆಯುವದು; ಮತ್ತು ನಿಬಂಧ.	೫೦
	೧–೩೦ ರಿಂದ ೨–೩೦	ಪ್ರದೇಶದ ಭಾಷೆ ಎರಡನೆಯ ಕಾಗದ; ಓದುವದು ಅರ್ಥ ತಿಳಿದುಕೊಳ್ಳುವದು ಮುಂ.	೫೦

ಮಿಡಲ್‌ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆ ೧೯೩೯

ವಾರ ಮತ್ತು ತಾರೀಖು	ವೇಳೆ	ವಿಷಯ	ಗುಣಗಳು
೯–೨–೧೯೩೯ ಗುರುವಾರ	೧೧ ರಿಂದ ೧೧–೧೫	ಪರೀಕ್ಷೆಗೆ ಕೂಡ್ಸುವ ಉಮೇದವಾರರ ಹಾಜರಿ ತೆಗೆದುಕೊಳ್ಳುವದು.	—
	೧೧–೩೦ ರಿಂದ ೧೨–೩೦	ಅಂಕಗಣಿತ.	೧೦೦
	೧–೩೦ ರಿಂದ ೨–೧೫	ಸಾಮಾನ್ಯಜ್ಞಾನ; ಮೊದಲನೆಯ ಕಾಗದ; ಇತಿಹಾಸ ಭೂಗೋಲ (ರಾಜಕೀಯ) ಗಳು.	೫೦
	೩ ರಿಂದ ೩–೪೫	ಸಾಮಾನ್ಯಜ್ಞಾನ; ಎರಡನೆಯ ಕಾಗದ; ಭೂಗೋಲ (ಪ್ರಾಕೃತಿಕ) ಶಾಸ್ತ್ರೀಯ ವಿಷಯ.	೫೦
೧೦–೨–೧೯೩೯ ಶುಕ್ರವಾರ	೨ ರಿಂದ ೨–೪೫	ಪ್ರದೇಶದ ಭಾಷೆ; ಮೊದಲನೆಯ ಕಾಗದ; ಮೌನವಾಚನ, ತಿರುಗಿ ಸ್ವಭಾಷೆಯಲ್ಲಿ ಬರೆಯುವದು, ನಿಬಂಧ.	೫೦
	೪ ರಿಂದ ೪–೪೫	ಪ್ರದೇಶದ ಭಾಷೆ; ಎರಡನೆಯ ಕಾಗದ; ಓದುವದು ಅರ್ಥ ತಿಳಿದುಕೊಳ್ಳುವದು ಮುಂ.	೫೦

ಪ್ರಕಟನೆ

ಶಾ. ೧೨ನೆಯ ಅಕ್ಟೋಬರ ೧೯೩೮ನೆಯ ಇಸವಿ ದಿವಸ ನೆರೆದ ಕನ್ನಡ ಬುಕ್ ಕಮೀಟಿ ಧಾರವಾಡ ಇವರು ಮಂಜೂರ ಮಾಡಿದ ಕನ್ನಡ ಪುಸ್ತಕಗಳ ಯಾದಿಯು ಕೆಳಗೆ ಬರೆದಂತೆ ಅದೆ.

ಅ. ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರು	ಮಂಜೂರಿ ನಂಬರು ಇ.ಸಾ.ರನಂ. ಡಾ.ಸಾ.ನಂ.
೧	ಫಿಬ್ರವರಿ ೧೫ನೆ ೮. ೧೯೩೪	ವಿ. ಜಿ. ವ್ಹಿ. ಚುಳಕಿ ಮನೋಹರ ಗ್ರಂಥ ಭಾಂಡಾರ ಧಾರವಾಡ	ವಿ. ಜಿ. ವ್ಹಿ. ಚುಳಕಿ ಸಾಧನಕೇರಿ ಧಾರವಾಡ	೧– ೦–೦ ಬಾ. ೮–೧೫–೦ ಸಾದಾ ಬಾ.	ಪ್ರಾ. ಶಾ. ಗಳ ಹಾಗು ಕ್ಯಾಲಿಕೊ ವ್ಹ. ಟ್ರೇ. ಸಂ. ಗಳ ಶಿ. ರ. L ಬುಕ್ಕಾಗಿ ಹಾಗು ಮಾ. ಗಳ ಶಿ. ರ L ಬುಕ್ಕಾಗಿ	47P.8073 S-86-c-807-c 9-9-38
೨	ಕನ್ನಡ ಕಿಡಿಗಳು ೧೫ನೆ ೮. ೧೯೪೪	ಸದರ	ವಿ. ಆರ್. ಬಿ. ಜಾಗಿರದಾರ ಹೈದ್ರಾಬಾದ (ಡೆಕ್ಕನ್)	೦– ೮–೦	ಪ್ರಾ. ಶಾ. ಗಳ ವ್ಹ. ಟ್ರೇ. ಸಂ. ಗಳ ಬಿ. ಗಳ L ಬುಕ್ಕು ಹಾಗು ಮಾ. ಶಾ. ಗಳ ವಿ. ಗಳ L	8071 803 ಸದರ
೩	ಹಿಂದುಸ್ತಾನದ ಹೊಸ ರಾಜ್ಯಘಟನೆ ೧ನೆ ೮. ೧೯೩೮	ವಿ. ಎಸ್. ಪಿ. ಪಾಟೀಲ ಹೈಸ್ಕೂಲ ಧಾರವಾಡ	ವಿ. ಎಸ್. ಪಿ. ಪಾಟೀಲ ಅಸಿ. ಮಾ. ಗ. ಹೈಸ್ಕೂಲು ಧಾರದಾಡ	೦– ೫–೦	ಪ್ರಾ. ಶಾ. ಗಳ ಹಾಗು ಮಾ. ಶಾ. ಗಳ T ಬುಕ್ಕಾಗಿ	S-86-c-816-c ಸದರ

೪ ಕವಿಕಾವ್ಯಮಹೋನ್ನತಿ ನಿನೆ ಆ. ೧೯೩೫	ಮಿ. ಜಿ. ವ್ಹಿ. ಚುಳಕಿ ಮನೋಹರ ಗ್ರಂಥ ಭಾಂಡಾರ ಧಾರವಾಡ	ಮಿ. ಆರ್. ಬಿ. ಜಾಗಿರದಾರ ೩ಲಲಂ ಗೌಳಿಗುಡ ಹೈದ್ರಾಬಾದ (ಡೆಕ್ಕನ್)	೦–೧೦–೦	ಪ್ರಾ. ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ಶಿ. ರ L ಹಾಗು ಪ್ರಾ. ಶಾ. ಗಳ ಮಾ. ಶಾ. ಗಳ ಟ್ರೇ. ಸಂ.ಗಳ Tಬುಕ್. ಹಾಗು ಮಾ. ಶಾ. ಗಳ ವಿ. ಗಳ ಶಿ. ರ L	8146 14–10–1938	S-86-c-812-c 9–9–1838
೫ ಕಲ್ಕಿ ನಿನೆ ಆ. ೧೯೩೪	ಸದರ	ಮಿ. ಜಿ. ವ್ಹಿ. ಚುಳಕಿ ಸಾಧನಕೆರೆ	೦–೧೦–೦	ಪ್ರಾ. ಶಾ. ಗಳ ವ್ಹ. ಟ್ರೇ. ಸಂ. ಗಳ ಶಿ. ರ. L ಹಾಗು ಮಾ. ಶಾ.ಗಳ ಶಿ. ರ.L	8144 ಸದರ	801 ಸದರ
೬ ಸಚಿತ್ರ ನಿಬಂಧಮಾಲಾ ಷಿನೆ ಆ. ೧೯೩೪	ಮಿ. ಕೆ. ಬಿ. ಅಂಗಡಿ ಹೆ. ಮಾ. ಕನ್ನಡ ಷಿನೆ ನಂ. ಶಾಳಾ ಗದಗ	ಮಿ. ಆರ್. ಆರ್. ಕಾಮಲಾಪೂರ ಗದಗ	೦–೧೪–೦	ಪ್ರಾ. ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ವಿ.ಗಳL ಹಾಗು ಮಾ. ಶಾ. ಗಳ ವಿ. ಗಳ L	8142 ಸದರ	811 ಸದರ
೭ ಸಂಗೀತ ಆಧುನಿಕ ಸಂಸಾರ ೧೯೩೫ ನಿನೆ ಆ. ೧೯೩೫	ಹರಿ ಕೃಷ್ಣ ಶಾನಭಾಗ C/o ಎ. ವ್ಹಿ. ಕೆನಿ	ಗ್ರಂಥಕರ್ತರು	೧– ೦–೦	ಪ್ರಾ. ಶಾ. ಗಳ ವಿ. ಗಳ L ಬುಕ್ಕು ಹಾಗು ಮಾ. ಶಾ. ಗಳ ವಿ. ಗಳ L ಬುಕ್ಕು	8130 ಸದರ	815 ಸದರ

ಅ. ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರು	ಮಂಜೂರಿ ನಂಬರು ಇ. ಸಾ.ರ ನಂ.ಡಾ. ಸಾ. ನಂ.
೮	ಹೆಣ್ಣಿನ ತೊಡಕು ೧ನೆ ಆ. ೧೯೩೩	ವಿ. ಜಿ. ವ್ಹಿ. ಚುಳಕಿ ಮನೋಹರ ಗ್ರಂಥ ಭಾಂಡಾರ ಧಾರವಾಡ	ವಿ. ಎಚ್. ಪಿ. ಜೋಶಿ ಆರ್ಟ್‌ಸರ್ಕಲ್ ಮೂಳಮಡ್ಡಿ	೦– ೪–೦	ಪ್ರಾ. ಶಾ. ಗಳ ವ್ಹ. ಟ್ರೇ. ಸಂ. ಗಳ ವಿ. ಗಳ L ಹಾಗು ಮೂ. ಶಾ. ಗಳ ವಿ. ಗಳ L	8132 ಸದರ 809 ಸದರ
೯	ಮೂರ್ತಿ ಮತ್ತು ಕಾಮುಕಸ್ಫೂರಿ ೧ನೆ ಆ. ೧೯೩೪	ಸದರ	ಗ್ರಂಥಕರ್ತರು	೦– ೮–೦	ಪ್ರಾ. ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ಶಿ. ರ L ಹಾಗು ಮೂ. ಶಾ. ಗಳ ಶಿ.ರ L	8134 ಸದರ 806 ಸದರ
೧೦	ಕಲೋಪಾಸಕ ೧ನೆ ಆ. ೧೯೩೪	ಸದರ	ಗ್ರಂಥಕರ್ತರು	೧– ೦–೦	ಪ್ರಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ಶಿ. ರ L ಹಾಗು ಮೂ. ಶಾ.ಗಳ ಶಿ. ರ L	8136 ಸದರ 808 ಸದರ
೧೧	ಎಲಿಕ್ಯನ್ ೧ ನೆ ಆ. ೧೯೩೪	ವಿ. ಜಿ. ವ್ಹಿ. ಚುಳಕಿ ಮನೋಹರ ಗ್ರಂಥ ಭಾಂಡಾರ, ಧಾರವಾಡ	ವಿ. ಎನ್. ಕೆ. ಕುಲಕರ್ಣಿ ಧಾರವಾಡ	೦– ೪–೦	ಪ್ರಾ. ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ವಿ. ಗಳ L ಹಾಗು ಮೂ. ಶಾ. ಗಳ ವಿ. ಗಳ L	8138 ಸದರ 804 ಸದರ

೧೨	ಚರಲಿಂಗಸ್ವಾಮಿ ೧೯೪೮ ಆ. ೧೯೩೪	ವಿ. ಮಹಾರುದ್ರಪ್ಪ ಮಹಾಲಿಂಗಪ್ಪ ಮಿರ್ಜಿ ಕಾಟನ್ ಕಮಿಶನ್ ಏಜಂಟ ಹುಬ್ಬಳ್ಳಿ	ವಿ. ಜಿ. ಎಂ. ಮಿರ್ಜಿ ವಕೀಲ ಹುಬ್ಬಳ್ಳಿ	೦– ೩–೦	ಪ್ರಾ. ಶಾ. ಗಳ ಶಿ.ರL ಹಾಗು ಪೂ. ಶಾ. ಗಳ ಶಿ. ರ L	8140 / ಸದರ	814 / ಸದರ
೧೩	ವೀಣಾನಾದ ೧೯೪೮ ಆ. ೧೯೩೪	ವಿ. ಜಿ. ವಿ. ಜುಳಕಿ ಮನೋಹರ ಗ್ರಂಥ ಭಾಂಡಾರ ಧಾರವಾಡ	ವಿ. ಆರ್. ಎಚ್. ಕುಲಕರ್ಣಿ ಮುಂಗಳವಾರ ಪೇಟ ಧಾರವಾಡ	೦– ೮–೦	ಪ್ರಾ. ಶಾ. ಗಳ ವ್ಹ. ಟ್ರೇ. ಸಂ. ಗಳ ವಿ. ಗಳ L ಹಾಗು ಮಾ. ಶಾ. ಗಳ ವಿ ಗಳ L	8079 / ೧೨–೧೦–೩೪	802 / ಸದರ
೧೪	ರಂಗವಲ್ಲಿ ೧೯೪೮ ಆ. ೧೯೩೭	ಸದರ	ವಿ. ಡಿ. ಬಿ. ಕುಲಕರ್ಣಿ ಮನೋಹರ ಗ್ರಂಥ ಭಾಂಡಾರ ಧಾರವಾಡ	೧– ೮–೦ ಕ್ಯಾಲಿ ಕೋರ ೧– ೦–೦ ಸಾದಾ	ಪ್ರಾ. ಶಾ. ಗಳ ವ್ಹ. ಟ್ರೇ. ಸಂ. ಗಳ ವಿ. ಗಳ L ಹಾಗು ಮಾ. ಶಾ. ಗಳ ವಿ. ಗಳ L	8077 / ೧೨–೧೦–೩೪	805 / ಸದರ
೧೫	ಸಿಹ್ಗಾಗ್ಯ ಬೋರೆಗೌಡ ೧೯೪೮ ಆ. ೧೯೩೫	ವಿ. ಜಿ. ವಿ. ಜುಳಕಿ ಮನೋಹರ ಗ್ರಂಥ ಭಾಂಡಾರ ಧಾರವಾಡ	ವಿ. ಪಿ.ವಿ. ಕುಲಕರ್ಣಿ ಹಾಗು ಡಿ. ಬಿ. ಕುಲ ಕರ್ಣಿ ಮನೋಹರ ಗ್ರಂಥಭಾಂಡಾರ ಧಾರವಾಡ	೦– ೪–೦	ಪ್ರಾ. ಶಾ. ಗಳ ಹಾಗು ವ್ಹ. ಟ್ರೇ. ಸಂ. ಗಳ ಶಿ. ರ. L ಹಾಗು ಪೂ. ಶಾ. ಗಳ ಶಿ. ರL	8075 / ೧೨–೧೦–೩೪	813 / ಸದರ

ಆ. ನಂ.	ಪುಸ್ತಕಗಳ ಹೆಸರು	ಗ್ರಂಥಕರ್ತರ ಹೆಸರು	ಪ್ರಕಾಶಕರ ಹೆಸರು	ಬೆಲೆ	ಯಾತಕ್ಕೋಸ್ಕರ ಮಂಜೂರು	ಮಂಜೂರು ನಂಬರು ಇ. ಸಾ. ನಂ. ಡಾ. ಸಾ. ನಂ.
೧೬	ಹರಳಯ್ಯ ೧ನೆ ಆ. ೧೯೩೭	ಎಂ. ಕೆ. ಡಿ. ಬ್ಯಾಳಿ ಅಸಿ. ಮಾ. ಸಿದ್ಧೇಶ್ವರ ಹೈಸ್ಕೂಲ್ ವಿಜಾಪುರ	ಗ್ರಂಥಕರ್ತರು	೦-೩-೦	ಪ್ರಾ. ಶಾ. ಗಳ ಹ್ಯೆ. ಟ್ರೇ. ಸಂ. ಗಳ ವಿ. ಗಳ L ಹಾಗು ಮಾ. ಶಾ. ಗಳ ವಿ. ಗಳ L	8070 ಸದರ 810 ಸದರ
೧೭	ಸರ ಜಗದೀಶಚಂದ್ರ ಬೋಸ ೧ನೆ ಆ. ೧೯೩೭	ಎಂ. ಡಿ. ಆರ್. ರಾಮಯ್ಯ ಬಿ. ಎ. ಕನ್ನಡ ಟ್ರಾನ್ಸ್‌ಲೇಟರ ಬೆಂಗಳೂರ	ಗ್ರಂಥಕರ್ತರು	೦-೪-೦	ಪ್ರಾ. ಶಾ. ಗಳ ಹಾಗು ಟ್ರೇ. ಸಂ. ಗಳ ವಿ. ಗಳ L ಹಾಗು ಮಾ. ಶಾ. ಗಳ ವಿ. ಗಳ L	8068 ಸದರ 800 ಸದರ

Reg. No. B. 3601

ಓದಿರಿ ! ತ್ವರೆಮಾಡಿರಿ ! !

ವಾಗ್ವಿಲಾಸ ಬುಕ್ ಡಿಪೋಕ್ಕೆ ಇಂದೇ ಪತ್ರ ಬರೆಯಿರಿ

ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಕ ಬಿ. ಎ., ಎಜ್ಯುಮಿನಿಸ್ಟ್ರೇಟಿವ್ಹ ಆಫೀಸರ ಡಿಸ್ಟ್ರಿಕ್ಟ್ ಸ್ಕೂಲಬೋರ್ಡ ಧಾರವಾಡ ಇವರು ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ ೬ ಆ. ಮಾತ್ರ.

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದೀಹಾಳಮಠ ಸುಪರವಾಯಿಝರವರು ಗ್ರಂಥಕರ್ತರು. ಬೆಲೆ ೧ ಆ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

ಳನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಯೆಸರು ಪಡೆದಿದೆ. ಬರೆದವರು ಕ. ರಾ. ಅಡಬಡ್ಡಿ. ಬೆಲೆ ೬ ಆ.

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ ೬ ಆ.)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು, ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರಪೂರ ಕಮೀಶನ್ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಎ. ಆರ್. ಶಿವನಾಗಪ್ಪ,
ಪ್ರೊಪ್ರಾಯಿಟರ
ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ.

ಜನವರಿ ೧೯೩೯ Reg. No. B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ದೆತ್ತಾತ್ರಯ ವಿಶ್ವನಾಥರಾವ ಕಾಳೆ,

ವಿಷಯಾನುಕ್ರಮಣಿ

ನಂ.	ವಿಷಯ.	
೧.	ನರ್ಧಾ ಶಿಕ್ಷಣದ ಯೋಜನೆ	
೨.	ಗಣಿತ ವಿಷಯ	
೩.	ಪ್ರಾಯ್ಮರಿ ಸ್ಕೂಲ್ ಲೀವ್ವಿಂಗ್ ಸರ್ಟಿಫಿಕೇಟ ಬಾಲಕರಿಗೆ ವಾಕ್ಯವಿಭಜನೆಯು ವಿಷಯವಾಗಿ ಕೆಳ	
೪.	ಧಾರವಾಡ ಶಿಕ್ಷಕ-ಶಿಕ್ಷಣಾಲಯಕ್ಕೆ ಮಂತ್ರಿವರ್ಯ ಮಾನ್ಯ ಖೇರರ ಆಗಮನ	೧೭
೫	ಚಿಕ್ಕಮಕ್ಕಳ ಶಿಕ್ಷಣ	೧೯
೬.	ಫ್ಯಾರ್ಮ್ಯಾಕ್ಯುಲರ ಫಾಯೆನಲ್ ಪರೀಕ್ಷೆ ೧೯೩೮	೨೭
೭.	ಸ್ಪಾಟ ವರ್ತಮಾನಗಳು	೨೮
೮.	೧೯೩೯ನೆಯು ಇಸವಿಯಲ್ಲಾಗುವ ಹೆಣ್ಣುಮಕ್ಕಳ ಪ್ರಾಯ್ಮರಿಸ್ಕೂಲ್ ಲೀವ್ವಿಂಗ ಸರ್ಟಿಫಿಕೇಟಿ ಪರೀಕ್ಷೆಯು	
೯.	ಹೆ ಮಕ್ಕಳ ಪ್ರಾ. ಸ್ಕೂ. ಲೀ. ಸ. ಪರೀಕ್ಷೆಯ ವೇಳಾಪತ್ರಿಕೆ ..	

Printed by K. B. Bhise at the Karnatak Printing Works, Dharwar and Published by D. V. Kale, B. A., Head Master Training, School, Dharwar at his Office.

ಬಾಹೀರಾತು

ರಾಮಾಶ್ರಯ ಬುಕ್‌ಡಿಪೊ, ಧಾರವಾಡ.

೧. **ಪುಸ್ತಕ ಶಾಖೆ.** ಕಾಯಿಪಲ್ಲೆ ಮಾರ್ಕೇಟ್, ಧಾರವಾಡ.

೨. **ಸ್ಟೇಶನರಿ ಮತ್ತು ಇತರ ಸಾಮಾನುಗಳ ಶಾಖೆ, ಮಾರ್ಕೆಟ ರೋಡ**

ನಮ್ಮಲ್ಲಿ ಕನ್ನಡ, ಇಂಗ್ಲೀಷ, ಹಿಂದಿ, ಮರಾಠಿ, ಉರ್ದು, ಭಾಷೆಯಲ್ಲಿ ಶಾಲೆ ಕಾಲೇಜುಗಳಿಗೆ ಉಪಯುಕ್ತವಾದ ಟಿಕ್ಸ್‌ಬುಕ್ಕುಗಳೂ ಅವುಗಳ ಟಿಪ್ಪಣಿಗಳೂ. ಗಾಯಿಡ್, ಡಿಕ್ಷನರಿ, ಮ್ಯಾಪ್ಸ್, (ನಕಾಶಗಳು) ಡಾಯರಿ, ಪಂಚಾಂಗ, ಕಾದಂಬರಿಗಳೂ ಚಿಲ್ಲರೆ ಹಾಗೂ ಠೋಕ ದರದಿಂದ ಯೋಗ್ಯಬೆಲೆಗೆ ದೊರೆಯುತ್ತವೆ. ಧಾರವಾಡದಲ್ಲಿ ಪ್ರಸಿದ್ದಿಸಲ್ಪಟ್ಟ ಎಲ್ಲತರದ ಪುಸ್ತಕಗಳನ್ನು ಅಂದರೆ ಕರ್ನಾಟಕದ ಇತಿಹಾಸಬೋಧಿನಿ, ಹಿಂದುಸ್ಥಾನ ಇತಿಹಾಸಬೋಧಿನಿ, ನುಡಿಗನ್ನಡಿ, ಉಮಡಿಕರ ಜಮಾಖರ್ಚು, ನಿಂಬಾಳಕರ ಇವರಿಂದ ಪ್ರಸಿದ್ದಿಸಲ್ಪಟ್ಟ ಹೊಸಪದ್ಧತಿಯ ಗಣಿತ, ಧಾರವಾಡ ಜಿಲ್ಲೆಯ ಭೂಗೋಲು ಹಾಗು ಕಟ್ಟೀಮನಿ ಕೃತ ಬಾಲಬೋಧೆ ಈ ಎಲ್ಲ ಪುಸ್ತಕಗಳು ಠೋಕ ಹಾಗೂ ಕಿರುಕಳ ದರದಿಂದ ಸಿಗುತ್ತವೆ

ಎಕ್ಸರಸಾಯಿಜ, ನೋಟಬುಕ್ಕುಗಳು, ಖಾತೆ ಕೀರ್ದಿಬುಕ್ಕು, ಜೋಪಡಾ, ಕಾಸಿಬುಕ್ಕು, ಡ್ರಾಯಿಂಗಬುಕ್ಕು, ಇವುಗಳನ್ನು ನಾವು ಮುದ್ದಾಂ ಉತ್ತಮ ಕಾಗದ ಹಾಕಿಸಿ ಅಂದವಾಗಿ ತಯಾರಿಸಿ ಇಟ್ಟಿರುವೆವು.

ತಾಳಿಕೆಯಲ್ಲಿ ಮೇಲಾದ ಪಾರಕರ, ರಾಜಾ, ಕ್ಯಾಪ್ಟನ್, ಸೇಲರ ಮುಂತಾದ ಎಲ್ಲತರದ ಹೊಸಮಾದರಿಯ ಫೌಂಟನ್‌ಪೆನ್ಸ, ಮತ್ತು ಅವುಗಳ ಮಸಿಯನ್ನು ಗ್ಯಾರಂಟಿಯಿಂದ ಕೊಡುತ್ತೇವೆ. ಪೆನ್ನುಗಳ ಮೇಲೆ ಇಂಗ್ಲಿಷದಲ್ಲಿ ಹೆಸರು ಹಾಕುತ್ತೇವೆ. ನಾದುರಸ್ತಾದ ಪೆನ್ನುಗಳನ್ನು ದುರಸ್ತು ಮಾಡುತ್ತೇವೆ.

ಇದಲ್ಲದೆ ಫೂಲ್‌ಸ್ಕೇಪ, ಕ್ರೌನ್, ಡೆಮಿ, ರಾಯಲ್, ಬಾಂಡ, ಅನ್‌ಗ್ಲೇಜ ಹಾಗೂ ಗ್ಲೇಜಕಾಗದ ವ ಕಾರ್ಡಬೋರ್ಡ, ಇನಿವಿಟೇಶನ್, ಕ್ಯಾಲಿಕೊ ಮುಂತಾದ ಪ್ರಿಂಟಿಂಗ್ ಪ್ರೆಸ್ಸಿಗೆ ಉಪಯುಕ್ತವಾದ ಸಾಮಾನುಗಳೂ ಮತ್ತು ಎಲ್ಲ ಸಮೂನೆಯ ಸ್ಟೇಶನರಿ ಸಾಮಾನುಗಳೂ ಸಿಗುತ್ತವೆ.

ಸೇಂಟ್ಸ, ಸ್ನೋ, ಹೇಅರಆಯಿಲ್ಸ, ದೇಶೀ ವಿದೇಶಿ ಸುವಾಸಿಕ ತೈಲಗಳೂ ಸಿಗುತ್ತವೆ.

ಸಾಬೆ ಬಿಸ್ಕೀಟು, ಪೇಪರಮಿಠಾಯಿ, ಮೈಸೂರ ಕಾಫೀ ಬೀಜ, ಮತ್ತು ಚಹಾದ ಪುಡಿಯ ಅನೇಕ ನಮೂನೆಯ ಬಂಡಲಗಳು ದೊರೆಯುವವು.

ಈಶ್ವರಪ್ಪ ರಾಮಪ್ಪ ಆಕಳವಾಡಿ ಅ್ಯಂಡ ಸನ್ಸ,
ರಾಮಾಶ್ರಯ ಬುಕ್ಕಡಿಪೊ, ಮಾರ್ಕೆಟ, ಧಾರವಾಡ.